ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	131
ಮಾನ್ಯ ಸದಸ್ಯರ ಹೆಸರು	:	ಶ್ರೀ ಕುಮಾರ ಬಂಗಾರಪ್ಪ ಎಸ್. (ಸೊರಬ)
ಉತ್ತರಿಸಬೇಕಾದ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಡಾ|| ಡಿ.ಎಂ.ನಂಜುಂಡಪ್ಪನವರ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿ ಹಾಗೂ ತಾಳಗುಪ್ಪ ಹೋಬಳಿಯಲ್ಲಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗಳ ವಸತಿ ಗೃಹಗಳು ಅತ್ಯಂತ ಕಳಪೆ ಮಟ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಸೊರಬ ತಾಲ್ಲೂಕು ತಾಳಗುಪ್ಪ ಹೋಬಳಿಯ ಆಸ್ಪತ್ರೆಯ ಆವರಣದಲ್ಲಿ ಒಟ್ಟು 8 ವಸತಿ ಗೃಹಗಳಿದ್ದು, ಸುಮಾರು 30 ರಿಂದ 35 ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಸದರಿ ಕಟ್ಟಡಗಳಿಗೆ ಸರಿಯಾದ ವಾರ್ಷಿಕ ನಿರ್ವಹಣೆ ಇಲ್ಲದೆ ಇದ್ದುದರಿಂದ 4 ಕಟ್ಟಡಗಳು 8 ರಿಂದ 10 ವರ್ಷಗಳಿಂದ ಬಳಕೆಯಲ್ಲಿ ಇಲ್ಲದೆ ಇರುವ ಕಾರಣ ಶಿಥಿಲಗೊಂಡಿರುತ್ತದೆ.
ಆ)	ವೈದ್ಯರಿಗೆ ಹಾಗೂ ವೈದ್ಯಕೀಯ ಸಿಬ್ಬಂದಿಗಳಿಗೆ ಉತ್ತಮ ತರಗತಿಯ ವಸತಿ ಗೃಹಗಳು ಇಲ್ಲದ ಕಾರಣ ಹಾಗೂ ವಸತಿ ಗೃಹಗಳ ಕೊರತೆಯಿಂದ ಸಾರ್ವಜನಿಕ ವೈದ್ಯಕೀಯ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಆದಾಗ್ಯೂ, ವೈದ್ಯರು ಮತ್ತು ಸಿಬ್ಬಂದಿಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ.
ಇ)	ಬಂದಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಅನುದಾನ ಬಿಡುಗಡೆ ಮಾಡಿ ವ್ಯವಸ್ಥೆ ಸರಿಪಡಿಸಲು ಕ್ರಮ ಕೈಗೊಳ್ಳಾಗುವುದೇ?	ಪ್ರಸಕ್ತ 2020-21ನೇ ಸಾಲಿನಲ್ಲಿ ಕೋವಿಡ್-19 ಇಂದ ಆರ್ಥಿಕ ಬಿಕ್ಕಟ್ಟು ಏರ್ಪಟ್ಟಿರುವುದರಿಂದ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ. ಅನುದಾನ ಲಭ್ಯತೆಗನುಗುಣವಾಗಿ ಮುಂಬರುವ ವರ್ಷಗಳಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.

ಆಕುಕ 152 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	135
ಮಾನ್ಯ ಸದಸ್ಯರ ಹೆಸರು	ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)
ಉತ್ತರಿಸಬೇಕಾದ ದಿನಾಂಕ	10-12-2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯ ಸರ್ಕಾರದ ಫಾರ್ಮಾಸಿಸ್ಟ್ ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ವೇತನ ಭತ್ಯೆಗಳನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ.
ಆ	ಹಾಗಿದ್ದಲ್ಲಿ, ಮುಂದಿನ ಆಯವ್ಯಯದಲ್ಲಿ ಸದರಿ ವಿಷಯವನ್ನು ಸೇರ್ಪಡೆಗೊಳಿಸಿ ಈ ನೌಕರರುಗಳಿಗೆ ಅನುಕೂಲ ಕಲ್ಪಿಸಿಕೊಡಲಾಗುವುದೇ;	ಸರ್ಕಾರಿ ನೌಕರರ ಸಂಘಗಳಲ್ಲಿನ ಕೆಲಸ-ಕಾರ್ಯಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿಗಳನ್ನು ಸಂಘಗಳ ವತಿಯಿಂದಲೇ ಖಾಸಗಿಯಾಗಿ ನೇಮಕ ಮಾಡಿಕೊಳ್ಳುವುದರಿಂದ ಸರ್ಕಾರ ಅವರ ವೇತನ ಭತ್ಯೆಗಳ ಬಗ್ಗೆ ಕ್ರಮವಹಿಸುವುದಿಲ್ಲ.
ಇ	ಇಲ್ಲದಿದ್ದಲ್ಲಿ ಕಾರಣಗಳೇನು? (ವಿವರ ನೀಡುವುದು)	

ಸಂಖ್ಯೆ: ಆಕುಕ 355 ಹೆಚ್‌ಎಸ್‌ಎಂ 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**: 137**
ಮಾನ್ಯ ಸದಸ್ಯರ ಹೆಸರು	**: ಶ್ರೀ ಐಹೋಳೆ ಡಿ.ಮಹಾಲಿಂಗಪ್ಪ (ರಾಯಭಾಗ)**
ಉತ್ತರಿಸಬೇಕಾದ ದಿನಾಂಕ	**: 10-12-2020**
ಉತ್ತರಿಸುವ ಸಚಿವರು	**: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ, ರಾಯಭಾಗ ಮತಕ್ಷೇತ್ರದ ರಾಯಭಾಗ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಯಭಾಗ ಮತಕ್ಷೇತ್ರದಲ್ಲಿ ಒಟ್ಟು 05 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 1 ಸಮುದಾಯ ಆರೋಗ್ಯ ಕೇಂದ್ರಗಳಿದ್ದು 1)ಬ್ಯಾಕೂಡ, 2)ಜೈನಾಪೂರ, 3)ಚಿಂಚಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 4)ಕಬ್ಬೂರ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದಿಲ್ಲ. ಉಳಿದ ನಸಲಾಪೂರ ಹಾಗೂ ಕರಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ	ಬಂದಿದ್ದಲ್ಲಿ, ಈ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರು, ಕೇಂದ್ರಗಳ ಸುತ್ತ ಕಾಂಪೌಂಡ್ ನಿರ್ಮಾಣ ಕೇಂದ್ರಗಳಿಗೆ ಸಂಪರ್ಕ ರಸ್ತೆ ಕಲ್ಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ;	ರಾಯಭಾಗ ತಾಲ್ಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶುದ್ದ ಕುಡಿಯುವ ನೀರು ಸೌಲಭ್ಯ ಇರುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಚಿಂಚಲಿ, ಬ್ಯಾಕೂಡ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಕಬ್ಬೂರ ಇವುಗಳಿಗೆ ಆವರಣ ಗೋಡೆ ಹಾಗೂ ಸಂಪರ್ಕ ರಸ್ತೆ ಕಲ್ಪಿಸಲು ಮುಂದಿನ ವರ್ಷಗಳಲ್ಲಿ ಉಪಯೋಗಿ ಇಲಾಖೆಯ ಕೋರಿಕೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಕ್ರಮವಹಿಸಲಾಗುವುದು.
ಇ	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಕೇಂದ್ರಗಳಲ್ಲಿ ಕೊರತೆಯಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು;	
ಈ	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	

ಆಕುಕ 143 ಎಸ್‌ಬಿವಿ 2020.

(ಡಾ. ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 138

ಮಾನ್ಯ ಸದಸ್ಯರ ಹೆಸರು : ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಉತ್ತರಿಸಬೇಕಾದ ದಿನಾಂಕ : 10-12-2020

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ದಿಗ್ಗೇವಾಡಿ, ಬೆಂಡವಾಡ ಗ್ರಾಮಗಳಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ.
ಆ	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಗಳು ಪ್ರಸ್ತುತ ಯಾವ ಹಂತದಲ್ಲಿವೆ; ಯಾವ ಕಾಲಮಿತಿಯಲ್ಲಿ ಈ ಗ್ರಾಮಗಳಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದು;	ಉದ್ಭವಿಸುವುದಿಲ್ಲ.
ಇ	ಇಲ್ಲದಿದ್ದಲ್ಲಿ, ಜನಸಂಖ್ಯೆ ಹೆಚ್ಚಿರುವ ಗ್ರಾಮೀಣ ಭಾಗದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿ ಅಲ್ಲಿನ ಬಡ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ;	ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನಸಂಖ್ಯೆಗೆ ಅನುಗುಣವಾಗಿ ಪುನರ್ ವಿಂಗಡಣೆ ಮಾಡುವ ಪೈಲೆಟ್ ಅಧ್ಯಯನವನ್ನು ಕೈಗೊಂಡಿದ್ದು, ಸದರಿ ಪೈಲೆಟ್ ಅಧ್ಯಯನದ ವರದಿಯು ಬಂದನಂತರ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಪರಿಶೀಲಿಸಲಾಗುವುದು.
ಈ	ಇಲ್ಲದಿದ್ದಲ್ಲಿ, ಡಾ.ನಂಜುಂಡಪ್ಪ ವರದಿಯನ್ವಯ ಹಿಂದುಳಿದ ತಾಲ್ಲೂಕುಗಳ ಆಸ್ಪತ್ರೆಗಳ ಅಭಿವೃದ್ಧಿಗೆ ಮೀಸಲಿರಿಸಿರುವ ಅನುದಾನವನ್ನು ಬಳಸಿ ಇಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	

ಆಕುಕ 144 ಎಸ್‌ಬಿವಿ 2020

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 141
ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

	ಪ್ರಶ್ನೆ	ಉತ್ತರ
ಅ)	ತೇರದಾಳ ಕ್ಷೇತ್ರದಲ್ಲಿರುವ ಹಿಪ್ಪರಗಿ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಯಾವಾಗ ಪ್ರಾರಂಭವಾಗಿದೆ; ಕಾಲೇಜಿನಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಪೂರ್ಣ ಮಾಹಿತಿ ಒದಗಿಸುವುದು)	ತೇರದಾಳ ಕ್ಷೇತ್ರದಲ್ಲಿರುವ ಹಿಪ್ಪರಗಿ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸರ್ಕಾರದ ಆದೇಶ ಸಂಖ್ಯೆ:ಇಡಿ 643 ಎಸ್‌ಹೆಚ್‌ಹೆಚ್ 2010 ದಿನಾಂಕ:01-07-2011ರನ್ವಯ ಮಂಜೂರು ಮಾಡಲಾಗಿರುತ್ತದೆ. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಜ್ಞಾಪನ ಸಂಖ್ಯೆ:ಪಪೂಶಿಇ/ಸಿಬ್ಬಂದಿ-2/ಉ.ನೇ/ಹುಮಂ/9/2015-16 ಹಾಗೂ ದಿನಾಂಕ:04-12-2020ರಲ್ಲಿ ಶೂನ್ಯ ದಾಖಲಾತಿ ಮತ್ತು ಹೆಚ್ಚುವರಿ ಎಂದು ಗುರುತಿಸಲಾದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಬೋಧಕರ ಹುದ್ದೆಗಳನ್ನು ಸ್ಥಳಾಂತರಿಸಿ ಆದೇಶಿಸಿದೆ. 1. ಪ್ರಾಚಾರ್ಯರು 2. ಕನ್ನಡ ಭಾಷೆ 3. ಆಂಗ್ಲ ಭಾಷೆ 4. ಇತಿಹಾಸ 5. ಅರ್ಥಶಾಸ್ತ್ರ 6. ಸಮಾಜಶಾಸ್ತ್ರ 7. ರಾಜ್ಯಶಾಸ್ತ್ರ ಈ ಕಾಲೇಜಿಗೆ ಬೋಧಕೇತರ ಹುದ್ದೆಗಳು ಮಂಜೂರಾಗಿರುವುದಿಲ್ಲ.
ಆ)	ಕಳೆದ 10 ವರ್ಷಗಳಿಂದ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆಯಿಂದ ಮಕ್ಕಳ ದಾಖಲಾತಿ ಪ್ರಮಾಣ ಕಡಿಮೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆಯನ್ನು ಯಾವಾಗ ಸರಿಪಡಿಸುವುದು?	ಬಂದಿದೆ. ಸದರಿ ಖಾಲಿ ಹುದ್ದೆಗಳನ್ನು ವರ್ಗಾವಣೆ/ನಿಯೋಜನೆ/ಅತಿಥಿ ಉಪನ್ಯಾಸಕರ ನೇಮಕಾತಿಯಿಂದ ಭರ್ತಿ ಮಾಡಿ ವಿದ್ಯಾರ್ಥಿಗಳ ಪಾಠ-ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವ ಮೂಲಕ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಇಪಿ 174 ಡಿಜಿಡಬ್ಲ್ಯೂ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 142
ಮಾನ್ಯ ಸದಸ್ಯರ ಹೆಸರು	: ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
ಉತ್ತರಿಸಬೇಕಾದ ದಿನಾಂಕ	: 10-12-2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಸಾಗರ ತಾಲ್ಲೂಕು, ವಿಭಾಗೀಯ ತಾಲ್ಲೂಕಾಗಿದ್ದು, ಸಾಗರ ಪಟ್ಟಣದಲ್ಲಿ ತಾಲ್ಲೂಕು ವೈದ್ಯಾಧಿಕಾರಿಗಳ ಕಛೇರಿಗೆ ಸ್ವಂತ ಕಟ್ಟಡ ಇಲ್ಲದೆ ಸಾಗರದ ತಾಯಿ ಮಕ್ಕಳ ಆಸ್ಪತ್ರೆಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಸದರಿ ಆಸ್ಪತ್ರೆಯಲ್ಲಿ ಹೆರಿಗೆ ಪ್ರಕರಣಗಳು ಹೆಚ್ಚಾಗುತ್ತಿದ್ದು ಆಸ್ಪತ್ರೆಯಲ್ಲಿ ಹಾಸಿಗೆಗಳ ಕೊರತೆಯ ಜೊತೆಗೆ ಸೂಕ್ತ ಚಿಕಿತ್ಸೆ ನೀಡಲು ತುಂಬಾ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇರುವ ವೈದ್ಯರು ಮತ್ತು ಸಿಬ್ಬಂದಿಗಳಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ. ಅಡಚಣೆಯಾಗುತ್ತಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿಲ್ಲ.
ಇ)	ಬಂದಿದ್ದಲ್ಲಿ, ವೈದ್ಯಾಧಿಕಾರಿಗಳ ಕಛೇರಿಗೆ ಸ್ವಂತ ಕಟ್ಟಡ ನಿರ್ಮಿಸಲು ಇರುವ ತೊಂದರೆಗಳೇನು;	ಉದ್ಭವಿಸುವುದಿಲ್ಲ.
ಈ)	ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	ಉದ್ಭವಿಸುವುದಿಲ್ಲ.

ಆಕುಕ 151 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	143
ಮಾನ್ಯ ಸದಸ್ಯರ ಹೆಸರು	ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
ಉತ್ತರಿಸಬೇಕಾದ ದಿನಾಂಕ	10.12.2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಸಾಗರ ಪಟ್ಟಣದಲ್ಲಿರುವ ಸರ್ಕಾರಿ ಸಾರ್ವಜನಿಕ ವಿಭಾಗೀಯ ಆಸ್ಪತ್ರೆಯಲ್ಲಿ 20 ಆಕ್ಸಿಜನ್ ಸಿಲಿಂಡರ್‌ಗಳ ಮತ್ತು ಆಕ್ಸಿಜನ್ ಘಟಕದಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಸಾಗರ ಸಾರ್ವಜನಿಕ ಆಸ್ಪತ್ರೆಯಲ್ಲಿ 60 ಆಕ್ಸಿಜನ್ ಸಿಲಿಂಡರ್‌ಗಳು ಲಭ್ಯವಿರುತ್ತದೆ. ಪ್ರಸ್ತುತ ಲಭ್ಯವಿರುವ ಸಿಬ್ಬಂದಿಗಳಿಗೆ ಆಕ್ಸಿಜನ್ ಘಟಕವನ್ನು ನಿರ್ವಹಿಸಲು ತರಬೇತಿ ನೀಡಲಾಗಿದೆ. ಆದ್ದರಿಂದ ಆಕ್ಸಿಜನ್ ಘಟಕದಲ್ಲಿ ಸಿಬ್ಬಂದಿಗಳ ಕೊರತೆ ಇರುವುದಿಲ್ಲ.
ಆ)	ಸದರಿ ಆಸ್ಪತ್ರೆಯಲ್ಲಿ ರೋಗಿಗಳು ಹೆಚ್ಚಾಗಿದ್ದು ಚಿಕಿತ್ಸೆ ಪಡೆಯಲು ತುಂಬಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಇ)	ಹಾಗಿದ್ದಲ್ಲಿ, ಸರ್ಕಾರಿ ಆಸ್ಪತ್ರೆಯಲ್ಲಿ ಕೊರತೆ ಇರುವ ಆಕ್ಸಿಜನ್ ಸಿಲಿಂಡರ್‌ಗಳನ್ನು ನೀಡಲು ಮತ್ತು ಕೊರತೆ ಇರುವ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು;	ಅನ್ವಯಿಸುವುದಿಲ್ಲ.
ಈ)	ಈ ಆಸ್ಪತ್ರೆಗೆ 20 ಆಕ್ಸಿಜನ್ ಸಿಲಿಂಡರ್‌ಗಳನ್ನು ಒದಗಿಸಲು ಮತ್ತು ಸಂಬಂಧಿಸಿದ ಸಿಬ್ಬಂದಿಗಳನ್ನು ನಿಯೋಜಿಸಲು ಕೈಗೊಂಡ ಕ್ರಮಗಳೇನು? (ವಿವರ ಒದಗಿಸುವುದು)	ಈಗಾಗಲೇ 60 ಆಕ್ಸಿಜನ್ ಸಿಲಿಂಡರ್‌ಗಳು ಲಭ್ಯವಿರುತ್ತದೆ. ಆಕ್ಸಿಜನ್ ಸಿಲಿಂಡರ್‌ಗಳ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಮಾಡಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ವಿಕೋಪ ನಿಧಿಯಡಿ ಲಭ್ಯವಿರುವ ಅನುದಾನದಲ್ಲಿ ವೆಚ್ಚ ಭರಿಸಲು ಕ್ರಮವಹಿಸಲಾಗಿದೆ. ಸಿಬ್ಬಂದಿಯನ್ನು ಎರವಲು ಆಧಾರದ ಮೇಲೆ ಬಳಸಿಕೊಳ್ಳಲಾಗುತ್ತಿದ್ದು, ಪ್ರಸ್ತುತ ಲಭ್ಯವಿರುವ ಸಿಬ್ಬಂದಿಗಳಿಗೆ ಆಕ್ಸಿಜನ್ ಘಟಕವನ್ನು ನಿರ್ವಹಿಸಲು ತರಬೇತಿ ನೀಡಲಾಗಿದೆ.

ಸಂಖ್ಯೆ: ಆಕುಕ 80 ಹೆಚ್ಎಸ್‌ಡಿ 2020

(ಡಾ.ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	272
ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಗ್ರಾಮಾಂತರ ಭಾಗದ ಪಿಳ್ಳಂಗೆರೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು ರಾಜ್ಯದ 361 ಸರ್ಕಾರಿ ಪ್ರೌಢ ಶಾಲೆಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆ ಇದ್ದು, ಅದರಲ್ಲಿ ಶಿವಮೊಗ್ಗ ಗ್ರಾಮಾಂತರ ಭಾಗದ ಪಿಲ್ಲನಗೆರೆ ಗ್ರಾಮದಲ್ಲಿನ ಸರ್ಕಾರಿ ಪ್ರೌಢ ಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ಸೇರಿರುತ್ತದೆ.
ಆ)	ಅಗತ್ಯ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಹಾಗೂ ಮೂಲಭೂತ ಸೌಕರ್ಯಗಳು ಇದ್ದರು ಇದುವರೆಗೂ ಕಾಲೇಜು ಪ್ರಾರಂಭಿಸದಿರಲು ಕಾರಣವೇನು;	ಸದರಿ ಕಾಲೇಜುಗಳನ್ನು ಉನ್ನತೀಕರಿಸಲು ಕೆಳಕಂಡ ಮಾಹಿತಿಗಳನ್ನು ಕ್ರೋಢೀಕರಿಸಲಾಗುತ್ತಿದ್ದು, ಸದರಿ ವಿವರಗಳನ್ನು ಪಡೆದು ಆರ್ಥಿಕ ಇಲಾಖೆಯ ಸಹಮತಿಗೆ ಕಳುಹಿಸಲು ಕ್ರಮವಹಿಸಲಾಗುತ್ತಿದೆ.
ಇ)	ಯಾವ ಶೈಕ್ಷಣಿಕ ವರ್ಷದಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲಾಗುವುದು?	1) ಈ ಕಾಲೇಜುಗಳನ್ನು ಉನ್ನತೀಕರಿಸುವ ಬಗ್ಗೆ ಮಾನದಂಡಗಳು; 2) ಉನ್ನತೀಕರಿಸುವಂತಹ ಪ್ರದೇಶಗಳಲ್ಲಿ ಎಸ್.ಎಸ್.ಎಲ್.ಸಿ. ಯಿಂದ ಪದವಿ ಪೂರ್ವ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳ ಪ್ರತಿಶತ(Average) ವಿವರಗಳು; 3) ಕೆ.ಪಿ.ಶಾಲೆಗಳಡಿ ಈ ಕಾಲೇಜುಗಳನ್ನು ಉನ್ನತೀಕರಿಸಲು ಇರುವ ಅವಕಾಶದ ಬಗ್ಗೆ ಮಾಹಿತಿ; 4) ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಗರಿಷ್ಠ/ಕನಿಷ್ಠ ಸಂಖ್ಯೆಯ ವಿವರ; 5) ಉಪನ್ಯಾಸಕರ ವಿವರಗಳ ಬಗ್ಗೆ ಸ್ಪಷ್ಟ ಸಂಖ್ಯೆಯ/ಮೊತ್ತದ ಮಾಹಿತಿ;

ಸಂಖ್ಯೆ: ಇಪಿ 175 ಡಿಜಿಡಬ್ಲ್ಯೂ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 273
ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ.(ಶಿವಮೊಗ್ಗ ಗ್ರಾಮಾಂತರ)
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಗ್ರಾಮಾಂತರ ಭಾಗದ ಆನವೇರಿ ಗ್ರಾಮದಲ್ಲಿ ಈಗಾಗಲೇ ಮಂಜೂರಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸದಿರಲು ಕಾರಣವೇನು;	ಶಿವಮೊಗ್ಗ ಗ್ರಾಮಾಂತರ ಭಾಗದ ಆನವೇರಿ ಗ್ರಾಮದಲ್ಲಿ ಆರ್ಥಿಕ ಇಲಾಖೆಯ ಅಭಿಪ್ರಾಯದನ್ವಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆಯನ್ನು ಕೈಬಿಡಲಾಗಿದೆ.
ಆ)	ಕಾಲೇಜು ಪ್ರಾರಂಭಿಸಲು ವಿದ್ಯಾರ್ಥಿಗಳಿಂದ ಬೇಡಿಕೆ ಇದ್ದು, ನಿವೇಶನ ಲಭ್ಯವಿದ್ದರೂ ಸಹ ಇದುವರೆಗೂ ಪ್ರಾರಂಭಿಸದೇ ಇರಲು ಕಾರಣವೇನು;	
ಇ)	ಯಾವ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಪ್ರಾರಂಭಿಸಲಾಗುವುದು? (ವಿವರ ನೀಡುವುದು)	ಪ್ರಸ್ತುತ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.

ಸಂಖ್ಯೆ: ಇಡಿ 190 ಹೆಚ್‌ಪಿಸಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	276
ಮಾನ್ಯ ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತವೆ;	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 14 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 03 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
ಆ	ಶಿವಮೊಗ್ಗ ತಾಲ್ಲೂಕು ಪಿಳ್ಳಂಗೆರೆ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ:	ಪ್ರಸ್ತಾವನೆಯು ಸಲ್ಲಿಕೆಯಾಗಿದೆ.
ಇ	ಸಲ್ಲಿಕೆಯಾಗಿದ್ದಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು?	ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಗ್ರಾಮ ಪಂಚಾಯತಿ ವ್ಯಾಪ್ತಿಯ ಜನಸಂಖ್ಯೆಗೆ ಅನುಗುಣವಾಗಿ ಪುನರ್ ವಿಂಗಡನೆ ಮಾಡುವ ಪೈಲೆಟ್ ಯೋಜನೆಯನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಸಧ್ಯಕ್ಕೆ ಹೊಸದಾಗಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿರುವುದಿಲ್ಲ.

ಸಂಖ್ಯೆ: ಆಕುಕ 161 ಎಸ್‌ಎಂಎಂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 277
2. ಮಾನ್ಯ ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದ ನೇಯ್ಗೆ ಕಾರ್ಮಿಕರನ್ನು ಅಸಂಘಟಿತ ಕಾರ್ಮಿಕ ಪಟ್ಟಿಗೆ ಸೇರ್ಪಡೆ ಮಾಡುವ ಹಾಗೂ ಅಸಂಘಟಿತ ಕಾರ್ಮಿಕರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ನೇಯ್ಗೆ ಕಾರ್ಮಿಕರಿಗೆ ದೊರಕಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ **"ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ"**ಯಡಿ 43 ವೃತ್ತಿಗಳ ಕಾರ್ಮಿಕರನ್ನು ಅಸಂಘಟಿತ ವಲಯಗಳ ಕಾರ್ಮಿಕರೆಂದು ಸರ್ಕಾರವು ಗುರುತಿಸಿದ್ದು, ಅದರಲ್ಲಿ "ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ಕಾರ್ಮಿಕರು" ಸಹ ಸೇರಿರುತ್ತಾರೆ. • ಪ್ರಸ್ತುತ 11 ವಲಯದ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತಿದ್ದು, ಮನೆಗಳಲ್ಲಿ ನೇಯ್ಗೆ ಕೆಲಸ ಮಾಡುವ ಕಾರ್ಮಿಕರು ಸೇರಿದಂತೆ ಬಾಕಿ ಇರುವ ಎಲ್ಲಾ 32 ವರ್ಗಗಳ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.
ಆ)	ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	ಅನ್ವಯಿಸುವುದಿಲ್ಲ.

ಕಾಇ 399 ಎಲ್ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 280
ಮಾನ್ಯ ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ : 10-12-2020
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 250 ಹಾಸಿಗೆಯುಳ್ಳ ಜಿಲ್ಲಾ ಆಸ್ಪತ್ರೆ ಪ್ರಾರಂಭಿಸದಿರಲು ಕಾರಣಗಳೇನು;	ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರದಲ್ಲಿ 250 ಹಾಸಿಗೆಯುಳ್ಳ ಜಿಲ್ಲಾ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು ರೂ.8800.00 ಲಕ್ಷಗಳಿಗೆ ಅಂದಾಜು ಮೊತ್ತದಲ್ಲಿ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.
ಆ)	ಹಾಗಿದ್ದಲ್ಲಿ, ಆಸ್ಪತ್ರೆ ಪ್ರಾರಂಭಿಸುವಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?	

ಆಕುಕ 150 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 390
ಸದಸ್ಯರ ಹೆಸರು : ಶ್ರೀ. ಭೀಮಾ ನಾಯ್ಕ ಎಸ್.
ಉತ್ತರಿಸುವ ದಿನಾಂಕ : 10/12/2020
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು, ದಶಮಾಪುರ ಮತ್ತು ಮರಿಯಮ್ಮನಹಳ್ಳಿ ಸ್ಥಳಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳು ಹೆಚ್ಚಾಗಿದ್ದು, ಆ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು ಗ್ರಾಮದಲ್ಲಿ ಈಗಾಗಲೇ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಕಾರ್ಯನಿರ್ವಹಿಸುತ್ತಿದೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಕೊಟ್ಟೂರಿಗೆ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ ಮತ್ತು ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಪ್ರಸ್ತಾವನೆ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ. ದಶಮಾಪುರ ಮತ್ತು ಮರಿಯಮ್ಮನಹಳ್ಳಿ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಪ್ರಸ್ತಾವನೆ ಇರುವುದಿಲ್ಲ.
ಆ)	ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?	ಕ್ಲಿಷ್ಟಕರ ಆರ್ಥಿಕ ಪರಿಸ್ಥಿತಿ ಹಿನ್ನಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಯಾವುದೇ ಹೊಸ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಲು ಅನುಮತಿ ನೀಡಲು ಸಾಧ್ಯವಿಲ್ಲವೆಂದು ಆರ್ಥಿಕ ಇಲಾಖೆಯು ಅಭಿಪ್ರಾಯ ಪಟ್ಟಿರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಅನುದಾನ ಲಭ್ಯತೆಯನ್ನಾಧರಿಸಿ, ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಸಕಇ 471 ಪಕವಿ 2020

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:391
ಮಾನ್ಯ ಸದಸ್ಯರ ಹೆಸರು	:ಶ್ರೀ ಭೀಮಾ ನಾಯ್ಕ ಎಸ್.(ಹಗರಿಬೊಮ್ಮನಹಳ್ಳಿ)
ಉತ್ತರಿಸಬೇಕಾದ ದಿನಾಂಕ	:10.12.2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕೊಟ್ಟೂರು ಪಟ್ಟಣ ತಾಲ್ಲೂಕು ಕೇಂದ್ರವಾಗಿ ಕಾರ್ಯಾರಂಭ ಮಾಡಿದ್ದು, ಪಟ್ಟಣದಲ್ಲಿ ಹಾಲಿ ಇರುವ ಸರ್ಕಾರಿ ಆಸ್ಪತ್ರೆಯನ್ನು 100 ಹಾಸಿಗೆಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:	ಸರ್ಕಾರದ ಆದೇಶ ಸಂಖ್ಯೆ:ಕಂಇ 35 ಭೂದಾಪು 2017, ದಿನಾಂಕ:06.09.2017 ರಲ್ಲಿ ಬಳ್ಳಾರಿ ಜಿಲ್ಲೆಯ ಕೊಟ್ಟೂರು ಅನ್ನು ನೂತನ ತಾಲ್ಲೂಕಾಗಿ ರಚನೆ ಮಾಡಿ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ತಾಲ್ಲೂಕಿನಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ
ಆ	ಇದ್ದಲ್ಲಿ ಯಾವಾಗ ಮೇಲ್ದರ್ಜೇಗೇರಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು?	

ಆಕುಕ 161ಎಸ್‌ಎಂಎಂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 392

ಸದಸ್ಯರ ಹೆಸರು : ಶ್ರೀ ಭೀಮಾನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಉತ್ತರಿಸುವ ದಿನಾಂಕ : 10.12.2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ತಂಬ್ರಹಳ್ಳಿ ಮತ್ತು ಕೊಟ್ಟೂರುಗಳಲ್ಲಿ ಸರ್ಕಾರಿ ಪದವಿ ಕಾಲೇಜು ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಯಾವಾಗ ಕಾಲೇಜುಗಳನ್ನು ಸ್ಥಾಪಿಸಲಾಗುವುದು;	ಪ್ರಸ್ತುತ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.
ಇ)	ಸದರಿ ಸ್ಥಳಗಳಲ್ಲಿ ಸರ್ಕಾರಿ ಪದವಿ ಕಾಲೇಜುಗಳನ್ನು ಪ್ರಾರಂಭಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯ ಪರಿಶೀಲನೆಯು ಯಾವ ಹಂತದಲ್ಲಿದೆ; ಪ್ರಸ್ತುತ ವಿವರ ನೀಡುವುದು?	ಮೇಲಿನಂತೆ

ಸಂಖ್ಯೆ: ಇಡಿ 184 ಹೆಚ್‌ಪಿಸಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 395
2. ಮಾನ್ಯ ಸದಸ್ಯರ ಹೆಸರು : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಹೊಸದಾಗಿ ಲೇಬರ್ ಕಾರ್ಡ್‌ಗಳನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಇದೆಯೇ ಇಲ್ಲದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮವೇನು:	<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-</u> ಪ್ರಸ್ತುತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಆನ್‌ಲೈನ್ ಮೂಲಕ ಹೊಸದಾಗಿ ನೋಂದಾಯಿಸಿಕೊಳ್ಳಲು ಸೇವಾಸಿಂಧು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u> ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಪ್ರಸ್ತುತ 11 ಅಸಂಘಟಿತ ವಲಯಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡುತ್ತಿದೆ. ಸದರಿ ಯೋಜನೆಯಡಿ ಅರ್ಜಿದಾರರು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ನೋಂದಣಿ ಮಾಡಿಕೊಂಡು, ಸ್ಮಾರ್ಟ್‌ಕಾರ್ಡ್ ಪಡೆಯಬಹುದಾಗಿರುತ್ತದೆ.
ಆ)	ನೂತನ ಕಾರ್ಡ್‌ಗಳನ್ನು ಪಡೆಯುವಲ್ಲಿನ ತಾಂತ್ರಿಕ ಸಮಸ್ಯೆಗೆ ಸರ್ಕಾರವು ಪರಿಹಾರ ಕಂಡುಹಿಡಿದಿದೆಯೇ (ವಿವರ ನೀಡುವುದು)	ಪ್ರಸ್ತುತ ಯಾವುದೇ ತಾಂತ್ರಿಕ ಸಮಸ್ಯೆ ಕಂಡುಬಂದಿರುವುದಿಲ್ಲ.

ಕಾಇ 402 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕಿರಿತಂ

ಕರ್ನಾಟಕ ವಿಧಾನಸಭೆ

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ	:	397
ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್, (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಧಾರವಾಡ ವಿಶ್ವವಿದ್ಯಾಲಯಗಳ ಆವರಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲಾಗಿದೆಯೇ; ಮಾಡಿದ್ದಲ್ಲಿ ಮಾಹಿತಿ ನೀಡುವುದು?	2020-21ನೇ ಸಾಲಿನ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ ಧಾರವಾಡ ಸೇರಿದಂತೆ ರಾಜ್ಯ ಯಾವುದೇ ವಿಶ್ವವಿದ್ಯಾಲಯಗಳ ಆವರಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವುದಿಲ್ಲ.

ಸಂಖ್ಯೆ: ಇಡಿ 148 ಹೆಚ್‌ಪಿಯು 2020)

(ಡಾ: ಅಶ್ವಥ್ ನಾರಾಯಣ.ಸಿ.ಎಸ್)
ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	421
ಸದಸ್ಯರ ಹೆಸರು	:	ಡಾ॥ ಶ್ರೀನಿವಾಸಮೂರ್ತಿ.ಕೆ
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯಲ್ಲಿ 1985 ರ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯಲ್ಲಿ 'ವಾರ್ಡನ್' ಸಿಬ್ಬಂದಿಗಳ ವೃಂದಕ್ಕೆ ಮುಂಬಡ್ತಿ ನೀಡುವ ಖಂಡಗಳಿಗೆ ಮಾತ್ರ ತಿದ್ದುಪಡಿ ಮಾಡದಿರುವ ಕಾರಣವೇನು;	ಸಮಾಜ ಕಲ್ಯಾಣ ಇಲಾಖೆಯ (ವೃಂದ ಮತ್ತು ನೇಮಕಾತಿ ನಿಯಮಗಳು) 1985 ಕ್ಕೆ ಸಮಗ್ರ ತಿದ್ದುಪಡಿ ತರುವ ಕುರಿತು ಪರಿಶೀಲಿಸಲಾಗುತ್ತಿದ್ದು, ಎಲ್ಲಾ ವೃಂದದ ನೇಮಕಾತಿ ವಿಧಾನಗಳನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದ್ದು, ಆ ಸಂದರ್ಭದಲ್ಲಿ ವಾರ್ಡನ್ ಹುದ್ದೆಗಳ ಸಂಖ್ಯೆಗನುಗುಣವಾಗಿ ಅನುಪಾತ ನಿಗಮಪಡಿಸಲು ಕ್ರಮವಹಿಸಲಾಗುವುದು.
ಆ)	ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿವಿಧ ಸಿಬ್ಬಂದಿ ವರ್ಗದವರಿಗೆ ನೀಡಲಾಗುತ್ತಿರುವ ಮಾನದಂಡದಂತೆ ವಾರ್ಡನ್ ಸಿಬ್ಬಂದಿಗಳಿಗೂ ಸಂಖ್ಯಾಬಲಕ್ಕನುಗುಣವಾಗಿ ಮುಂಬಡ್ತಿ ಪ್ರಮಾಣವನ್ನು ನಿಗಧಿಪಡಿಸದಿರುವ ಕಾರಣವೇನು;	
ಇ)	ರಾಜ್ಯದ ವಿವಿಧ ಕಲ್ಯಾಣ ಇಲಾಖೆಗಳಲ್ಲಿ ನೀಡಲಾಗುತ್ತಿರುವಂತೆ ಸಮಾಜ ಕಲ್ಯಾಣ ಇಲಾಖೆಯಲ್ಲಿಯೂ ಸಹ ವಾರ್ಡನ್ ಹುದ್ದೆಗಳಿಗೆ ಶೇಕರ 84 ರ ಪ್ರಮಾಣದಲ್ಲಿ ಮುಂಬಡ್ತಿ ನೀಡುವಂತೆ ನಿಯಮಗಳನ್ನು ಸೂಕ್ತ ತಿದ್ದುಪಡಿಗೊಳಿಸಿ ಮುಂಬಡ್ತಿ ನೀಡಲು ಸರ್ಕಾರವು ಕ್ರಮವಹಿಸುವುದೇ? (ವಿವರ ನೀಡುವುದು)	

ಸಕಇ 426 ಎಸ್‌ಎಲ್‌ಪಿ 2020

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ:		427
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ, (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೊಸದಾಗಿ ಪ್ರಾರಂಭಿಸಿರುವ ರಾಯಚೂರು ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯ ಒದಗಿಸಲು 2020-21ನೇ ಸಾಲಿಗೆ ಎಷ್ಟು ಅನುದಾನ ಹಂಚಿಕೆ ಮಾಡಲಾಗಿದೆ;	2020-21ನೇ ಸಾಲಿನ ಆಯ-ವ್ಯಯದಲ್ಲಿ ರಾಯಚೂರು ವಿಶ್ವವಿದ್ಯಾಲಯಕ್ಕೆ ಯಾವುದೇ ಅನುದಾನ ಹಂಚಿಕೆಯಾಗಿರುವುದಿಲ್ಲ.
ಆ)	ಸದರಿ ಅನುದಾನದಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ.
ಇ)	ಸದರಿ ವಿಶ್ವವಿದ್ಯಾಲಯಕ್ಕೆ ಇನ್ನೂ ಹೆಚ್ಚಿನ ಅನುದಾನ ನೀಡಿ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ಸಂಪೂರ್ಣ ವಿವರವನ್ನು ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ಇಡಿ 149 ಹೆಚ್‌ಪಿಯು 2020)

(ಡಾ: ಅಶ್ವಥ್ ನಾರಾಯಣ.ಸಿ.ಎಸ್)
ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**536**
ಸದಸ್ಯರ ಹೆಸರು	ಶ್ರೀ ನರೇಂದ್ರ ಆರ್. (ಹನೂರು)
ಉತ್ತರಿಸಬೇಕಾದ ದಿನಾಂಕ	**10-12-2020**
ಉತ್ತರಿಸುವ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸರ್ಕಾರದ ಆದೇಶ ಸಂಖೆ:ಕಂಇ 35 ಭೂದಾಪು 2017, ದಿನಾಂಕ:06.09.2017ರಲ್ಲಿ ಚಾಮರಾಜನಗರ ಜಿಲ್ಲೆಯ ಹನೂರನ್ನು ಹೊಸ ತಾಲ್ಲೂಕಾಗಿ ರಚಿಸಿ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. ಅದರಂತೆ, ಹನೂರು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
(ಆ)	ಇದ್ದಲ್ಲಿ ಈ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)	
(ಇ)	ಇಲ್ಲದಿದ್ದಲ್ಲಿ ಅವುಗಳಿಗೆ ಕಾರಣಗಳೇನು; (ವಿವರ ನೀಡುವುದು)	
(ಈ)	ಇದಲ್ಲಿ ಯಾವ ಕಾಲಮಿತಿಯಲ್ಲಿ ಕೈಗೊಳ್ಳಲಾಗುವುದು? (ವಿವರ ನೀಡುವುದು.	

ಆಕುಕ 138 ಎಸ್‌ಬಿವಿ 2020.

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 544
ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ. (ಸಂಡೂರ್)
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಪದವಿ ಪೂರ್ವ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ವೇತನ ಬಿಡುಗಡೆಯಾಗಿದೆಯೇ;	2019-20ನೇ ಸಾಲಿನಲ್ಲಿ ಸುಮಾರು 2819 ಅತಿಥಿ ಉಪನ್ಯಾಸಕರನ್ನು ವಿವಿಧ ಜಿಲ್ಲೆಗಳಲ್ಲಿ ನಿಯಮಾನುಸಾರ ನೇಮಕ ಮಾಡಲಾಗಿತ್ತು. ಸದರಿ ಅತಿಥಿ ಉಪನ್ಯಾಸಕರುಗಳಿಗೆ ನಿಯಮಾನುಸಾರ ಶೈಕ್ಷಣಿಕ ವರ್ಷದ ಅಂತ್ಯದವರೆಗೂ ರೂ.9000/- ಮಾಸಿಕ ಗೌರವಧನ ಪಾವತಿಸಲಾಗಿದೆ. 2020-21ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್-19 ಸಾಂಕ್ರಮಿಕ ರೋಗದ ಹಿನ್ನೆಲೆಯಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಪ್ರಾರಂಭಗೊಳ್ಳದ ಕಾರಣ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವುದಿಲ್ಲ.
ಆ)	ಬಿಡುಗಡೆಯಾಗದೇ ಬಾಕಿ ಇರುವ ಮೊತ್ತ ಎಷ್ಟು; ವೇತನ ಬಾಕಿ ಇರುವುದಕ್ಕೆ ಕಾರಣವೇನು? (ವಿವರ ನೀಡುವುದು)	

ಸಂಖ್ಯೆ: ಇಪಿ 177 ಡಿಜಿಡಬ್ಲ್ಯೂ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 545

ಮಾನ್ಯ ಸದಸ್ಯರ ಹೆಸರು : ಶ್ರೀ ತುಕಾರಾಮ್. ಈ (ಸಂಡೂರ್)

ಉತ್ತರಿಸುವ ದಿನಾಂಕ : 10.12.2020.

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಸಂಡೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳೆಷ್ಟು;	ಸಂಡೂರು ತಾಲ್ಲೂಕಿನಲ್ಲಿ ಒಟ್ಟು – 21 ಸರ್ಕಾರಿ ಪ್ರೌಢಶಾಲೆಗಳಿವೆ.
ಆ	ಸಂಡೂರು ತಾಲ್ಲೂಕಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹೊಸ ಪ್ರೌಢಶಾಲೆಗಳನ್ನು ಮಂಜೂರಾತಿ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಆರ್.ಎಮ್.ಎಸ್.ಎ ನಿಗಧಿಪಡಿಸಿರುವ ಮಾನದಂಡಗಳನ್ವಯ ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ, ಈ ಯೋಜನೆಯಡಿಯಲ್ಲಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲು ಸಂಡೂರು ತಾಲ್ಲೂಕಿನ ಕೊಡಲು, ಸುಶೀಲಾ ನಗರ ಹಾಗೂ ಅಂಕಮ್ಮನಾಳ್ ಗ್ರಾಮಗಳಲ್ಲಿ ಮಂಜೂರಾತಿ ಕೋರಿ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, ಈ ಪ್ರಸ್ತಾವನೆಯು ರಾಜ್ಯ ಯೋಜನಾ ನಿರ್ದೇಶಕರ ಕಾರ್ಯಾಲಯ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರುರವರ ಹಂತದಲ್ಲಿರುತ್ತವೆ.
ಇ	ಹಾಗಿದ್ದಲ್ಲಿ, ಸಂಡೂರು ತಾಲ್ಲೂಕಿಗೆ ಹೊಸ ಪ್ರೌಢಶಾಲೆಗಳನ್ನು ಯಾವಾಗ ಮಂಜೂರು ಮಾಡಲಾಗುವುದು?	

ಸಂ: ಇಪಿ 371 ಎಸ್‌ಇಎಸ್ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	546
ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ಶಿವಲಿಂಗೇಗೌಡ ಕೆ.ಎಂ.
ಉತ್ತರಿಸುವ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಅರಸೀಕೆರೆ ನಗರದಲ್ಲಿ ಡಾ॥ಬಿ.ಆರ್ ಅಂಬೇಡ್ಕರ್ ಭವನ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಕಾಮಗಾರಿ ಅಪೂರ್ಣಗೊಳ್ಳಲು ಕಾರಣವೇನು; ಭವನ ನಿರ್ಮಾಣ ಯಾವಾಗ ಪೂರ್ಣಗೊಳಿಸಲಾಗುವುದು;	ಹೌದು. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಹಾಸನ ಜಿಲ್ಲೆ, ಅರಸೀಕೆರೆ ನಗರದಲ್ಲಿ ರೂ.100.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡಿ, ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.
ಆ)	ಈ ಭವನ ನಿರ್ಮಾಣಕ್ಕೆ ಎಷ್ಟು ಅನುದಾನ ನೀಡಲಾಗಿದೆ; ಇದರಲ್ಲಿ ಇದುವರೆವಿಗೂ ಖರ್ಚಾಗಿರುವ ಹಣವೆಷ್ಟು; ಅನುದಾನ ಕೊರತೆ ಇದ್ದರೆ ಉಳಿಕೆ ಕಾಮಗಾರಿಗಾಗಿ ಇನ್ನು ಎಷ್ಟು ಅನುದಾನ ಬೇಕಾಗಬಹುದು? (ವಿವರ ನೀಡುವುದು)	ಸದರಿ ಭವನದ ಕಟ್ಟಡ ನಿರ್ಮಾಣ ಸಂಬಂಧವಾಗಿ ಬಿಡುಗಡೆ ಮಾಡಲಾಗಿದ್ದ ರೂ.100.00 ಲಕ್ಷಗಳ ಅನುದಾನ ವೆಚ್ಚವಾಗಿದ್ದು, ಉಳಿಕೆ ಕಾಮಗಾರಿಗಳಾದ ಕಿಟಕಿ ಬಾಗಿಲುಗಳ ಜೋಡಣೆ, ನೆಲಹಾಸು ಕಾಮಗಾರಿ, ಪ್ಲಾಸ್ಟರಿಂಗ್, ವಿದ್ಯುದೀಕರಣ, ಪ್ಲಂಬಿಂಗ್ ಕೆಲಸ, ಟೈಲ್ಸ್ ಕಾಮಗಾರಿ ಹಾಗೂ ಇತರೆ ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳಲು ರೂ.96.10 ಲಕ್ಷಗಳ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಿ, ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಬಂದಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಸಕಇ 115 ಪಕವಿ 2020, ದಿನಾಂಕ: 09-06-2020ರಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಡಾ॥ ಬಿ.ಆರ್ ಅಂಬೇಡ್ಕರ್ / ಡಾ॥ ಬಾಬು ಜಗಜೀವನರಾಮ್ / ಸಮುದಾಯ ಭವನಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಯನ್ವಯ ಅನುದಾನವನ್ನು ಬಿಡುಗಡೆಗೊಳಿಸಿದ ನಂತರ, ಬಿಡುಗಡೆಗೊಳಿಸಿದ ಅನುದಾನವನ್ನು ಹೊರತುಪಡಿಸಿ, ಹೆಚ್ಚುವರಿಯಾಗಿ ಅನುದಾನ ಕೋರುವುದಾಗಲಿ ಅಥವಾ ಪ್ರಸ್ತಾವನೆ ಸಲ್ಲಿಸುವುದಾಗಲಿ ಮಾಡುವಂತಿಲ್ಲ. ಒಂದು ವೇಳೆ ಭವನಗಳ ನಿರ್ಮಾಣಕ್ಕೆ ಹೆಚ್ಚುವರಿ ಬೇಕಾಗುವ ವೆಚ್ಚವನ್ನು ಸ್ಥಳೀಯ ಮೂಲಗಳಿಂದ ಭರಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸುವಂತೆ ತಿಳಿಸಿ ಆಯುಕ್ತರಿಗೆ ನಿರ್ದೇಶನ ನೀಡಲಾಗಿರುತ್ತದೆ.

ಸಕಇ 479 ಪಕವಿ 2020

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 547
2. ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಅರಸೀಕೆರೆಯಲ್ಲಿ ಕಾರ್ಮಿಕರಿಗೋಸ್ಕರ "ಕಾರ್ಮಿಕ ಭವನ" ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ:	ಇಲ್ಲ.
ಆ)	ಇದ್ದಲ್ಲಿ ಯಾವಾಗ ನಿರ್ಮಾಣ ಮಾಡಲಾಗುವುದು?	ಉದ್ಭವಿಸುವುದಿಲ್ಲ.

ಕಾಇ 403 ಎಲ್ಇಟಿ 2020

8/12/21

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 550
ಸದಸ್ಯರ ಹೆಸರು	: ಶ್ರೀ ಶಿವಲಿಂಗೇಗೌಡ ಕೆ.ಎಂ.(ಅರಸೀಕೆರೆ)
ಉತ್ತರಿಸುವ ದಿನಾಂಕ	: 10.12.2020
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಅರಸೀಕೆರೆಯಲ್ಲಿರುವ ರೇಷ್ಮೆ ಇಲಾಖೆಯ 5 ಎಕರೆ ಜಮೀನಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಪ್ರಾರಂಭಿಸಲು ಶಿಕ್ಷಣ ಇಲಾಖೆಗೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು;	ಬಂದಿಲ್ಲ. ಪ್ರಸ್ತುತ ಇರುವ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.

ಸಂಖ್ಯೆ: ಇಡಿ 121 ಹೆಚ್‌ಪಿಟಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	569
2)	ಮಾನ್ಯ ಸದಸ್ಯರ ಹೆಸರು	ಡಾ॥ ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)
3)	ಉತ್ತರಿಸಬೇಕಾದ ದಿನಾಂಕ	10-12-2020
4)	ಉತ್ತರಿಸುವವರು	ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ, ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಪ್ರಶ್ನೆ	ಉತ್ತರ
(ಅ) ರಾಜ್ಯದಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಕೌಶಲ್ಯ ತರಬೇತಿ ಒದಗಿಸಿ ಉದ್ಯೋಗಸ್ಥರನ್ನಾಗಿ ಮಾಡಲು ಮತ್ತು ಇವರಿಗೆ ಹೆಚ್ಚಿನ ತಾಂತ್ರಿಕ ತರಬೇತಿಯನ್ನು ಒದಗಿಸುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಈ ನಿಟ್ಟಿನಲ್ಲಿ ಕೆ.ಎಸ್.ಡಿ.ಸಿ ಸಿ.ಎಂ.ಕೆ.ಕೆ.ವೈ, ಪಿ.ಎಂ.ಕೆ.ವಿ.ವೈ ಹಾಗೂ Future Skills ಕೋರ್ಸ್‌ಗಳ ವಿಷಯ ಸೂಚಿ ಮತ್ತು ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದಲ್ಲದೇ ಜಿಟಿಟಿಸಿಯ ಶ್ರೇಷ್ಠತಾ ಕೇಂದ್ರಗಳಲ್ಲಿ ಉನ್ನತ ಮಟ್ಟದ ಕೌಶಲ್ಯ ತರಬೇತಿಯನ್ನು ಸಹ ನೀಡಲಾಗುತ್ತಿದೆ.
(ಆ) ಹಾಗಿದ್ದಲ್ಲಿ ಜಿ.ಟಿ.ಟಿ.ಸಿ ಕೇಂದ್ರದಲ್ಲಿ ಅಲ್ಪಾವಧಿ ಮತ್ತು ಧೀರ್ಘಾವಧಿ ತರಬೇತಿಗಳನ್ನು ನೀಡುವ ಸಲುವಾಗಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲು ಚಿಂಚೋಳಿಗೆ ಹೊಂದಿಕೊಂಡಂತೆ ಸುಮಾರು 5 ಎಕರೆ ಸರ್ಕಾರಿ ಜಮೀನು ಲಭ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	"ಹೌದು"
(ಇ) ಬಂದಿದ್ದಲ್ಲಿ, ಯಾವಾಗ ಅಗತ್ಯವಿರುವ ಅನುದಾನ ಬಿಡುಗಡೆ ಮಾಡಿ ಜಿ.ಟಿ.ಟಿ.ಸಿ. ಕೇಂದ್ರವನ್ನು ಸ್ಥಾಪಿಸಲು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು)	ನೂತನ ಜಿಟಿಟಿಸಿ ಸ್ಥಾಪನೆಗೆ ಸ್ಥಳ ನಿಗದಿಪಡಿಸುವ ಬಗ್ಗೆ ಗೊತ್ತು ಮಾಡಿರುವ ಮಾನದಂಡಗಳನ್ನು ಪ್ರಸ್ತಾಪಿತ ಜಾಗ ಚಿಂಚೋಳಿಯು ಪೂರೈಸುವುದಿಲ್ಲ. ಮಾನದಂಡಗಳ ಪ್ರಕಾರ 30 ಕಿ.ಮೀ. ಸುತ್ತಳತೆಯಲ್ಲಿ ಕನಿಷ್ಠ 5 ಡಿಪ್ಲೋಮಾ ಕಾಲೇಜು ಮತ್ತು 5 ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರಬೇಕು. ಆದರೆ, ಪ್ರಸ್ತಾಪಿತ ಚಿಂಚೋಳಿಯು ಈ ಮಾನದಂಡವನ್ನು ಪೂರೈಸುವುದಿಲ್ಲ. ಕಲಬುರಗಿ ಜಿಲ್ಲೆಯಲ್ಲಿ ಈಗಾಗಲೇ ಜಿಲ್ಲಾ ಕೇಂದ್ರದಲ್ಲಿ ಜಿಟಿಟಿಸಿ ಸ್ಥಾಪಿಸಲಾಗಿದೆ. ಸದ್ಯ ಯಾವ ಜಿಲ್ಲೆಯಲ್ಲಿ ಜಿಟಿಟಿಸಿ ಕೇಂದ್ರವಿರುವುದಿಲ್ಲವೋ ಆ ಜಿಲ್ಲೆಯಲ್ಲಿ ಜಿಟಿಟಿಸಿ ಕೇಂದ್ರ ಸ್ಥಾಪಿಸಲು ಆದ್ಯತೆ ನೀಡಲಾಗುತ್ತಿದೆ.

ಸಂಖ್ಯೆ: ಕೌಉಜೀಇ 57 ಉಜೀಪ್ರ 2020

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉಪ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ,
ಐಟಿ/ಬಿಟಿ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

ಕರ್ನಾಟಕ ವಿಧಾನಸಭೆ
(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	570
2) ಸದಸ್ಯರ ಹೆಸರು	:	ಡಾ॥ ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)
3) ಉತ್ತರಿಸುವ ದಿನಾಂಕ	:	10.12.2020
4) ಉತ್ತರಿಸುವವರು	:	ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿಂಚೋಳಿ ವಿಧಾನ ಸಭಾ ಮತಕ್ಷೇತ್ರ ವ್ಯಾಪ್ತಿಯ ಚಿಂಚೋಳಿ ಪಟ್ಟಣದಲ್ಲಿ ಸುಮಾರು 50 ವರ್ಷಗಳ ಹಿಂದೆ ನಿರ್ಮಾಣವಾದ ಸಹಾಯಕ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಹಾಗೂ ಸಾಮಾಜಿಕ ವಲಯ ಅರಣ್ಯಾಧಿಕಾರಿಗಳ ಕಛೇರಿ ಪ್ರಸ್ತುತ ಶಿಥಿಲಾವಸ್ಥೆಯಲ್ಲಿದ್ದು, ಮಳೆಗಾಲದಲ್ಲಿ ನೀರು ಸೋರಿ ಕಛೇರಿ ಕಡತಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;	ಕಲಬುರಗಿ ಸಾಮಾಜಿಕ ಅರಣ್ಯ ವಿಭಾಗದ ಚಿಂಚೋಳಿ ಸಾಮಾಜಿಕ ಅರಣ್ಯ ವಲಯ ಕಛೇರಿ ಕಟ್ಟಡ ಇರುವುದಿಲ್ಲ. ವಸತಿ ಗೃಹ ಕಟ್ಟಡದಲ್ಲಿ ಕಛೇರಿ ಕೆಲಸವನ್ನು ನಿರ್ವಹಿಸಲಾಗುತ್ತಿದೆ. ಸದರಿ ಕಟ್ಟಡವು ಶಿಥಿಲಾವಸ್ಥೆಯಲ್ಲಿರುತ್ತದೆ. ಕಛೇರಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಕಛೇರಿ ಕಟ್ಟಡವನ್ನು ನಿರ್ಮಾಣ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ;	
ಇ)	ಸರ್ಕಾರ ಸದರಿ ಕಟ್ಟಡ ನಿರ್ಮಾಣಕ್ಕೆ ಯಾವ ಕ್ರಮಗಳನ್ನು ಕೈಗೊಂಡಿದೆ? (ಸಂಪೂರ್ಣ ಮಾಹಿತಿಒದಗಿಸುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ಅಪಜೀ 60 ಎಫ್‌ಟಿಎಸ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 574
ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನ ಬಾಗೇವಾಡಿ)
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತಿದೆಯೇ;	ಇಲ್ಲ
ಆ)	ಹಾಗಿದ್ದಲ್ಲಿ, ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರದ ಪ್ರಸ್ತಾವನೆಗಳು ಇರುತ್ತವೆ;	ಕಳೆದ 3 ವರ್ಷಗಳಲ್ಲಿ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.
ಇ)	ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಕೂಡಗಿ, ಕೊಲ್ಹಾರ, ಚಿಮ್ಮಲಗಿ ಮತ್ತು ಮುಳವಾಡಗಳಲ್ಲಿ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಕೂಡಗಿ, ಕೊಲ್ಹಾರ, ಚಿಮ್ಮಲಗಿ ಮತ್ತು ಮುಳವಾಡಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವಂತೆ ಕೋರಿರುವ ಬಗ್ಗೆ ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ ಇವರಿಂದ ಮಾಹಿತಿ/ವರದಿಯನ್ನು ನೀಡಲು ತಿಳಿಸಲಾಗಿದೆ.
ಈ)	ಯಾವ ನಿರ್ದಿಷ್ಟ ಕಾಲಮಿತಿಯಲ್ಲಿ ಸರ್ಕಾರದಿಂದ ಹೊಸದಾಗಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿ ಪ್ರಾರಂಭ ಮಾಡಲಾಗುವುದು?	ಪ್ರಸ್ತುತ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.

ಸಂಖ್ಯೆ: ಇಡಿ 187 ಹೆಚ್‌ಪಿಸಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	578
ಸದಸ್ಯರ ಹೆಸರು	:	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸುವ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ	ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ 132 ಪಿಬಿಎಸ್ 2018 ದಿನಾಂಕ:20-03-2018ರಲ್ಲಿ ರಾಜ್ಯದಲ್ಲಿರುವ ಹಾಲಿ ನಡೆಯುತ್ತಿರುವ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಸರ್ಕಾರಿ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ವ್ಯವಹರಣೆಯಲ್ಲಿದೆ.
ಆ)	ಪಿರಿಯಾಪಟ್ಟಣ ಮತ ಕ್ಷೇತ್ರದ ಕಂಪಲ್ಲಾಪುರ, ಮಾಕೋಡು, ಕೊಪ್ಪ ಗ್ರಾಮದ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ಪಡೆಯಲು ದೂರದ ಗ್ರಾಮ ಹಾಗೂ ಪಟ್ಟಣಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಸರ್ಕಾರ ಈ ಪಿರಿಯಾಪಟ್ಟಣ ಮತ ಕ್ಷೇತ್ರದ ಕಂಪಲ್ಲಾಪುರ, ಮಾಕೋಡು, ಕೊಪ್ಪ ಗ್ರಾಮಗಳಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;	ಕಂಪಲ್ಲಾಪುರ, ಮಾಕೋಡು, ಕೊಪ್ಪ ಗ್ರಾಮಗಳಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆ ಮಾಡುವ ಕುರಿತಂತೆ ಮೂಲಭೂತ ಸೌಕರ್ಯ ಹೊಂದಿಸಿಕೊಂಡಿರುವ ಬಗ್ಗೆ ವರದಿ ನೀಡಲು ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರಿಂದ ವರದಿ ನಿರೀಕ್ಷಿಸಲಾಗಿದೆ ಎಂದು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ವರದಿಸಿದ್ದು, ಈ ಬಗ್ಗೆ ಸೂಕ್ತ ಪ್ರಸ್ತಾವನೆ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.
ಈ)	ಕಾಲೇಜುಗಳ ಸ್ಥಾಪನೆಯ ಬಗ್ಗೆ ಸರ್ಕಾರದ ಕ್ರಮವೇನು?	

ಸಂಖ್ಯೆ: ಇಪಿ 178 ಡಿಜಿಡಬ್ಲ್ಯೂ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	579
ಮಾನ್ಯ ಸದಸ್ಯರ ಹೆಸರು	:	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಪ್ರಸಕ್ತ ವರ್ಷ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	ಪ್ರಸಕ್ತ ವರ್ಷ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ.
ಆ	ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ಯಾವ ಮಾನದಂಡವನ್ನು ಅನುಸರಿಸಲಾಗುವುದು;	ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟಗಳ (IPHS Revised-2012) ಪ್ರಕಾರ:-ಸಮತಟ್ಟು ಪ್ರದೇಶಗಳಲ್ಲಿ 1,20,000 ಜನಸಂಖ್ಯೆಗೆ ಒಂದರಂತೆ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಮತ್ತು ಗುಡ್ಡಗಾಡು ಪ್ರದೇಶ, ಮರುಭೂಮಿ ಮತ್ತು ಆದಿವಾಸಿ ಪ್ರದೇಶದಲ್ಲಿ 80000 ಜನಸಂಖ್ಯೆಗೆ /ಪ್ರತಿ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.
ಇ	ಪಿರಿಯಾಪಟ್ಟಣ ಮತಕ್ಷೇತ್ರದ ಬೆಟ್ಟದಪುರ ಹಾಗೂ ರಾವಂದೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಯಾವ ಹಂತದಲ್ಲಿದೆ;	ಬೆಟ್ಟದಪುರ ಹಾಗೂ ರಾವಂದೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.
ಈ	ಹಾಗಿದ್ದಲ್ಲಿ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಈ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	

ಆಕುಕ 146 ಎಸ್‌ಬಿವಿ 2020.

(ಡಾ|| ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	586
ಸದಸ್ಯರ ಹೆಸರು	:	ಶ್ರೀ. ನಿಸರ್ಗ ನಾರಾಯಣಸ್ವಾಮಿ ಎಲ್.ಎನ್.
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ದೇವನಹಳ್ಳಿ ವಿಧಾನಸಭಾ ಕ್ಷೇತ್ರವು ಮೀಸಲು ಕ್ಷೇತ್ರವಾಗಿದ್ದು, ಇಲ್ಲಿ ಪರಿಶಿಷ್ಟ ಜಾತಿ /ಪಂಗಡಗಳ ಬಡ ಜನರು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಬಂದಿದೆ. ದೇವನಹಳ್ಳಿ ವಿಧಾನಸಭಾ ಕ್ಷೇತ್ರವು (ಪರಿಶಿಷ್ಟ ಜಾತಿ) ಮೀಸಲು ಕ್ಷೇತ್ರವಾಗಿದ್ದು, ಸದರಿ ವಿಧಾನಸಭಾ ಕ್ಷೇತ್ರದಲ್ಲಿ 2011 ರ ಜನಗಣತಿಯ ಪ್ರಕಾರ ಪರಿಶಿಷ್ಟ ಜಾತಿಯ 49,517 ಮತ್ತು ಪರಿಶಿಷ್ಟ ಪಂಗಡದ 20,385 ಜನಾಂಗದ ಜನಸಂಖ್ಯೆ ಇರುತ್ತದೆ.
ಆ)	ಬಂದಿದ್ದಲ್ಲಿ, ಈ ಜನರು ವಾಸಿಸುತ್ತಿರುವ ಕಾಲೋನಿಗಳ ಅಭಿವೃದ್ಧಿಗಾಗಿ ಇಲಾಖೆಯಿಂದ ಕಳೆದ 2 ವರ್ಷಗಳಿಂದ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ಎಷ್ಟು ಅನುದಾನ ಬಿಡುಗಡೆಯಾಗಿದೆ; ಬಿಡುಗಡೆಯಾಗದಿದ್ದರೆ ಬಿಡುಗಡೆ ಮಾಡದಿರಲು ಕಾರಣಗಳೇನು; (ಪೂರ್ಣ ಮಾಹಿತಿ ನೀಡುವುದು)	2018-19 ಮತ್ತು 2019-20ನೇ ಸಾಲಿನಲ್ಲಿ ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಒಟ್ಟು ರೂ.578.00 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು, ಈ ಪೈಕಿ ರೂ.551.60 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.
ಇ)	ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದು; ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು? (ಪೂರ್ಣ ಮಾಹಿತಿ ನೀಡುವುದು)	

ಸಕಇ 427 ಎಸ್‌ಎಲ್‌ಪಿ 2020

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**595**
ಮಾನ್ಯ ಸದಸ್ಯರ ಹೆಸರು	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು).
ಉತ್ತರಿಸುವ ಸಚಿವರು	ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	10.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಕಿತ್ತೂರು ತಾಲ್ಲೂಕು ಕೇಂದ್ರದ ವ್ಯಾಪ್ತಿಯಲ್ಲಿ ಸ್ಥಾಪಿಸಲು ಪ್ರಸ್ತಾವನೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಕಿತ್ತೂರು ತಾಲ್ಲೂಕು ಕೇಂದ್ರದಲ್ಲಿ ಸ್ಥಾಪಿಸಲು ಪ್ರಸ್ತಾವನೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಈ ಪ್ರಸ್ತಾವನೆ ಸ್ವೀಕೃತವಾದ ಪೂರ್ವದಲ್ಲಿಯೇ ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ (ಸಂಕನಾಯ್ಕನಕೊಪ್ಪ) ಹಾಗೂ ಸು.ಹಾಲಗಿಮರ್ಡಿ ಗ್ರಾಮದ ಹತ್ತಿರ 126 ಎಕರೆ 27 ಗುಂಟೆ ಜಮೀನನ್ನು ಈಗಾಗಲೇ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಿ ಕಂದಾಯ ಇಲಾಖೆಯಿಂದ ದಿನಾಂಕ 21.09.2020ರಂದು ಆದೇಶ ಹೊರಡಿಸಲಾಗಿರುತ್ತದೆ. ಪ್ರಸ್ತುತ ಸದರಿ ಜಾಗದ ಸರ್ವೆ ಕಾರ್ಯವೂ ಸಹ ಮುಗಿದಿದ್ದು, ರಸ್ತೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
ಆ)	ಕಿತ್ತೂರು ನಾಡಿನ ಜನರ ಬೇಡಿಕೆಗೆ ಅನುಗುಣವಾಗಿ ಸರ್ಕಾರವು ಕೈಗೊಂಡ ಕ್ರಮವೇನು;	
ಇ)	ಯಾವ ಕಾಲಮಿತಿಯಲ್ಲಿ ಈ ಕುರಿತು ಕ್ರಮ ಕೈಗೊಳ್ಳಲಾಗುವುದು?	

ಸಂಖ್ಯೆ: ಇಡಿ 280 ಯುಆರ್‌ಸಿ 2020

(ಡಾ. ಅಶ್ವತ್ಥ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 725
ಸದಸ್ಯರ ಹೆಸರು : ಶ್ರೀ ಶ್ರೀನಿವಾಸ್ ಎಂ
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮದ ತಿದ್ದುಪಡಿಯಲ್ಲಿ ಕಛೇರಿ ಅಧೀಕ್ಷಕರ ಹುದ್ದೆಗೆ ನಿಲಯ ಪಾಲಕರ ವೃಂದದಿಂದ ನಿಗಧಿಪಡಿಸಲಾಗಿರುವ ಶೇಕಡವಾರು ಪ್ರಮಾಣವೆಷ್ಟು;	ಸಮಾಜ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು 1985 ಕ್ಕೆ ಸಮಗ್ರ ತಿದ್ದುಪಡಿ ತರುವ ಕುರಿತು ಪರಿಶೀಲಿಸಲಾಗುತ್ತಿದ್ದು, ಯಾವುದೇ ಅಂತಿಮ ನಿರ್ಣಯವಾಗಿರುವುದಿಲ್ಲ.
ಆ)	ಈ ಶೇಕಡವಾರು ಪ್ರಮಾಣ ನಿಗಧಿಪಡಿಸಲು ಅಳವಡಿಸಿಕೊಂಡಿರುವ ಮಾನದಂಡಗಳೇನು?	

ಸಕಇ 429 ಎಸ್‌ಎಲ್‌ಪಿ 2020

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	728
2)	ಮಾನ್ಯ ಸದಸ್ಯರ ಹೆಸರು	ಶ್ರೀ ಶ್ರೀನಿವಾಸ್.ಎಂ. (ಮಂಡ್ಯ)
3)	ಉತ್ತರಿಸಬೇಕಾದ ದಿನಾಂಕ	10/12/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರಗಳ ಸಿಬ್ಬಂದಿಗಳ ವೇತನ ಅನುದಾನಕ್ಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು;	ಸರ್ಕಾರದ ಆದೇಶ ಸಂಖ್ಯೆ: ಕಾಇ 284 ಇಟಿಐ 2005 ಬೆಂಗಳೂರು, ದಿನಾಂಕ: 21-08-2010 ರನ್ವಯ "ಇನ್ನು ಮುಂದೆ ಯಾವುದೇ ಕೈಗಾರಿಕಾ ತರಬೇತಿ ಕೇಂದ್ರವನ್ನು 1997ರ ಅನುದಾನ ಸಂಹಿತೆಗೆ ಒಳಪಡಿಸತಕ್ಕದ್ದಲ್ಲವೆಂದು" ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಯಾವುದೇ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶಗಳಿರುವುದಿಲ್ಲ.
ಆ)	ಬಂದಿದ್ದಲ್ಲಿ, ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು;	
ಇ)	ವೇತನಕ್ಕಾಗಿ ಯಾವಾಗ ಅನುದಾನ ಬಿಡುಗಡೆಗೊಳಿಸಲಾಗುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಕೌಉಜೀಇ 66 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	729
ಮಾನ್ಯ ಸದಸ್ಯರ ಹೆಸರು	:	ಶ್ರೀ ಶ್ರೀನಿವಾಸ್ ಎಂ. (ಮಂಡ್ಯ)
ಉತ್ತರಿಸಬೇಕಾದ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಕಸಬಾ ಹೋಬಳಿ ಕೇಂದ್ರ ಸ್ಥಾನವಾದ ಹನಕೆರೆ ಗ್ರಾಮದಲ್ಲಿ ಸಮುದಾಯ ಆಸ್ಪತ್ರೆ ನಿರ್ಮಾಣ ಕುರಿತು ಈಗಾಗಲೇ ಹಲವು ಬಾರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;	ಮಂಡ್ಯ ಜಿಲ್ಲೆ ಮತ್ತು ತಾಲ್ಲೂಕಿನ ಹನಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತಗೊಂಡಿರುತ್ತದೆ. ಸದರಿ ತಾಲ್ಲೂಕಿನ ಜನಸಂಖ್ಯೆಗನುಗುಣವಾಗಿ 2 ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅವಕಾಶವಿದ್ದು, ಅದರಂತೆ 2 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಆರ್ಥಿಕ ಇಲಾಖೆಯು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳನ್ನು 1 ಅಥವಾ 2 ವರ್ಷಗಳ ಅವಧಿಗೆ ಪ್ರಸ್ತುತ ತಡೆಹಿಡಿಯುವಂತೆ ಸೂಚಿಸಿರುವುದಲ್ಲದೆ, ರಾಜ್ಯದಲ್ಲಿ ಕೋವಿಡ್-19 ರ ಹಿನ್ನೆಲೆಯಲ್ಲಿ ಆರ್ಥಿಕ ಬಿಕ್ಕಟ್ಟು ತಲೆದೋರಿರುತ್ತದೆ. ಈ ಕಾರಣಗಳಿಂದಾಗಿ, ಮಂಡ್ಯ ಜಿಲ್ಲೆ ಕಸಬ ಹೋಬಳಿ ಹನಕೆರೆ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ.
ಆ)	ಹಾಗಿದ್ದಲ್ಲಿ, ಹನಕೆರೆಗೆ ಸಮುದಾಯ ಆಸ್ಪತ್ರೆ ಮಂಜೂರು ಮಾಡುವುದು ಯಾವಾಗ?	
ಇ)	ಮಂಡ್ಯ ತಾಲ್ಲೂಕಿನಲ್ಲಿರುವ ಸಮುದಾಯ ಆಸ್ಪತ್ರೆಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಮಂಡ್ಯ ತಾಲ್ಲೂಕಿನಲ್ಲಿ ಒಟ್ಟು 2 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 1. ಶಿವಳ್ಳಿ, 2.ಕೀಲಾರ

ಆಕುಕ 149 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	747
ಮಾನ್ಯ ಸದಸ್ಯರ ಹೆಸರು	ಶ್ರೀ ಕೃಷ್ಣಾರೆಡ್ಡಿ ಎಂ (ಚಿಂತಾಮಣಿ)
ಉತ್ತರಿಸಬೇಕಾದ ದಿನಾಂಕ	10.12.2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನಲ್ಲಿರುವ ಸಾರ್ವಜನಿಕರ ಆಸ್ಪತ್ರೆಯು ತಾಯಿ ಮಕ್ಕಳ ಆಸ್ಪತ್ರೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರಿಲ್ಲದಿರುವ ಕಾರಣ ಮೂಳೆಗೆ ಸಂಬಂಧಪಟ್ಟ ಕಾಯಿಲೆಗೆ ಚಿಕಿತ್ಸೆ ಪಡೆಯಲು ರೋಗಿಗಳಿಗೆ ತೀರಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಬಂದಿದೆ.
ಆ)	ಬಂದಿದಲ್ಲಿ, ಯಾವ ಕಾಲಮಿತಿಯೊಳಗೆ ಮೂಳೆ ತಜ್ಞರ ಹುದ್ದೆಯನ್ನು ಮಂಜೂರು ಮಾಡಿ ಯಾವಾಗ ಆ ಹುದ್ದೆಯನ್ನು ಭರ್ತಿ ಮಾಡಲಾಗುವುದು (ವಿವರವನ್ನು ನೀಡುವುದು)	ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿರುವ ತಾಯಿ ಮಕ್ಕಳ ಆಸ್ಪತ್ರೆಗೆ ಮೂಳೆ ತಜ್ಞರ ಹುದ್ದೆಯು ಮಂಜೂರಾಗಿರುವುದಿಲ್ಲ. ಆದರೆ, ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ ಇಲ್ಲಿ ಮೂಳೆ ತಜ್ಞರ ಹುದ್ದೆಯು ಮಂಜೂರಾಗಿದ್ದು, ಹುದ್ದೆ ಖಾಲಿಯಿರುತ್ತದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ನಿಯಮಗಳ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು,ಈ ಸಂಬಂಧ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/ – 68/2019–20, ದಿ:10.09.2020ರಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ 'ಹುದ್ದೆಗಳನ್ನು ಪ್ರಚುರಪಡಿಸಿ ನಿಯಮಾನುಸಾರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಆದರೆ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾ॥ ನಲ್ಲಿರುವ ತಾಯಿ ಮಕ್ಕಳ ಆಸ್ಪತ್ರೆಗೆ ಮೂಳೆ ತಜ್ಞರ ಹುದ್ದೆ ಮಂಜೂರಾಗದ ಪ್ರಯುಕ್ತ ಭರ್ತಿ ಮಾಡಲು ಸಾದ್ಯವಿರುವುದಿಲ್ಲ.

ಆಕುಕ 76 ಹೆಚ್‌ಎಸ್‌ಡಿ 2020

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 749
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಕೃಷ್ಣಾರೆಡ್ಡಿ ಎಂ.
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು ಕೇಂದ್ರದಲ್ಲಿ ಡಾ॥ಬಿ.ಆರ್. ಅಂಬೇಡ್ಕರ್ ಭವನ ಅಪೂರ್ಣಗೊಂಡಿದ್ದು, ಅಪೂರ್ಣ ಕಾಮಗಾರಿಯನ್ನು ಕೈಗೊಳ್ಳಲು ಅನುದಾನ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ ಅನುದಾನ ಬಿಡುಗಡೆ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು:	ಸಮಾಜ ಕಲ್ಯಾಣ ಇಲಾಖೆವತಿಯಿಂದ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಕೇಂದ್ರದಲ್ಲಿ ಡಾ: ಬಿ.ಆರ್ ಅಂಬೇಡ್ಕರ್ ಭವನದ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲು ರೂ.293.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ರೂ.200.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಅದರನ್ವಯ, ಇದುವರೆವಿಗೂ ರೂ.150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಮುಂದುವರೆದು ಚಿಕ್ಕಬಳ್ಳಾಪುರ ಜಿಲ್ಲೆಗೆ ಮಂಜೂರು ಮಾಡಲಾಗಿದ್ದ ಭವನಗಳ ಪೈಕಿ, ನಿವೇಶನ ಲಭ್ಯವಿಲ್ಲದಿರುವ ಭವನಗಳ ನಿರ್ಮಾಣ ಸಂಬಂಧವಾಗಿ ಜಿಲ್ಲೆಗೆ ಬಿಡುಗಡೆ ಮಾಡಲಾಗಿದ್ದ ಅನುದಾನದಲ್ಲಿ ರೂ.50.00 ಲಕ್ಷಗಳನ್ನು ಸದರಿ ತಾಲ್ಲೂಕು ಕೇಂದ್ರದ ಭವನ ನಿರ್ಮಾಣಕ್ಕೆ ಉಪಯೋಗಿಸಿಕೊಳ್ಳಲಾಗಿರುತ್ತದೆ. ಸದರಿ ಭವನದ ಕಾಮಗಾರಿಗೆ ಹೆಚ್ಚುವರಿಯಾಗಿ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡುವ ಕುರಿತಂತೆ ಪರಿಶೀಲಿಸಿ, ಮಾರ್ಗಸೂಚಿಯನ್ವಯ ಸೂಕ್ತ ಪ್ರಸ್ತಾವನೆಯನ್ನು ಪಡೆದು ಕ್ರಮ ಜರುಗಿಸಲಾಗುವುದು.
ಇ)	ಯಾವ ಕಾಲಮಿತಿಯೊಳಗೆ ಉಳಿಕೆ ಅನುದಾನ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಸೂಕ್ತ ಪ್ರಸ್ತಾವನೆ ಪಡೆದು, ಹೆಚ್ಚುವರಿ ಅನುದಾನ ಮಂಜೂರಾತಿ ಕುರಿತಂತೆ ಅನುದಾನದ ಲಭ್ಯತೆಯನ್ನು ಆಧರಿಸಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಕ್ರಮವಹಿಸಲಾಗುವುದು.

ಸಕಇ 477 ಪಕವಿ 2020

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	758
2)	ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಣ್ಣ.ಬಿ. (ಆನೇಕಲ್)
3)	ಉತ್ತರಿಸಬೇಕಾದ ದಿನಾಂಕ	10/12/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕು ಕೇಂದ್ರದಲ್ಲಿ ನಡೆಯುತ್ತಿರುವ ಐ.ಟಿ.ಐ. ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ಮಾಹಿತಿ ನೀಡುವುದು)	ಬಂದಿದೆ. ಆನೇಕಲ್ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುವ ಎ.ಎಸ್.ಬಿ. ಜ್ಯೂನಿಯರ್ ಕಾಲೇಜ್ ಆನೇಕಲ್ ಆವರಣದಲ್ಲಿರುವ ಬಾಡಿಗೆ ರಹಿತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.
ಆ)	ಐ.ಟಿ.ಐ. ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ನಿವೇಶನ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು)	ಐ.ಟಿ.ಐ ಕಾಲೇಜಿಗೆ ಮೂಲಭೂತ ಸೌಕರ್ಯಗಳಿರುವ ಸೂಕ್ತ ನಿವೇಶನ ಒದಗಿಸುವಂತೆ ಈಗಾಗಲೇ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರನ್ನು ಕೋರಲಾಗಿದ್ದು, ತೆಲಗರಹಳ್ಳಿ ಗ್ರಾಮದ ಸ.ನಂ. 11 ರಲ್ಲಿ 2-20 ಎ/ಗುಂಟೆ ಜಮೀನನ್ನು ಮಂಜೂರು ಮಾಡುವ ಸಂಬಂಧ ಪ್ರಸ್ತುತ ಜಿಲ್ಲಾಧಿಕಾರಿಯವರ ಹಂತದಲ್ಲಿ ಬಾಕಿ ಇರುತ್ತದೆ.
ಇ)	ಐ.ಟಿ.ಐ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದರಿಂದ ಪರಿಣಾಮಕಾರಿ ಬೋಧನೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪೂರ್ಣ ಮಾಹಿತಿ ನೀಡುವುದು)	ಮೂಲಭೂತ ಸೌಕರ್ಯಗಳಿರುವ ಎ.ಎಸ್.ಬಿ. ಜ್ಯೂನಿಯರ್ ಕಾಲೇಜ್ ಆನೇಕಲ್ ಆವರಣದಲ್ಲಿರುವ ಬಾಡಿಗೆ ರಹಿತ ಕಟ್ಟಡದಲ್ಲಿ ತರಬೇತಿದಾರರಿಗೆ ಬೋಧನೆಗೆ ತೊಂದರೆಯಾಗದಂತೆ ಪರಿಣಾಮಕಾರಿಯಾಗಿ ತರಬೇತಿ ನೀಡಲಾಗುತ್ತಿದೆ. ಜಮೀನು ಮಂಜೂರಾದ ಕೂಡಲೇ ಅನುದಾನದ ಲಭ್ಯತೆ ಆಧರಿಸಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಪರಿಶೀಲಿಸಲಾಗುವುದು.

ಸಂಖ್ಯೆ: ಕೌಉಜೀಇ 68 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

1	ಮಾನ್ಯ ಸದಸ್ಯರ ಹೆಸರು	: ಶ್ರೀ ಶಿವಣ್ಣ ಬಿ. (ಆನೇಕಲ್)
2	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 759
3	ಉತ್ತರಿಸಬೇಕಾದ ದಿನಾಂಕ	: 10-12-2020
4	ಉತ್ತರಿಸಬೇಕಾದವರು	: ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಆನೇಕಲ್ ತಾಲ್ಲೂಕಿನ ಇಗ್ಗಲೂರಿನಲ್ಲಿ ಇ.ಎಸ್.ಐ. ಆಸ್ಪತ್ರೆ ಕಟ್ಟಡ ಕಾಮಗಾರಿ ಆರಂಭವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪೂರ್ಣ ಮಾಹಿತಿ ನೀಡುವುದು)	ಹೌದು
(ಆ)	ಕಳೆದ 2 ವರ್ಷಗಳ ಹಿಂದೆ ಇ.ಎಸ್.ಐ. ಆಸ್ಪತ್ರೆ ಕಟ್ಟಡ ಮಂಜೂರಾಗಿದ್ದರೂ ಇದುವರೆವಿಗೂ ಕಟ್ಟಡ ಕಾಮಗಾರಿ ಆರಂಭವಾಗದಿರಲು ಕಾರಣವೇನು; (ಮಾಹಿತಿ ನೀಡುವುದು)	ಆಸ್ಪತ್ರೆಯ ಕಟ್ಟಡ ನಿರ್ಮಾಣ ಕಾರ್ಯ ಕಾರಾವಿ. ನಿಗಮಕ್ಕೆ ಸಂಬಂಧಿಸಿದ್ದು, Central PWD ಗೆ ಕಟ್ಟಡದ ನಿರ್ಮಾಣ ಕಾರ್ಯವನ್ನು ವಹಿಸಲಾಗಿದೆ.
(ಇ)	ಆನೇಕಲ್ ತಾಲ್ಲೂಕಿನ ಇಗ್ಗಲೂರಿನಲ್ಲಿ ಇ.ಎಸ್.ಐ. ಆಸ್ಪತ್ರೆಯ ಕಟ್ಟಡವನ್ನು ಯಾವ ಕಾಲ ಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಪೂರ್ಣ ಮಾಹಿತಿ ನೀಡುವುದು)	ಕಾ.ರಾ.ವಿ ನಿಗಮ ತನ್ನ ಪತ್ರ ಸಂಖ್ಯೆ: W/11/13/Karnataka/8/2012(Land-PMD) Dt. 18-07-2019 ರಲ್ಲಿ ತಿಳಿಸಿರುವಂತೆ ಆಸ್ಪತ್ರೆ ನಿರ್ಮಾಣ ಕಾಮಗಾರಿಯನ್ನು Central PWD ಯೊಂದಿಗೆ ಮಾಡಿಕೊಂಡಿರುವ MoU ಷರತ್ತುಗಳನ್ವಯ ಕಟ್ಟಡದ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

LD-LSI/216/2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 767
ಮಾನ್ಯ ಸದಸ್ಯರ ಹೆಸರು	: ಶ್ರೀ ಉಮಾನಾಥ ಎ.ಕೋಟ್ಯಾನ್ (ಮೂಡಬಿದ್ರೆ)
ಉತ್ತರಿಸಬೇಕಾದ ದಿನಾಂಕ	: 10-12-2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಮೂಡಬಿದರೆ ತಾಲ್ಲೂಕು ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತಾದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹೌದಾದಲ್ಲಿ ಅತ್ಯಗತ್ಯವಾಗಿರುವ ತಾಲ್ಲೂಕು ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತಾದ ಸರ್ಕಾರದ ಸಕಾಲಿಕ ಕ್ರಮಗಳೇನು;	ಹೌದು. ಸರ್ಕಾರದ ಆದೇಶ ಸಂಖೆ:ಕಂಇ 35 ಭೂದಾಪು 2017, ದಿನಾಂಕ:06.09.2017ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಮೂಡಬಿದರೆಯನ್ನು ಹೊಸ ತಾಲ್ಲೂಕಾಗಿ ರಚಿಸಿ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. ಅದರಂತೆ, ಮೂಡಬಿದರೆಯಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಆ	ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಕುರಿತು ಸರ್ಕಾರ ನೀತಿ-ನಿಯಮಗಳು ಯಾವುವು;	ಸರ್ಕಾರವು ಹೊಸ ತಾಲ್ಲೂಕನ್ನು ಘೋಷಿಸಿದ ನಂತರ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು
ಇ	ತಾಲ್ಲೂಕು ಕೇಂದ್ರವೆಂದು ಸರ್ಕಾರದಿಂದ ಘೋಷಿಸಲ್ಪಟ್ಟ ಐದಾರು ವರ್ಷಗಳಾದರೂ ಬಡ ಮಧ್ಯಮ ಸಾರ್ವಜನಿಕರಿಗೆ ಆರೋಗ್ಯ ಸಮಸ್ಯೆಯನ್ನು ಸುವ್ಯವಸ್ಥಿತವಾಗಿ ಒದಗಿಸಲು ಕೂಡಲೇ ಸಮುದಾಯ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆ ಎಂದು ಮೇಲ್ದರ್ಜೆಗೇರಿಸುವಲ್ಲಿ ಸರ್ಕಾರವು ತುರ್ತು ಕ್ರಮಕೈಗೊಳ್ಳುವುದೇ?	ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆಕುಕ 148 ಎಸ್‌ಬಿವಿ 2020.

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ : **769**
ಮಾನ್ಯ ಸದಸ್ಯರ ಹೆಸರು : ಶ್ರೀ ಸೋಮನಗೌಡ ಬಿ. ಪಾಟೀಲ್ (ಸಾಸನೂರು) (ದೇವರ ಹಿಪ್ಪರಗಿ)
ಉತ್ತರಿಸಬೇಕಾದ ದಿನಾಂಕ : **10.12.2020**
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದೇವರ ಹಿಪ್ಪರಗಿ ತಾಲ್ಲೂಕಿನ ದೇವರ ಹಿಪ್ಪರಗಿ ಪಟ್ಟಣದಲ್ಲಿರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು; ಇದಕ್ಕೆ ಬೇಕಾಗುವ ಕಾಲಮಿತಿ ಎಷ್ಟು;	ಸರ್ಕಾರದ ಆದೇಶ ಸಂಖ್ಯೆ:ಕಂಇ 35 ಭೂದಾಮ 2017, ದಿನಾಂಕ:06.09.2017ರಲ್ಲಿ ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯನ್ನು ಹೊಸ ತಾಲ್ಲೂಕಾಗಿ ರಚಿಸಿ ಮಾಡಲು ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ. ಆದರಂತೆ, ದೇವರ ಹಿಪ್ಪರಗಿ ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಆ)	ತಾಲ್ಲೂಕು ಆಸ್ಪತ್ರೆಯಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಿಬ್ಬಂದಿ ಭರ್ತಿಗಾಗಿ ತೆಗೆದುಕೊಂಡ ಕ್ರಮಗಳೇನು;	
ಇ)	ತಾಲ್ಲೂಕು ಆಸ್ಪತ್ರೆಯಲ್ಲಿ ಈಗಿರುವ ಸಿಬ್ಬಂದಿ ಎಷ್ಟು; (ಹುದ್ದೆವಾರು ವಿವರ ನೀಡುವುದು)	
ಈ)	ತಾಲ್ಲೂಕು ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; (ಹುದ್ದೆವಾರು ವಿವರ ನೀಡುವುದು)	
ಉ)	ಖಾಲಿ ಇರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಿಕೊಳ್ಳಲಾಗುವುದು?	

ಆಕುಕ 149 ಎಸ್‌ಬಿವಿ 2020.

(ಡಾ. ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 770

ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)

ಉತ್ತರಿಸುವ ದಿನಾಂಕ : 10-12-2020

ಉತ್ತರಿಸುವ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಉಡುಪಿ ಜಿಲ್ಲೆಯಲ್ಲಿ ಅಕ್ರಮ-ಸಕ್ರಮ ಕಾನೂನಿನಡಿಯಲ್ಲಿ ಜಾಗ ಮಂಜೂರಾತಿಗೆ ಅರಣ್ಯ ಇಲಾಖೆಯ ಅಕ್ಷೇಪಣೆ ಇರುವ ಪ್ರಕರಣಗಳ ಮಂಜೂರಾತಿಗೆ ಇಲಾಖೆ ಹಾಕಿಕೊಂಡ ಮಾನದಂಡಗಳೇನು;	ಅಕ್ರಮ-ಸಕ್ರಮದಡಿ ಕೋರುವ ಜಮೀನಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ:- 1)ಸದರಿ ಪ್ರದೇಶವು ಅರಣ್ಯ ಸ್ವರೂಪ ಹೊಂದಿರಬಾರದು. 2)ಸದರಿ ಪ್ರದೇಶವು ಕೇಂದ್ರ ಪರಿಣಿತ ಸಮಿತಿಗೆ ಸಲ್ಲಿಸಿದ ಡೀಮ್ಡ್ ಫಾರೆಸ್ಟ್ ಪಟ್ಟಿಯಲ್ಲಿ ಸೇರ್ಪಡೆಗೊಂಡಿರಬಾರದು. 3)ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ.202/1995 ಮಾನದಂಡನೆಗಳ ಪ್ರಕಾರ ಡೀಮ್ಡ್ ಫಾರೆಸ್ಟ್ ಆಗಿರಬಾರದು. 4)ಸದರಿ ಪ್ರದೇಶವು ಅಧಿಸೂಚಿತ ಅರಣ್ಯ ಪ್ರದೇಶದ ಒಳಗೆ ಇದ್ದಲ್ಲಿ 1980ನೇ ಅರಣ್ಯ ಸಂರಕ್ಷಣಾ ಕಾಯಿದೆಯನ್ವಯ ಭೂ ಮಂಜೂರಾತಿಗೆ ಅವಕಾಶ ಇರುವುದಿಲ್ಲ.
ಆ)	ಮಂಜೂರಾತಿಗೆ ಸಂಬಂಧಿಸಿದಂತೆ ಬಂದ ಅರ್ಜಿಗಳನ್ನು ತಿರಸ್ಕೃತಗೊಳಿಸಿ ಫಲಾನುಭವಿಗಳಿಗೆ ಹಿಂಬರಹ ನೀಡದ ಪ್ರಕರಣಗಳಿವೆಯೇ; (ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಮಂಜೂರಾತಿ ಸಲುವಾಗಿ ನೇರವಾಗಿ ಅರಣ್ಯ ಇಲಾಖೆಯಲ್ಲಿ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. ಆದರೆ ಕಂದಾಯ ಇಲಾಖೆಯಿಂದ ಮಂಜೂರಾತಿಗಾಗಿ ಅರಣ್ಯ ಇಲಾಖೆಯ ಅಭಿಪ್ರಾಯ ತಿಳಿಸಲು ಬಂದಿರುವ ಅರ್ಜಿಗಳಿಗೆ ಅರಣ್ಯ ಇಲಾಖೆಯಿಂದ ಸ್ಪಷ್ಟ ಅಭಿಪ್ರಾಯ ನೀಡಿ ಕಂದಾಯ ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ.
ಇ)	ಅರ್ಜಿ ತಿರಸ್ಕೃತಗೊಂಡವರಿಗಾಗಿ ಇಲಾಖೆಯು ತೆಗೆದುಕೊಂಡಿರುವ ಪರ್ಯಾಯ ಕ್ರಮವೇನು?	ತಿರಸ್ಕೃತಗೊಂಡ ಅರ್ಜಿಗಳಿಗೆ ಸಂಬಂಧಿಸಿದಂತೆ, ಕೈಗೊಳ್ಳಬೇಕಾದ ಕ್ರಮವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಸಂಖ್ಯೆ: ಅಪಜೀ 73 ಎಫ್‌ಜಿಎಲ್ 2020

(ಆನಂದ್ ಸಿಂಗ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	780
ಮಾನ್ಯ ಸದಸ್ಯರ ಹೆಸರು	ಶ್ರೀ. ಖಾದರ್ ಯು.ಟಿ. (ಮಂಗಳೂರು)
ಉತ್ತರಿಸಬೇಕಾದ ದಿನಾಂಕ	10-12-2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಗಳ ಹುದ್ದೆಗಳು ಖಾಲಿಯಿದೆ;	ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 870 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು, ಅದರಲ್ಲಿ 731 ವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. 3468 ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆ
ಆ	ಈ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ಕರ್ತವ್ಯ ವೈದ್ಯಾಧಿಕಾರಿ/ ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/68/2019-20 ದಿ:10.09.2020 ರಲ್ಲಿ ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳನ್ನು ಪ್ರಚುರಪಡಿಸಿ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.

ಆಕುಕ 74 ಹೆಚ್‌ಎಸ್‌ಡಿ 2020

(ಡಾ. ಕೆ ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	781
ಮಾನ್ಯ ಸದಸ್ಯರ ಹೆಸರು	ಶ್ರೀ ಖಾದರ್ ಯು.ಟಿ (ಮಂಗಳೂರು)
ಉತ್ತರಿಸುವ ಸಚಿವರು	ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	10.12.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಮಂಗಳೂರು ವಿಶ್ವವಿದ್ಯಾಲಯದಲ್ಲಿರುವ ದೈಹಿಕ ಶಿಕ್ಷಣ ಮತ್ತು ವೃತ್ತಿಪರ ಕೋರ್ಸನ್ನು ಮುಚ್ಚಲು ತೀರ್ಮಾನ ಕೈಗೊಳ್ಳಲಾಗಿದೆಯೇ;	ಇಲ್ಲ ಮಂಗಳೂರು ವಿಶ್ವವಿದ್ಯಾಲಯದಲ್ಲಿ 2020-21ನೇ ಶೈಕ್ಷಣಿಕ ಸಾಲಿಗೆ ದೈಹಿಕ ಶಿಕ್ಷಣ ಕಾರ್ಯಕ್ರಮಗಳ ಪ್ರವೇಶಾತಿಗೆ ಸಂಬಂಧಿಸಿದಂತೆ, ಎಂ.ಪಿ.ಎಡ್ ಕೋರ್ಸಿಗೆ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು ಪ್ರವೇಶಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ಹಾಗೂ ಬಿ.ಪಿ.ಎಡ್ ಕೋರ್ಸಿಗೆ ದಿನಾಂಕ 05.12.2020ರಂದು ಅಧಿಸೂಚನೆ ಹೊರಡಿಸಲಾಗಿದೆ.
ಆ)	ಹಾಗಿದ್ದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಕ್ರೀಡಾಪಟುಗಳಿಗೆ ಅನ್ಯಾಯವಾಗುವ ವಿಚಾರ ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ ಕೋರ್ಸ್ ಮುಂದುವರೆಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?	ಅನ್ವಯಿಸುವುದಿಲ್ಲ

ಸಂಖ್ಯೆ: ಇಡಿ 76 ಯುಡಿವಿ 2020

(ಡಾ. ಅಶ್ವತ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 786
ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸುವ ದಿನಾಂಕ : 10-12-2020.
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ:ಇಡಿ 132 ಪಿಬಿಎಸ್ 2018 ದಿನಾಂಕ:20-03-2018ರಲ್ಲಿ ರಾಜ್ಯದಲ್ಲಿರುವ ಹಾಲಿ ನಡೆಯುತ್ತಿರುವ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಸರ್ಕಾರಿ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ವ್ಯವಹರಣೆಯಲ್ಲಿದೆ.
ಆ)	ಹಾಗಿದ್ದಲ್ಲಿ, ಪುತ್ತೂರು ತಾಲ್ಲೂಕಿನ ಅರಿಯಡ್ಕ ಗ್ರಾಮಪಂಚಾಯತ್ ವ್ಯಾಪ್ತಿಯ ಪಾಪೆಮಜಲುನಲ್ಲಿ ನೂತನ ಪದವಿ ಪೂರ್ವ ಕಾಲೇಜು ಮಂಜೂರು ಮಾಡಲು ಅವಕಾಶ ಇದೆಯೇ?	ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸಲ್ಲಿತವಾದಲ್ಲಿ ನಿಯಮಾನುಸಾರ ಪರಿಶೀಲಿಸಿ, ಕ್ರಮವಹಿಸಲಾಗುವುದು.

ಸಂಖ್ಯೆ: ಇಡಿ 182 ಡಿಜಿಡಬ್ಲ್ಯೂ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

1

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	787
2	ಸದಸ್ಯರ ಹೆಸರು	ಶ್ರೀ ಸಂಜೀವ ಮಠಂದೂರ್
3	ಉತ್ತರಿಸಬೇಕಾದ ದಿನಾಂಕ	10/12/2020
4	ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ವೈದ್ಯಕೀಯ ಕಾಲೇಜು ಇಲ್ಲದೇ ಇರುವುದರಿಂದ ಹಾಗೂ ಪುತ್ತೂರು ತಾಲ್ಲೂಕಿನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ 40 ಎಕರೆ ಜಾಗ ಕಾಯ್ದಿರಿಸಿರುವುದರಿಂದ ಪುತ್ತೂರಿನಲ್ಲಿ ನೂತನ ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ?	ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಸಂಖ್ಯೆ: ಎಂಇಡಿ 600 ಎಂಎಂಸಿ 2020

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	788
ಮಾನ್ಯ ಸದಸ್ಯರ ಹೆಸರು	:	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸಬೇಕಾದ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಪುತ್ತೂರು ಉಪ ವಿಭಾಗದಲ್ಲಿ 4 ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರುವ ಪುತ್ತೂರು ಸರ್ಕಾರಿ ಆಸ್ಪತ್ರೆಯ ಹಳೆ ಕಾಲದ ಕಟ್ಟಡವು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಈ ಆಸ್ಪತ್ರೆಗೆ ಹೊಸ ಕಟ್ಟಡವನ್ನು ನಿರ್ಮಾಣ ಮಾಡಿ ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	ಪುತ್ತೂರು ತಾಲ್ಲೂಕು ಆಸ್ಪತ್ರೆಯ ಕಟ್ಟಡವು ಭಾಗಶ: ಮಂಗಳೂರು ಹಂಚಿನ ಛಾವಣಿಯ ಈ ಕಟ್ಟಡವನ್ನು 1962ರಲ್ಲಿ ನಿರ್ಮಿಸಲಾಗಿರುತ್ತದೆ ಹಾಗೂ ಭಾಗಶಃ ಆರ್.ಸಿ.ಸಿ ಛಾವಣಿಯ ಕಟ್ಟಡವಾಗಿದ್ದು, ಇದನ್ನು 2002ರಲ್ಲಿ ನಿರ್ಮಿಸಲಾಗಿರುತ್ತದೆ. ಮಳೆಗಾಲದಲ್ಲಿ ಸೋರುವಿಕೆಯಿಂದಾಗಿ ಕಟ್ಟಡಕ್ಕೆ ತುಂಬಾ ಹಾನಿಯಾಗುತ್ತಿದ್ದು, ಈ ಕಟ್ಟಡವನ್ನು ಹಂತ ಹಂತವಾಗಿ ದುರಸ್ತಿಗೊಳಿಸಲಾಗುತ್ತಿದೆ.

ಆಕುಕ 144 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 789

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ (ಮಾಗಡಿ)

ಉತ್ತರಿಸಬೇಕಾದ ದಿನಾಂಕ : 10.12.2020

ಉತ್ತರಿಸುವವರು : ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರೈತರು ಬೆಳೆದ ಹಾಗೂ ಅರಣ್ಯ ಪ್ರದೇಶಗಳಲ್ಲಿ ಶ್ರೀಗಂಧ ಮರಗಳನ್ನು ಕಾಡುಗಳ್ಳರು ಕಡಿದು ಅಕ್ರಮವಾಗಿ ಮಾರಾಟ ಮತ್ತು ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಹಾಗಿದ್ದಲ್ಲಿ, ಶ್ರೀಗಂಧ (ರಕ್ತಚಂದನ) ಮರಗಳನ್ನು ಸಂರಕ್ಷಣೆ ಮಾಡಲು ಸರ್ಕಾರ ಏನು ಕ್ರಮ ಜರುಗಿಸುವುದು? (ಸಂಪೂರ್ಣ ಮಾಹಿತಿ ನೀಡುವುದು)	ಶ್ರೀಗಂಧ (ರಕ್ತಚಂದನ) ಮರಗಳನ್ನು ಸಂರಕ್ಷಣೆ ಮಾಡಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿರುತ್ತದೆ. 1. ಅಕ್ರಮವಾಗಿ ಶ್ರೀಗಂಧ ಕಳ್ಳ ಸಾಗಾಣಿಕೆ ಮಾಡುತ್ತಿರುವ ಮಾಫೀಯಾಗಳನ್ನು ಮಟ್ಟ ಹಾಕಲು ವೃತ್ತ ವ್ಯಾಪ್ತಿಯ ಎಲ್ಲಾ ವಿಭಾಗಗಳಲ್ಲಿ ಕಳ್ಳಬೇಟೆ ನಿಗ್ರಹ ಶಿಬಿರಗಳನ್ನು ನಿರ್ಮಿಸಲಾಗಿದೆ ಹಾಗೂ ಶ್ರೀಗಂಧ ನೆಡುತೋಪುಗಳನ್ನು ರಕ್ಷಿಸಲು ಕ್ಷೇತ್ರಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳು ನಿರಂತರವಾಗಿ ರಾತ್ರಿ ಹಗಲು ಗಸ್ತು ಸಂಚಾರ ಮಾಡಲಾಗುತ್ತದೆ. 2. ಶ್ರೀಗಂಧ ಮರಗಳ ಕಳ್ಳತನವನ್ನು ತಡೆಗಟ್ಟಲು ಆಯಾಕಟ್ಟಿನ ಸ್ಥಳಗಳಲ್ಲಿ ಅರಣ್ಯ ಜಾಗೃತ ದಳದ ತಂಡವು ಸಹ ಕಾರ್ಯ ನಿರ್ವಹಿಸುತ್ತದೆ ಹಾಗೂ ಅರಣ್ಯ ತನಿಖಾ ಠಾಣೆಗಳನ್ನು ಆಯೋಜಿಸಲಾಗಿದೆ. 3. ಶ್ರೀಗಂಧ ಮರಗಳ ಸಂರಕ್ಷಣೆಗಾಗಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗಿದೆ. 4. ಶ್ರೀಗಂಧ ಮರಗಳು ಹೆಚ್ಚು ಇರುವ ಕೆಲವು ಅರಣ್ಯ ಪ್ರದೇಶಗಳಲ್ಲಿ ರಕ್ಷಣೆಗಾಗಿ ಚೈನ್ ಲಿಂಕ್ ಮೆಷ್ ಬೇಲಿಗಳನ್ನು ಸಹ ನಿರ್ಮಾಣ ಮಾಡಲಾಗಿದೆ. 5. ಶ್ರೀಗಂಧ ಮರಗಳನ್ನು ಅಕ್ರಮವಾಗಿ ಕಡಿದು ಮಾರಾಟ ಮತ್ತು ಸಾಗಾಣಿಕೆ ಮಾಡುವ ಕಾಡುಗಳ್ಳರ ವಿರುದ್ಧ ಅರಣ್ಯ ಮೊಕದ್ದಮೆಗಳನ್ನು ದಾಖಲಿಸಿ ಕಾನೂನು ರೀತಿ ಅವರಿಗೆ ನ್ಯಾಯಾಲಯದ ಮೂಲಕ ಸೂಕ್ತ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 50 ಎಫ್‌ಡಿಪಿ 2020

(ಆನಂದ್ ಸಿಂಗ್)

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 803
ಮಾನ್ಯ ಸದಸ್ಯರ ಹೆಸರು : ಶ್ರೀ ದಿನಕರ್ ಕೇಶವ್ ಶೆಟ್ಟಿ (ಕುಮಟ)
ಉತ್ತರಿಸಬೇಕಾದ ದಿನಾಂಕ : 10-12-2020
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
1	ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕು ಆಸ್ಪತ್ರೆಯಲ್ಲಿ ಬರುವ ಹೊರ ರೋಗಿಗಳನ್ನು ಪರೀಕ್ಷಿಸಲು ಸರಿಯಾದ ಓ.ಪಿ.ಡಿ ಬ್ಲಾಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲಿ ಉತ್ತಮವಾದ ಓ.ಪಿ.ಡಿ ಬ್ಲಾಕ್ ನಿರ್ಮಾಣ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?	ಬಂದಿದೆ. ಹೊನ್ನಾವರ ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 1068 ಸಿಜಿಎಂ 2006 ದಿನಾಂಕ: 25-1-2007 ರಲ್ಲಿ 30 ಹಾಸಿಗೆಗಳಿಂದ 100 ಹಾಸಿಗೆಗಳ ಸಾಮರ್ಥ್ಯಕ್ಕೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಇಲಾಖೆಯು ಯಾವುದೇ ಹೊಸ ಕಾಮಗಾರಿಗಳಿಗೆ ಅನುದಾನ ನೀಡದೆ ಇರುವುದರಿಂದ, ಅವಶ್ಯಕತೆ ಹಾಗೂ ಅನುದಾನದ ಲಭ್ಯತೆ ಮೇರೆಗೆ ಮುಂಬರುವ ಸಾಲಿನಲ್ಲಿ ಸದರಿ ಆಸ್ಪತ್ರೆಗೆ ಹೆಚ್ಚುವರಿ ಓ.ಪಿ.ಡಿ ಬ್ಲಾಕ್ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು.

ಆಕುಕ 154 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	804
2)	ಮಾನ್ಯ ಸದಸ್ಯರ ಹೆಸರು	ಶ್ರೀ ನಂಜೇಗೌಡ.ಕೆ.ವೈ. (ಮಾಲೂರು)
3)	ಉತ್ತರಿಸಬೇಕಾದ ದಿನಾಂಕ	10/12/2020.
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೀವ್ರ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿರುವುದಿಲ್ಲ. ಮಾಲೂರು ತಾಲ್ಲೂಕಿನ ಐ.ಟಿ.ಐ ಗೆ ಸ್ವಂತ ಕಟ್ಟಡ ಇರುವುದಿಲ್ಲ ಎಂಬುದು ಸರ್ಕಾರದ ಗಮನದಲ್ಲಿರುತ್ತದೆ. ಮಾಲೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಖಾಸಗಿ ಮಾಲೀಕತ್ವದ 2400 ಚ.ಅ ವಿಸ್ತೀರ್ಣದ ಕಟ್ಟಡದಲ್ಲಿ ಮಾಹೆಯಾನ ರೂ. 38,218/- ಬಾಡಿಗೆ ಪಾವತಿಸಿ ತರಬೇತಿದಾರರ ತರಬೇತಿಗೆ ಯಾವುದೇ ಅಡಚಣೆಯಿಲ್ಲದೆ ಪರಿಣಾಮಕಾರಿಯಾಗಿ ತರಬೇತಿಯನ್ನು ನೀಡಲಾಗುತ್ತಿದೆ.
ಆ)	ಸದರಿ ತರಬೇತಿ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಅನುದಾನ ಮಂಜೂರು ಮಾಡಿದೆಯೇ: ಎಷ್ಟು ಅನುದಾನ ಮಂಜೂರು ಮಾಡಲಾಗಿದೆ (ವಿವರ ಒದಗಿಸುವುದು);	ನಬಾರ್ಡ್ ಆರ್.ಐ.ಡಿ.ಎಫ್-22 ರಡಿ ಮಾಲೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ರೂ.136.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಬಾರ್ಡ್ ಮಂಜೂರಾತಿ ಹಾಗೂ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿ ಕೈಗೊಳ್ಳಲು ಕರ್ನಾಟಕ ಗೃಹಮಂಡಳಿಗೆ ವಹಿಸಿದೆ. ಆದರೆ ಕೋಲಾರ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಎಲ್.ಎನ್.ಡಿ/ಸಿಆರ್-108/2014-15 ದಿನಾಂಕ: 06/03/2015 ರಲ್ಲಿ ಮಾಲೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಮಾಲೂರು ಗ್ರಾಮದ ಸ.ನಂ.91 ರಲ್ಲಿ 1.38 ಎಕರೆ/ಗುಂಟೆ ಜಮೀನು ಮಂಜೂರಾಗಿದ್ದು, ಈ ಜಮೀನಿನ ಬಗ್ಗೆ ಶ್ರೀ ಜಗಜ್ಯೋತಿ ಬಸವಣ್ಣ ಸಾಮೂಹಿಕ ಸಭಾಭವನ ಹಾಗೂ ದೇವಸ್ಥಾನದ ಅಭಿವೃದ್ಧಿ ಟ್ರಸ್ಟ್‌ನವರು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ವಿರುದ್ಧ ದಾವೆ ಹೂಡಿದ್ದು, ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದು, ಪ್ರಕರಣ ಇತ್ಯರ್ಥವಾಗದೇ ಇದ್ದ ಕಾರಣ ಆರ್.ಐ.ಡಿ.ಎಫ್-22 ರಡಿ ಮಂಜೂರಾದ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. ದಿನಾಂಕ: 12/12/2018 ರ ನಬಾರ್ಡ್ ಪತ್ರದಲ್ಲಿ ಸದರಿ ಕಾಮಗಾರಿಯನ್ನು Non Starter Project ಎಂದು ಪರಿಗಣಿಸಿ ರದ್ದುಪಡಿಸಿರುವುದಾಗಿ ತಿಳಿಸಿದ್ದು, ಸೂಕ್ತ ಸಮಯದಲ್ಲಿ ಬದಲಿ ನಿವೇಶನ ಮಂಜೂರಾಗದೇ ಇರುವ ಕಾರಣ ನಬಾರ್ಡ್‌ನಿಂದ ಸದರಿ ಕಾಮಗಾರಿಯು ರದ್ದಾಗಿರುತ್ತದೆ.
ಇ)	ತರಬೇತಿ ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ವಿವರ ಒದಗಿಸುವುದು)?	ಕೋಲಾರ ಜಿಲ್ಲಾಧಿಕಾರಿಯವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಲ್ಎನ್‌ಡಿ/ಸಿಆರ್-147/2019-20 ದಿನಾಂಕ: 04/09/2019 ರ ಅನ್ವಯ ಮಾಲೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಮಾಲೂರು ತಾಲೂಕು ಟೇಕಲ್ ಹೋಬಳಿ ಕಾವಲಗಿರಿಯನಹಳ್ಳಿ ಗ್ರಾಮದ ಸ.ನಂ.73ರಲ್ಲಿ ವಿಸ್ತೀರ್ಣ 4.00 ಎಕರೆ ಬದಲಿ ಜಮೀನನ್ನು ಮಂಜೂರು ಮಾಡಲಾಗಿದ್ದು, ಸದರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾತಿ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಸಂಖ್ಯೆ: ಕೌಉಜೀಇ 71 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 817
ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಎಷ್ಟು;	ಬಾಗೇಪಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ:04
ಆ)	ಈ ಕಾಲೇಜುಗಳಲ್ಲಿ 2018-19, 2019-20ನೇ ಸಾಲಿನಲ್ಲಿ ಶೇಕಡ ಎಷ್ಟು ಫಲಿತಾಂಶ ಬಂದಿದೆ; (ಕಾಲೇಜುವಾರು ವಿಷಯವಾರು ವಿವರ ನೀಡುವುದು)	ಈ ಕಾಲೇಜುಗಳಲ್ಲಿ 2018-19, 2019-20ನೇ ಸಾಲಿನ ಕಾಲೇಜುವಾರು ವಿಷಯವಾರು ಫಲಿತಾಂಶದ ವಿವರನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.
ಇ)	ಫಲಿತಾಂಶದಲ್ಲಿ ಹಿನ್ನಡೆಯಾಗಲು ಕಾರಣವೇನು; (ವಿವರ ನೀಡುವುದು)	2019ಕ್ಕೆ ಹೋಲಿಸಿದರೆ 2020ರ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶವು ಎರಡು ಕಾಲೇಜುಗಳಲ್ಲಿ ಏರಿಕೆಯಾಗಿರುತ್ತದೆ. ಉಳಿದ ಎರಡು ಕಾಲೇಜುಗಳಲ್ಲಿ ಫಲಿತಾಂಶ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುತ್ತದೆ. ಇಂಗ್ಲೀಷ್ ಭಾಷಾ ಪರೀಕ್ಷೆಯನ್ನು ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸುಮಾರು 85 ದಿನಗಳ ನಂತರ ನಡೆಸಲಾಗಿರುವುದರಿಂದ ಫಲಿತಾಂಶದಲ್ಲಿ ಇಳಿಕೆ ಕಂಡು ಬರಲು ಕಾರಣವಾಗಿರಬಹುದು.
ಈ)	ಫಲಿತಾಂಶದಲ್ಲಿ ಹಿನ್ನಡೆಯಾಗುತ್ತಿರುವ ಕಾರಣ ದಾಖಲಾತಿ ಕಡಿಮೆಯಾಗಿ ಕಾಲೇಜುಗಳನ್ನು ಮುಚ್ಚುವ ಹಂತಕ್ಕೆ ಬರುತ್ತಿರುವುದು ನಿಜವೇ? (ವಿವರ ನೀಡುವುದು)	ಇಲ್ಲ

ಸಂಖ್ಯೆ: ಇಪಿ 179 ಡಿಜಿಡಬ್ಲ್ಯೂ 2020

S. Su

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

1

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	821
ಸದಸ್ಯರ ಹೆಸರು	:	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಜಮಖಂಡಿ ನಗರದಲ್ಲಿ ಗಂಡು ಮಕ್ಕಳ ಸರ್ಕಾರಿ ಪದವಿ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಹೊಸದಾಗಿ ಸರ್ಕಾರಿ ಪದವಿ ಕಾಲೇಜು ಯಾವಾಗ ಪ್ರಾರಂಭ ಮಾಡಲಾಗುವುದು;	**ಬಂದಿದೆ** ಜಮಖಂಡಿ ನಗರದ 20/25 ಕಿ.ಮೀ ಅಂತರದಲ್ಲಿ ಈಗಾಗಲೇ 5 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 01 ಖಾಸಗಿ ಅನುದಾನಿತ ಕಾಲೇಜು ಅಸ್ತಿತ್ವದಲ್ಲಿರುತ್ತವೆ.
ಆ)	ಜಮಖಂಡಿ ನಗರದಲ್ಲಿ ಸರ್ಕಾರಿ ಬಿ.ಎಡ್ ಕಾಲೇಜ್ ಇದ್ದರೂ ಸರ್ಕಾರಿ ಪದವಿ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಪದವಿ ಕಾಲೇಜ್ ಯಾವ ಕಾಲಮಿತಿಯಲ್ಲಿ ಪ್ರಾರಂಭ ಮಾಡಲಾಗುವುದು?	**ಹೌದು** ಪ್ರಸ್ತುತ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.

ಸಂಖ್ಯೆ: ಇಡಿ 189 ಹೆಚ್‌ಪಿಸಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 822

2) ಸದಸ್ಯರ ಹೆಸರು : ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)

3) ಉತ್ತರಿಸುವ ದಿನಾಂಕ : 10.12.2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಜಮಖಂಡಿ ನಗರದಲ್ಲಿ ಕಟ್ಟೆಕೆರೆ ಉದ್ಯಾನವನದಲ್ಲಿ ಪ್ರಾಣಿ ಸಂಗ್ರಹಾಲಯ ನಿರ್ಮಾಣ ಮಾಡಲು ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ; ಹಾಗಿದ್ದಲ್ಲಿ ವಿವರ ನೀಡುವುದು.	ಜಮಖಂಡಿ ನಗರದಲ್ಲಿ ಕಟ್ಟೆಕೆರೆ ಉದ್ಯಾನವನದಲ್ಲಿ ಪ್ರಾಣಿ ಸಂಗ್ರಹಾಲಯ ನಿರ್ಮಾಣ ಮಾಡಲು ಯಾವುದೇ ಪ್ರಸ್ತಾವನೆ ಸಲ್ಲಿಕೆಯಾಗಿರುವುದಿಲ್ಲ.
ಆ)	ಕಟ್ಟೆಕೆರೆ ಉದ್ಯಾನವನದಲ್ಲಿ ಪ್ರಾಣಿ ಸಂಗ್ರಹಾಲಯ ಅವಶ್ಯಕತೆ ಇದ್ದು, ದಿನಪ್ರತಿ ಸಾವಿರಾರು ಜನ ಉದ್ಯಾನವನದಲ್ಲಿ ಬಂದು ವಿಶ್ರಾಂತಿ ಪಡೆಯುತ್ತಿರುವ ಕಾರಣದಿಂದ ಚಿಕ್ಕ ಪ್ರಾಣಿ ಸಂಗ್ರಹಾಲಯ ಪ್ರಾರಂಭಿಸಲು ಸರ್ಕಾರವು ಯಾವ ಕಾಲಮಿತಿಯಲ್ಲಿ ಕ್ರಮ ವಹಿಸುವುದು?	ಅನ್ವಯಿಸುವುದಿಲ್ಲ.

ಸಂಖ್ಯೆ: ಅಪಜೀ 209 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	823
ಸದಸ್ಯರ ಹೆಸರು	:	ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಜಮಖಂಡಿ ನಗರದಲ್ಲಿ ಹಳೆ ಗ್ರಂಥಾಲಯ ಇರುವುದು ಸರ್ಕಾರದ ಗಮಕ್ಕೆ ಇದೆಯೇ;	ಬಂದಿದೆ.
ಆ)	ಈ ನಗರದಲ್ಲಿ ಹೊಸದಾಗಿ ಡಿಜಿಟಲ್ 24X7 ಗ್ರಂಥಾಲಯದ ಅವಶ್ಯಕತೆ ಇದ್ದು, ಅದರ ನಿರ್ಮಾಣಕ್ಕಾಗಿ ಸರ್ಕಾರವು ಅನುದಾನ ಬಿಡುಗಡೆ ಮಾಡಲಿದೆಯೇ;	ಸರ್ಕಾರದ ಆಯವ್ಯಯ ಘೋಷಣೆ ಸಂಖ್ಯೆ:113ರಂತೆ "ಸಾರ್ವಜನಿಕ ಗ್ರಂಥಾಲಯಗಳನ್ನು ಮೇಲ್ದರ್ಜೆಗೇರಿಸಿ ಡಿಜಿಟಲ್ ಗ್ರಂಥಾಲಯಗಳನ್ನಾಗಿ ಪರಿವರ್ತಿಸಲಾಗುವುದು" ಈ ಯೋಜನೆಯನ್ನು 30 ಜಿಲ್ಲಾ ಕೇಂದ್ರ ಗ್ರಂಥಾಲಯ, 26 ನಗರ ಕೇಂದ್ರ ಗ್ರಂಥಾಲಯ ಮತ್ತು 216 ತಾಲ್ಲೂಕು ಗ್ರಂಥಾಲಯಗಳ ಜೊತೆಗೆ ಜಮಖಂಡಿ ನಗರವು ಸೇರಿದಂತೆ ಒಟ್ಟು 272 ಗ್ರಂಥಾಲಯಗಳಲ್ಲಿ ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಒದಗಿಸಲಾಗಿದೆ. ಮುಂದುವರೆದು, ಜಮಖಂಡಿ ಶಾಖಾ ಗ್ರಂಥಾಲಯದಲ್ಲಿ ಡಿಜಿಟಲ್ ಗ್ರಂಥಾಲಯವನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು 24X7 ಆನ್‌ಲೈನ್ ಸೇವೆಯನ್ನು ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ. ಈ ಉದ್ದೇಶಕ್ಕಾಗಿ 02 ಗಣಕಯಂತ್ರ 4 ಟ್ಯಾಬ್‌ಲೆಟ್ ಮತ್ತು ವೈ-ಫೈ ರೂಟರ್, ಯು.ಪಿ.ಎಸ್ ಒದಗಿಸಲಾಗಿದೆ. ರೂ.15.50 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ರಾಜಾರಾಮ್ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ, ಕೊಲ್ಕತ್ತಾ ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಬಾಕಿ ಅನುದಾನ ರೂ.14.50 ಲಕ್ಷವನ್ನು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ ನಿಧಿಯಿಂದ ಭರಿಸಿ ಗ್ರಂಥಾಲಯ ಕಟ್ಟಡವನ್ನು ನಿರ್ಮಿಸಲಾಗುವುದು.
ಇ)	ಗ್ರಂಥಾಲಯ ಕಟ್ಟಡಕ್ಕೆ ತಗುಲುವ ವೆಚ್ಚವೆಷ್ಟು?	ಗ್ರಂಥಾಲಯ ಕಟ್ಟಡವನ್ನು ನಿರ್ಮಿಸಲು ಅಂದಾಜು ರೂ.30.00 ಲಕ್ಷಗಳ ವೆಚ್ಚ ತಗಲುವುದು.

ಸಂಖ್ಯೆ: ಇಡಿ 36 ಎಸ್‌ಟಿಬಿ 2020

(ಎಸ್.ಸುರೇಶ್‌ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೮೩೫

ಸದಸ್ಯರ ಹೆಸರು : ಶ್ರೀ ಲಿಂಗೇಶ್ ಕೆ.ಎಸ್.(ಬೇಲೂರು)

ಉತ್ತರಿಸುವ ದಿನಾಂಕ : 10.12.2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಕಳೆದ ಎರಡು ವರ್ಷಗಳಿಂದ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿತ್ತು. ರಾಜ್ಯದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಬಾಕಿ ಗೌರವಧನ ಪಾವತಿಸಲು ರೂ. 367.82ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
ಆ)	ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಛೇರಿ ವೆಚ್ಚಗಳಿಗೆ ಅಗತ್ಯವಿರುವ ಅನುದಾನವನ್ನು ಒದಗಿಸದೆ ಕಳೆದ 02 ವರ್ಷಗಳಿಂದ ವಿದ್ಯುಚ್ಛಕ್ತಿ, ದೂರವಾಣಿ, ವಾಹನ ದುರಸ್ಥಿ, ಸೆಕ್ಯೂರಿಟಿ ವೆಚ್ಚ ಮುಂತಾದ ಬಿಲ್ಲುಗಳು ತೀರುವಳಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಸರ್ಕಾರವು ಅತಿಥಿ ಉಪನ್ಯಾಸಕರಿಂದ ವೇತನ ಪಾವತಿಗೆ ಹಾಗೂ ಕಛೇರಿ ವೆಚ್ಚವಾದ ವಿದ್ಯುಚ್ಛಕ್ತಿ, ದೂರವಾಣಿ, ವಾಹನದ ದುರಸ್ಥಿ, ಸೆಕ್ಯೂರಿಟಿ ವೆಚ್ಚಕ್ಕಾಗಿ ಅನುದಾನವನ್ನು ಕೂಡಲೇ ಬಿಡುಗಡೆಗೊಳಿಸಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	2020-21ನೇ ಸಾಲಿನಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ವಿದ್ಯುಚ್ಛಕ್ತಿ, ದೂರವಾಣಿ, ವಾಹನ, ಸೆಕ್ಯೂರಿಟಿ, ಅತಿಥಿ ಉಪನ್ಯಾಸಕರ ಭತ್ಯೆ, ಕಛೇರಿ ವೆಚ್ಚಗಳಿಗೆ ರೂ. 15.00 ಲಕ್ಷಗಳನ್ನು ಒದಗಿಸಲಾಗಿದೆ. 2020-21ನೇ ಸಾಲಿನಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ವಿದ್ಯುಚ್ಛಕ್ತಿ, ದೂರವಾಣಿ, ವಾಹನ, ಸೆಕ್ಯೂರಿಟಿ, ಕಛೇರಿ ವೆಚ್ಚಗಳಿಗೆ ಹೆಚ್ಚುವರಿ ಅನುದಾನದ ಅಗತ್ಯವಿದ್ದು, ಅನುದಾನದ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಇಡಿ 124 ಹೆಚ್‌ಪಿಟಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **838**
ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ.ಎಸ್, (ಬೇಲೂರು)
ಉತ್ತರಿಸಬೇಕಾದ ದಿನಾಂಕ : 10.12.2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಬೇಲೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಪ್ಪಿಹಳ್ಳಿಯಲ್ಲಿನ ಪ್ರೌಢ ಶಿಕ್ಷಣ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ತುಂಬಾ ಕಡಿಮೆ ಇದೆ ಹಾಗೆಯೇ ಸರ್ಕಾರಿ ಪ್ರೌಢ ಶಾಲೆ, ಅರಿಕೆರೆಯಲ್ಲಿ ಶಿಕ್ಷಕರ ಕೊರತೆ ಇರುವುದರಿಂದ ಅಪ್ಪಿಹಳ್ಳಿ ಪ್ರೌಢಶಾಲೆಯನ್ನು ಅರಿಕೆರೆ ಪ್ರೌಢಶಾಲೆಗೆ ಸ್ಥಳಾಂತರಗೊಳಿಸುವ ಪ್ರಸ್ತಾವನೆ ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;	ಬಂದಿಲ್ಲ
ಆ.	ಬಂದಿದ್ದಲ್ಲಿ, ಸದರಿ ಪ್ರಸ್ತಾವನೆಯ ಯಾವ ಹಂತದಲ್ಲಿರುತ್ತದೆ; ಯಾವಾಗ ಸ್ಥಳಾಂತರಗೊಳಿಸಲಾಗುತ್ತದೆ? (ಸಂಪೂರ್ಣ ವಿವರ ನಿಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಇಪಿ 93 ಎಲ್‌ಬಿಪಿ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	: **839**
ಸದಸ್ಯರ ಹೆಸರು	: ಶ್ರೀ ಲಿಂಗೇಶ ಕೆ.ಎಸ್, (ಬೇಲೂರು)
ಉತ್ತರಿಸಬೇಕಾದ ದಿನಾಂಕ	: 10.12.2020
ಉತ್ತರಿಸುವ ಸಚಿವರು	: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಪ್ರೌಢ ಶಾಲೆಗಳಿಗೆ ಚಿತ್ರಕಲಾ ಶಿಕ್ಷಕರನ್ನು ನಿಯೋಜಿಸಲಾಗುತ್ತಿದೆಯೇ; ನಿವೃತ್ತಿ ಹೊಂದಿದ ಶಿಕ್ಷಕರ ಸ್ಥಳಕ್ಕೆ ಬೇರೆ ಶಿಕ್ಷಕರನ್ನು ಭರ್ತಿ ಮಾಡಲಾಗುತ್ತಿದೆಯೇ;	ಪ್ರೌಢಶಾಲೆಗಳಿಗೆ ಚಿತ್ರಕಲಾ ಶಿಕ್ಷಕರನ್ನು ನಿಯೋಜಿಸಿರುವುದಿಲ್ಲ. ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ 339 ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಗುರ್ತಿಸಿ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಭರ್ತಿ ಮಾಡಲು ಆಯುಕ್ತಾಲಯದಿಂದ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು. ಈ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.
ಆ.	ಬೇಲೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಪ್ರೌಢ ಶಾಲೆಗಳಿಗೆ ಚಿತ್ರಕಲಾ ಶಿಕ್ಷಕರು ಇದ್ದಾರೆ ಖಾಲಿ ಇರುವ ಸ್ಥಳಕ್ಕೆ ಎಷ್ಟು ಪರಿಮಿತಿಯಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಿಸಲಾಗುತ್ತದೆ; (ಸಂಪೂರ್ಣ ವಿವರ ನೀಡುವುದು)	ಒಟ್ಟು 28 ಸರ್ಕಾರಿ ಪ್ರೌಢಶಾಲೆಗಳಿದ್ದು, ಈ ಕೆಳಕಂಡ ಶಾಲೆಗಳಲ್ಲಿ ಮಾತ್ರ ಚಿತ್ರಕಲಾ ಶಿಕ್ಷಕರ ಹುದ್ದೆ ಮಂಜೂರಾಗಿದ್ದು, ಸದರಿ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. 1) ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಬೇಲೂರು. 2) ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಹಳೇಬೀಡು. 3) ಸರ್ಕಾರಿ ಪ್ರೌಢಶಾಲೆ, ಅಡಗೂರು 4) ಸರ್ಕಾರಿ ಪ್ರೌಢಶಾಲೆ. ಲಿಂಗಪ್ಪನಕೊಪ್ಪಲು. ಯಾವುದೇ ಖಾಲಿ ಹುದ್ದೆಗಳಿಲ್ಲದ ಪ್ರಯುಕ್ತ ಚಿತ್ರಕಲಾ ಶಿಕ್ಷಕರ ನೇಮಿಸಿದ ಪ್ರಶ್ನೆ ಉದ್ಭವಿಸುವುದಿಲ್ಲ.
ಇ.	ಚಿತ್ರಕಲಾ ಶಿಕ್ಷಕರ ನೇಮಕಾತಿಯಲ್ಲಿ ಅಂಗವಿಕಲ ಶಿಕ್ಷಕರಿಗೆ ಮೀಸಲಾತಿ ನೀಡಲಾಗುತ್ತಿದೆಯೇ; ಎಷ್ಟು ಶೇಕಡಾ ಮೀಸಲಾತಿ ನೀಡಲಾಗುವುದು? (ಸಂಪೂರ್ಣ ವಿವರ ನೀಡುವುದು)	ಚಿತ್ರಕಲಾ ಶಿಕ್ಷಕರ ನೇರ ನೇಮಕಾತಿಯಲ್ಲಿ ಅಂಗವಿಲಕ ಅಭ್ಯರ್ಥಿಗೆ ಶೇ 4%ರಷ್ಟು ಮೀಸಲಾತಿ ನೀಡಲಾಗುತ್ತಿದೆ.

ಸಂಖ್ಯೆ: ಇಪಿ 92 ಎಲ್‌ಬಿಪಿ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	841
ಸದಸ್ಯರ ಹೆಸರು	:	ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ಗಡಿಭಾಗದಲ್ಲಿನ ತಾಲ್ಲೂಕು ಕೇಂದ್ರವಾಗಿರುವ ಇಂಡಿ ಪಟ್ಟಣದಲ್ಲಿರುವ ತಾಲ್ಲೂಕು ಸಾರ್ವಜನಿಕ ಗ್ರಂಥಾಲಯವು ಮೂಲಭೂತ ಸೌಕರ್ಯಗಳಿಲ್ಲದೆ ಅವ್ಯವಸ್ಥೆಯ ಆಗರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದರೆ, ಗಡಿಭಾಗದಲ್ಲಿರುವ ಈ ತಾಲ್ಲೂಕು ಸಾರ್ವಜನಿಕ ಗ್ರಂಥಾಲಯಕ್ಕೆ ಸುಸಜ್ಜಿತವಾದ ಕಟ್ಟಡ ಹಾಗೂ ಓದುಗರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಇಂಡಿ ಪಟ್ಟಣದಲ್ಲಿ ಈಗಾಗಲೇ ಸಾರ್ವಜನಿಕ ಗ್ರಂಥಾಲಯವು ಓದುಗರಿಗೆ ಸೌಲಭ್ಯವನ್ನು ಒದಗಿಸುತ್ತಿದ್ದು, ಇನ್ನೂ ಹೆಚ್ಚಿನ ಸೇವೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಅವ್ಯವಸ್ಥೆಯನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
ಇ)	ಹೊಂದಿದ್ದರೆ, ಸುಸಜ್ಜಿತವಾದ ಕಟ್ಟಡ ನಿರ್ಮಾಣ ಮಾಡಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವಾಗ ಮತ್ತು ಎಷ್ಟು ಅನುದಾನವನ್ನು ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ ಇವರಿಗೆ ಇಂಡಿ ಪಟ್ಟಣದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ನಿವೇಶನವನ್ನು ನೀಡುವಂತೆ ಪತ್ರ ವ್ಯವಹಾರ ನಡೆಸಲಾಗಿದ್ದು, ಅದರಂತೆ, ಮುಖ್ಯಾಧಿಕಾರಿ, ಪುರಸಭೆ, ಇಂಡಿ ರವರ ಪತ್ರ ದಿನಾಂಕ:22-10-2020ರಲ್ಲಿ, ಸದರಿ ನಿವೇಶನವು ಮುಖ್ಯಾಧಿಕಾರಿಗಳ ಹೆಸರಿನಲ್ಲಿದ್ದು, (ಸಿ.ಟಿ.ಎಸ್. ಸಂ. 1249, ಅಳತೆ 300 ಚ.ಮೀ ವಿಸ್ತೀರ್ಣ) ನಿವೇಶನದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು ಪುರಸಭೆಯಿಂದ ಯಾವುದೇ ಅಭ್ಯಂತರ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಸದರಿಯವರು ನಿವೇಶನವನ್ನು ಇಲಾಖೆಗೆ ಹಸ್ತಾಂತರಿಸಿದ ನಂತರ, ನಿಯಮಾನುಸಾರ ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿಯನ್ನು ಪಡೆದು ಅನುದಾನದ ಲಭ್ಯತೆಯನುಸಾರ ಸುಸಜ್ಜಿತವಾದ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಇಡಿ 37 ಎಸ್‌ಟಿಬಿ 2020

(ಎಸ್.ಸುರೇಶ್‌ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 842
ಮಾನ್ಯ ಸದಸ್ಯರ ಹೆಸರು	: ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸಬೇಕಾದ ದಿನಾಂಕ	: 10-12-2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣವು ತಾಲ್ಲೂಕು ಕೇಂದ್ರವಾಗಿದ್ದು, ಗಡಿಭಾಗದಲ್ಲಿರುವ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಇಂಡಿ ಪಟ್ಟಣದಲ್ಲಿ ತಾಯಿ ಮತ್ತು ಮಗುವಿನ ಆಸ್ಪತ್ರೆ (ಎಂ.ಸಿ.ಹೆಚ್) ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ವಿಜಯಪುರ ಜಿಲ್ಲೆಯ ಇಂಡಿ ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆಯು ಕಾರ್ಯನಿರ್ವಹಿಸುತ್ತಿದ್ದು, ಈ ಆಸ್ಪತ್ರೆಯಲ್ಲಿ ತಾಯಿ ಮತ್ತು ಮಗುವಿನ ಚಿಕಿತ್ಸೆಗೆ ಅವಶ್ಯವಿರುವ ಸೇವೆಗಳನ್ನು ನೀಡಲಾಗುತ್ತಿದೆ. ವಿಶೇಷವಾಗಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಂಜೂರು ಮಾಡಲು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿಯಮದಂತೆ ಆಸ್ಪತ್ರೆಯಲ್ಲಿ Bed Occupancy rate ಶೇ.70ಕ್ಕಿಂತ ಹೆಚ್ಚಿಗೆ ಇರಬೇಕಾಗಿದ್ದು, ಪ್ರಸ್ತುತ ಶೇ.60 ಇರುವುದರಿಂದ ಸದ್ಯದಲ್ಲಿ ವಿಶೇಷ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.
ಆ	ಬಂದಿದ್ದಲ್ಲಿ, ಮಹಿಳೆಯರ ಮತ್ತು ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಇಂಡಿ ಪಟ್ಟಣದಲ್ಲಿ ತಾಯಿ ಮತ್ತು ಮಗುವಿನ ಆಸ್ಪತ್ರೆಯನ್ನು ಮಂಜೂರು ಮಾಡಲು ಸರ್ಕಾರ ಆಸಕ್ತಿ ವಹಿಸಿದೆಯೇ;	2019-20 ನೇ ಸಾಲಿನಲ್ಲಿ ಎಂ.ಸಿ.ಹೆಚ್ ಆಸ್ಪತ್ರೆಯ ನಿರ್ಮಾಣಕ್ಕಾಗಿ ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು ಮೇಲೆ ತಿಳಿಸಿದ ಕಾರಣಗಳಿಂದ ಅನುಮೋದನೆಗೊಂಡಿರುವುದಿಲ್ಲ.
ಇ	ಹಾಗಾದರೆ, ಸದರಿ ಆಸ್ಪತ್ರೆಯನ್ನು ಯಾವಾಗ ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಪ್ರಸ್ತುತ ಆಸ್ಪತ್ರೆಯ ಸೇವಾ ಗುಣಮಟ್ಟ ಮತ್ತು ಸೇವಾ ಪೂರೈಕೆದಾರರ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ತರಬೇತಿಯನ್ನು ನೀಡಲಾಗುತ್ತಿದೆ ಹಾಗೂ ಮುಂಬರುವ ದಿನಗಳಲ್ಲಿ ಹೆಚ್ಚಿನ ಹೆರಿಗೆ ಪ್ರಕರಣಗಳು ಸಂಭವಿಸಿದಲ್ಲಿ ವಿಶೇಷ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ತೆರೆಯಲು ಅವಕಾಶವಿರುತ್ತದೆ.

ಆಕುಕ 150 ಎಸ್‌ಬಿವಿ 2020.

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	843
ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್,
ಉತ್ತರಿಸುವ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಇಂಡಿ ಪಟ್ಟಣದಲ್ಲಿ ಶ್ರೀ ಸಮಗಾರ ಹರಳಯ್ಯ ಸಮುದಾಯ ಭವನ ನಿರ್ಮಾಣ ಮಾಡಲು ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದು ನಿಜವೇ; ಸದರಿ ಯೋಜನೆಯ ರೂಪುರೇಷೆಗಳೇನು;	ಹೌದು. ವಿಜಯಪುರ ಜಿಲ್ಲೆ, ಇಂಡಿ ತಾಲ್ಲೂಕು ಕೇಂದ್ರದಲ್ಲಿ ಶ್ರೀ ಸಮಗಾರ ಹರಳಯ್ಯ ಭವನ ನಿರ್ಮಾಣ ಸಂಬಂಧ ಪಟ್ಟಣ ಪಂಚಾಯತಿಯ ರಿ.ನಂ.647/ಬ ಪ್ಲಾಟ್ ನಂ.32 ಕ್ಷೇತ್ರ 517.46 ಚ.ಮೀ (5570 ಚ.ಅ) ಸಿ.ಎ ನಿವೇಶನವನ್ನು ರೂ.15,39,856/-ಗಳ ವೆಚ್ಚದಲ್ಲಿ ಖರೀದಿಸಲು ಅನುಮತಿ ನೀಡಿ, ಅನುದಾನ ಬಿಡುಗಡೆ ಮಾಡುವ ಕುರಿತಾದ ಪ್ರಸ್ತಾವನೆಯಾಗಿರುತ್ತದೆ.
ಆ)	ಯಾವಾಗ ಪ್ರಸ್ತಾವನೆ ಬಂದಿದೆ; ಇದುವರೆಗೂ ಭವನ ನಿರ್ಮಾಣಕ್ಕೆಂದು ಅನುದಾನ ಮಂಜೂರು ಮಾಡದಿರಲು ಕಾರಣವೇನು;	ಸರ್ಕಾರದಲ್ಲಿ ದಿನಾಂಕ: 22-11-2019ರಂದು ಸ್ವೀಕೃತಗೊಂಡಿರುತ್ತದೆ.
ಇ)	ಸದರಿ ಕಾಮಗಾರಿಗೆ ಅನುದಾನ ಮಂಜೂರು ಮಾಡುವ ಆಸಕ್ತಿ ಸರ್ಕಾರಕ್ಕೆ ಇದೆಯೇ;	ಈಗಾಗಲೇ, ಇಂಡಿ ತಾಲ್ಲೂಕು ಕೇಂದ್ರದಲ್ಲಿ ಡಾ: ಬಿ.ಆರ್. ಅಂಬೇಡ್ಕರ್ ಭವನ ಡಾ: ಬಾಬು ಜಗಜೀವನ ರಾಂ ಭವನ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದ್ದು ಅದೇ ಸ್ಥಳದಲ್ಲಿ ಶ್ರೀ ಸಮಗಾರ ಹರಳಯ್ಯ ಸಮುದಾಯ ಭವನ ನಿರ್ಮಾಣ ಮಾಡಲು ಅನುಮತಿ ನೀಡುವುದು ಸೂಕ್ತವಾಗಲಾರದು ಎಂಬ ಕಾರಣಕ್ಕಾಗಿ ಸದರಿ ಭವನ ನಿರ್ಮಾಣಕ್ಕೆ ಅನುಮತಿ ನೀಡಿರುವುದಿಲ್ಲ.
ಈ)	ಇದ್ದಲ್ಲಿ ಯಾವಾಗ ಮತ್ತು ಎಷ್ಟು ಅನುದಾನವನ್ನು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು; ಅದಕ್ಕಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	

ಸಕಇ 476 ಪಕವಿ 2020

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 883

2) ಸದಸ್ಯರ ಹೆಸರು : ಶ್ರೀ ಹರೀಶ್ ಪೂಂಜ (ಬೆಳ್ತಂಗಡಿ)

3) ಉತ್ತರಿಸುವ ದಿನಾಂಕ : 10.12.2020.

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಅರಣ್ಯ ಹಕ್ಕು ಕಾಯ್ದೆಯ ಸೆಕ್ಷನ್ 3(2)ರಡಿ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಬುಡಕಟ್ಟು ಸಮುದಾಯದ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ವನ್ಯಜೀವಿ ಮಂಡಳಿಯ ಅವಶ್ಯಕತೆಯಿದೆಯೇ;	ಅರಣ್ಯ ಹಕ್ಕು ಕಾಯ್ದೆಯ 2006 ಸೆಕ್ಷನ್ 3(2) ಪ್ರಕಾರ ಅರಣ್ಯ (ಸಂರಕ್ಷಣಾ) ಅಧಿನಿಯಮ 1980 ಕ್ಕೆ ಮಾತ್ರ ವಿನಾಯಿತಿ ಇರುತ್ತದೆ. ಆದರೆ ವನ್ಯಜೀವಿ ಸಂರಕ್ಷಣೆ ಕಾಯ್ದೆ 1972 ಗೆ ಯಾವುದೇ ವಿನಾಯಿತಿ ಇರುವುದಿಲ್ಲ. ಅದಕ್ಕಾಗಿ ವನ್ಯಜೀವಿ ಧಾಮ /ರಾಷ್ಟ್ರೀಯ ಉದ್ಯಾನವನಗಳಲ್ಲಿ ವಾಸಿಸುವ ಅರಣ್ಯ ವಾಸಿಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ನಿಯಮಾನುಸಾರ ವನ್ಯಜೀವಿ ಮಂಡಳಿಯ ಅನುಮತಿ ಅವಶ್ಯಕತೆ ಇರುತ್ತದೆ.
ಆ)	ವನ್ಯಜೀವಿ ಮಂಡಳಿಯ ಅನುಮತಿ ಅವಶ್ಯಕತೆಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ ಮತ್ತು ಅರಣ್ಯ ಇಲಾಖೆ ವ್ಯತಿರಿಕ್ತ ಉತ್ತರ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಅರಣ್ಯ ಹಕ್ಕು ಕಾಯ್ದೆಯ ಸೆಕ್ಷನ್ 3(2) ಅನ್ವಯ ಮೂಲಭೂತ ಸೌಲಭ್ಯ ಕಲ್ಪಿಸಲು ಇರುವ ಮಾನದಂಡಗಳೇನು?	ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ) 2 ಸೆಕ್ಷನ್ 3(2)ರ ಅಡಿಯಲ್ಲಿ ಪಟ್ಟಿ ಮಾಡಲಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಬೇಕಾಗಿರುತ್ತದೆ:- 1. ಸೌಲಭ್ಯಗಳನ್ನು ಒಂದು ಸರ್ಕಾರಿ ಸಂಸ್ಥೆಯು ನಿರ್ವಹಿಸತಕ್ಕದ್ದು. 2. ಒಂದು ಹೆಕ್ಟೇರ್‌ಗಿಂತ ಕಡಿಮೆ ಅರಣ್ಯ ಭೂಮಿ. 3. ಎಪ್ಪತ್ತೈದು ಮೀರದಂತೆ ಮರಗಳನ್ನು ಕತ್ತರಿಸುವುದು. 4. ಸಂಬಂಧಿಸಿದ ಗ್ರಾಮ ಸಭೆಯ ಶಿಫಾರಸ್ಸು.

ಸಂಖ್ಯೆ: ಅಪಜೀ 212 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**887**
ಮಾನ್ಯ ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ	:	**10–12–2020**
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಪಟ್ಟಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಹಾಗಾದರೆ, ಬೈಲಹೊಂಗಲದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;	ಬೈಲಹೊಂಗಲದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸಲು 2021–22ನೇ ಸಾಲಿನ ಎನ್.ಹೆಚ್.ಎಂ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ.
ಇ	ಹಾಗಿದ್ದಲ್ಲಿ, ಪ್ರಸ್ತಾವನೆಯು ಸರ್ಕಾರದಲ್ಲಿ ಯಾವ ಹಂತದಲ್ಲಿದೆ;	2021–22ನೇ ಸಾಲಿನ ಎನ್.ಹೆಚ್.ಎಂ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಗೆ ಅನುಮೋದನೆ ದೊರೆತಲ್ಲಿ 2021–22ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.
ಈ	ಸದರಿ ಆಸ್ಪತ್ರೆಯ ತುರ್ತಾಗಿ ಪ್ರಾರಂಭಿಸಬೇಕಾಗಿರುವುದರಿಂದ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಆಸ್ಪತ್ರೆ ಯಾವಾಗ ಪ್ರಾರಂಭಿಸಲಾಗುವುದು?	

ಆಕುಕ 151 ಎಸ್‌ಬಿವಿ 2020.

(ಡಾ. ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 888
ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ಕ್ಷೇತ್ರದಲ್ಲಿ ಬರುವ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಈ ಗ್ರಾಮದಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಬೇಕೆಂದು ಇಲ್ಲಿನ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು ನಿಜವೇ;	ಹೌದು
ಇ)	ಹಾಗಾದರೆ ಮುರಗೋಡ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಮೂಲಕ ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?	ಪ್ರಸ್ತುತ ಇರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.

ಸಂಖ್ಯೆ: ಇಡಿ 185 ಹೆಚ್‌ಪಿಸಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 889
ಮಾನ್ಯ ಸದಸ್ಯರ ಹೆಸರು	: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ	: 10.12.2020
ಉತ್ತರಿಸಬೇಕಾದ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಸ್ತುತವಿರುವ ಡಯಾಲಿಸಿಸ್ ಯಂತ್ರಗಳೆಷ್ಟು;	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಸ್ತುತವಿರುವ ಡಯಾಲಿಸಿಸ್ ಯಂತ್ರಗಳು – 2.
ಆ	ಇಲ್ಲಿ ಪ್ರತಿನಿತ್ಯ ಚಿಕಿತ್ಸೆ ಪಡೆಯಲಿರುವ ರೋಗಿಗಳ ಸಂಖ್ಯೆಗಳಿಗನುಗುಣವಾಗಿ ಇನ್ನೂ ಹೆಚ್ಚಿನ ಯಂತ್ರಗಳ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಇ	ಪ್ರತಿನಿತ್ಯ ಎಷ್ಟು ಜನ Waiting list ನಲ್ಲಿರುತ್ತಾರೆ;	4 ಜನ Waiting list ನಲ್ಲಿರುತ್ತಾರೆ.
ಈ	ಹಾಗಾದರೆ, ಇಲ್ಲಿಗೆ ಇನ್ನೂ 2 ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ಅಗತ್ಯಕ್ಕನುಗುಣವಾಗಿ ಹೆಚ್ಚುವರಿ ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಆಕುಕ 73 ಎಸ್‌ಟಿಕ್ಯೂ 2020

(ಡಾ|| ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	890
ಮಾನ್ಯ ಸದಸ್ಯರ ಹೆಸರು	:	ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯಾಧಿಕಾರಿಗಳ ಹಾಗೂ ಗ್ರೂಪ್-ಡಿ ಸಿಬ್ಬಂದಿಗಳಿಗೆ ಸರಿಯಾದ ವಸತಿಗೃಹ ಹಾಗೂ ಬೈಲಹೊಂಗಲ ಮತಕ್ಷೇತ್ರದ ಇಂಚಲ ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಾಂಪೌಂಡ್ ಗೋಡೆ ಹಾಗೂ ಸಿಬ್ಬಂದಿ ವಸತಿ ಗೃಹ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಸಾರ್ವಜನಿಕ ಆಸ್ಪತ್ರೆ ಬೈಲಹೊಂಗಲದಲ್ಲಿ 08 ವಸತಿ ಗೃಹಗಳಿದ್ದು, ಅದರಲ್ಲಿ ವೈದ್ಯಾಧಿಕಾರಿಗಳ ವಸತಿ ಗೃಹ 04. ಈ 04 ವಸತಿಗೃಹಗಳಲ್ಲಿ 02 ಶಿಥಿಲಾವಸ್ಥೆಯಲ್ಲಿರುತ್ತವೆ. ವೈದ್ಯಾಧಿಕಾರಿಗಳಿಗೆ 12 ವಸತಿಗೃಹಗಳ ಅವಶ್ಯಕತೆಯಿರುತ್ತದೆ ಮತ್ತು ಗ್ರೂಪ್-ಡಿ ಸಿಬ್ಬಂದಿಗಳ ವಸತಿಗೃಹಗಳು 04 ಇದ್ದು ಸುಸ್ಥಿತಿಯಲ್ಲಿರುತ್ತದೆ. ಒಟ್ಟು 36 ಗ್ರೂಪ್-ಡಿ ಹುದ್ದೆಗಳಿದ್ದು ಹೆಚ್ಚುವರಿ ವಸತಿ ಗೃಹಗಳ ಅವಶ್ಯಕತೆ ಇರುತ್ತದೆ. ಆಸ್ಪತ್ರೆಗೆ ಆವರಣ ಗೋಡೆಯಿದ್ದು, ಭಾಗಶ: ದುರಸ್ಥಿಯಲ್ಲಿರುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಇಂಚಲಕ್ಕೆ ಕಾಂಪೌಂಡ್ ಗೋಡೆಯಿದ್ದು, ಸದರಿ ಕೇಂದ್ರದಲ್ಲಿ ಅಧಿಕಾರಿ/ಸಿಬ್ಬಂದಿಗಳಿಗೆ ವಸತಿ ಗೃಹಗಳು ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ?	ಅನುದಾನದ ಲಭ್ಯತೆಗನುಗುಣವಾಗಿ ಮುಂದಿನ ದಿನಗಳಲ್ಲಿ ಕಾಮಗಾರಿ ಕೈಗೊಳ್ಳಲು ಕ್ರಮವಹಿಸಲಾಗುವುದು.

ಆಕುಕ 156 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 892

ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)

ಉತ್ತರಿಸುವ ದಿನಾಂಕ : 10-12-2020

ಉತ್ತರಿಸುವ ಸಚಿವರು : ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ.	ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೈಂದೂರು ಮೆಸ್ಕಾಂ ಉಪವಿಭಾಗದ ಗೋಳಿಹೊಳೆ ಗ್ರಾಮದ ಕೊಲ್ಲೂರು ಹಾಲ್ಕಲ್ ಎಂಬಲ್ಲಿ 33/11 ಕೆವಿ ವಿದ್ಯುತ್ ಕೇಂದ್ರ ನಿರ್ಮಾಣ ಹಾಗೂ ಹೇರೂರಿನಿಂದ ಉದ್ದೇಶಿತ 33 ಕೆವಿ ಮಾರ್ಗ ವಿಸ್ತರಣೆಗೆ ಅರಣ್ಯ ಇಲಾಖೆಯ ಅನುಮತಿ ಕೋರಿ ಆನ್‌ಲೈನ್‌ನ ಮುಖಾಂತರ ಅರ್ಜಿ ಸಲ್ಲಿಸಲಾಗಿದ್ದು, ಅನುಮತಿ ನೀಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಕಂಬದಕೋಣೆಯಿಂದ ಕೊಲ್ಲೂರುವರೆಗೆ 33ಕೆವಿ ಹೆಚ್.ಟಿ ಲೈನ್ ನಿರ್ಮಾಣಕ್ಕೆ ಗೋಳಿಹೊಳೆ ಗ್ರಾಮ ಸ.ನಂ 164, 167, 44 ಮತ್ತು ಕಾಲ್ತೋಡು ಗ್ರಾಮದ ಸ.ನಂ 346ರಲ್ಲಿ ಒಟ್ಟು 4.9106 ಹೆಕ್ಟೇರ್. ಅರಣ್ಯ ಪ್ರದೇಶವನ್ನು ಉಪಯೋಗಿಸಲು ಅರಣ್ಯ ಸಂರಕ್ಷಣಾ ಕಾಯ್ದೆ, 1980ರಡಿ ಅನುಮೋದನೆ ಕೋರಿ ಕಾರ್ಯನಿರ್ವಾಹಕ ಇಂಜಿನಿಯರ್, ಮೆಸ್ಕಾಂ, ಕುಂದಾಪುರ ಇವರು ಕೇಂದ್ರ ಸರ್ಕಾರದ ವೆಬ್ ಪೋರ್ಟಲ್ ಮುಖಾಂತರ ಆನ್‌ಲೈನ್ ಪ್ರಸ್ತಾವನೆ ಸಂಖ್ಯೆ FP/KA/TRANS/46242/2020 ನ್ನು ದಿನಾಂಕ 14-06-2020ರಂದು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯು ಅಪೂರ್ಣವಾಗಿದ್ದರಿಂದ, ಪರಿಪೂರ್ಣ ಮಾಹಿತಿಯನ್ನು ದಾಖಲಾತಿಗಳೊಂದಿಗೆ ಸಲ್ಲಿಸುವಂತೆ ಅರಣ್ಯ ಇಲಾಖೆಯಿಂದ ದಿನಾಂಕ 29-06-2020 ರಂದು ಹಿಂದಿರುಗಿಸಲಾಗಿದ್ದು, ಅದರಂತೆ ಉಪಯೋಗಿ ಸಂಸ್ಥೆಯವರು ದಿನಾಂಕ 03-11-2020 ರಂದು ಪ್ರಸ್ತಾವನೆಯನ್ನು ಮರು ಸಲ್ಲಿಸಿರುತ್ತಾರೆ. ಆದರೆ ಸದರಿ ಪ್ರಸ್ತಾವನೆಯೂ ಸಹ ಅಪೂರ್ಣವಾಗಿದ್ದುದರಿಂದ, ಪೂರ್ಣ ಮಾಹಿತಿಯುಳ್ಳ ದಾಖಲೆಗಳೊಂದಿಗೆ ಮರು ಸಲ್ಲಿಸುವಂತೆ ದಿನಾಂಕ 17-11-2020 ರಂದು ಅರಣ್ಯ ಇಲಾಖೆಯಿಂದ ಉಪಯೋಗಿ ಸಂಸ್ಥೆಯವರಿಗೆ ಸೂಚಿಸಲಾಗಿದೆ.
ಆ.	ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಅನುಮತಿ ನೀಡಲಾಗುವುದು;	ಪೂರ್ಣ ಪ್ರಮಾಣದ ಪ್ರಸ್ತಾವನೆಯು ಸ್ವೀಕೃತವಾದ ನಂತರ ಅರಣ್ಯ (ಸಂರಕ್ಷಣೆ) ಅಧಿನಿಯಮ, 1980ರಡಿ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಗೆ ಅನುಮೋದನೆ ಕೋರಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು.
ಇ.	ಬೈಂದೂರು ಮೆಸ್ಕಾಂ ಉಪವಿಭಾಗದ ಹೇರೂರಿನಿಂದ ಹಾಲ್ಕಲ್ ತನಕ 33 ಕೆವಿ ಮಾರ್ಗ ವಿಸ್ತರಣೆಯಿಂದ ಎಷ್ಟು ಮರಗಳ ಕಟಾವು ಮಾಡಬೇಕಾಗುತ್ತದೆ?	ಸದರಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಪೂರ್ವಾನುಮೋದನೆ ಪಡೆದ ನಂತರ ಮರಗಳ ಕಟಾವಣೆಗೆ ಅನುಮತಿ ನೀಡಬಹುದಾಗಿರುತ್ತದೆ. ಉಪಯೋಗಿ ಸಂಸ್ಥೆಯವರು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ ಇವರ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಯಾವ ಪ್ರದೇಶದಲ್ಲಿ ಎಷ್ಟು ಮರಗಳನ್ನು ಕಡಿಯಬೇಕು ಎನ್ನುವ ಬಗ್ಗೆ ಮರಗಳ ಎಣಿಕೆ ಪಟ್ಟಿಯನ್ನು ತಯಾರಿಸಿದ ನಂತರವೇ ಎಷ್ಟು ಮರಗಳನ್ನು ಕಡಿಯಬೇಕು ಎಂಬ ಬಗ್ಗೆ ನಿರ್ಧರಿಸಬಹುದಾಗಿರುತ್ತದೆ.

ಸಂಖ್ಯೆ: ಅಪಜೀ 86 ಎಫ್‌ಎಲ್‌ಎಲ್ 2020 (ಇ)

(ಆನಂದ್ ಸಿಂಗ್)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	895
ಮಾನ್ಯ ಸದಸ್ಯರ ಹೆಸರು	:	ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ	ಬೈಂದೂರು ವಿಧಾನಸಭಾ ಕ್ಷೇತ್ರವು ಕುಂದಾಪುರ ಮತ್ತು ಬೈಂದೂರು ಎರಡು ತಾಲ್ಲೂಕನ್ನು ಹೊಂದಿದು, ಅಲ್ಲಿ ಸಾಕಷ್ಟು ಡಯಾಲಿಸಿಸ್ ರೋಗಿಗಳಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಡಯಾಲಿಸಿಸ್ ಚಿಕಿತ್ಸೆ ಸಿಗದೆ ಖಾಸಗಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳಲು ಹಣದ ಅಭಾವದಿಂದ ಸಾಧ್ಯವಾಗದೇ ರೋಗಿಗಳು ಅನಾರೋಗ್ಯದ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ; ಕುಂದಾಪುರ ತಾಲ್ಲೂಕು ಮತ್ತು ಬೈಂದೂರು ತಾಲ್ಲೂಕು ವ್ಯಾಪ್ತಿಯಲ್ಲಿ ಡಯಾಲಿಸಿಸ್ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?	ತಾಲ್ಲೂಕು ಆಸ್ಪತ್ರೆ, ಕುಂದಾಪುರ ಇಲ್ಲಿನ ಡಯಾಲಿಸಿಸ್ ಕೇಂದ್ರದಲ್ಲಿ ಹಾಲಿ 5 ಡಯಾಲಿಸಿಸ್ ಯಂತ್ರಗಳಲ್ಲಿ 42 ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಬೈಂದೂರು ತಾಲ್ಲೂಕು ನೂತನವಾಗಿ ಸೃಜನೆಯಾಗಿರುವುದರಿಂದ ಮುಂಬರುವ ವರ್ಷಗಳಲ್ಲಿ ಡಯಾಲಿಸಿಸ್ ಯಂತ್ರವನ್ನು ಅಳವಡಿಸಲಾಗುವುದು. ಸದ್ಯಕ್ಕೆ ಬೈಂದೂರು ತಾಲ್ಲೂಕಿನಲ್ಲಿರುವ ರೋಗಿಗಳಿಗೆ ಕುಂದಾಪುರ ತಾಲ್ಲೂಕಿನ ಡಯಾಲಿಸಿಸ್ ಕೇಂದ್ರದಲ್ಲಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಡಯಾಲಿಸಿಸ್ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಆಕುಕ 72 ಎಸ್‌ಟಿಕ್ಯೂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	900
ಸದಸ್ಯರ ಹೆಸರು	:	ಶ್ರೀ ರಾಜೇಗೌಡ.ಟಿ.ಡಿ (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸುವವರು	:	ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಮಲೆನಾಡಿಗರ ನೇಣುಕುಣಿಕೆಯಾದ ಅರಣ್ಯ ಕಾಯ್ದೆಯ ಸೆಕ್ಷನ್-4 ಮತ್ತು 17 ಕಾಯ್ದೆ ಜಾರಿ ಮೂಲಕ ಅರಣ್ಯ ಇಲಾಖೆ ಉದ್ದೇಶ ಪೂರ್ವವಾಗಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಮಲೆನಾಡಿನ ಪ್ರದೇಶದಲ್ಲಿ ಸೆಕ್ಷನ್-4 ಮತ್ತು 17 ಕಾಯ್ದೆ ಜಾರಿ ಮೂಲಕ ಉದ್ದೇಶ ಪೂರ್ವವಾಗಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ)	ಕಾಯ್ದೆ ಜಾರಿ ಮೊದಲು ಸ್ಥಳೀಯರ ಜನಾಭಿಪ್ರಾಯ ಸಂಗ್ರಹಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು;	ಕರ್ನಾಟಕ ಅರಣ್ಯ ಕಾಯ್ದೆ, 1963ರ ಸೆಕ್ಷನ್ 4ರಡಿಯಲ್ಲಿ ಯಾವುದೇ ಪ್ರದೇಶವನ್ನು ಅರಣ್ಯ ಪ್ರದೇಶವೆಂದು ಘೋಷಿಸುವ ಪೂರ್ವದಲ್ಲಿ ಸ್ಥಳೀಯರಿಗೆ ಮಾಹಿತಿಯನ್ನು ನೀಡಿ ಸರ್ವೆ ಕಾರ್ಯವನ್ನು ಮಾಡಲಾಗುತ್ತದೆ.
ಇ)	ಕಾಯ್ದೆ ಜಾರಿಯಿಂದ ಮೂಲಭೂತ ಅಭಿವೃದ್ಧಿ ಕಾಮಗಾರಿಗಳಿಗೆ ಹಿನ್ನಡೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಯಾವುದೇ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆ-1963ರ ಕಲಂ-4ರಂತೆ ಅಧಿಸೂಚಿಸುವ ಪೂರ್ವದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ ಅಭಿಪ್ರಾಯ / ನಿರಾಕ್ಷೇಪಣಾ ಪತ್ರವನ್ನು ಪಡೆದ ನಂತರ ಕಲಂ-4 ರನ್ವಯ ಪ್ರಸ್ತಾಪಿತ ಪ್ರದೇಶಗಳನ್ನು ಅಧಿಸೂಚಿಸಲಾಗುತ್ತದೆ. ನಂತರ ಕಲಂ 5 ರಂತೆ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಉದ್ಘೋಷಣೆಯನ್ನು ಪ್ರಕಟಿಸುತ್ತಾರೆ. ಅಂತಹ ಪ್ರಕಟಣೆಯನ್ನು ಪ್ರಕಟಿಸುವ ದಿನಾಂಕದಿಂದ 3 ತಿಂಗಳಿಗಿಂತ ಕಡಿಮೆ ಅಲ್ಲದ ಅವಧಿಯನ್ನು ನಿರ್ದಿಷ್ಟಪಡಿಸಲಾಗುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ಹಕ್ಕು / ಕ್ಲೇಮು ಇದ್ದ ಪಕ್ಷದಲ್ಲಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಮಾನ್ಯ ಮಾಡಲು ಶಿಫಾರಸ್ಸು ಮಾಡುತ್ತಾರೆ ಮತ್ತು ಕಲಂ 17 ರಂತೆ ಅಂತಿಮ ಅಧಿಸೂಚನೆ ಹೊರಡಿಸಿದ ನಂತರವು ಸದರಿ ಪ್ರದೇಶದಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗಳಿಗಾಗಿ ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಬಳಸಬೇಕಿದ್ದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಕಲಂ-2ರಂತೆ ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆದು ಸದರಿ ಪ್ರದೇಶಗಳನ್ನು ಗುತ್ತಿಗೆಯ ಆಧಾರದ ಮೇಲೆ ಬಿಡುಗಡೆ ಮಾಡಲು ಅವಕಾಶವಿರುತ್ತದೆ.
ಈ)	ಜನಾಭಿಪ್ರಾಯ ಪಡೆದು ಸದರಿ ಕಾಯ್ದೆ ಕೈಬಿಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಚಿಂತನೆ ಸರ್ಕಾರದ ಮುಂದಿದೆಯೇ ಹಾಗಿದ್ದಲ್ಲಿ ಯಾವ ಕಾಲಮಿತಿಯೊಳಗೆ ಪ್ರಸ್ತಾವನೆ ಸಲ್ಲಿಸಲಾಗುವುದು?	ಇಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಅಪಜೀ 133 ಎಫ್‌ಎಫ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	908
ಮಾನ್ಯ ಸದಸ್ಯರ ಹೆಸರು	:	ಶ್ರೀ ಸುರೇಶ.ಡಿ.ಎಸ್ (ತರೀಕೆರೆ)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ	ತರೀಕೆರೆ ತಾಲ್ಲೂಕು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಮಾಡಿಸುವ ರೋಗಿಗಳಿಗೆ ಮಾತ್ರೆಗಳು ಹಾಗೂ ಇಂಜೆಕ್ಷನ್‌ಗಳು ಸರಬರಾಜು ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ	ಬಂದಿದ್ದರೆ ಔಷಧಿಗಳ ಸರಬರಾಜು ಮಾಡದಿರುವ ಕಂಪನಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ.	ಔಷಧಿಗಳ ಸರಬರಾಜು ಮಾಡದಿರುವ ಕಂಪನಿಯ ವಿರುದ್ಧ ನಿಯಮಾನುಸಾರ ದಂಡ ವಿಧಿಸಲಾಗಿದೆ.
ಇ	ರಕ್ತ ಪರೀಕ್ಷಾ ಕೇಂದ್ರದಲ್ಲಿ ಉಪಕರಣಗಳು ಹಲವಾರು ತಿಂಗಳುಗಳಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಈ	ಬಂದಿದ್ದರೆ, ಉಪಕರಣಗಳ ದುರಸ್ತಿ ಮಾಡಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)	ರಕ್ತ ಪರೀಕ್ಷಾ ಕೇಂದ್ರದಲ್ಲಿ ಹಾಳಾಗಿರುವ ಉಪಕರಣಗಳ ದುರಸ್ತಿ ಮಾಡಿಸಲು ತರೀಕೆರೆ ತಾಲ್ಲೂಕು ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ ಅನುದಾನದಿಂದ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿರುತ್ತದೆ.

ಸಂಖ್ಯೆ: ಆಕುಕ 75 ಎಸ್‌ಟಿಕ್ಯೂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	909
ಸದಸ್ಯರ ಹೆಸರು	:	ಶ್ರೀ ವೆಂಕಟ್‌ರಾವ್ ನಾಡಗೌಡ
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಸಿಂಧನೂರು ತಾಲ್ಲೂಕಿನಲ್ಲಿ ಬಂಗಾಳಿ ನಿರಾಶ್ರಿತರು ಹಲವಾರು ವರ್ಷಗಳಿಂದ ನೆಲೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಬಂದಿದ್ದಲ್ಲಿ, ಅವರುಗಳು ಬಂಗಾಳದಲ್ಲಿ ನಮಸೂದ್ರ ಜಾತಿಗೆ ಸೇರಿದವರಾಗಿದ್ದು, ಪರಿಶಿಷ್ಟ ಜಾತಿ ಸಮುದಾಯದವ ರಾಗಿರುತ್ತಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಇ)	ರಾಜ್ಯದಲ್ಲಿ ಸದರಿ ನಿರಾಶ್ರಿತರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗುವುದು?	ಯಾವುದೇ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಭಾರತ ಸರ್ಕಾರಕ್ಕೆ ಮಾತ್ರ ಅಧಿಕಾರವಿರುತ್ತದೆ. ಸದರಿ ಬಂಗಾಳಿ ನಿರಾಶ್ರಿತರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಬಗ್ಗೆ ಈಗಾಗಲೇ ದಿನಾಂಕ:27.05.2017ರಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಈ ಸಂಬಂಧ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರು ಪರಿಶೀಲನಾ ಅಂಶಗಳಿಗೆ ಸಮರ್ಥನೆಯನ್ನು ಕೋರಿದ್ದು, ಕೇಂದ್ರ ಸರ್ಕಾರವು ರಾಜ್ಯದಿಂದ ಈ ಅಂಶಗಳಿಗೆ ವರದಿ/ಸಮರ್ಥನೆ ಕೋರಿರುತ್ತದೆ. ಈ ಕುರಿತು ಡಾ|| ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರಿಗೆ ಪತ್ರ ಬರೆದು ಸದರಿ ಅಂಶಗಳಿಗೆ ವರದಿ/ಸಮರ್ಥನೆಯನ್ನು ನೀಡುವಂತೆ ಕೋರಲಾಗಿದೆ. ವರದಿಯನ್ನು ನಿರೀಕ್ಷಿಸಲಾಗಿದೆ.

ಸಕಇ 272 ಎಸ್‌ಎಡಿ 2020

(ಬಿ. ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	: 910
ಮಾನ್ಯ ಸದಸ್ಯರ ಹೆಸರು	: ಶ್ರೀ ಹೂಲಗೇರಿ ಡಿ.ಎಸ್ (ಲಿಂಗಸುಗೂರು)
ಉತ್ತರಿಸಬೇಕಾದ ದಿನಾಂಕ	: 10.12.2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗೆ ಅನುಗುಣವಾಗಿ ಆದ್ಯತೆ ಮೇಲೆ ಮುಂಬರುವ ವರ್ಷಗಳಲ್ಲಿ ಕ್ರಮವಹಿಸಲಾಗುವುದು.
ಆ	ಈ ಜಿಲ್ಲೆಯ ಲಿಂಗಸುಗೂರು ಪಟ್ಟಣದಲ್ಲಿರುವ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು 100 ಹಾಸಿಗೆಗಳಿಂದ 200 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಯಾವುದೇ ಪ್ರಸ್ತಾವನೆ ಇರುವುದಿಲ್ಲ.
ಇ	ಈ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ಕರ್ತವ್ಯ ವೈದ್ಯಾಧಿಕಾರಿ/ ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿ ಅಧಿಸೂಚನೆ ಸಂಖ್ಯೆ:ಎಸ್ಆರ್‌ಸಿ/68/2019-20 ದಿ:10.09.2020 ರಲ್ಲಿ ಅಧಿಸೂಚನೆ ಹೊರಡಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಖಾಲಿ ಇರುವ ಹುದ್ದೆಗಳನ್ನು ಪ್ರಚುರಪಡಿಸಿ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.
ಈ	ಈ ತಾಲ್ಲೂಕಿನ ಮುದಗಲ್ಲ ಪಟ್ಟಣದಲ್ಲಿರುವ 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನು 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆಕುಕ 165 ಎಸ್‌ಎಂಎಂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	911
2)	ಮಾನ್ಯ ಸದಸ್ಯರ ಹೆಸರು	ಶ್ರೀ ಹೂಲಗೇರಿ.ಡಿ.ಎಸ್. (ಲಿಂಗಸುಗೂರು)
3)	ಉತ್ತರಿಸಬೇಕಾದ ದಿನಾಂಕ	10/12/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದಲ್ಲಿ ನೂತನ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	2014–15 ರಲ್ಲಿ 100 ಮತ್ತು 2017–18 ರಲ್ಲಿ 12 ಒಟ್ಟು 112 ಹೊಸ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ. ಪ್ರಸ್ತುತ ಈ ಸಂಸ್ಥೆಗಳಿಗೆ ಡಿ.ಜಿ.ಟಿಯ ನಿಯಮಾನುಸಾರ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಯಂತ್ರೋಪಕರಣ, ಸಲಕರಣೆಗಳು, ಪೀಠೋಪಕರಣಗಳು, ಕಟ್ಟಡಗಳು ಹಾಗೂ ಸಿಬ್ಬಂದಿಗಳನ್ನು ಒದಗಿಸುವುದು ಸರ್ಕಾರದ ಸಧ್ಯದ ಆದ್ಯತೆಯಾಗಿರುವುದರಿಂದ ಪ್ರಸಕ್ತ ಸಾಲಿನಲ್ಲಿ ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಆ)	ಈ ಲಿಂಗಸುಗೂರು ತಾಲ್ಲೂಕಿನ ಮುದಗಲ್ಲ ಪಟ್ಟಣದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?	ಮುದಗಲ್ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ನಬಾರ್ಡ್ ಆರ್.ಐ.ಡಿ.ಎಫ್–22 ರಡಿಯಲ್ಲಿ ರೂ.129.00 ಲಕ್ಷಗಳ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಮಾಡಲು ಕರ್ನಾಟಕ ಗೃಹ ಮಂಡಳಿಗೆ ಅನುಮತಿ ನೀಡಿದ್ದು, ಪ್ರಸ್ತುತ ಲಿಂಟಲ್ ಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಸಂಖ್ಯೆ: ಕೌಉಜೀಇ 67 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 912
ಮಾನ್ಯ ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳು ಎಷ್ಟು;	ಲಿಂಗಸುಗೂರು ತಾಲ್ಲೂಕಿನಲ್ಲಿ ಒಟ್ಟು ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ-46
ಆ	ಲಿಂಗಸುಗೂರು ತಾಲ್ಲೂಕಿನಲ್ಲಿರುವ ಒಟ್ಟು ಪ್ರಾಥಮಿಕ ಶಾಲೆಗಳು ಎಷ್ಟು;	ಲಿಂಗಸುಗೂರು ತಾಲ್ಲೂಕಿನಲ್ಲಿ ಒಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ-115
ಇ	ಈ ತಾಲ್ಲೂಕಿನಲ್ಲಿರುವ ಹೈಟೆಕ್ ಶೌಚಾಲಯ ಹೊಂದಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಎಷ್ಟು; ಹೈಟೆಕ್ ಶೌಚಾಲಯ ಇಲ್ಲದಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಎಷ್ಟು;	15 ಪ್ರಾಥಮಿಕ ಶಾಲೆಗಳಲ್ಲಿ ಹೈಟೆಕ್ ಶೌಚಾಲಯ ಇರುತ್ತವೆ. ಹೈಟೆಕ್ ಶೌಚಾಲಯ ಇಲ್ಲದಿರುವ ಪ್ರೌಢಶಾಲೆಗಳ ಸಂಖ್ಯೆ: 46 ಮತ್ತು ಪ್ರಾಥಮಿಕ ಶಾಲೆಗಳ ಸಂಖ್ಯೆ:100
ಈ	ಈ ತಾಲ್ಲೂಕಿನಲ್ಲಿ ಬರುವ ಬಯ್ಯಾಪೂರ, ಅನ್ವರಿ, ಚಿತ್ತಾಪುರ, ಗೌಡುರು, ಮಾವಿನಭಾವಿ ಸರ್ಕಾರಿ ಪ್ರೌಢಶಾಲೆಗಳನ್ನು ಪದವಿಪೂರ್ವ ಕಾಲೇಜುಗಳಾಗಿ ಉನ್ನತೀಕರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಬಯ್ಯಾಪೂರ, ಅನ್ವರಿ, ಚಿತ್ತಾಪುರ, ಗೌಡುರು ಸರ್ಕಾರಿ ಪ್ರೌಢಶಾಲೆಗಳನ್ನು ಉನ್ನತೀಕರಿಸಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಇದ್ದು, ಸದರಿ ಕಾಲೇಜುಗಳನ್ನು ಉನ್ನತೀಕರಿಸಲು ಕೆಳಕಂಡ ಮಾಹಿತಿಗಳನ್ನು ಕ್ರೋಢೀಕರಿಸಲಾಗುತ್ತಿದೆ. 1. ಉನ್ನತೀಕರಿಸುವಂತಹ ಪ್ರದೇಶಗಳಲ್ಲಿ ಎಸ್.ಎಸ್.ಎಲ್.ಸಿ ಯಿಂದ ಪದವಿ ಪೂರ್ವ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳ ಪ್ರತಿಶತ(Average) ವಿವರಗಳು; 2. ಕೆ.ಪಿ.ಶಾಲೆಗಳಡಿ ಈ ಕಾಲೇಜುಗಳನ್ನು ಉನ್ನತೀಕರಿಸಲು ಇರುವ ಅವಕಾಶದ ಬಗ್ಗೆ ಮಾಹಿತಿ; 3. ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಗರಿಷ್ಠ/ಕನಿಷ್ಠ ಸಂಖ್ಯೆಯ ವಿವರ; 4. ಉಪನ್ಯಾಸಕರ ವಿವರಗಳ ಬಗ್ಗೆ ಸ್ಪಷ್ಟ ಸಂಖ್ಯೆಯ/ಮೊತ್ತದ ಮಾಹಿತಿ; ಲಿಂಗಸಗೂರು ತಾಲ್ಲೂಕಿನ ಮಾವಿನಭಾವಿ ಸರ್ಕಾರಿ ಪ್ರೌಢಶಾಲೆಯನ್ನು ಸರ್ಕಾರಿ ಪದವಿಪೂರ್ವ ಕಾಲೇಜನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಹಂತದಲ್ಲಿದೆ.
ಉ	ಈ ತಾಲ್ಲೂಕಿನ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಸರ್ಕಾರಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಆ ಶಾಲೆಗಳು ಯಾವುವು (ವಿವರ ನೀಡುವುದು)?	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಎಂ.ಹೆಚ್.ಆರ್.ಡಿ ಯ ಈ ಕೆಳಕಂಡ ಮಾನದಂಡಗಳನ್ನಯ ಕ್ರಮವಹಿಸಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸುವ ಕ್ರಮವಹಿಸಲಾಗಿದೆ. 1. 8ನೇ ತರಗತಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ 70 ಇರಬೇಕು. ಗುಡ್ಡಗಾಡು ಪ್ರದೇಶವಾದಲ್ಲಿ ಈ ದಾಖಲಾತಿಯು 25-30 ಇರಬೇಕು. 2. 5 ಕಿ.ಮೀ ವ್ಯಾಪ್ತಿಯಲ್ಲಿ ಸರ್ಕಾರಿ, ಅನುದಾನಿತ, ಅನಿದಾರಹಿತ ಶಾಲೆಗಳಿರಬಾರದು. 3. ಜಿ.ಐ.ಎಸ್ ಮ್ಯಾಪಿಂಗ್ ಇರಬೇಕು. ಉನ್ನತೀಕರಿಸಲಾದ 10 ಶಾಲೆಗಳ ವಿವರಗಳನ್ನು ಅನುಬಂಧ 1ರಲ್ಲಿ ನೀಡಿದೆ.

ಸಂ: ಇಪಿ೩೭೭ಎಸ್ಇಎಸ್ ೨೦೨೦

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 914

2) ಸದಸ್ಯರ ಹೆಸರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)

3) ಉತ್ತರಿಸುವ ದಿನಾಂಕ : 10.12.2020.

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ದಿನಾಂಕ: 19.09.2016ರ ಸರ್ಕಾರಿ ಆದೇಶದಲ್ಲಿ ಕಾಡುಪ್ರಾಣಿಗಳಿಂದ ಬೆಳೆ ನಾಶವಾದ ಬಗ್ಗೆ ಪರಿಹಾರ ನೀಡುವ ಮಾನದಂಡದಲ್ಲಿ ತೆಂಗಿನಮರ ನಾಶವಾದಲ್ಲಿ ಮರವೊಂದಕ್ಕೆ ಅದರ ವಯಸ್ಸಿನ ಆಧಾರದ ಮೇಲೆ ಪರಿಹಾರ ನೀಡಲಾಗಿರುತ್ತದೆ. ಆದರೆ ಕಾಡುಪ್ರಾಣಿಗಳು (ಮಂಗಗಳು) ತೆಂಗಿನ ಮರವನ್ನು ಹಾನಿ ಮಾಡುವ ಬದಲಾಗಿ ತೆಂಗಿನ ಎಳ ನೀರು ಅಥವಾ ತೆಂಗಿನಕಾಯಿ ನಾಶ ಮಾಡುವುದರಿಂದ ರೈತರಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಆ)	ಬಂದಿದ್ದಲ್ಲಿ, ಸದರಿ ಆದೇಶವನ್ನು ಮರು ಪರಿಶೀಲಿಸಿ ರೈತರಿಗೆ ಅನುಕೂಲ ಮಾಡಿ ಕೊಡಲಾಗುವುದೇ?	ಈ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಅಪಜೀ 216 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 916
ಮಾನ್ಯ ಸದಸ್ಯರ ಹೆಸರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಉತ್ತರಿಸಬೇಕಾದ ದಿನಾಂಕ : 10.12.2020
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ	ಕಿಡ್ನಿ ವೈಫಲ್ಯವಾದ ರೋಗಿಗಳಿಗೆ ವಾರಕ್ಕೆ 3 ಬಾರಿ ಕಿಡ್ನಿ ಡಯಾಲಿಸಿಸ್ ಮಾಡಬೇಕಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಬೇಡಿಕೆ ಇರುವಷ್ಟು ಡಯಾಲಿಸಿಸ್ ಮಿಷನ್ ಇಲ್ಲದಿರುವುದರಿಂದ ಅಥವಾ ಸರಿಯಾದ ತರಬೇತಿ ಪಡೆದ ಟೆಕ್ನಿಷಿಯನ್ ಇಲ್ಲದೆ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹಾಲಿ 540 ಡಯಾಲಿಸಿಸ್ ಯಂತ್ರಗಳನ್ನು 165 ಸರ್ಕಾರಿ ಆಸ್ಪತ್ರೆಗಳಲ್ಲಿ ಅಳವಡಿಸಲಾಗಿದೆ. ಡಯಾಲಿಸಿಸ್ ಚಿಕಿತ್ಸೆಯನ್ನು ಅವಶ್ಯಕತೆಗನುಣವಾಗಿ ಒದಗಿಸಲು ಈಗಾಗಲೇ ಕ್ರಮವಹಿಸಲಾಗಿದೆ.
ಆ	ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯ ಸಿಗದಿರುವುದರಿಂದ ಕಿಡ್ನಿ ಡಯಾಲಿಸಿಸ್‌ನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಸೇರ್ಪಡಿಸಿ ಬಡ ರೋಗಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ;	ರಾಜ್ಯದ 166 ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯ ದೊರೆಯುತ್ತಿದೆ. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿಯೂ ಕೂಡ ಡಯಾಲಿಸಿಸ್ ಸೌಲಭ್ಯವನ್ನು ಕೋಡ್ 2A.S1.00214 ರೀತ್ಯ ನೀಡಲಾಗುತ್ತಿದೆ.
ಇ	ಬಡ ಕುಟುಂಬದ ಕಿಡ್ನಿ ವೈಫಲ್ಯವಾದ ಹೆಚ್ಚಿನ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಕಿಡ್ನಿಯ ಡಯಾಲಿಸಿಸ್‌ಗೆ ಅವಕಾಶ ಸಿಗದಿರುವುದು ಹಾಗೂ ಅವರು ಖಾಸಗಿ ಆಸ್ಪತ್ರೆಯಲ್ಲಿ ಹಣಕೊಟ್ಟು ಡಯಾಲಿಸಿಸ್ ಮಾಡಿಕೊಳ್ಳಲಾಗದೇ ಕಿಡ್ನಿ ಡಯಾಲಿಸಿಸ್ ರೋಗಿಗಳು ಜೀವನ್ಮರಣದಲ್ಲಿ ನರಳಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ.
ಈ	ಬಡ ಕುಟುಂಬದ ಆರ್ಥಿಕವಾಗಿ ಹಿಂದುಳಿದ ರೋಗಿಗಳು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿಕೊಳ್ಳಲು ಅಸಾಧ್ಯವಾದ ಕಾರಣ ಜೀವನ ಪರ್ಯಂತ ಡಯಾಲಿಸಿಸ್ ಹಾಗೂ ಚಿಕಿತ್ಸೆಗಳು ಬೇಕಾಗಿರುವುದರಿಂದ ಎಂಡೋಸಲ್ಫಾನ್ ಪೀಡಿತರಿಗೆ ಮಾಸಾಶನ ನೀಡುವಂತೆ ಕಿಡ್ನಿ ಡಯಾಲಿಸಿಸ್ ರೋಗಿಗಳಿಗೂ ಮಾಸಾಶನ ಮಂಜೂರು ಮಾಡುವ ಬಗ್ಗೆ ಸರ್ಕಾರದ ನಿಲುವೇನು?	ಪ್ರಸ್ತುತ ಲಭ್ಯವಿರುವ ನಿಯಮಗಳಡಿಯಲ್ಲಿ ಡಯಾಲಿಸಿಸ್ ರೋಗಿಗಳಿಗೆ ಮಾಸಾಶನ ನೀಡಲು ಅವಕಾಶ ಇರುವುದಿಲ್ಲ.

ಸಂಖ್ಯೆ: ಆಕುಕ 71 ಎಸ್‌ಟಿಕ್ಯೂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 918
ಸದಸ್ಯರ ಹೆಸರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರಸಂ.	ಪ್ರಶ್ನೆಗಳು	ಉತ್ತರಗಳು
ಅ)	ಮೀಸಲು ಮತ್ತು ವನ್ಯಜೀವಿ ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಜನ ವಸತಿ ಪ್ರದೇಶಗಳಿಗೆ ಹೋಗುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯವರು ಅಡ್ಡಿಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದ ಕಾಯ್ದಿಟ್ಟ ಅರಣ್ಯ ಪ್ರದೇಶದ ಪಕ್ಕದಲ್ಲಿ ಮತ್ತು ಅರಣ್ಯ ಎನ್‌ಕ್ಲೋಸರ್ (Forest enclosure) ರೂಪದಲ್ಲಿರುವ ಹಾಗೂ ವನ್ಯಜೀವಿ ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಜನ ವಸತಿ ಪ್ರದೇಶಗಳಿಗೆ ಹಾದು ಹೋಗುವ ದಾರಿಗಳನ್ನು ಆಯಾ ಅರಣ್ಯ ಪ್ರದೇಶದ ಅಧಿಸೂಚನೆಗಳಲ್ಲಿಯೇ ಸಾಮಾನ್ಯವಾಗಿ ನಿರ್ದಿಷ್ಟ ಅಗಲದ ಕಾಲು ದಾರಿ (Right of way) ಅಥವಾ ಬಂಡಿ ದಾರಿ (Cart track) ರೂಪದಲ್ಲಿ ಅವಕಾಶ ನೀಡಲಾಗಿರುತ್ತದೆ. ಅಂತಹ ದಾರಿಗಳನ್ನು ಸಂಬಂಧಿಸಿದವರು ಸಾಮಾನ್ಯ ಬಳಕೆಗಾಗಿ ಉಪಯೋಗಿಸಬಹುದಾಗಿರುತ್ತದೆ. ಮೇಲಿನ ಅವಕಾಶವನ್ನು ಹೊರತುಪಡಿಸಿ ಅರಣ್ಯ ಪ್ರದೇಶದಲ್ಲಿ ಈ ದಾರಿಗಳ ಅಗಲವನ್ನು ವಿಸ್ತರಿಸಲು ಅಥವಾ ಬೇರೆ ಯಾವುದೇ ಬದಲಿ ಅರಣ್ಯೇತರ ಪ್ರದೇಶಗಳಲ್ಲಿ ದಾರಿಯು ಲಭ್ಯವಿಲ್ಲದಿದ್ದಲ್ಲಿ ಅರಣ್ಯ ಪ್ರದೇಶದಲ್ಲಿ ಹೊಸ ರಸ್ತೆಗಳನ್ನು ನಿರ್ಮಿಸಲು 1980ರ ಅರಣ್ಯ (ಸಂರಕ್ಷಣೆ) ಕಾಯ್ದೆಯಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಿರುತ್ತದೆ. ಮೇಲಿನಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ಪ್ರಕರಣಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಅರಣ್ಯ ಇಲಾಖೆಯವರು ಅಡ್ಡಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು;	
ಇ)	ಅನಾಧಿಕಾಲದಿಂದ ವ್ಯಾಸ್ತವ್ಯವಿರುವರ ಉಪಯೋಗಕ್ಕಾಗಿದ್ದ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಬಿಡದೆ ಜನರನ್ನು ಮೂಲಭೂತ ಸೌಕರ್ಯಗಳಿಂದ ವಂಚಿಸುತ್ತಿರುವುದರ ಕುರಿತು ಸರ್ಕಾರವು ಕೈಗೊಳ್ಳುವ ಕ್ರಮಗಳೇನು?	

ಸಂಖ್ಯೆ: ಅಪಜೀ 84 ಎಫ್‌ಎಲ್‌ಎಲ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 338
ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)
ಉತ್ತರಿಸಬೇಕಾದ ದಿನಾಂಕ : 10-12-2020
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

ಕ್ರ.ಸಂ	ಪ್ರಶ್ನೆ	ಉತ್ತರ
1	ಮೈಸೂರಿನಲ್ಲಿ ಜರುಗಿದ ಮೈಸೂರು ದಸರಾ ಮಹೋತ್ಸವ-2020ರಲ್ಲಿ ಪ್ರತಿ ವರ್ಷದಂತೆ ವೀರನಹೊಸಹಳ್ಳಿಯಲ್ಲಿ ನಡೆಯುತ್ತಿದ್ದ ಗಜಪಯಣ ಹಾಗೂ ಅರಮನೆಯಲ್ಲಿ ನಡೆಯುತ್ತಿದ್ದ ಗಜಪಡೆ ಆಹ್ವಾನ ಕಾರ್ಯಕ್ರಮವನ್ನು ಸರ್ಕಾರದ ವತಿಯಿಂದ ಆಚರಿಸಲಾಗಿದೆಯೇ;	ದಸರಾ ಮಹೋತ್ಸವ-2020ರ ಸಂಬಂಧ ದಿನಾಂಕ:08-09-2020ರಂದು ನಡೆದ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಗಜಪಯಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷ ದಸರಾ ಮಹೋತ್ಸವದಲ್ಲಿ ಹುಣಸೂರು ತಾಲ್ಲೂಕು ವೀರನಹೊಸಹಳ್ಳಿ ಗ್ರಾಮದಲ್ಲಿ ಆಯೋಜಿಸ ಲಾಗುತ್ತಿದ್ದು, ಸುಮಾರು 3000ದಷ್ಟು ಜನಸಂದಣಿ ಸೇರುತ್ತಿದ್ದರು. ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜನ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗವಹಿಸುತ್ತಿದ್ದರು. ಈ ಬಾರಿ ಕೋವಿಡ್-19 ಹಿನ್ನಲೆಯಲ್ಲಿ ಈ ಕಾರ್ಯಕ್ರಮವನ್ನು ನಡೆಸದೇ ಇರುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತವಾದ ಹಿನ್ನಲೆಯಲ್ಲಿ ಈ ಬಗ್ಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತವಾಗಿರುತ್ತದೆ. ದಿನಾಂಕ:12-09-2020ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ದಸರಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗಜಪಯಣ ಕಾರ್ಯಕ್ರಮ ಆಯೋಜನೆಗೆ ಸಂಬಂಧಿಸಿದಂತೆ ಕೇವಲ ಹಿರಿಯ ಅಧಿಕಾರಿಗಳನ್ನೊಳಗೊಂಡ ತಂಡವು ವೀರನ ಹೊಸಹಳ್ಳಿ ಅರಣ್ಯ ಗೇಟ್ ಬಳಿ ದಿನಾಂಕ:01-10-2020 ರಂದು ಮಾವುತರಿಗೆ ಫಲ ತಾಂಬೂಲ ನೀಡಿ ದಸರಾಗೆ ಆಹ್ವಾನಿಸಲು ಮತ್ತು ದಿನಾಂಕ:02-10-2020ರಂದು ಶುಕ್ರವಾರ ಮಧ್ಯಾಹ್ನ 12-08 ರಿಂದ 12-40ರ ಧನುರ್ ಲಗ್ನದಲ್ಲಿ ಗಜಪಡೆಯನ್ನು ಅರಮನೆ ಆವರಣಕ್ಕೆ ಸ್ವಾಗತಿಸಲು ಅರಮನೆಗೆ ಸ್ವಾಗತಿಸುವ ಕಾರ್ಯಕ್ರಮದ ವ್ಯವಸ್ಥೆ ಮತ್ತು ಆಹ್ವಾನ ಪತ್ರಿಕೆಗಳ ಮುದ್ರಣ ವ್ಯವಸ್ಥೆಯನ್ನು ಅರಮನೆ ಮಂಡಳಿ ವತಿಯಿಂದ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ.
2	ಹಾಗಿದ್ದಲ್ಲಿ,ಸರ್ಕಾರದ ಕಾರ್ಯಕ್ರಮಗಳನ್ನು ಶಿಷ್ಟಾಚಾರದ ನಿಯಮಗಳನ್ವಯ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆಸಬೇಕಾಗಿ ರುವುದು ಸರ್ಕಾರದ ಜವಾಬ್ದಾರಿಯಾಗಿದ್ದು ಅದರಂತೆ ಕಾರ್ಯಕ್ರಮವನ್ನು ಆಯೋಜಿಸ ಲಾಗಿದೆಯೇ; (ವಿವರ ನೀಡುವುದು)	ಕೋವಿಡ್-19ರ ಹಿನ್ನಲೆಯಲ್ಲಿ ದಿನಾಂಕ:08-09-2020 ರಂದು ನಡೆದ ಉನ್ನತ ಮಟ್ಟದ ಸಮಿತಿ ಸಭೆ ಹಾಗೂ ದಿನಾಂಕ:12-09-2020ರಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ದಸರಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಯಾವುದೇ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸಿರುವುದಿಲ್ಲ.

3	ಹಾಗಿಲ್ಲದಿದ್ದಲ್ಲಿ, ಶಿಷ್ಟಾಚಾರದನ್ವಯ ಸದರಿ ಕಾರ್ಯಕ್ರಮವು ನಡೆಯದಿರಲು ಕಾರಣಗಳೇನು (ಅಗತ್ಯ ದಾಖಲಾತಿ ಗಳೊಂದಿಗೆ ಮಾಹಿತಿ ಒದಗಿಸುವುದು)?	ಕೋವಿಡ್ -19ರ ಹಿನ್ನೆಲೆಯಲ್ಲಿ ನಾಡ ಹಬ್ಬ ದಸರಾ ಮಹೋತ್ಸವ-2020ರ ಸಂಬಂಧ ವೀರನ ಹೊಸಹಳ್ಳಿಯಲ್ಲಿ ನಡೆದ ಗಜಪಯಣ ಕಾರ್ಯಕ್ರಮ ವನ್ನು ಸರಳ, ಸಾಂಪ್ರದಾಯಿಕವಾಗಿ ಯಾವುದೇ ವೇದಿಕೆ ಕಾರ್ಯಕ್ರಮವನ್ನು ಆಯೋಜಿಸದೇ ಆನೆಗಳಿಗೆ ಜಿಲ್ಲಾಡಳಿತದ ವತಿಯಿಂದ ಪೂಜೆ ನೆರವೇರಿಸಿ, ಮಾವುತರಿಗೆ ಫಲ ತಾಂಬೂಲ ನೀಡುವ ಮೂಲಕ ನಡೆಸಲಾಗಿರುತ್ತದೆ.

ಸಂಖ್ಯೆ: ಕಸಂವಾ 109 ಕವಿಸ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ
(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 543

2) ಸದಸ್ಯರ ಹೆಸರು : ಶ್ರೀ ತುಕಾರಾಮ್ ಈ (ಸಂಡೂರು)

3) ಉತ್ತರಿಸುವ ದಿನಾಂಕ : 10.12.2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ವಿಠಲಾಪುರ ಗ್ರಾಮದ ಸರ್ವೆ ನಂ.140 ಸೇರಿದಂತೆ ಇತರೆ 10 ಸರ್ವೆ ನಂಬರ್‌ಗಳಲ್ಲಿ ವಿಠಲಾಪುರ, ಎಂ. ರಾಮಸಾಗರ ಹಾಗೂ ಮೆಟ್ರಿಕಿ ಗ್ರಾಮಗಳಲ್ಲಿ ಯು.ಎ.ಡಬ್ಲ್ಯೂ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರಿಗೆ ಕಂದಾಯ ದಾಖಲಾತಿಗಳು ಇದ್ದರೂ ಸಹ ಅರಣ್ಯ ಇಲಾಖೆಯವರು ಒಕ್ಕಲೆಬ್ಬಿಸಿ ಸದರಿ ಜಾಗದಲ್ಲಿ ಗಿಡಗಳನ್ನು ನೆಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ವಿಠಲಾಪುರ ಗ್ರಾಮದ ಸರ್ವೆ ನಂ.140 ಸೇರಿದಂತೆ ಇತರ 10 ಸರ್ವೆ ನಂಗಳಲ್ಲಿ ವಿಠಲಾಪುರ, ಎಂ.ರಾಮಸಾಗರ ಹಾಗೂ ಮೆಟ್ರಿಕಿ ಗ್ರಾಮಗಳಲ್ಲಿರುವ ಜಮೀನುಗಳನ್ನು ಮದ್ರಾಸ್ ಅರಣ್ಯ ಅಧಿನಿಯಮ, 1882 ಅಧಿಸೂಚನೆ ಸಂಖ್ಯೆ 450 ದಿನಾಂಕ:16-10-1900 ರಲ್ಲಿ ಅಧಿಸೂಚನೆ ಮಾಡಿದ್ದು, "ಸಿ" ಸ್ಟೇಟ್‌ಮೆಂಟ್ ಪ್ರಕಾರ ಮೆಟ್ರಿಕಿ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿರುತ್ತದೆ. ಸದರಿ ಪ್ರದೇಶವು ಅರಣ್ಯ ಇಲಾಖೆಯ ಸುರ್ಪದಿಯಲ್ಲಿದ್ದು, ಯಾವ ರೈತರೂ ಸಾಗುವಳಿ ಮಾಡುತ್ತಿರುವುದಿಲ್ಲ. ದಿನಾಂಕ: 04-07-2020 ರಂದು ಸಾಗುವಳಿ ಮಾಡಲು ಪ್ರಯತ್ನಿಸಿದ ಕೆಲ ರೈತರನ್ನು ತಡೆಯಲಾಗಿರುತ್ತದೆ. ಪ್ರಸ್ತುತ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ.
ಆ)	ಸಾಗುವಳಿ ಮಾಡುತ್ತಿರುವ ರೈತರಿಗೆ ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ 1966 ರಿಂದ 1978 ರ ಒಳಗೆ ಸರ್ಕಾರ ಭೂ ಹಕ್ಕು ಪತ್ರಗಳನ್ನು ನೀಡಿದ್ದರೂ ಸಹ ಅವರನ್ನು ಒಕ್ಕಲೆಬ್ಬಿಸಲು ಕಾರಣಗಳೇನು;	ಸರ್ಕಾರದ ಆದೇಶ ಸಂಖ್ಯೆ:ಎಫ್‌ಇಇ 5 ಎಫ್‌ಜಿಎಲ್ 90, ದಿನಾಂಕ:05.05.1997ರ ಪ್ರಕಾರ 1978 ಕ್ಕಿಂತ ಪೂರ್ವದಲ್ಲಿ ಆದ ಅರಣ್ಯ ಒತ್ತುವರಿಗಳನ್ನು ಸಕ್ರಮಗೊಳಿಸಲು ಆದೇಶವಿದ್ದು, ಸದರಿ ಆದೇಶದ ಪ್ರಕಾರ ಬಳ್ಳಾರಿ ವಿಭಾಗದಲ್ಲಿ 426 ಕುಟುಂಬಗಳಿಂದ 302.61 ಹೆ. ಪ್ರದೇಶಗಳನ್ನು ಸಕ್ರಮಾತಿಗೆ ಅನುಮೋದನೆ ನೀಡಿದ್ದು, ಇವುಗಳನ್ನು ಹೊರತುಪಡಿಸಿ ಉಳಿದ ಒತ್ತುವರಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.
ಇ)	ಅರಣ್ಯ ಇಲಾಖೆಯವರು ಸದರಿ ರೈತರು ಸಾಗುವಳಿ ಮಾಡುತ್ತಿರುವ ಜಮೀನುಗಳಲ್ಲಿ ಯಾವ ಕಾಯ್ದೆಯಡಿ ಗಿಡಗಳನ್ನು ನೆಡುತ್ತಿದ್ದಾರೆ;	ಕಾನೂನಾತ್ಮಕವಾಗಿ ಅರಣ್ಯವೆಂದು ಅಧಿಸೂಚನೆಯಾಗಿರುವ, ಒತ್ತುವರಿಯಾಗಿರುವ ಅರಣ್ಯ ಪ್ರದೇಶಗಳಲ್ಲಿ ಮೇಲಾಧಿಕಾರಿಗಳಿಂದ ನಿಗದಿಯಾದ ಭೌತಿಕ ಮತ್ತು ಆರ್ಥಿಕ ಗುರಿಯನ್ನು ಆಧರಿಸಿ ಗಿಡಗಳನ್ನು ನೆಡಲಾಗುತ್ತಿದೆ ಹಾಗೂ ಅರಣ್ಯ ಇಲಾಖೆಯ ಸದುದ್ದೇಶವಾದ ಅರಣ್ಯೀಕರಣೆಗಳನ್ನು ಅನುಷ್ಠಾನಗೊಳಿಸುವುದು ಆದ್ಯಕರ್ತವ್ಯವಾಗಿರುವುದರಿಂದ, ಅಂತಹ ಅರಣ್ಯ ಒತ್ತುವರಿ ಪ್ರದೇಶದಲ್ಲಿ ಮಾತ್ರ ಗಿಡಗಳನ್ನು ನೆಡಲಾಗಿರುತ್ತದೆ.

ಈ)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರು ಸಾಗುವಳಿ ಮಾಡುತ್ತಿದ್ದ ಸದರಿ ಜಮೀನುಗಳನ್ನು ಸರ್ಕಾರ ಅವರಿಗೆ ಹಂಚಿಕೆ ಮಾಡಲು ಕೈಗೊಂಡ ಕ್ರಮಗಳೇನು?	ಅನುಸೂಚಿತ ಬುಡಕಟ್ಟುಗಳ ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ, 2006 (2007 ರ 2) ಮತ್ತು ನಿಯಮಗಳು-2008 ಹಾಗೂ 2012 ರ ಪ್ರಕಾರ ಅರ್ಹರಿರುವ ಅರ್ಜಿದಾರರಿಗೆ ಗ್ರಾಮ ಸಭೆ, ಉಪ ವಿಭಾಗ ಮಟ್ಟದ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಮಿತಿಯ ಪರಿಶೀಲನೆ ನಂತರ ಅರ್ಹ ಒತ್ತುವರಿದಾರರಿಗೆ ಸಾಗುವಳಿ ಮಾಡಲು ಅವಕಾಶ ಮಾಡಲಾಗಿರುತ್ತದೆ.

ಸಂಖ್ಯೆ: ಅಪಜೀ 62 ಎಫ್‌ಟಿಎಸ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 580
ಮಾನ್ಯ ಸದಸ್ಯರ ಹೆಸರು	: ಶ್ರೀ. ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸಬೇಕಾದ ದಿನಾಂಕ	: 10-12-2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡುವ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ.
ಆ	ಈ ಪ್ರಾಥಮಿಕ ಆರೋಗ್ಯ ಕೇಂದ ತೆರೆಯಲು ಯಾವ ಮಾನದಂಡ ಅನುಸರಿಸಲಾಗುವುದು; (ವಿವರ ನೀಡುವುದು)	Indian Public Health Standards (IPHS) ಮಾನದಂಡಗಳನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲಾಗುವುದು. ➢ ಬಯಲು ಸೀಮೆಯಲ್ಲಿ 30000 ಜನಸಂಖ್ಯೆಗೊಂದರಂತೆ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಮತ್ತು ಆದಿವಾಸಿ ಪ್ರದೇಶದಲ್ಲಿ ಪ್ರತಿ 20000 ಜನಸಂಖ್ಯೆ ವ್ಯಾಪ್ತಿ ಪ್ರಸ್ತಾವಿಸಿದ ಸ್ಥಳವನ್ನು ಹೊಂದಿರಬೇಕು. ➢ ಪ್ರಸ್ತಾಪಿತ ಸ್ಥಳವು ಈಗ ಹತ್ತಿರವಿರುವ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಕನಿಷ್ಠ 8.ಕಿ.ಮೀ ಅಂತರದಲ್ಲಿ ಇರಬೇಕು. ➢ ಪ್ರಸ್ತಾಪಿತ ಸ್ಥಳದಲ್ಲಿ ಕನಿಷ್ಠ ಸೌಲಭ್ಯಗಳಾದ ಸಾರಿಗೆ, ನೀರು, ವಿದ್ಯುತ್ ಮತ್ತು ಶಿಕ್ಷಣ ಸೌಲಭ್ಯಗಳಿರಬೇಕು.
ಇ	ಪಿರಿಯಾಪಟ್ಟಣ ಮತಕ್ಷೇತ್ರದಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	ಇಲ್ಲ.

ಈ	ಪಿರಿಯಾಪಟ್ಟಣ ಮತಕ್ಷೇತ್ರದ ಪಂಚವಳ್ಳಿ ಗ್ರಾಮ ಹಾಗೂ ಪೊನ್ನಡಹಳ್ಳಿ ಗ್ರಾಮಗಳ ಸುತ್ತಮುತ್ತ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2011ರ ಜನಗಣತಿಅನುಸಾರ ಪಿರಿಯಾಪಟ್ಟಣ ತಾಲ್ಲೂಕಿನ ಜನಸಂಖ್ಯೆಯು;- 226319 ಇದ್ದು, ನಾರ್ಮ್ಸ್ ಪ್ರಕಾರ 11 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶವಿದ್ದು, ಪ್ರಸ್ತುತ 19 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.
ಉ	ಈ ಎರಡು ಗ್ರಾಮಗಳ ಜನರು ಚಿಕಿತ್ಸೆ ಪಡೆಯಲು ದೂರದ ನಗರ ಪ್ರದೇಶಗಳಿಗೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸುಮಾರು ಈ ಎರಡು ಗ್ರಾಮಗಳ ಜನರು ಸುಮಾರು 8 ರಿಂದ 15.ಕಿ.ಮೀ ದೂರ ಪ್ರಯಾಣಿಸಿ ಚಿಕಿತ್ಸೆ ಪಡೆಯುತ್ತಿರುತ್ತಾರೆ.
ಊ	ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಪಂಚವಳ್ಳಿ ಗ್ರಾಮ ಹಾಗೂ ಪೊನ್ನಡಹಳ್ಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮವಹಿಸುವುದೇ?	ಸಧ್ಯಕ್ಕೆ ಯಾವುದೇ ಹೊಸ ಪಿಹೆಚ್‌ಸಿ ಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆಕುಕ 147 ಎಸ್‌ಬಿವಿ 2020.

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ	:581
ಮಾನ್ಯ ಸದಸ್ಯರ ಹೆಸರು	:ಶ್ರೀ ರಾಜಕುಮಾರ್ ಪಾಟೀಲ್ (ಸೇಡಂ)
ಉತ್ತರಿಸಬೇಕಾದ ದಿನಾಂಕ	:10.12.2020
ಉತ್ತರಿಸುವ ಸಚಿವರು	: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಸೇಡಂ ಮತ ಕ್ಷೇತ್ರದಲ್ಲಿ ಕೋವಿಡ್-19 ರಿಂದಾಗಿ ಆಸ್ಪತ್ರೆಗೆ ದಾಖಲಾಗಿರುವವರ ಸಂಖ್ಯೆ ಎಷ್ಟು; ಗುಣಮುಖರಾದವರ ಸಂಖ್ಯೆ ಹಾಗೂ ಮರಣ ಹೊಂದಿರುವವರ ಸಂಖ್ಯೆ ಎಷ್ಟು;	ದಿನಾಂಕ:23.06.2020ರ ಅಧಿಸೂಚನೆ ಸಂಖ್ಯೆ: ಆಕುಕ 228 ACS 2020ರನ್ವಯ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆ ನೀಡಲು ಅವಕಾಶವಿರುತ್ತದೆ. ಈ ಆದೇಶದ ದಿನಾಂಕದಿಂದ ಸೇಡಂ ಮತಕ್ಷೇತ್ರದಲ್ಲಿ ಕೋವಿಡ್-19 ರಿಂದಾಗಿ ಆಸ್ಪತ್ರೆಗೆ ದಾಖಲಾಗಿರುವವರ ಸಂಖ್ಯೆ-100, ಗುಣಮುಖರಾದವರು-74, ಹಾಗೂ ಮರಣ ಹೊಂದಿರುವವರ ಸಂಖ್ಯೆ-4.
ಆ	ಇಲ್ಲಿಯವರೆಗೆ ಸದರಿ ಚಿಕಿತ್ಸೆಗಾಗಿ ಸೇಡಂ ಮತ ಕ್ಷೇತ್ರಕ್ಕೆ ಎಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ:(ವಿವರ ನೀಡುವುದು)	ಇಲ್ಲಿಯವರೆಗೆ ಸದರಿ ಚಿಕಿತ್ಸೆಗಾಗಿ ಸೇಡಂ ಮತಕ್ಷೇತ್ರಕ್ಕೆ ರೂ.4.72 ಲಕ್ಷ ಗಳು ವೆಚ್ಚ ಮಾಡಲಾಗಿದೆ: ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಆಕುಕ 166 ಎಸ್ಎಂಎಂ 2020

(ಡಾ||ಕೆ.ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ

ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

ಕರ್ನಾಟಕ ವಿಧಾನಸಭೆಸಂಖ್ಯೆ581

ಸೇಡಂತಾಲ್ಲೂಕು ಫಲಾನುಭವಿಗಳು ಆಯುಷ್ಮಾನ್ ಭಾರತಆರೋಗ್ಯಕರ್ನಾಟಕಯೋಜನೆಯಡಿಯಲ್ಲಿ ಕೋವಿಡ್–19 ಗಾಗಿ ಈ ಕೆಳಕಂಡ ಆಸ್ಪತೆಗಳಲ್ಲಿ ಚಿಕಿತ್ಸೆಪಡೆದಿದ್ದು ಈ ಕೆಳಕಂಡಂತೆ ಚಿಕಿತ್ಸೆಗಾಗಿ ವೆಚ್ಚ ಭರಿಸಲಾಗಿದೆ.

		Death		Discharged		Total	
Hospital	**City/Location**	**Case**	**Rs.in lakhs**	**Case**	**Rs.in lakhs**	**Case**	**Rs.in lakhs**
BASAVESHWAR TEACHING AND GENERAL HOSPITAL	GULBARGA	1	0.104	5	1.91	6	2.01
BhagwanMahaveer Jain Hospital	Bangalore			1	0.33	1	0.33
District Hospital Kalaburgi	Kalaburgi			11	1.25	11	1.25
NarayanaHrudayalaya Private Limited	Bangalore			1	0.36	1	0.36
SIDDAGANGA HOSPITAL	KALABURAGI			1	0.62	1	0.62
VYDEHI HOSPITAL	Bangalore			1	0.15	1	0.15
Grand Total		**1**	**0.104**	**20**	**4.61**	**21**	**4.72**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 594
ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ
ಉತ್ತರಿಸುವ ದಿನಾಂಕ : 10/12/2020
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸರ್ಕಾರಿ ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳನ್ನು ಹೊಸದಾಗಿ ಮಂಜೂರು ಮಾಡಲಾಗಿದೆಯೇ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)	2018-19, 2019-20 ಮತ್ತು 2020-21ನೇ ಸಾಲುಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಯಾವುದೇ ವಿದ್ಯಾರ್ಥಿ ನಿಲಯ ಮತ್ತು ವಸತಿ ಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ.
ಆ)	ಕಿತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಎಷ್ಟು ವಸತಿ ನಿಲಯ ಮತ್ತು ವಸತಿ ಶಾಲೆಗಳಿವೆ; (ವಿವರ ನೀಡುವುದು)	ಕಿತ್ತೂರು ವಿಧಾನ ಸಭಾ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಟ್ಟು 07 ವಿದ್ಯಾರ್ಥಿ ನಿಲಯಗಳು ಹಾಗೂ 02 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ವಿವರಗಳು ಈ ಕೆಳಕಂಡತಿದೆ. 1. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಮಲ್ಲಾಪೂರಕೆ.ಎನ್ 2. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹೊಸಕೋಟಿ 3. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಮೇಕಲಮರಡಿ 4. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ವನ್ನೂರ 5. ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ನೇಸರಗಿ 6. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಚಿಕ್ಕಬೆಳ್ಳಿಕಟ್ಟಿ ತಾ॥ ಬೈಲಹೊಂಗಲ 7. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಾಸಮರ್ಡಿ ತಾ॥ ಬೈಲಹೊಂಗಲ 1) ಆಶ್ರಮ ಶಾಲೆ ಗಜಮಿನಾಳ ತಾ॥ ಬೈಲಹೊಂಗಲ 2) ಆಶ್ರಮ ಶಾಲೆ ಹೊಸಕೋಟಿ ತಾ॥ ಬೈಲಹೊಂಗಲ
ಇ)	ಇವುಗಳಲ್ಲಿ ಸ್ವಂತ ಕಟ್ಟಡಗಳಿವೆಯೇ; ಇಲ್ಲದಿದ್ದಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಈ ಮೇಲಿನ 07 ವಿದ್ಯಾರ್ಥಿ ನಿಲಯಗಳು ಹಾಗೂ 02 ಆಶ್ರಮ ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ)	ವಸತಿ ನಿಲಯ ಮತ್ತು ವಸತಿ ಶಾಲೆಗಳ ಹೊಸ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲ್ಪಟ್ಟಿದ್ದು ಈ ಕುರಿತು ಸರ್ಕಾರವು ಕೈಗೊಂಡ ಕ್ರಮವೇನು? (ವಿವರ ನೀಡುವುದು)	ವಸತಿ ನಿಲಯ ಮತ್ತು ವಸತಿ ಶಾಲೆಗಳ ಮಂಜೂರಾತಿಗಾಗಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸ್ವೀಕೃತವಾದಲ್ಲಿ ಅನುದಾನ ಲಭ್ಯತೆಯನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು.

ಸಕಇ 470 ಪಕವಿ 2020

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 740

2) ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ)

3) ಉತ್ತರಿಸುವ ದಿನಾಂಕ : 10.12.2020.

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆಯಲ್ಲಿ ಚಿರತೆ, ಕರಡಿ ಸೇರಿದಂತೆ ವಿವಿಧ ಕಾಡು ಪ್ರಾಣಿಗಳು ಗ್ರಾಮಸ್ಥರ ಮೇಲೆ ದಾಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಜಿಲ್ಲೆಯ ಯಾವ ಯಾವ ಭಾಗಗಳಲ್ಲಿ ಈ ಕಾಡು ಪ್ರಾಣಿಗಳನ್ನು ಪತ್ತೆ ಮಾಡಲಾಗಿದೆ;	ಕೊಪ್ಪಳ ಜಿಲ್ಲೆಯ ಕೊಪ್ಪಳ ವಲಯ ವ್ಯಾಪ್ತಿಯ ಮೆತಗಲ್, ಹಿರೇಸೂಳಿಕೇರಿ, ಚಿಕ್ಕಸೂಳಿಕೇರಿ, ಗೌರ್‍ಹಾಳ್, ಚಿಲಕಮುಖಿ, ಹಾಸಗಲ್ ಕುಕನಪಳ್ಳಿ, ಇಟಗಿ, ಗಂಗಾವತಿ ತಾಲ್ಲೂಕಿನ ಆನೆಗುಂದಿ, ಆಗೋಲಿ, ಹಂಪಸದುರ್ಗಾ ಮತ್ತು ಕನಕಗಿರಿ ತಾಲ್ಲೂಕಿನ ರಾಮದುರ್ಗಾ, ಮಾದಿನಾಳ್ ಹಾಗೂ ಕರಡಿಗುಡ್ಡ ಭಾಗಗಳಲ್ಲಿ ಹಾಗೂ ಕುಷ್ಟಗಿ ತಾಲ್ಲೂಕಿನ ತಾವರಗೇರಾ ಶಾಖೆಯಲ್ಲಿ ಚಿರತೆ ಮತ್ತು ಕರಡಿಗಳು ಇರುವುದು ಕಂಡು ಬಂದಿರುತ್ತವೆ.
ಇ)	ಈ ಜಿಲ್ಲೆಯ ಗಂಗಾವತಿ ಕ್ಷೇತ್ರದಲ್ಲಿ ವ್ಯಕ್ತಿಯೊಬ್ಬರು ಪ್ರಾಣಿ ದಾಳಿಯಿಂದ ಮೃತಪಟ್ಟಿದ್ದು, ಇಲಾಖೆಯವರು ಪ್ರಾಣಿಗಳನ್ನು ಸೆರೆಹಿಡಿಯಲು ರೂಪಿಸಿದ ಕಾರ್ಯತಂತ್ರವೇನು;	ಗಂಗಾವತಿ ಕ್ಷೇತ್ರದಲ್ಲಿ ಚಿರತೆ ದಾಳಿಯಿಂದ ಒಬ್ಬ ವ್ಯಕ್ತಿಯು ಮೃತಪಟ್ಟಿರುವುದು ವರದಿಯಾಗಿದ್ದು, ಸದರಿ ಚಿರತೆಯನ್ನು ಸೆರೆಹಿಡಿಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. 1. ಚಿರತೆಯ ಚಲನವಲನ ಗಮನಿಸಲು 8 ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಕ್ಯಾಮರಾ ಟ್ರಾಪ್‌ಗಳನ್ನು ಅಳವಡಿಸಲಾಗಿರುತ್ತದೆ. 2. ಡ್ರೋನ್ ಕ್ಯಾಮರಾ ಸಹಾಯದಿಂದ ಚಿರತೆಯ ಇರುವಿಕೆ ಬಗ್ಗೆ ಖಚಿತಪಡಿಸಿಕೊಳ್ಳಲಾಗಿರುತ್ತದೆ. 3. ಮಾನವ-ಪ್ರಾಣಹಾನಿ ಸಂಭವಿಸಿದ ಪ್ರದೇಶದ ಸುತ್ತಮುತ್ತ 05 ಸ್ಥಳಗಳನ್ನು ಗುರುತಿಸಿ ಬೋನ್‌ಗಳನ್ನು ಇರಿಸಲಾಗಿರುತ್ತದೆ. 4. ಉಪ ವಲಯ ಅರಣ್ಯ ಅಧಿಕಾರಿ ಹಾಗೂ ಅರಣ್ಯ ರಕ್ಷಕರು ಒಳಗೊಂಡ ತಂಡಗಳನ್ನು ರಚಿಸಿ ಹಗಲು-ರಾತ್ರಿ ಗಸ್ತಿನ ಕಾರ್ಯಕ್ಕೆ ನಿಯೋಜಿಸಲಾಗಿರುತ್ತದೆ.
ಈ)	ಇಲಾಖೆಯವರಿಂದ ಇದುವರೆಗೂ ಯಾವುದಾದರೂ ಕಾಡು ಪ್ರಾಣಿಗಳನ್ನು ಸೆರೆಹಿಡಿಯಲಾಗಿದೆಯೇ;	ಕೊಪ್ಪಳ ವಲಯದ ವ್ಯಾಪ್ತಿಯಲ್ಲಿ ದಿನಾಂಕ: 31.10.2019 ರಂದು ಇರಕಲ್‌ಗಢ ಹೋಬಳಿ ವ್ಯಾಪ್ತಿಯಲ್ಲಿ ಹೆಣ್ಣು ಕರಡಿಯು ಸಾರ್ವಜನಿಕರ ಮೇಲೆ ದಾಳಿ ಮಾಡಿದ ಕಾರಣ ಅದನ್ನು ಸೆರೆಹಿಡಿದು ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಿರುಮೃಗಾಲಯ, ಕಮಲಾಪುರ ಇಲ್ಲಿಗೆ ಸ್ಥಳಾಂತರಿಸಲಾಗಿರುತ್ತದೆ. ಗಂಗಾವತಿ ವಲಯ ವ್ಯಾಪ್ತಿಯ ಆನೆಗೊಂದಿಯ ದುರ್ಗಾದೇವಿ ದೇವಸ್ಥಾನದ ಗೋಶಾಲೆ ಬಳಿ ಮಾನವ-ಪ್ರಾಣ ಹಾನಿಗೆ ಕಾರಣವಾಗಿರುವ ಚಿರತೆಯನ್ನು ಸೆರೆಹಿಡಿಯಲು ಇರಿಸಿದ ಬೋನಿನಲ್ಲಿ ದಿನಾಂಕ: 15.10.2020 ರಂದು ಬೆಳಗಿನ ಜಾವ ಹೆಣ್ಣು ಚಿರತೆಯನ್ನು ಸೆರೆಹಿಡಿಯಲಾಗಿದ್ದು, ಸದರಿ ಚಿರತೆಯ ಆರೋಗ್ಯ ತಪಾಸಣೆಯನ್ನು ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಿರುಮೃಗಾಲಯ, ಕಮಲಾಪುರದಲ್ಲಿ ನಡೆಸಿ, ಚಿರತೆಯು ಆರೋಗ್ಯವಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸೂಕ್ತ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗಿರುತ್ತದೆ.

ಕ್ರ.ಸಂ	ಪ್ರಶ್ನೆ	ಉತ್ತರ
ಉ)	ಗ್ರಾಮಸ್ಥರ ಸುರಕ್ಷತೆಗಾಗಿ ಜಿಲ್ಲಾಡಳಿತ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ? (ವಿವರಗಳನ್ನು ನೀಡುವುದು).	ವನ್ಯಪ್ರಾಣಿಗಳ ದಾಳಿಯಿಂದ ಸಾರ್ವಜನಿಕರನ್ನು ರಕ್ಷಿಸಲು ಇಲಾಖೆಯ ವತಿಯಿಂದ ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. 1. ತಹಶೀಲ್ದಾರ್, ಗಂಗಾವತಿ ಇವರು ದಿನಾಂಕ: 06.11.2020 ರಂದು ಆದೇಶ ಹೊರಡಿಸಿ, ಚಿರತೆಯನ್ನು ಸೆರೆಹಿಡಿಯುವವರೆಗೆ ಶ್ರೀ ಆದಿಶಕ್ತಿ ದುರ್ಗಾದೇವಿ ದೇವಸ್ಥಾನಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ, ಯಾವುದೇ ಅಹಿತಕರ ಘಟನೆ ನಡೆಯದಂತೆ ಜಾಗರೂಕತೆಯಿಂದ ನೋಡಿಕೊಳ್ಳಲು ಸೂಚಿಸಿರುತ್ತಾರೆ. 2. ಉಪ ವಿಭಾಗಾಧಿಕಾರಿ ಹಾಗೂ ಉಪ ವಿಭಾಗ ದಂಡಾಧಿಕಾರಿ, ಕೊಪ್ಪಳ ಇವರು ದಿನಾಂಕ: 10.11.2020 ಮತ್ತು 24.11.2020 ರಂದು ಆದೇಶ ಹೊರಡಿಸಿ, ಸಾಣಾಪುರಕೆರೆ, ಪಂಪಾಸರೋವರ, ದುರ್ಗಾದೇವಿ ದೇವಸ್ಥಾನ, ತಿರುಮಲಾಪುರ, ಹನುಮನಹಳ್ಳಿ, ಆನೆಗೊಂದಿ ಸುತ್ತಮುತ್ತಲಿನ ಪ್ರದೇಶ ಮತ್ತು ಅಂಜನಾದ್ರಿ ಬೆಟ್ಟ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಷೇಧಾಜ್ಞೆ ಮತ್ತು ಪ್ರವಾಸಿಗರು, ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ ಆದೇಶಿಸಿರುತ್ತಾರೆ. 3. ಆನೆಗೊಂದಿ, ಚಿಕ್ಕರಾಂಪುರ, ಹನುಮನಹಳ್ಳಿ, ಸಣಾಪುರ, ಜಂಗ್ಲಿ (ರಂಗಾಪುರ) ಗ್ರಾಮಗಳಲ್ಲಿ ರಾತ್ರಿ ಮತ್ತು ಬೆಳಗಿನ ಜಾವ ಜನರು ಸಂಚರಿಸದಂತೆ ಡಂಗೂರವನ್ನು ಸಾರಲಾಗಿದೆ. 4. ಆನೆಗುಂದಿ, ಚಿಕ್ಕರಾಂಪುರ, ಹನುಮನಹಳ್ಳಿ, ಸಣಾಪುರ, ಜಂಗ್ಲಿ (ರಂಗಾಪುರ) ಗ್ರಾಮಗಳಲ್ಲಿ ರಾತ್ರಿ ಮತ್ತು ಹಗಲು ಗಸ್ತುಗಳನ್ನು ನಿರ್ವಹಿಸಲಾಗುತ್ತಿದೆ. 5. ಮಾನ್ಯ ಶಾಸಕರು, ಗಂಗಾವತಿ ಕ್ಷೇತ್ರ ಮತ್ತು ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ, ಕೊಪ್ಪಳ ರವರೊಂದಿಗೆ ಸಾರ್ವಜನಿಕ ಸಭೆಯನ್ನು ನಡೆಸಿ ಮಾಹಿತಿಯನ್ನು ನೀಡಲಾಗಿರುತ್ತದೆ.

ಸಂಖ್ಯೆ: ಅಪಜೀ 213 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ
(15ನೇ ವಿಧಾನಸಭೆ, 8ನೇ ಅಧಿವೇಶನ)

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 756

2) ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ (ಆನೇಕಲ್)

3) ಉತ್ತರಿಸುವ ದಿನಾಂಕ : 10.12.2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಕಾಡುಪ್ರಾಣಿಗಳ ಹಾವಳಿಯಿಂದ ಜೀವ ಕಳೆದುಕೊಂಡವರ ಸಂಖ್ಯೆ ಎಷ್ಟು; (ಪೂರ್ಣ ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ವನ್ಯಪ್ರಾಣಿಗಳ ದಾಳಿಯಿಂದ ಮಾನವ-ಪ್ರಾಣಹಾನಿ ಪ್ರಕರಣಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರಸಂ.	ತಾಲ್ಲೂಕು	ವಿಭಾಗ	ವರ್ಷ	ಪ್ರಕರಣ
1	ಆನೇಕಲ್	ಬೆಂಗಳೂರು ನಗರ	2017-18	-
			2018-19	-
			2019-20	-
2		ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ	2017-18	-
			2018-19	-
			2019-20	1
		ಒಟ್ಟು		1

ಕ್ರಸಂ	ಪ್ರಶ್ನೆ	ಉತ್ತರ
ಆ)	ಕಳೆದ 3 ವರ್ಷಗಳಿಂದ ಕಾಡುಪ್ರಾಣಿಗಳ ಹಾವಳಿಯಿಂದ ಆದ ಬೆಳೆಹಾನಿಯ ಮಾಹಿತಿ ನೀಡುವುದು;	ಆನೇಕಲ್ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆಹಾನಿ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಕ್ರಸಂ	ತಾಲ್ಲೂಕು	ವರ್ಷ	ಪ್ರಕರಣ
1	ಆನೇಕಲ್	2017-18	89
2		2018-19	106
3		2019-20	74
		ಒಟ್ಟು	**269**

ಕ್ರಸಂ	ಪ್ರಶ್ನೆ	ಉತ್ತರ
ಇ)	ಕಾಡುಪ್ರಾಣಿಗಳ ಹಾವಳಿಯಿಂದ ಜೀವ ಕಳೆದುಕೊಂಡವರಿಗೆ ಹಾಗೂ ಬೆಳೆಹಾನಿಯಾದ ರೈತರಿಗೆ ನೀಡಿರುವ ಪರಿಹಾರದ ಪೂರ್ಣ ಮಾಹಿತಿ ನೀಡುವುದು;	ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಹಾಗೂ ಬೆಳೆಹಾನಿಯಾದ ರೈತರಿಗೆ ನೀಡಿರುವ ಪರಿಹಾರದ ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ.ಗಳಲ್ಲಿ)

ಕ್ರಸಂ	ತಾಲ್ಲೂಕು	ವರ್ಷ	ಪ್ರಕರಣ	ಮೊತ್ತ
1	ಆನೇಕಲ್	2017-18	89	3,83,220.00
2		2018-19	106	5,02,035.00
3		2019-20	74	4,04,015.00
		ಒಟ್ಟು	**269**	**12,89,270.00**

ಆನೇಕಲ್ ವನ್ಯಜೀವಿ ವಲಯ ವ್ಯಾಪ್ತಿಯ ನಲ್ಲಯ್ಯನದೊಡ್ಡಿ ಗ್ರಾಮದ ಶ್ರೀ ಸುರೇಶ್ ಬಿನ್ ಲೇಟ್ ರಾಮಪ್ಪ, ಇವರು ದಿನಾಂಕ: 04.03.2020ರಂದು ಕಾಡಾನೆ ದಾಳಿಯಿಂದ ಗಾಯಗೊಂಡಿದ್ದು, ದಿನಾಂಕ: 06.03.2020 ರಂದು ಮೃತಪಟ್ಟಿರುತ್ತಾರೆ.

ಮೃತ ವ್ಯಕ್ತಿಯ ವಾರಸುದಾರರಿಗೆ ನಿಯಮಾನುಸಾರ ರೂ.7.50ಲಕ್ಷಗಳ ದಯಾತ್ಮಕಧನವನ್ನು ಪಾವತಿಸಲಾಗಿರುತ್ತದೆ.

ಈ)	ಆನೇಕಲ್ ತಾಲ್ಲೂಕಿನಲ್ಲಿ ಕಾಡುಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕು ವ್ಯಾಪ್ತಿಯಲ್ಲಿ ವನ್ಯಪ್ರಾಣಿಗಳ ಹಾವಳಿಯನ್ನು ತಡೆಗಟ್ಟಲು ಕಾಡಂಚಿನ ಗ್ರಾಮಗಳಲ್ಲಿ ಆನೆತಡೆ ಕಂದಕ, ಆನೆ ಹಿಮ್ಮೆಟ್ಟಿಸುವ ತಂಡಗಳು, ಸೋಲಾರ್ ತಂತಿಬೇಲಿ, ರೈಲ್ವೆ ಬ್ಯಾರಿಕೇಡ್ ಈ ಕೆಳಕಂಡಂತೆ ನಿರ್ಮಿಸಲಾಗಿದೆ.

ಕ್ರ ಸಂ	ವಲಯ	ಇ.ಪಿ.ಟಿ.	ಸೋಲಾರ್ ತಂತಿ	ರೈಲ್ವೆ ಬ್ಯಾರಿ ಕೇಡ್	ತಡೆ ಗೋಡೆ	ಕಳ್ಳ ಬೇಟೆ ತಡೆ ಶಿಬಿರ	ಎಡಿಸಿ	ಆರ್ ಆರ್ ಟಿ
1.	ಆನೇಕಲ್	31.5 ಕಿ.ಮೀ	21.287 ಕಿ.ಮೀ	2.418 ಕಿ.ಮೀ	6.671 ಕಿ.ಮೀ	2	2	1
2.	ಬನ್ನೇರು ಘಟ್ಟ	19.556 ಕಿ.ಮೀ	31.00 ಕಿ.ಮೀ	13.21 ಕಿ.ಮೀ	14.42 ಕಿ.ಮೀ	4	3	
	ಒಟ್ಟು	**51.056**	**52.287**	**15.628**	**21.091**	**6**	**5**	**1**

ಸಂಖ್ಯೆ: ಅಪಜೀ 214 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	775
2)	ಮಾನ್ಯ ಸದಸ್ಯರ ಹೆಸರು	ಶ್ರೀ ಬಾಲಕೃಷ್ಣ.ಸಿ.ಎನ್., (ಶ್ರವಣಬೆಳಗೊಳ)
3)	ಉತ್ತರಿಸಬೇಕಾದ ದಿನಾಂಕ	10/12/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಉದ್ಯೋಗ ಇಲಾಖೆಯಲ್ಲಿನ ಮಂಜೂರಾದ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಅಥವಾ ಪುನರ್ ವಿನ್ಯಾಸಗೊಳಿಸುವ ಬಗ್ಗೆ ಕೈಗೊಂಡ ಕ್ರಮಗಳೇನು; ಉದ್ಯೋಗ ವಿಭಾಗದ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಪದೋನ್ನತಿ ನೀಡುವಲ್ಲಿ ಅನಗತ್ಯ ವಿಳಂಬವುಂಟಾಗಲು ಕಾರಣವೇನು; ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುವಂತಹ ನೂತನ ಯೋಜನೆಗಳನ್ನು ಜಾರಿಗೆ ತರಲಾಗಿದೆಯೇ; (ವರ್ಷವಾರು ವಿವರ ನೀಡುವುದು)	ಇಲಾಖೆಯ ಉದ್ಯೋಗ ವಿಭಾಗದಲ್ಲಿ ಮಂಜೂರಾದ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಅಥವಾ ಪುನರ್ ವಿನ್ಯಾಸಗೊಳಿಸುವ ಪ್ರಸ್ತಾವನೆ ಪ್ರಗತಿಯಲ್ಲಿರುತ್ತದೆ. ಇಲಾಖೆಯ ಉದ್ಯೋಗ ವಿಭಾಗದಲ್ಲಿ ಈಗಾಗಲೇ ಅಕ್ಟೋಬರ್ 2020ರ ಮಾಹೆಯಲ್ಲಿ 1 ಉಪ ನಿರ್ದೇಶಕರು, ಮಾರ್ಚ್-2020ರ ಮಾಹೆಯಲ್ಲಿ 5 ಸಹಾಯಕ ನಿರ್ದೇಶಕರು, 2020ರ ಅಕ್ಟೋಬರ್ ಮಾಹೆಯಲ್ಲಿ ಉದ್ಯೋಗಾಧಿಕಾರಿ-5, ಸಹಾಯಕ ಉದ್ಯೋಗಾಧಿಕಾರಿ-5, ಪ್ರ.ದ.ಸ.-5, ಹಿರಿಯ ಬೆರಳಚ್ಚುಗಾರರು-1 ಮತ್ತು ದಫೇದಾರ್-1 ಒಟ್ಟು 23 ಅಧಿಕಾರಿ/ಸಿಬ್ಬಂದಿಗಳಿಗೆ ಮುಂಬಡ್ತಿಯನ್ನು ನೀಡಲಾಗಿದೆ. ಇಲಾಖೆಯ ಉದ್ಯೋಗ ವಿಭಾಗದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಅನುಕೂಲವಾಗುವಂತಹ ಜಾರಿಗೆ ಬಂದಿರುವ ಯೋಜನೆಗಳು ಈ ಕೆಳಕಂಡಂತಿದೆ:- 1) <u>**ಸ್ಟಡಿ ಸರ್ಕಲ್**</u> :- ಸರ್ಕಾರಿ ವಲಯದ ಎಲ್ಲಾ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ನೇಮಕಾತಿ ಆಗುತ್ತಿರುವ ಹಿನ್ನೆಲೆಯಲ್ಲಿ, ರಾಜ್ಯ ಎಲ್ಲಾ ಉದ್ಯೋಗ ವಿನಿಮಯ ಕಚೇರಿಗಳಲ್ಲಿ 2005-06 ರಿಂದ ಸ್ಟಡಿ ಸರ್ಕಲ್ ಮೂಲಕ ಉಚಿತ ಪರೀಕ್ಷಾಪೂರ್ವ ತರಬೇತಿ ಕಾಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 2) <u>**ಉದ್ಯೋಗ ಮೇಳ:-**</u> ಸ್ಥಳೀಯವಾಗಿ ಲಭ್ಯವಿರುವ ಕೈಗಾರಿಕೆಗಳಿಗೆ ಭೇಟಿ ನೀಡಿ ಅಲ್ಲಿ ಲಭ್ಯವಿರುವ ಉದ್ಯೋಗ ಅವಕಾಶಗಳ ಮಾಹಿತಿ ಪಡೆದುಕೊಂಡು ಮಿನಿ ಉದ್ಯೋಗ ಮೇಳಗಳನ್ನು ಏರ್ಪಡಿಸುವ ಮೂಲಕ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ನೆರವನ್ನು ನೀಡಲಾಗುತ್ತಿದೆ. 3) <u>**ಮಾದರಿ ವೃತ್ತಿ ಕೇಂದ್ರ- (Model Career Centre):-**</u> 2018-19 ನೇ ಸಾಲಿನಲ್ಲಿ ಮೈಸೂರು, ಹಾಸನ, ಕಲಬುರಗಿ ಮತ್ತು ಹುಬ್ಬಳ್ಳಿ ಉದ್ಯೋಗ ವಿನಿಮಯ ಕಚೇರಿಗಳನ್ನು ಮಾದರಿ ವೃತ್ತಿ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. ಹಾಗೂ 2020-21ನೇ ಸಾಲಿನಲ್ಲಿ ದಾವಣಗೆರೆ, ಕೋಲಾರ, ತುಮಕೂರು, ಬಳ್ಳಾರಿ ಮತ್ತು ಮಂಗಳೂರು ಉದ್ಯೋಗ ವಿನಿಮಯ ಕಚೇರಿಗಳನ್ನು ಮಾದರಿ ವೃತ್ತಿ ಕೇಂದ್ರಗಳಾಗಿ ಪರಿವರ್ತಿಸಲು ಕ್ರಮವಹಿಸಲಾಗುತ್ತಿದೆ. 4) <u>**YES:- (Youth Employbility Services)**</u> 2018-19 ನೇ ಸಾಲಿನಲ್ಲಿ - ರಾಜ್ಯದ ಎಲ್ಲಾ 29 ಉದ್ಯೋಗ ವಿನಿಮಯ ಕಚೇರಿಗಳಲ್ಲಿ YES ಯೋಜನೆಯ ಅಡಿಯಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ವೃತ್ತಿ ಮಾರ್ಗದರ್ಶನ, ಸಮಾಲೋಚನೆ, ಅಲ್ಪಾವಧಿ ಕೌಶಲ್ಯ ತರಬೇತಿ ನೀಡಲಾಗುತ್ತಿತ್ತು. ಈ ಯೋಜನೆ 2019ರ ಡಿಸೆಂಬರ್‌ಗೆ ಅಂತ್ಯವಾಗಿದ್ದು 2020-21ನೇ ಸಾಲಿನಲ್ಲಿ ಯೋಜನೆ ಮುಂದುವರೆಸಲಾಗಿದೆ.

--2

ಆ)	ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ, ನೇಮಕಾತಿ ಪರೀಕ್ಷೆಗಳಿಗೆ ತರಬೇತಿ ಕೌಶಲಾಭಿವೃದ್ಧಿ, ನೇಮಕಾತಿ ಚಟುವಟಿಕೆ ಹಾಗೂ ಇತರೆ ಉದ್ಯೋಗಾರ್ಹತೆ ಹೆಚ್ಚಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸದರಿ ಕ್ಷೇತ್ರದಲ್ಲಿ ಪರಿಣಿತಿ ಹಾಗೂ ಅನುಭವ ಹೊಂದಿರುವ ಉದ್ಯೋಗ ವಿಭಾಗದ ಜಂಟಿ / ಉಪ ನಿರ್ದೇಶಕರುಗಳನ್ನು ಈ ಇಲಾಖೆಗಳಿಗೆ ನಿಯೋಜಿಸುವುದು ಸೂಕ್ತವಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಕಾಲೇಜು ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ, ನೇಮಕಾತಿ ಪರೀಕ್ಷೆಗಳಿಗೆ ಉಚಿತ ತರಬೇತಿ ಹಾಗೂ ಇತರೆ ಉದ್ಯೋಗಾರ್ಹತೆ ಹೆಚ್ಚಿಸುವ ಕಾರ್ಯಕ್ರಮಗಳ ಮಾಹಿತಿ ನೀಡಲು ಈಗಾಗಲೇ ರಾಜ್ಯದ 6 ವಿಶ್ವವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರಗಳನ್ನು ತೆರೆದು, ಮಾರ್ಗದರ್ಶನ ನೀಡಲು ಇಲಾಖೆಯ ಸಹಾಯಕ ನಿರ್ದೇಶಕರು (ಗ್ರೂಪ್–ಎ) ವೃಂದದ ಅಧಿಕಾರಿಗಳನ್ನು ಈ ಕಾರ್ಯಗಳ ಉಸ್ತುವಾರಿಯನ್ನು ಸಂಬಂಧಿತ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ನೋಡಿಕೊಳ್ಳುವ ಏರ್ಪಾಡು ಮಾಡಲಾಗಿದೆ.
ಇ)	ಉದ್ಯೋಗ ಇಲಾಖೆಯಲ್ಲಿ ಖಾಲಿಯಿರುವ ಗ್ರೂಪ್–'ಬಿ' ಗ್ರೂಪ್–'ಸಿ' ಹಾಗೂ 'ಡಿ' ವೃಂದದ ಹುದ್ದೆಗಳ ಭರ್ತಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಇಲಾಖೆಯ ಉದ್ಯೋಗ ವಿಭಾಗದಲ್ಲಿ ಈಗಾಗಲೇ ನೇರ ನೇಮಕಾತಿ ಅಡಿಯಲ್ಲಿ 5 ಉದ್ಯೋಗಾದಿಕಾರಿ ಹುದ್ದೆಗಳನ್ನು ಸೆಪ್ಟೆಂಬರ್–2020ರ ಮಾಹೆಯಲ್ಲಿ ಹಾಗೂ ಅನುಕಂಪದ ಆಧಾರ ಪ್ರ.ದ.ಸ.–1 ಹುದ್ದೆಯನ್ನು ಅಕ್ಟೋಬರ್–2020ರ ಮಾಹೆಯಲ್ಲಿ ನೇರ ನೇಮಕಾತಿ ಮೂಲಕ ಭರ್ತಿಮಾಡಲಾಗಿದೆ. ಉದ್ಯೋಗಾಧಿಕಾರಿ–5, ಸಹಾಯಕ ಉದ್ಯೋಗಾಧಿಕಾರಿ–5, ಪ್ರ.ದ.ಸ.–5, ಹಿರಿಯ ಬೆರಳಚ್ಚುಗಾರರು–1 ಮತ್ತು ದಫೇದಾರ್–1 ಒಟ್ಟು 23 ಅಧಿಕಾರಿ /ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲಾಗಿದೆ. ನೇರ ನೇಮಕಾತಿಗೊಳಪಡುವ ವಿವಿಧ ವೃಂದಗಳಡಿ ರಿಕ್ತವಿರುವ 40 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ.
ಈ)	ಉದ್ಯೋಗ ವಿನಿಮಯ ಕೇಂದ್ರಗಳನ್ನು ಉದ್ಯೋಗ ವಿನಿಮಯ ಹಾಗೂ ಕೌಶಲ್ಯಾಭಿವೃದ್ಧಿ ಕೇಂದ್ರಗಳಾಗಿ ಪರಿವರ್ತಿಸುವ ಆಲೋಚನೆ ಸರ್ಕಾರದ ಮುಂದಿದೆಯೇ; ಆಗಿದ್ದರೆ ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಸಿಡಾಕ್, ರಾಷ್ಟ್ರೀಯ ಜೀವನೋಪಾಯ ಮಿಷನ್ ಇವುಗಳನ್ನು ಪೈಲಟ್ ಯೋಜನೆಯಂತೆ ಜಿಲ್ಲೆಗಳಲ್ಲಿ ನಿರ್ವಹಿಸುವ ಕರ್ತವ್ಯಗಳನ್ನು 6 ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಮುಖಾಂತರ ವ್ಯವಹರಿಸಲು ಹಾಗೂ ಈ ಇಲಾಖೆಗಳು ಒಂದೇ ಸೂರಿನಡಿ ತಂದು ಇಲಾಖೆಯ ಪ್ರಗತಿ ಹಾಗೂ ಕಾರ್ಯವೈಖರಿಯ ಗುಣಮಟ್ಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.

ಸಂಖ್ಯೆ: ಕೌಉಜೀಇ 69 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	776
ಮಾನ್ಯ ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)
ಉತ್ತರಿಸಬೇಕಾದ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯ ಅರಸೀಕೆರೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆ, ಗಂಡಸಿ ಸಮುದಾಯ ಆಸ್ಪತ್ರೆ, ಚನ್ನರಾಯಪಟ್ಟಣ ತಾಲ್ಲೂಕಿನ ಸಾತೇನಹಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಸನ ತಾಲ್ಲೂಕಿನ ಹೊನ್ನಾವರ ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಕ್ಕಕಡಲೂರು ಪ್ರಾಥಮಿಕ ಆರೋಗ್ಯ ಕೇಂದ್ರ, ಬಸವಾಘಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಹೊಳೆನರಸೀಪುರ ತಾ. ಪಡವಲಹಿಪ್ಪೆ ಸಮುದಾಯ ಆಸ್ಪತ್ರೆಗಳ ಅಭಿವೃದ್ಧಿ ಮತ್ತು ವಿಸ್ತರಣೆ ಕಾಮಗಾರಿಗಳನ್ನು 2019-20ನೇ ಸಾಲಿನಲ್ಲಿ ನಬಾರ್ಡ್ ಆರ್.ಐ.ಡಿ.ಎಫ್. 25 ಯೋಜನೆಯಡಿಯಲ್ಲಿ ಕೈಗೊಳ್ಳಲು ಅಗತ್ಯವಿರುವ ಯೋಜನಾವರದಿಯನ್ನು ಅಂದಾಜುಪಟ್ಟಿಯೊಂದಿಗೆ ನಬಾರ್ಡ್ ಸಂಸ್ಥೆಗೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2019-20ನೇ ಸಾಲಿನ ನಬಾರ್ಡ್ RIDF-25ರ ಯೋಜನೆಯಡಿ, ಹಾಸನ ಜಿಲ್ಲೆಯ (1) ಅರಸೀಕೆರೆ ತಾಲ್ಲೂಕಿನ ಗಂಡಸಿ ಸಮುದಾಯ ಆರೋಗ್ಯ ಕೇಂದ್ರ (2) ಚನ್ನರಾಯಪಟ್ಟಣ ತಾಲ್ಲೂಕಿನ ಸಾತೇನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ (3) ಹಾಸನ ತಾಲ್ಲೂಕಿನ ಹೊನ್ನಾವರ ಪ್ರಾಥಮಿಕ ಆರೋಗ್ಯ ಕೇಂದ್ರ (4) ಹಾಸನ ತಾಲ್ಲೂಕಿನ ಚಿಕ್ಕಕಡಲೂರು ಪ್ರಾಥಮಿಕ ಆರೋಗ್ಯ ಕೇಂದ್ರ (5) ಹಾಸನ ತಾಲ್ಲೂಕಿನ ಬಸವಾಘಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು (6) ಹೊಳೇನರಸೀಪುರ ತಾಲ್ಲೂಕು ಪಡುವಲಹಿಪ್ಪೆ ಸಮುದಾಯ ಕೇಂದ್ರ ಆಸ್ಪತ್ರೆಗಳ ಅಭಿವೃದ್ಧಿ ಮತ್ತು ವಿಸ್ತರಣೆ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ದಿನಾಂಕ: 06.11.2019 ಮತ್ತು 12.11.2019 ರಂದು ನಬಾರ್ಡ್ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಆದರೆ, ನಬಾರ್ಡ್ RIDF -25ರ ಯೋಜನೆಯಡಿ ಆರೋಗ್ಯ ಮತ್ತು ಕುಟುಂಬ ಇಲಾಖೆಗೆ ಯಾವುದೇ ಹೊಸ ಕಾಮಗಾರಿಗಳು ಮಂಜೂರು ಆಗಿರುವುದಿಲ್ಲ.
ಆ)	ಈ ಮೇಲ್ಕಂಡ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿ ಮತ್ತು ವಿಸ್ತರಣಾ ಕಾಮಗಾರಿಗಳು ತುರ್ತು ಕಾಮಗಾರಿಗಳಾಗಿದ್ದು, ಈ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಕಾಮಗಾರಿಗಳಿಗೆ ಮಂಜೂರಾತಿ ನೀಡುವಲ್ಲಿ ಅನಗತ್ಯ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಈ ಮೇಲ್ಕಂಡ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿ ಮತ್ತು ವಿಸ್ತರಣಾ ಕಾಮಗಾರಿಗಳಿಗೆ ಎಷ್ಟು ದಿನದಲ್ಲಿ ಮಂಜೂರಾತಿ ನೀಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	NABARD ನಿಂದ ಅನುಮೋದನೆ ದೊರೆತ ಕೂಡಲೇ ಕ್ರಮವಹಿಸಲಾಗುವುದು.

ಈ)	ಹಾಸನ ತಾಲ್ಲೂಕು ದುದ್ದ ಸಮುದಾಯ ಆಸ್ಪತ್ರೆಯ ದುರಸ್ಥಿ ಮತ್ತು ನವೀಕರಣ, ಮೊಸಳೆಹೊಸಳ್ಳಿ ಸಮುದಾಯ ಆಸ್ಪತ್ರೆಯ ದುರಸ್ತಿ ಮತ್ತು ನವೀಕರಣ, ಚನ್ನರಾಯಪಟ್ಟಣ ತಾ. ದಂಡಿಗನಹಳ್ಳಿ ಹೋಬಳಿ ಉದಯಪರ ಸಮುದಾಯ ಆಸ್ಪತ್ರೆ ದುರಸ್ಥಿ ಮತ್ತು ನವೀಕರಣ ಹಾಗೂ ಹೊಳೆನರಸೀಪುರ ತಾ. ಪಡುವಲಹಿಪ್ಪೆ ಸಮುದಾಯ ಆಸ್ಪತ್ರೆಯ ದುರಸ್ಥಿ ಮತ್ತು ನವೀಕರಣ ಕಾಮಗಾರಿಗಳನ್ನು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ, ಹಾಸನ ವೃತ್ತದ ದರಸೂಚಿಯನ್ವಯ ಒಟ್ಟು ರೂ.220.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಪ್ರಸ್ತಾವನೆಗೆ ಪ್ರಸಕ್ತ ಸಾಲಿನಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಈಗಾಗಲೇ ಕ್ರಿಯಾ ಯೋಜನೆಯು ಅನುಮೋದನೆಯಾಗಿದ್ದು, ಕಾಮಗಾರಿಗಳ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರುರವರಿಗೆ ದಿನಾಂಕ:24.12.2019ರಲ್ಲಿ ಸಲ್ಲಿಸಿರುವುದು ನಿಜವೇ;	ಹೌದು. ಹಾಸನ ತಾಲ್ಲೂಕು ದುದ್ದ ಸಮುದಾಯ ಆಸ್ಪತ್ರೆಯ ದುರಸ್ಥಿ ಮತ್ತು ನವೀಕರಣ, ಮೊಸಳೆಹೊಸಳ್ಳಿ ಸಮುದಾಯ ಆಸ್ಪತ್ರೆಯ ದುರಸ್ತಿ ಕಾಮಗಾರಿಗಳನ್ನು 2020-21ನೇ ಸಾಲಿನ ಲೆಕ್ಕ ಶೀರ್ಷಿಕೆ: 2210-01-110-1-21 (ಕಟ್ಟಡ ನಿರ್ವಹಣೆ) ಅಡಿಯಲ್ಲಿ ಹೊಸ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ. ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಇಲಾಖೆಯು ಯಾವುದೇ ಹೊಸ ಕಾಮಗಾರಿಗಳಿಗೆ ಅನುದಾನ ನೀಡದೇ ಇರುವುದರಿಂದ, ಅವಶ್ಯಕತೆ ಹಾಗೂ ಅನುದಾನದ ಲಭ್ಯತೆ ಮೇರೆಗೆ ಮುಂಬರುವ ಸಾಲಿನಲ್ಲಿ ಈ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು.
ಉ)	ಹಾಗಿದ್ದಲ್ಲಿ, ಹಾಸನ ತಾಲ್ಲೂಕು ದುದ್ದ ಸಮುದಾಯ ಆಸ್ಪತ್ರೆಯ ಮೊಸಳೆಹೊಸಹಳ್ಳಿ ಸಮುದಾಯ ಆಸ್ಪತ್ರೆಯ ದುರಸ್ತಿ ಮತ್ತು ನವೀಕರಣ, ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ ಉದಯಪುರ ಸಮುದಾಯ ಆಸ್ಪತ್ರೆಯ ದುರಸ್ತಿ ಮತ್ತು ನವೀಕರಣ ಹಾಗೂ ಹೊಳೆನರಸೀಪುರ ತಾಲ್ಲೂಕು ಪಡುವಲಹಿಪ್ಪೆ ಸಮುದಾಯ ಆಸ್ಪತ್ರೆಯ ದುರಸ್ಥಿ ಮತ್ತು ನವೀಕರಣ ಕಾಮಗಾರಿಗಳಿಗಾಗಿ ರೂ.220.00 ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	

ಆಕುಕ 146 ಎಸ್.ಎಂ.ಎಂ. 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 777
ಸದಸ್ಯರ ಹೆಸರು : ಶ್ರೀ/ಶ್ರೀಮತಿ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 10.12.2020
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಒಟ್ಟು ಎಷ್ಟು ಕರ್ನಾಟಕ ಪಬ್ಲಿಕ್ ಶಾಲೆಗಳಿವೆ; (ವಿಧಾನ ಸಭಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 276 ಕರ್ನಾಟಕ ಪಬ್ಲಿಕ್ ಶಾಲೆಗಳಿವೆ. ವಿಧಾನಸಭಾವಾರು ಶಾಲೆಗಳ ಪಟ್ಟಿ ಲಗತ್ತಿಸಿದೆ. (ಅನುಬಂಧ-1)
ಆ)	ಗ್ರಾಮೀಣ ಪ್ರದೇಶಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಹೆಚ್ಚು ಬೇಡಿಕೆ ಇದ್ದು, ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; (ಸಂಪೂರ್ಣ ಮಾಹಿತಿ ನೀಡುವುದು)	2019-20ರ ಆಯವ್ಯಯದಲ್ಲಿ ಮುಂದಿನ ನಾಲ್ಕು ವರ್ಷಗಳಲ್ಲಿ ಒಂದು ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೋಬಳಿ ಕೇಂದ್ರಸ್ಥಾನಗಳಲ್ಲಿ ಸ್ಥಾಪಿಸಲು ಘೋಷಿಸಲಾಗಿದೆ. ಈಗಾಗಲೇ 2018-19ನೇ ಸಾಲಿನಲ್ಲಿ 176 ಮತ್ತು 2019-20ನೇ ಸಾಲಿನಲ್ಲಿ 100, ಒಟ್ಟು 276 ಕೆ.ಪಿ.ಎಸ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಉಳಿದ ಕೆ.ಪಿ.ಎಸ್ ಶಾಲೆಗಳನ್ನು ಹಂತಹಂತವಾಗಿ ಪ್ರಾರಂಭಿಸಲು ಕ್ರಮವಹಿಸಿದೆ.
ಇ)	ರಾಜ್ಯದ ಎಲ್ಲಾ ತಾಲೂಕಿನಲ್ಲಿ ತಲಾ 10 ಪಬ್ಲಿಕ್ ಶಾಲೆಗಳನ್ನು ತೆರೆಯುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಪ್ರಸ್ತುತ ಪ್ರಥಮ ಆದ್ಯತೆಯಲ್ಲಿ ಎಲ್ಲಾ ಹೋಬಳಿ ಕೇಂದ್ರ ಸ್ಥಾನಗಳಲ್ಲಿ ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ.
ಈ)	ಹಾಸನ ಜಿಲ್ಲೆಯಲ್ಲಿ ಹೊಸದಾಗಿ 10 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲು ತೀರ್ಮಾನಿಸಲಾಗಿದ್ದು, ಪ್ರಸ್ತುತ ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ?	ಸರ್ಕಾರದ ಆದೇಶ ಸಂಖ್ಯೆ:ಇಪಿ 34 ಯೋಸಕ 2019, ದಿನಾಂಕ:17.07.2019ರಂತೆ ಹಾಸನ ಜಿಲ್ಲೆಯಲ್ಲಿ ಹೊಸದಾಗಿ 08 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯಲು ತೀರ್ಮಾನಿಸಲಾಗಿತ್ತು. ಆದರೆ ದಿನಾಂಕ:30.06.2020ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ, ಕರ್ನಾಟಕ ಪಬ್ಲಿಕ್ ಶಾಲೆಗಳು ಮತ್ತು ಇನ್ನಿತರ ಶೈಕ್ಷಣಿಕ ವಿಚಾರಗಳ ಕುರಿತು ನಡೆದ ಸಭೆಯ ನಿರ್ಣಯದಂತೆ ಪ್ರಸಕ್ತ 2020-21ನೇ ಸಾಲಿನಲ್ಲಿ ಕೋವಿಡ್-19 ವಿಷಮ ಪರಿಸ್ಥಿತಿಯಲ್ಲಿ

		ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದು, ಹೆಚ್ಚುವರಿ ಅನುದಾನವನ್ನು ಆರ್ಥಿಕ ಇಲಾಖೆಯು ನೀಡಲು ಆರ್ಥಿಕ ನಿರ್ಬಂಧನೆ ಇರುತ್ತದೆ. ಆದುದರಿಂದ ಪ್ರಸಕ್ತ ಸಾಲಿಗೆ ಹೊಸದಾಗಿ ಯಾವುದೇ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸದಿರುವ ಬಗ್ಗೆ ಸಭೆಯಲ್ಲಿ ನಿರ್ಣಯಿಸಲಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಹೊಸ ಕೆ.ಪಿ.ಎಸ್ ಶಾಲೆಗಳನ್ನು ಪ್ರಸಕ್ತ ಸಾಲಿನಲ್ಲಿ ತೆರೆದಿರುವುದಿಲ್ಲ.

ಇಪಿ: 232 ಯೋಸಕ 2020

(ಎಸ್.ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 784
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಎ. (ಮಾಗಡಿ)
ಉತ್ತರಿಸಬೇಕಾದ ದಿನಾಂಕ : 10.12.2020
ಉತ್ತರಿಸುವವರು : ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರೈತರು ತಮ್ಮ ಜಮೀನುಗಳಲ್ಲಿ ಬೆಳೆದಿರುವ ಶ್ರೀಗಂಧದ ಮರಗಳನ್ನು ಕಳ್ಳರು ಕಡಿದು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಎಷ್ಟು ಪ್ರಕರಣಗಳು ದಾಖಲಾಗಿದೆ; ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯನ್ನು ವಿಧಿಸಲಾಗಿದೆ;	ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಶ್ರೀಗಂಧ ಮರಗಳ ಕಡಿತಲೆ ಮತ್ತು ಸಾಗಾಣಿಕೆಗೆ ಸಂಬಂಧಿಸಿದಂತೆ 371 ಪ್ರಕರಣಗಳು ದಾಖಲಾಗಿವೆ. 6 ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಶಿಕ್ಷೆಯನ್ನು ವಿಧಿಸಲಾಗಿದೆ.
ಇ)	ಶ್ರೀಗಂಧ ಬೆಳೆಯುತ್ತಿರುವ ರೈತರು ತಮ್ಮ ಸುರಕ್ಷತೆಗಾಗಿ ಸರ್ಕಾರದಿಂದ ಬಂದೂಕುಗಳನ್ನು ಇಟ್ಟುಕೊಳ್ಳಲು ಪರವಾನಿಗಿ ಪಡೆಯಲು ಅವಕಾಶವನ್ನು ನೀಡಲಾಗಿದೆಯೇ;	ಶ್ರೀಗಂಧ ಬೆಳೆಯುತ್ತಿರುವ ರೈತರು ತಮ್ಮ ಸುರಕ್ಷತೆಗಾಗಿ ಸರ್ಕಾರದಿಂದ ಬಂದೂಕುಗಳನ್ನು ಇಟ್ಟುಕೊಳ್ಳಲು ನಿಯಮಾನುಸಾರ ಜಿಲ್ಲಾಧಿಕಾರಿಗಳಿಂದ ಪರವಾನಗಿ ಪಡೆಯಲು ಕಾನೂನಿನಡಿ ಅವಕಾಶ ಕಲ್ಪಿಸಲಾಗಿದೆ.
ಈ	ಅರಣ್ಯ ಪ್ರದೇಶ ಹಾಗೂ ರೈತರ ಜಮೀನುಗಳಲ್ಲಿ ಬೆಳೆದಿರುವ ಶ್ರೀಗಂಧದ ಮರವನ್ನು ಅಕ್ರಮವಾಗಿ ಕಡಿದು ಸಾಗಾಣಿಕೆ ಮಾಡುತ್ತಿರುವ ವಾಹನಗಳನ್ನು ಜಪ್ತಿ ಮಾಡಿ ಅವುಗಳನ್ನು ಪುನಃ ಮಾಲೀಕರಿಗೆ ದಂಡವನ್ನು ಕಟ್ಟಿಸಿ ವಾಪಸ್ಸು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶ್ರೀಗಂಧದ ಮರವನ್ನು ಅಕ್ರಮವಾಗಿ ಕಡಿದು ಸಾಗಾಣಿಕೆ ಮಾಡಿದ ಪ್ರಕರಣಗಳಲ್ಲಿ ಜಪ್ತಿ ಮಾಡಿದ ವಾಹನವನ್ನು ಕರ್ನಾಟಕ ಅರಣ್ಯ ಕಾಯ್ದೆ, 1963ರ ಸೆಕ್ಷನ್ 71(ಎ) ರನ್ವಯ ಪ್ರಕರಣ ದಾಖಲಿಸಿ, ಮಾನ್ಯ ನ್ಯಾಯಾಲಯದ ಆದೇಶವಿದ್ದಲ್ಲಿ, ನ್ಯಾಯಾಲಯವು ನಿಗದಿಪಡಿಸಿದ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಪಡೆದು ವಾಹನವನ್ನು ಬಿಡುಗಡೆ ಮಾಡಲಾಗುತ್ತದೆ. ಆರೋಪ ಸಾಬೀತಾದ ಪ್ರಕರಣಗಳಲ್ಲಿ ಜಪ್ತಿ ಮಾಡಿದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.
ಉ)	ಅಕ್ರಮವಾಗಿ ಶ್ರೀಗಂಧ ಕಳ್ಳ ಸಾಗಾಣಿಕೆ ಮಾಡುತ್ತಿರುವ ಮಾಫೀಯಾಗಳನ್ನು ಮಟ್ಟ ಹಾಕಲು ಇದುವರೆವಿಗೂ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು)	ಅಕ್ರಮವಾಗಿ ಶ್ರೀಗಂಧ ಕಳ್ಳ ಸಾಗಾಣಿಕೆ ಮಾಡುತ್ತಿರುವ ಮಾಫೀಯಾಗಳನ್ನು ಮಟ್ಟ ಹಾಕಲು ಇದುವರೆವಿಗೂ ತೆಗೆದುಕೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿದೆ: 1. ಅರಣ್ಯ ಪ್ರದೇಶದಲ್ಲಿರುವ ಶ್ರೀಗಂಧ ಮರಗಳ ಸಂರಕ್ಷಣೆಗಾಗಿ ರಾತ್ರಿ ಗಸ್ತು ಕಾರ್ಯ ಕೈಗೊಳ್ಳಲಾಗುತ್ತಿದೆ ಮತ್ತು ಶ್ರೀಗಂಧ ಮತ್ತಿತರೆ ಮರಗಳ್ಳರ ಬಗ್ಗೆ ನಿಗಾವಹಿಸಿ ಇವರುಗಳ ಚಲನವಲನವನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 2. ಕೆಲವೊಂದು ವಿಭಾಗಗಳಲ್ಲಿ ಶ್ರೀಗಂಧ ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚಲು ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ವಿಶೇಷ ತನಿಖಾ ತಂಡ ರಚಿಸಿ ಅರಣ್ಯ ಮತ್ತು ಪೋಲೀಸ್ ತಂಡಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿವೆ.

		3. ಅಕ್ರಮವಾಗಿ ಶ್ರೀಗಂಧ ಕಳ್ಳ ಸಾಗಾಣಿಕೆ ಮಾಡುತ್ತಿರುವ ಮಾಫೀಯಾಗಳನ್ನು ಮಟ್ಟ ಹಾಕಲು ವೃತ್ತ ವ್ಯಾಪ್ತಿಯ ಎಲ್ಲಾ ವಿಭಾಗಗಳಲ್ಲಿ ಕಳ್ಳಬೇಟೆ ನಿಗ್ರಹ ಶಿಬಿರಗಳನ್ನು ನಿರ್ಮಿಸಲಾಗಿದೆ ಹಾಗೂ ಶ್ರೀಗಂಧ ನೆಡುತೋಪುಗಳನ್ನು ರಕ್ಷಿಸಲು ಕ್ಷೇತ್ರ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳು ನಿರಂತರವಾಗಿ ರಾತ್ರಿ ಹಗಲು ಗಸ್ತು ಸಂಚಾರ ಮಾಡುತ್ತಾರೆ. 4. ಶ್ರೀಗಂಧ ಮರಗಳ ಕಳ್ಳತನವನ್ನು ತಡೆಗಟ್ಟಲು ಆಯಾಕಟ್ಟಿನ ಸ್ಥಳಗಳಲ್ಲಿ ಅರಣ್ಯಜಾಗೃತ ದಳದ ತಂಡವು ಸಹ ಕಾರ್ಯ ನಿರ್ವಹಿಸುತ್ತದೆ ಹಾಗೂ ಅರಣ್ಯ ತನಿಖಾ ಠಾಣೆಗಳನ್ನು ಆಯೋಜಿಸಲಾಗಿದೆ. 5. ಶ್ರೀಗಂಧ ಮರಗಳ ಸಂರಕ್ಷಣೆಗಾಗಿ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸಲಾಗಿದೆ. 6. ಶ್ರೀಗಂಧ ಮರಗಳು ಹೆಚ್ಚು ಇರುವ ಕೆಲವು ಅರಣ್ಯ ಪ್ರದೇಶಗಳಲ್ಲಿ ರಕ್ಷಣೆಗಾಗಿ ಚೈನ್ ಲಿಂಕ್ ಮೆಷ್ ಬೇಲಿಗಳನ್ನು ಸಹ ನಿರ್ಮಾಣ ಮಾಡಲಾಗಿದೆ. 7. ಶ್ರೀಗಂಧ ಮರಗಳನ್ನು ಅಕ್ರಮವಾಗಿ ಕಡಿದು ಮಾರಾಟ ಮತ್ತು ಸಾಗಾಣಿಕೆ ಮಾಡುವ ಕಾಡುಗಳ್ಳರ ವಿರುದ್ಧ ಅರಣ್ಯ ಮೊಕದ್ದಮೆಗಳನ್ನು ದಾಖಲಿಸಿ ಕಾನೂನು ರೀತಿ ಅವರಿಗೆ ನ್ಯಾಯಾಲಯದ ಮೂಲಕ ಸೂಕ್ತ ಶಿಕ್ಷೆಯಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 49 ಎಫ್‌ಡಿಪಿ 2020

(ಆನಂದ್ ಸಿಂಗ್)

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕರ್ನಾಟಕ ವಿಧಾನ ಸಭೆ

1	ಮಾನ್ಯ ಸದಸ್ಯರ ಹೆಸರು	: ಶ್ರೀ ನಾಗೇಂದ್ರ ಎಲ್. (ಚಾಮರಾಜ)
2	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 795
3	ಉತ್ತರಿಸಬೇಕಾದ ದಿನಾಂಕ	: 10-12-2020
4	ಉತ್ತರಿಸಬೇಕಾದವರು	: ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಮೈಸೂರು ನಗರದಲ್ಲಿ ಲೋಕಾರ್ಪಣೆಯಾಗಿರುವ ಇ.ಎಸ್.ಐ. ಆಸ್ಪತ್ರೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವತಿಯಿಂದ ಪ್ರತ್ಯೇಕವಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ವಿವರ ಒದಗಿಸುವುದು)	ಮೈಸೂರು ನಗರದಲ್ಲಿ ಲೋಕಾರ್ಪಣೆಯಾಗಿರುವ ಇ.ಎಸ್.ಐ. ಆಸ್ಪತ್ರೆಯ ನವೀಕರಣಕ್ಕಾಗಿ ಕಾರಾವಿ. ನಿಗಮದ ವತಿಯಿಂದ ರೂ-34.25 ಕೋಟಿ ಬಿಡುಗಡೆ ಮಾಡಲಾಗಿದೆ. ರಾಜ್ಯ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ.
(ಆ)	ಪ್ರಸ್ತುತ ಆಸ್ಪತ್ರೆಯಲ್ಲಿ ಎಲ್ಲಾ ತರಹದ ರೋಗಿಗಳಿಗೆ ಚಿಕಿತ್ಸೆ ಲಭ್ಯವಾಗುತ್ತಿದೆಯೇ;	ಪ್ರಸ್ತುತ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ, ಪ್ರಾಥಮಿಕ ಹಾಗೂ ಸೆಕೆಂಡರಿ ಕೇರ್ ಚಿಕಿತ್ಸೆಗಳನ್ನು ವಿಮಾರೋಗಿಗಳಿಗೆ ಒದಗಿಸಲಾಗುತ್ತಿದೆ. ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಚಿಕಿತ್ಸೆಯನ್ನು ಹೊಂದಾಣಿಕೆ ಮಾಡಿಕೊಂಡ 04 ಸೂಪರ್ ಸ್ಪೆಷಾಲಿಟಿ ಮತ್ತು 09 ಸೆಕೆಂಡರಿ ಕೇರ್ ಖಾಸಗಿ ಆಸ್ಪತ್ರೆಗಳ ಮುಖಾಂತರ ನೀಡಲಾಗುತ್ತಿದೆ.
(ಇ)	ಆಸ್ಪತ್ರೆಯಲ್ಲಿ ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು;	ಔಷಧಿಗಳ ಸರಬರಾಜು ಸಮರ್ಪಕವಾಗಿರುತ್ತದೆ.
(ಈ)	ಇ.ಎಸ್.ಐ. ಆಸ್ಪತ್ರೆಯಲ್ಲಿ ಡಯಾಲಿಸೀಸ್ ಕೇಂದ್ರ ಲಭ್ಯವಿದೆಯೇ; ಇದ್ದಲ್ಲಿ, ಒಂದು ಬಾರಿ ಡಯಾಲಿಸೀಸ್ ಮಾಡಲು ಎಷ್ಟು ಶುಲ್ಕ ವಿಧಿಸಲಾಗಿದೆ; ಡಯಾಲಿಸೀಸ್ ರೋಗಿಗಳ ಡಯಾಲೈಸರ್ ಗಳನ್ನು ತರಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸದರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಚಿಕಿತ್ಸೆ ಲಭ್ಯವಿರುವುದಿಲ್ಲ. ಕಾರಾವಿ. ನಿಗಮದಿಂದ ಒಡಂಬಡಿಕೆ ಮಾಡಿಕೊಳ್ಳಲಾಗಿರುವ ಸೂಪರ್ ಸ್ಪೆಷಾಲಿಟಿ ಖಾಸಗಿ ಆಸ್ಪತ್ರೆಗಳ ಮೂಲಕ ವಿಮಾರೋಗಿಗಳಿಗೆ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

.....2

<table>
<tr>
<td>(ಉ)</td>
<td>ಸದರಿ ಆಸ್ಪತ್ರೆಯಲ್ಲಿ ಒಟ್ಟು ರೋಗಿಗಳಿಗೆ ಅನುಗುಣವಾಗಿ ಎಷ್ಟು ವೈದ್ಯರು, ನರ್ಸ್‌ಗಳು ಮತ್ತು ತಾಂತ್ರಿಕ ತಜ್ಞರಿದ್ದಾರೆ; (ವಿವರ ಒದಗಿಸುವುದು)</td>
<td>ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಅನುಗುಣವಾಗಿ ವೈದ್ಯರು, ನರ್ಸ್‌ಗಳು ಮತ್ತು ತಾಂತ್ರಿಕ ತಜ್ಞರ ಕೊರತೆ ಇರುತ್ತದೆ. ವೃಂದಾವಾರು ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ.</th><th>ವೃಂದ</th><th>ಮಂಜೂರಾತಿ</th><th>ಕಾರ್ಯ ನಿರ್ವಹಣೆ</th><th>ಖಾಲಿ</th></tr>
<tr><td>1</td><td>ವೈದ್ಯರು</td><td>41</td><td>31</td><td>10</td></tr>
<tr><td>2</td><td>ಶುಶ್ರೂಷಕ ಅಧೀಕ್ಷಕರು ದರ್ಜೆ-1</td><td>01</td><td>00</td><td>01</td></tr>
<tr><td>3</td><td>ಶುಶ್ರೂಷಕ ಅಧೀಕ್ಷಕರು ದರ್ಜೆ-2</td><td>04</td><td>03</td><td>01</td></tr>
<tr><td>4</td><td>ಶುಶ್ರೂಷಕರು</td><td>38</td><td>22</td><td>16</td></tr>
<tr><td>5</td><td>ಎ. ಎನ್. ಎಂ.</td><td>01</td><td>00</td><td>01</td></tr>
<tr><td>6</td><td>ತಾಂತ್ರಿಕ ತಜ್ಞರು</td><td>10</td><td>06</td><td>04</td></tr>
</table>
ಪ್ರಸ್ತುತ ಸಿಬ್ಬಂದಿಗಳ ಕೊರತೆ ನಿವಾರಿಸಲು ಗುತ್ತಿಗೆ ಆಧಾರದ ಮೇಲೆ ವೈದ್ಯರು 02, ಶುಶ್ರೂಷಕರು – 02 ಮತ್ತು ತಾಂತ್ರಿಕ ತಜ್ಞರು – 02 ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ.</td>
</tr>
<tr>
<td>(ಊ)</td>
<td>ಕೇಂದ್ರ ಸರ್ಕಾರದ ನೌಕರರಿಗೆ ಹಾಗೂ ರಾಜ್ಯ ಸರ್ಕಾರದ ನೌಕರರಿಗೆ ಚಿಕಿತ್ಸೆಯಲ್ಲಿ ತಾರತಮ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಆ ದಿಸೆಯಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?</td>
<td>ಇಲಾಖೆಯು ವಿಮಾದಾರರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ಮಾತ್ರ ಪೂರ್ಣ ಪ್ರಮಾಣದ ವೈದ್ಯಕೀಯ ಸೌಲಭ್ಯ ವಿಸ್ತರಿಸಲಾಗುತ್ತಿದೆ.
ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು ಕಾರಾವಿ.'ಯೋಜನೆಯ ವ್ಯಾಪ್ತಿಗೆ ಒಳಪಡುವುದಿಲ್ಲ.</td>
</tr>
</table>

LD-LSI/217/2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	816
ಮಾನ್ಯ ಸದಸ್ಯರ ಹೆಸರು	:	ಶ್ರೀ ಸುಬ್ಬಾರೆಡ್ಡಿ ಎಸ್.ಎನ್ (ಬಾಗೇಪಲ್ಲಿ)
ಉತ್ತರಿಸುವ ದಿನಾಂಕ:	:	10.12.2020
ಉತ್ತರಿಸುವ ಸಚಿವರು	:	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ನಡೆಯುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; ಅಲ್ಲಿ ಯಾವ ಯಾವ ಕೋರ್ಸ್‌ಗಳ ವ್ಯಾಸಂಗ ನಡೆಸಲಾಗುತ್ತಿದೆ ;	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಂದು ಸರ್ಕಾರಿ ಪಾಲಿಟೆಕ್ನಿಕ್ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾಲೇಜಿನಲ್ಲಿ ಪ್ರಸ್ತುತ 4 ಕೋರ್ಸ್‌ಗಳನ್ನು ನಡೆಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ. (1) ಆಟೋಮೊಬೈಲ್ ಇಂಜಿನಿಯರಿಂಗ್ (2) ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ (3) ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ (4) ಮೆಕ್ಯಾನಿಕಲ್ ಇಂಜಿನಿಯರಿಂಗ್
ಆ	ಈ ಕಾಲೇಜಿಗೆ ಕಾಲೇಜು ಮೇಲುಸ್ತುವಾರಿ ಸಮಿತಿಯ ರಚನೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ರಚಿಸಲಾಗಿದೆ ಸಮಿತಿಯ ಅಧ್ಯಕ್ಷರು ಯಾರು?	ತಾಂತ್ರಿಕ ಶಿಕ್ಷಣ ಇಲಾಖೆಯಡಿ ಬರುವ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾಂಶುಪಾಲರ ಮೇಲುಸ್ತುವಾರಿಯಲ್ಲಿ ನಡೆಸಲಾಗುತ್ತಿದೆ.
ಇ	ಕಳೆದ 03 ವರ್ಷಗಳಲ್ಲಿ ಎಲ್ಲಾ ಯೋಜನೆಗಳಡಿಯಲ್ಲಿ ಕಾಲೇಜ್‌ಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಯಾವುದಕ್ಕಾಗಿ ವೆಚ್ಚ ಮಾಡಲಾಗಿದೆ ; (ವಿವರ ನೀಡುವುದು)	ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿಗೆ ಕಳೆದ 03 ವರ್ಷಗಳಲ್ಲಿ ಬಿಡುಗಡೆ ಮಾಡಲಾದ ಅನುದಾನ ವಿವರ ಇಂತಿದೆ. (ರೂ. ಲಕ್ಷಗಳಲ್ಲಿ)

ವರ್ಷ	ವೇತನ		ಅರೆಕಾಲಿಕ ಉಪನ್ಯಾಸಕರ ಭತ್ಯೆ, ಕಛೇರಿ ವೆಚ್ಚ, ವಿದ್ಯುತ್-ನೀರು-ದೂರವಾಣಿ ವೆಚ್ಚಗಳಿಗೆ		ಯಂತ್ರೋಪಕರ ಣಖರೀದಿಗಾಗಿ		ಒಟ್ಟು	
	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ
2020-21	270.00	270.00	3.90	2.52	--	--	273.9	272.52
2019-20	324.00	324.00	6.90	6.56	9.81	9.81	340.71	340.37
2018-19	288.00	288.00	11.07	8.94	--	--	299.07	296.94

ಈ	ಹಣ ವೆಚ್ಚ ಮಾಡಲು ಪ್ರಾಂಶುಪಾಲರಿಗೆ ಅಧಿಕಾರ ನೀಡಲಾಗಿದೆಯೇ ; ಹಣ ವೆಚ್ಚ ಮಾಡಲು ಯಾರ ಅನುಮತಿಯ ಅವಶ್ಯಕತೆ ಇರುತ್ತದೆ? (ವಿವರ ನೀಡುವುದು)	ಆರ್ಥಿಕ ಇಲಾಖೆಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಸಂಸ್ಥೆಗೆ ಬಿಡುಗಡೆ ಮಾಡಲಾದ ಅನುದಾನದಲ್ಲಿ ನಿಯಮಾನುಸಾರ ವೆಚ್ಚ ಭರಿಸಲು ಪ್ರಾಂಶುಪಾಲರುಗಳಿಗೆ ಅಧಿಕಾರವಿದೆ. ಪ್ರಾಂಶುಪಾಲರ ಆರ್ಥಿಕ ಅಧಿಕಾರಕ್ಕಿಂತ ಹೆಚ್ಚಿನ ಅನುದಾನ ವೆಚ್ಚ ಮಾಡಲು ಇಲಾಖಾ ಮುಖ್ಯಸ್ಥರ ಅನುಮತಿ ಅವಶ್ಯವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಆಇ 03 ಟಿಎಫ್‌ಪಿ 2018, ಬೆಂಗಳೂರು, ದಿನಾಂಕ 14.05.2018 ರಲ್ಲಿ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಇಡಿ 138 ಟಿಪಿಇ 2020

(ಡಾ. ಅಶ್ವಥ್ ನಾರಾಯಣ ಸಿ.ಎನ್)
ಉಪಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 828

ಮಾನ್ಯ ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)

ಉತ್ತರಿಸಬೇಕಾದ ದಿನಾಂಕ : 10–12–2020

ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	2019ನೇ ಸಾಲಿನಲ್ಲಿ ಬೆಳಗಾವಿ ದಕ್ಷಿಣ ಮತಕ್ಷೇತ್ರದ ರೂಪದಲ್ಲಿ ಎಬಿಎಆರ್‌ಕೆ ಯೋಜನೆಗಳನ್ನು ಮಾಡಲಾಗಿದೆಯೇ; ಹಾಗಿದ್ದಲ್ಲಿ, ಎಲ್ಲೆಲ್ಲಿ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಮಾಡಲಾಗಿದೆ; (ವಿವರ ನೀಡುವುದು)	ಅಕ್ಟೋಬರ್ 2018 ರಿಂದ ಸಂಯೋಜಿತ ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯು ರಾಜ್ಯದಾದ್ಯಂತ ಜಾರಿಯಲ್ಲಿದ್ದು, ಬೆಳಗಾವಿ ದಕ್ಷಿಣ ಮತ ಕ್ಷೇತ್ರದಲ್ಲಿಯೂ ಕೂಡ ಯೋಜನೆ ಜಾರಿಯಲ್ಲಿದೆ.
ಆ	ಕಾರ್ಡುಗಳ ವಿವರಗಳನ್ನು ನೀಡುವುದು ಆಯುಕ್ತರ ಕಾರ್ಯವ್ಯಾಪ್ತಿಗೆ ಬರುತ್ತಿದ್ದರೂ ಕೂಡಾ ಸಮರ್ಪಕವಾಗಿ ಸಾಸ್ಟ್ ಸಂಸ್ಥೆಗೆ ಪತ್ರ ಬರೆಯುತ್ತ ಕಾಲಹರಣ ಮಾಡಿ ವ್ಯವಹರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು;	ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿ ಆಯಾಯ ಜಿಲ್ಲೆಯಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳಾದ ಜಿಲ್ಲಾ ಕುಷ್ಠರೋಗ ನಿವಾರಣಾ ಅಧಿಕಾರಿಗಳದ್ದಾಗಿರುತ್ತದೆ.
ಇ	ಕಾರ್ಡುಗಳನ್ನು ಮಾಡಿಸಿಕೊಂಡಿರುವ ಸುಮಾರು 5500 ರಷ್ಟು ಫಲಾನುಭವಿಗಳ ವಿವರಗಳನ್ನು ಎನ್‌ಐಸಿ ದಿಂದ ಪಡೆದು ಕಾರ್ಡುಗಳ ಹಂಚಿಕೆಗೆ ಕ್ರಮಕೈಗೊಳ್ಳಲು 10 ರಿಂದ 15 ಪತ್ರಗಳ ಮೂಲಕ ವಿನಂತಿಸಿದರೂ ಯಾರೂ ಈ ಕುರಿತು ಕ್ರಮ ಕೈಗೊಳ್ಳದಿರಲು ಕಾರಣವೇನು; ಕಾರ್ಡುಗಳ ಹಂಚಿಕೆಗೆ ವಿನಂತಿಸಿದ ಗಣ್ಯರು ಯಾರು;	ಕಾರ್ಡ್‌ಗಳ ಹಂಚಿಕೆಗಾಗಿ ಬೆಳಗಾವಿ ದಕ್ಷಿಣ ಮತಕ್ಷೇತ್ರದ ಗೌರವಾನ್ವಿತ ಶಾಸಕರು ವಿನಂತಿಸಿರುತ್ತಾರೆ. ವಿತರಣೆಯಾಗಬೇಕಾದ ಕಾರ್ಡ್‌ಗಳ ಸಂಖ್ಯೆ ಒಟ್ಟು 38,792 ಆಗಿರುತ್ತದೆ. ಗೌರವಾನ್ವಿತ ಶಾಸಕರ ಮನವಿಗೆ ಸ್ಪಂದಿಸಿ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ದಿನಾಂಕ:26.08.2020 ರಂದು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರಿಂದ ಅರೆ ಸರ್ಕಾರಿ ಪತ್ರ ಕಳುಹಿಸಲಾಗಿರುತ್ತದೆ ಮತ್ತು ಅದರಲ್ಲಿ ಫಲಾನುಭವಿಗಳಿಗೆ ತುರ್ತಾಗಿ ಕಾರ್ಡ್ ವಿತರಿಸಲು ಕೋರಲಾಗಿರುತ್ತದೆ.

ಈ	ಫಲಾನುಭವಿಗಳಿಗೆ ಈವರೆಗೆ ಕಾರ್ಡುಗಳನ್ನು ಹಂಚಿಕೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವಾಗ ಹಂಚಿಕೆ ಮಾಡಲಾಗುವುದು; ಇಲಾಖೆಯ ಅಧಿಕಾರಿಗಳ ನಿರ್ಲಕ್ಷತೆಯಿಂದ ಇಂತಹ ಮಹತ್ವದ ಯೋಜನೆಗಳು ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹವರ ಮೇಲೆ ಕ್ರಮ ಕೈಗೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ?	ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ಹಂಚಿಕೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ತ್ವರಿತಗತಿಯಲ್ಲಿ ಕಾರ್ಡ್‌ಗಳ ವಿತರಣೆ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಮತ್ತು ಅನುಸರಣೆ ಮಾಡಲಾಗುತ್ತಿದೆ.

ಆಕುಕ 139 ಎಸ್‌ಬಿವಿ 2020.

(ಡಾ|| ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ		830
ಸದಸ್ಯರ ಹೆಸರು		ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ),
ಉತ್ತರಿಸಬೇಕಾದ ದಿನಾಂಕ		10.12.2020
ಉತ್ತರಿಸಬೇಕಾದ ಸಚಿವರು		ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
	ಪ್ರಶ್ನೆ	ಉತ್ತರ
(ಅ)	ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜು 2006ರಲ್ಲಿ ಪ್ರಾರಂಭವಾಗಿ ಇಂದು ಸುಸಜ್ಜಿತ ಕಟ್ಟಡದೊಂದಿಗೆ ಗೃಹವಿಜ್ಞಾನ, ಬಿ.ಕಾಂ., ಮತ್ತು ಎಂ.ಕಾಂ., ಕೋರ್ಸುಗಳನ್ನು ಹೊಂದಿದ್ದು, ಗ್ರಾಮೀಣ ಪ್ರದೇಶದ ಸುಮಾರು 300ಕ್ಕೂ ಅಧಿಕ ಗ್ರಾಮೀಣ ಪ್ರದೇಶ ವಿದ್ಯಾರ್ಥಿನಿಯರು ಅಧ್ಯಯನ ಮಾಡುತ್ತಿರುವುದು ನಿಜವೇ;	ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜಿನಲ್ಲಿ 2020-21ನೇ ಸಾಲಿನಲ್ಲಿ ಇಲಾಖೆಯ ಇಎಂಐಎಸ್‌ನಲ್ಲಿರುವಂತೆ ಒಟ್ಟು 159 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ.
(ಆ)	ಈ ಕಾಲೇಜು ಈಗಾಗಲೇ ನ್ಯಾಕ್ ಪ್ರಕ್ರಿಯೆಯ ಮೊದಲ ಮೌಲ್ಯಮಾಪನಕ್ಕೆ ಒಳಗಾಗಿದ್ದು 'ಸಿ' ಗ್ರೇಡ್‌ಗಳಿಸಿ ಕಾಲೇಜು ಶಿಕ್ಷಣ ಇಲಾಖೆಗೆ ಹೆಚ್ಚಿನ ಗೌರವ ತಂದಿದ್ದು, ಈಗಾಗಲೇ ಕಾಲೇಜಿನ ವಿವಿಧ ವಿಭಾಗಗಳು ರಾಷ್ಟ್ರ, ರಾಜ್ಯ, ವಿಶ್ವವಿದ್ಯಾನಿಲಯ ಮಟ್ಟದ ವಿಚಾರಣಾ ಸಂಕೀರಣಗಳನ್ನು ಆಯೋಜನೆ ಮಾಡುವ ಮೂಲಕ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಉತ್ತಮ ಹೆಸರನ್ನು ಗಳಿಸಿ ಕಾಲೇಜು ಶಿಕ್ಷಣ ಇಲಾಖೆಗೆ ಗೌರವ ತಂದಿದ್ದು, ಪ್ರಸ್ತುತ ಎಂ.ಎಸ್.ಸಿ.(ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್), ಎಂ.ಎಸ್.ಸಿ. (ಮನಃಶಾಸ್ತ್ರ) ವಿಭಾಗಗಳಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿನಿಯರು ಹೆಚ್ಚಿನ ಆಸಕ್ತಿ ಹೊಂದಿ ಪ್ರವೇಶಾತಿ ಹೊಂದಲು ಬಯಸುತ್ತಿರುವುದರಿಂದ ಸದರಿ ಕಾಲೇಜಿನಲ್ಲಿ ಎಂ.ಎಸ್.ಸಿ. (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಎಂ.ಎಸ್.ಸಿ. (ಮನಃಶಾಸ್ತ್ರ) ವಿಭಾಗಗಳಲ್ಲಿ 2020-21ನೇ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹೊಳೆನರಸೀಪುರ ಇಲ್ಲಿ ಹೊಸ ಕೋರ್ಸುಗಳಾದ ಎಂ.ಎಸ್ಸಿ (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್), ಎಂ.ಎಸ್ಸಿ (ಮನಃಶಾಸ್ತ್ರ) ಪ್ರಾರಂಭಿಸಲು ಹಾಗೂ ಎಂ.ಕಾಂ ಸ್ನಾತಕೋತ್ತರ ವಿಭಾಗದಲ್ಲಿ ಹಾಲಿ ಇರುವ 30 ವಿದ್ಯಾರ್ಥಿಗಳ ಪ್ರವೇಶಾತಿಯನ್ನು 60ಕ್ಕೆ ಹೆಚ್ಚಿಸಲು ಮಂಜೂರು ನೀಡುವಂತೆ ಕೋರಿರುತ್ತಾರೆ. ಸರ್ಕಾರಿ ಆದೇಶ ಸಂಖ್ಯೆ: ಇಡಿ/34/ಇಜಿಒವಿ/2020(ಭಾಗ-2), ದಿನಾಂಕ:22-6-2020 ರಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಿಗೆ 2019-20ನೇ ಸಾಲಿನಲ್ಲಿ ಸಂಯೋಜನಾ ಪ್ರಕ್ರಿಯೆ ಕೈಗೊಂಡು 2020-21ನೇ ಸಾಲಿನ Opening New Colleges, Extension of existing Affiliation, Continuation of Affiliation, Permanent Affiliation, Change/Addition of Subject, Division of Faculty, Increase of intake, change of name, Closure & withdrawal of a College, Local Inquiry committee formation and Transfer of Management ಮುಂತಾದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ಆನ್ ಲೈನ್ ತಂತ್ರಾಂಶದ ಮುಖಾಂತರವೇ ಅರ್ಜಿಗಳನ್ನು ಆಹ್ವಾನಿಸಲು ಹಾಗೂ ಭರ್ತಿ ಮಾಡಿರುವ ಅರ್ಜಿಗಳಲ್ಲಿ ಅಳವಡಿಸಿರುವ ಮಾಹಿತಿಗಳನ್ನು ವಿಶ್ವವಿದ್ಯಾಲಯವು ನೇಮಿಸುವ ಸ್ಥಳೀಯ ವಿಚಾರಣಾ ಸಮಿತಿಯು ಪರಾಮರ್ಶಿಸಿ, ಶಿಫಾರಸ್ಸನ್ನು ಆನ್ ಲೈನ್ ಮುಖಾಂತರವೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕ್ರಮವಹಿಸುವಂತೆ ಆದೇಶಿಸಲಾಗಿದೆ.
ಇ)	ಅಲ್ಲದೇ, ಸದರಿ ಕಾಲೇಜಿನಲ್ಲಿ ಎಂ.ಕಾಂ. ವಿಭಾಗದಲ್ಲಿ 30 ಸೀಟುಗಳು	ಈ ಹಿನ್ನೆಲೆಯಲ್ಲಿ ಸದರಿ ಕಾಲೇಜಿನಲ್ಲಿ ಹೊಸದಾಗಿ

	ಮಂಜೂರಾಗಿದ್ದು, ಎಂ.ಕಾಂ., ವಿಭಾಗಕ್ಕೆ ಪ್ರವೇಶಾತಿ ಹೊಂದಲು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಉತ್ಸುಕರಾಗಿರುವುದರಿಂದ 30 ಸೀಟುಗಳ ಜೊತೆಗೆ ಹೆಚ್ಚುವರಿಯಾಗಿ 60 ಸೀಟುಗಳನ್ನು ಮಂಜೂರು ಮಾಡಲು ಈಗಾಗಲೇ ಕುಲಸಚಿವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಾರಂಭಿಸಲಿರುವ ಎಂ.ಎಸ್ಸಿ (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಎಂ.ಎಸ್ಸಿ (ಮನಃಶಾಸ್ತ್ರ) ಹಾಗೂ ಎಂ.ಕಾಂ ಸ್ನಾತಕೋತ್ತರ ವಿಭಾಗದಲ್ಲಿ ಹಾಲಿ ಇರುವ 30 ವಿದ್ಯಾರ್ಥಿಗಳ ಪ್ರವೇಶಾತಿಯನ್ನು 60ಕ್ಕೆ ಹೆಚ್ಚಿಸಲು ಆನ್‌ಲೈನ್ ತಂತ್ರಾಂಶದ ಮುಖಾಂತರ ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವಂತೆ ಸದರಿ ಕಾಲೇಜಿನ ಪ್ರಾಂಶುಪಾಲರಿಗೆ ಪತ್ರದ ಮೂಲಕ ಸೂಚಿಸಲಾಗಿದೆ.
ಈ)	ಗ್ರಾಮೀಣ ಪ್ರದೇಶದ ಬಡಕುಟುಂಬದ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಹಾಸನ ಜಿಲ್ಲೆ ಹೊಳೆನರಸೀಪುರ ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜಿಗೆ ಹೊಸದಾಗಿ ಎಂ.ಎಸ್.ಸಿ. (ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್), ಎಂ.ಎಸ್.ಸಿ. (ಮನಃಶಾಸ್ತ್ರ) ವಿಭಾಗಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಲು ಹಾಗೂ ಸದರಿ ಕಾಲೇಜಿನಲ್ಲಿ ಪ್ರಸ್ತುತ ಎಂ.ಕಾಂ. ವಿಭಾಗದಲ್ಲಿ 30 ಸೀಟುಗಳು ಮಂಜೂರಾಗಿದ್ದು, ಹೆಚ್ಚುವರಿಯಾಗಿ 60 ಸೀಟುಗಳನ್ನು 2020-21ನೇ ಶೈಕ್ಷಣಿಕ ಸಾಲಿನಿಂದ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜು, ಹೊಳೆನರಸೀಪುರ ಇಲ್ಲಿ ಹೊಸದಾಗಿ ಎಂ.ಎಸ್.ಸಿ(ಫುಡ್ ಸೈನ್ಸ್ ಅಂಡ್ ನ್ಯೂಟ್ರಿಷನ್ಸ್) ಎಂ.ಎಸ್.ಸಿ (ಮನಃಶಾಸ್ತ್ರ) ವಿಭಾಗಗಳನ್ನು 2020-21ನೇ ಸಾಲಿನಿಂದ ಪ್ರಾರಂಭಿಸಲು ಹಾಗೂ ಎಂ.ಕಾಂ ವಿಭಾಗದಲ್ಲಿ ಪ್ರಸ್ತುತ ಇರುವ 30 ಸೀಟುಗಳಿಗೆ ಹೆಚ್ಚುವರಿಯಾಗಿ 60 ಸೀಟುಗಳಿಗೆ ಹೆಚ್ಚಿಸಲು ಸರ್ಕಾರದ ಆದೇಶ ಸಂಖ್ಯೆ:ಇಡಿ/34/ಇಜಿಓವಿ/2020 ಭಾಗ-2, ದಿನಾಂಕ:22-6-2020ರ ಆದೇಶದಂತೆ ಆನ್ ಲೈನ್ ತಂತ್ರಾಂಶದ ಮುಖಾಂತರ ವಿಶ್ವವಿದ್ಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಈ ಸಂಬಂಧ, ಸದರಿ ಕೋರ್ಸುಗಳನ್ನು ಪ್ರಾರಂಭಿಸುವುದು ಹಾಗೂ ಎಂ.ಕಾಂ ಹೆಚ್ಚುವರಿ ಸೀಟುಗಳನ್ನು ಮಂಜೂರು ಮಾಡಲು ವಿಶ್ವವಿದ್ಯಾಲಯದ ಸಂಯೋಜನೆಯ ಮಾರ್ಗಸೂಚಿಯಂತೆ ಕ್ರಮವಹಿಸಲಾಗುವುದು.
ಉ)	ಹೊಳೆನರಸೀಪುರ ಟೌನ್ ಸರ್ಕಾರಿ ಮಹಿಳಾ ಗೃಹವಿಜ್ಞಾನ ಕಾಲೇಜಿನಲ್ಲಿ ಖಾಲಿ ಇರುವ ಗ್ರೂಪ್ 'ಡಿ' ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಆಯುಕ್ತರ ಪತ್ರ ಸಂಖ್ಯೆ: 168/ಹೋಹುಅ/2019-20/ನೇ.ವಿ-1/ ಬೆಂಗಳೂರು, ದಿನಾಂಕ: 04.02.2020ರಲ್ಲಿ ಅನುಮತಿ ನೀಡಿರುವುದು ನಿಜವೇ; ಹಾಗಿದ್ದಲ್ಲಿ, ಹೊರಗುತ್ತಿಗೆಯವರ ಕನಿಷ್ಠ ವೇತನ ಪಾವತಿಸಲು ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಹೊಳೆನರಸೀಪುರ ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜಿನಲ್ಲಿ ಖಾಲಿ ಇರುವ ಗ್ರೂಪ್-ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಆಯುಕ್ತಾಲಯದ ಅಧಿಕೃತ ಜ್ಞಾಪನ ಸಂಖ್ಯೆ:ಕಾಶಿಇ/168/ ಹೊಗುಆ/2019-20/ನೇವಿ-1, ದಿನಾಂಕ:04.02.2020 ರಲ್ಲಿ ಅನುಮತಿ ನೀಡಿರುವುದಿಲ್ಲ.

ಇಡಿ 225 ಡಿಸಿಇ 2020

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

ಕರ್ನಾಟಕ ವಿಧಾನಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	837
2)	ಮಾನ್ಯ ಸದಸ್ಯರ ಹೆಸರು	ಶ್ರೀ ಲಿಂಗೇಶ.ಕೆ.ಎಸ್. (ಬೇಲೂರು)
3)	ಉತ್ತರಿಸಬೇಕಾದ ದಿನಾಂಕ	10/12/2020
4)	ಉತ್ತರಿಸುವವರು	ಉಪ ಮುಖ್ಯಮಂತ್ರಿಗಳು ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯಗಳು ಯುವಶಕ್ತಿಯನ್ನೇ ಮುಖ್ಯವಾಗಿ ಒಳಗೊಂಡಿರುವುದರಿಂದ, ಇದರ ಬಗ್ಗೆ ಸಾರ್ವಜನಿಕ ವಲಯದಲ್ಲಿರುವ ನಂಬಿಕೆ ಹಾಗೂ ವಿಶ್ವಾಸವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಸಾರ್ವಜನಿಕ ವಲಯದಲ್ಲಿನ ನೇಮಕಾತಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡುತ್ತಿದ್ದು ಈ ಸಂಬಂಧ ನೇಮಕಾತಿ ಪರೀಕ್ಷೆ ತೆಗೆದುಕೊಂಡಿರುವ/ ತೆಗೆದುಕೊಳ್ಳಬಯಸುವ ಅಭ್ಯರ್ಥಿಗಳಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿನ ಸ್ಟಡಿ ಸರ್ಕಲ್ಸ್ ಕಾರ್ಯಕ್ರಮದ ಮೂಲಕ ಉಚಿತ ಪರೀಕ್ಷಾಪೂರ್ವ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಅದೇ ರೀತಿ ಉದ್ಯೋಗ ಮೇಳಗಳನ್ನು ಆಯೋಜಿಸಿ ಉದ್ಯೋಗಾಕಾಂಕ್ಷಿಗಳನ್ನು ಮತ್ತು ನಿಯೋಜಕರನ್ನು ಒಂದೇ ವೇದಿಕೆಗೆ ತರುವ ಮೂಲಕ ಉದ್ಯೋಗ ನೆರವು ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಅನುದಾನದೊಂದಿಗೆ ಆಯ್ದ ಒಟ್ಟು 9 ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳನ್ನು ಮಾದರಿ ವೃತ್ತಿ ಕೇಂದ್ರಗಳಾಗಿ ಪರಿವರ್ತಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇದರಿಂದ ಉದ್ಯೋಗ ವಿನಿಮಯ ಕಚೇರಿಗಳ ಮೂಲಭೂತ ಸೌಲಭ್ಯಗಳ ಒದಗಿಸುವಿಕೆ ಮತ್ತು ಮೇಳಗಳನ್ನು ಆಯೋಜಿಸಲು ಸೂಕ್ತ ಕ್ರಮ ವಹಿಸಲಾಗುತ್ತಿದೆ.
ಆ)	ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ನೀಡುವ ಸಂಸ್ಥೆಗಳನ್ನು ಒಂದೆಡೆ ತರುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು? ಇಲಾಖೆಯ ತರಬೇತಿ ವಿಭಾಗದ ಕಾರ್ಯಚಟುವಟಿಕೆಗಳು ಸಂಪೂರ್ಣವಾಗಿ ತಾಂತ್ರಿಕ ಶಿಕ್ಷಣ ನೀಡುವುದೇ ಆಗಿರುವುದರಿಂದ ಈ ವಿಭಾಗವನ್ನು ತಾಂತ್ರಿಕ ಶಿಕ್ಷಣ ಇಲಾಖೆಯೊಂದಿಗೆ ವಿಲೀನಗೊಳಿಸುವುದು ಸೂಕ್ತವಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು.?	ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಇ)	ಕೌಶಲ್ಯ ಮಿಷನ್ ಮುಖ್ಯ ಉದ್ದೇಶ ನಿರುದ್ಯೋಗ ಯುವಕ-ಯುವತಿಯರಿಗೆ ಕೌಶಲ್ಯ ತರಬೇತಿಗಳನ್ನು ನೀಡುವುದರ ಮುಖಾಂತರ ಉದ್ಯೋಗಾರ್ಹತೆಯನ್ನು ಹೆಚ್ಚಿಸಿ, ಉದ್ಯೋಗ ಕಲ್ಪಿಸಿಕೊಡುವುದೇ ಆಗಿರುತ್ತದೆ. ಕೌಶಲ್ಯಾಭಿವೃದ್ಧಿಯ ಬಹುತೇಕ ಚಟುವಟಿಕೆಗಳು ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯಗಳಾಗಿರುವುದರಿಂದ ಕೌಶಲ್ಯ ಮಿಷನ್ ಚಟುವಟಿಕೆಗಳನ್ನು ಉದ್ಯೋಗ ವಿನಿಮಯ ಕೇಂದ್ರದ ಚಟುವಟಿಕೆಗಳೊಂದಿಗೆ ವಿಲೀನಗೊಳಿಸುವುದು ಸೂಕ್ತವಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಪ್ರಸ್ತುತ ಕೌಶಲ್ಯ ಮಿಷನ್‌ನ್ನು ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮ ನಿಯಮಿತದೊಂದಿಗೆ ವಿಲೀನಗೊಳಿಸಿ, ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವೆಂದು ಮರು ನಾಮಕರಣ ಮಾಡಿ ಕಾರ್ಯನಿರ್ವಹಿಸಲಾಗುತ್ತಿದೆ. ಕೌಶಲ್ಯಾಭಿವೃದ್ಧಿ ನಿಗಮದಿಂದ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಿ ಉದ್ಯೋಗ ಕಲ್ಪಿಸುವ ಗುರಿ ಹೊಂದಿ ಕಾರ್ಯನಿರ್ವಹಿಸುತ್ತಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಸಿಡಾಕ್, ರಾಷ್ಟ್ರೀಯ ಜೀವನೋಪಾಯ ಮಿಷನ್ ಇವುಗಳನ್ನು ಪೈಲಟ್ ಮಾದರಿಯಲ್ಲಿ ಜಿಲ್ಲೆಗಳಲ್ಲಿ ನಿರ್ವಹಿಸುವ ಕರ್ತವ್ಯಗಳನ್ನು 6 ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಮುಖಾಂತರ ವ್ಯವಹರಿಸಲು ಹಾಗೂ ಈ ಇಲಾಖೆಗಳು ಒಂದೇ ಸೂರಿನಡಿ ತಂದು ಇಲಾಖೆಯ ಪ್ರಗತಿ ಹಾಗೂ ಕಾರ್ಯವೈಖರಿಯ ಗುಣಮಟ್ಟವನ್ನು ಹೆಚ್ಚಿಸಲು ಪ್ರಾಯೋಗಿಕವಾಗಿ ಆದೇಶ ಹೊರಡಿಸಿರುತ್ತದೆ. ಅದೇ ರೀತಿ ಹಂತ ಹಂತವಾಗಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

--2

ಈ)	ಇಲಾಖೆಯ ಅಡಿಯಲ್ಲಿ UNDP (ಯು.ಎನ್.ಡಿ.ಪಿ) ಯೋಜನೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ YES-PMU (ಎಸ್-ಪಿ.ಎಂ.ಯು) ಘಟಕವು ಉದ್ಯೋಗ ವಿನಿಮಯ ಕೇಂದ್ರಗಳ ಚಟುವಟಿಕೆಗಳಾದ ಅಭ್ಯರ್ಥಿಗಳ ನೋಂದಣಿ, ಸ್ಟಡಿಸರ್ಕಲ್, ಉದ್ಯೋಗ ಮೇಳ ವೃತ್ತಿ ಮಾರ್ಗದರ್ಶನ ಹಾಗು ಇತರೆ ಕಾರ್ಯಕ್ರಮಗಳನ್ನು ತನ್ನ ಕಾರ್ಯಗಳೆಂದು ವರದಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ರೀತಿಯ ನಕಲು ವರದಿಗಳನ್ನು ನಿಯಂತ್ರಿಸುವಲ್ಲಿ ಕೈಗೊಂಡಿರುವ ಕ್ರಮಗಳೇನು? ಇಲ್ಲಿಯವರೆಗೆ ಈ ಯೋಜನೆಯ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು?(ಅನುದಾನದ ಬಳಕೆಯ ವಿವರ ನೀಡುವುದು)	ರಾಜ್ಯದ 29 ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ UNDP (ಯು.ಎನ್.ಡಿ.ಪಿ) ಸಹಯೋಗದೊಂದಿಗೆ YES ಕಾರ್ಯಕ್ರಮವನ್ನು ಆರಂಭಿಸಿ ಇದರ ಉಸ್ತುವಾರಿಯನ್ನು ವಹಿಸಲು ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಯೂನಿಟ್ (PMU) ಅನ್ನು ಸಿ.ಐ.ಐ ಸಹಕಾರದೊಂದಿಗೆ ಆಯುಕ್ತಾಲಯದಲ್ಲಿ ವ್ಯವಸ್ಥೆಗೊಳಿಸಲಾಗಿತ್ತು. ಈ ಯೋಜನೆಯು ಪ್ರಮುಖವಾಗಿ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲಕ್ಕೆ ಅಗತ್ಯ ತರಬೇತಿ ಮೂಲಕ ಚುರುಕುಗೊಳಿಸುವುದು ಹಾಗೂ ನಿಯೋಜಕರನ್ನು ಸಂಪರ್ಕಿಸಿ ಉದ್ಯೋಗ ಮೇಳಗಳನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಪರಿಣಾಮಕಾರಿಯಾಗಿ ನಡೆಸುವುದು ಮುಖ್ಯ ಉದ್ದೇಶವಾಗಿತ್ತು. 2018-19ನೇ ಸಾಲಿನಲ್ಲಿ ಸದರಿ ಕಾರ್ಯಗಳನ್ನು ನಿರ್ವಹಿಸಲು UNDP ರೂ. 1.12 ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಒಟ್ಟು ರೂ.1.03 ಕೋಟಿ ವೆಚ್ಚ ಮಾಡಲಾಗಿದೆ. YES-PMU (ಎಸ್-ಪಿ.ಎಂ.ಯು) ಉದ್ಯೋಗ ವಿನಿಮಯ ಕಚೇರಿಗಳ ಅಂಕಿ ಅಂಶವನ್ನು ಸಂಗ್ರಹಿಸಿ ಕ್ರೋಢಿಕರಣ ಮಾತ್ರ ಮಾಡುತ್ತಿರುವುದರಿಂದ ಡೂಪ್ಲಿಕೇಶನ್‌ಗೆ ಅವಕಾಶವಿರುವುದಿಲ್ಲ. ಈ ಯೋಜನೆ 2019 ರ ಡಿಸೆಂಬರ್‌ಗೆ ಮುಕ್ತಾಯವಾಗಿದ್ದು, 2020-21ನೇ ಸಾಲಿನಲ್ಲಿ ಮುಂದುವರಿಸಲು ಆದೇಶಿಸಲಾಗಿದ್ದು, ಅಗತ್ಯ ಮಾನವ ಸಂಪನ್ಮೂಲದ ಆಯ್ಕೆಯು (ಟೆಂಡರ್ ಮೂಲಕ) ಪ್ರಗತಿಯಲ್ಲಿರುತ್ತದೆ.
ಉ)	ಬೃಹತ್ ಉದ್ಯೋಗ ಮೇಳಗಳ ಫಲಿತಾಂಶ ನಿರಾಶಾದಾಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿರುವುದಿಲ್ಲ. 2019-20ನೇ ಸಾಲಿನಲ್ಲಿ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ 8 ಉದ್ಯೋಗ ಮೇಳಗಳನ್ನು ನಡೆಸಲಾಗಿದ್ದು, ಸದರಿ ಉದ್ಯೋಗ ಮೇಳಗಳಲ್ಲಿ 1039 ಕಂಪನಿಗಳು ಯಶಸ್ವಿಯಾಗಿ ಭಾಗವಹಿಸಿದ್ದು, 10115 ಉದ್ಯೋಗಾಕಾಂಕ್ಷಿಗಳು ಉದ್ಯೋಗಾಕಾಂಕ್ಷಿಗಳು ಉದ್ಯೋಗಾವಕಾಶವನ್ನು ಪಡೆದಿರುತ್ತಾರೆ. ಅದರಂತೆ ಸರ್ಕಾರದ ಆದೇಶದನ್ವಯ ರಾಜ್ಯ ಮಟ್ಟದ, ಪ್ರಾದೇಶಿಕ ಮಟ್ಟ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗುತ್ತಿದ್ದು, ರಾಜ್ಯದ ಎಲ್ಲಾ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿ ಉದ್ಯೋಗ ಪಡೆಯಬಹುದಾಗಿದೆ.
ಊ)	ರಾಜ್ಯದಲ್ಲಿರುವ ಗ್ರಾಮೀಣ ಪ್ರದೇಶದ ಉದ್ಯೋಗಾಕಾಂಕ್ಷಿಗಳಿಗೆ ಉಪಯೋಗ ಆಗುವಂತಹ ವಿಧಾನಸಭಾ ಕ್ಷೇತ್ರ ಮಟ್ಟದ ಉದ್ಯೋಗ ಮೇಳಗಳನ್ನು ಏಕೆ ಆಯೋಜಿಸಲಾಗುತ್ತಿಲ್ಲ.	ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಿಂದ ಆಯೋಜಿಸುತ್ತಿರುವ ಮಿನಿ ಉದ್ಯೋಗ ಮೇಳಗಳನ್ನು ಕೈಗಾರಿಕೆಗಳು ಮತ್ತು ಉದ್ಯೋಗಾವಕಾಶಗಳ ಲಭ್ಯತೆ ಆಧಾರದ ಮೇಲೆ ಈಗಲೂ ತಾಲ್ಲೂಕು ಮಟ್ಟದಲ್ಲಿ ಕೂಡ ಮೇಳ ಆಯೋಜಿಸಲಾಗುತ್ತಿದೆ.
ಋ)	ಉದ್ಯೋಗ ವಿನಿಮಯ ಕೇಂದ್ರಗಳಿಗೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)	ಸಾರ್ವಜನಿಕ ವಲಯದಲ್ಲಿನ ನೇಮಕಾತಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡುತ್ತಿದ್ದು ಈ ಸಂಬಂಧ ನೇಮಕಾತಿ ಪರೀಕ್ಷೆ ತೆಗೆದುಕೊಂಡಿರುವ/ ತೆಗೆದುಕೊಳ್ಳಬಯಸುವ ಅಭ್ಯರ್ಥಿಗಳಿಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿನ ಸ್ಟಡಿ ಸರ್ಕಲ್ಸ್ ಕಾರ್ಯಕ್ರಮದ ಮೂಲಕ ಉಚಿತ ಪರೀಕ್ಷಾಪೂರ್ವ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಅದೇ ರೀತಿ ಉದ್ಯೋಗ ಮೇಳಗಳನ್ನು ಆಯೋಜಿಸಿ ಉದ್ಯೋಗಾಕಾಂಕ್ಷಿಗಳನ್ನು ಮತ್ತು ನಿಯೋಜಕರನ್ನು ಒಂದೇ ವೇದಿಕೆಗೆ ತರುವ ಮೂಲಕ ಉದ್ಯೋಗ ನೆರವು ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಅನುದಾನದೊಂದಿಗೆ ಆಯ್ದ ಒಟ್ಟು 9 ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗಳನ್ನು ಮಾದರಿ ವೃತ್ತಿ ಕೇಂದ್ರಗಳಾಗಿ ಪರಿವರ್ತಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇದರಿಂದ ಉದ್ಯೋಗ ವಿನಿಮಯ ಕಚೇರಿಗಳ ಮೂಲಭೂತ ಸೌಲಭ್ಯಗಳ ಒದಗಿಸುವಿಕೆ ಮತ್ತು ಮೇಳಗಳನ್ನು ಆಯೋಜಿಸಲು ಸೂಕ್ತ ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಕೌಉಜೀಇ 70 ಕೈತಪ್ರ 2020

(ಡಾ.ಸಿ.ಎನ್.ಅಶ್ವಥ ನಾರಾಯಣ)
ಉಪ ಮುಖ್ಯಮಂತ್ರಿಗಳು ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 844

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಉತ್ತರಿಸಬೇಕಾದ ದಿನಾಂಕ : 10-12-2020

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು

ಅ.	ಆಂಧ್ರ ಪ್ರದೇಶ, ತಮಿಳುನಾಡು, ಮೊದಲಾದ ರಾಜ್ಯದಲ್ಲಿ ಅಲ್ಲಿನ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ನೀಡುತ್ತಿರುವ ವೇತನಕ್ಕಿಂತ ನಮ್ಮ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ನೀಡುತ್ತಿರುವ ವೇತನವು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ವೇತನವು ಕಡಿಮೆಯಿರುವ ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ವೇತನ ತಾರತಮ್ಯ ಇರುವುದು ಕಂಡುಬಂದಿರುತ್ತದೆ.
ಆ.	ಬಂದಿದ್ದರೆ, ಈ ರೀತಿ ವೇತನ ತಾರತಮ್ಯವಿರಲು ಕಾರಣಗಳೇನು;	ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು, ಪ್ರಾಂಶುಪಾಲರು ಹಾಗೂ ಪ್ರೌಢಶಾಲಾ ಸಹ ಶಿಕ್ಷಕರು, ಮುಖ್ಯ ಶಿಕ್ಷಕರ ವೇತನ ತಾರತಮ್ಯದ ಬಗ್ಗೆ ಕುಮಾರ್ ನಾಯಕ್ ನೇತೃತ್ವದಲ್ಲಿ ಸಮಿತಿಯನ್ನು 2011-2012ನೇ ಸಾಲಿನಲ್ಲಿ ರಚಿಸಲಾಗಿದ್ದು, ಸದರಿ ಸಮಿತಿಯು ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು ಮೊದಲಾದ ರಾಜ್ಯದಲ್ಲಿನ ಶಾಲಾ ಶಿಕ್ಷಕರಿಗೆ ನೀಡುತ್ತಿರುವ ವೇತನವನ್ನು ಹೋಲಿಸಿ ಕರ್ನಾಟಕ ರಾಜ್ಯ ಸಹ ಶಿಕ್ಷಕರು ಪಡೆಯುತ್ತಿರುವ ವೇತನ ನೆರೆ ರಾಜ್ಯಗಳ ಶಿಕ್ಷಕರು ಪಡೆಯುತ್ತಿರುವ ವೇತನಕ್ಕಿಂತ ಕಡಿಮೆ ಇದೆ ಎಂದು ವರದಿ ಮಾಡಿ, ಸಹ ಶಿಕ್ಷಕರ ವೇತನವನ್ನು ಈ ಕೆಳಗಿನಂತೆ ಶಿಫಾರಸ್ಸು ಮಾಡಿ, ನಿಗದಿಪಡಿಸಲು ದಿನಾಂಕ:11-08-2011ರಂದು ವರದಿಯನ್ನು ಸಲ್ಲಿಸಿರುತ್ತದೆ. ✓ ಸಹ ಶಿಕ್ಷಕರ ವೇತನ ಶ್ರೇಣಿ (ನೇಮಕಾತಿಯಾದಾಗ) 9500-17250 ✓ ಕಾಲಮಿತಿ ಬಡ್ತಿ ಪಡೆದ ಸಹ ಶಿಕ್ಷಕರ ವೇತನ ಶ್ರೇಣಿ
ಇ.	ಆ ರಾಜ್ಯದ ಶಿಕ್ಷಕರುಗಳು ನಮ್ಮ ರಾಜ್ಯದ ಶಿಕ್ಷಕರಂತೆ ಒಂದೇ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಈ ರೀತಿ ವೇತನ ತಾರತಮ್ಯ ಇರುವುದನ್ನು ಸರಿಪಡಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	
ಈ.	ಹೊಂದಿದ್ದರೆ, ತಾರತಮ್ಯ ನಿವಾರಣೆಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	

		10000–18150 ✓ ಸ್ವಯಂ ಚಾಲಿತ ಬಡ್ತಿ ಪಡೆದ ಸಹ ಶಿಕ್ಷಕರ ವೇತನ ಶ್ರೇಣಿ 10800–20025 ✓ ಸಹ ಶಿಕ್ಷಕರು ಗ್ರೇಡ್–1 ವೇತನ ಶ್ರೇಣಿ (20 ವರ್ಷ ಸೇವೆ ಪೂರ್ಣಗೊಳಿಸಿದ ಸಹ ಶಿಕ್ಷಕರು) 11400–21600 ಈ ಶಿಫಾರಸ್ಸಿನ ವರದಿಯನ್ನು ಆಧರಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ78 ಎಸ್.ಎಲ್.ಬಿ 2016 ದಿನಾಂಕ:15–04–2016ರಲ್ಲಿ ಜೂನ್–2016 ರಂದು ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರುಗಳಿಗೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿದೆ. ಹಾಗೂ ದಿನಾಂಕ;01–08–2008ರ ಪೂರ್ವದಲ್ಲಿ ಸರ್ಕಾರಿ/ ಅನುದಾನಿತ ಪ್ರೌಢಶಾಲೆಯಲ್ಲಿ ನೇಮಕಾತಿಗೊಂಡು ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ನೀಡಲಾಗುತ್ತಿರುವ ರೂ.400/–ಗಳ ವಿಶೇಷ ಭತ್ಯೆಯನ್ನು ಮುಂದುವರೆಸಲಾಗಿದೆ.

ಸಂಖ್ಯೆ: ಇಪಿ 69 ಎಸ್ಎಲ್‌ಬಿ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರು.

ಕರ್ನಾಟಕ ವಿಧಾನಸಭೆ		
1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	896
2	ಮಾನ್ಯ ಸದಸ್ಯರ ಹೆಸರು	ಶ್ರೀ ರಾಜೇಗೌಡ ಟಿ.ಡಿ.(ಶೃಂಗೇರಿ)
3	ಉತ್ತರಿಸಬೇಕಾದ ದಿನಾಂಕ	10.12.2020
4	ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಮಲೆನಾಡು ಭಾಗದಲ್ಲಿ ಹೈಟೆಕ್ ಲ್ಯಾಬ್, ಸಿಟಿ ಸ್ಕ್ಯಾನ್ ಲ್ಯಾಬ್, ಹೈಟೆಕ್ ಪೋಸ್ಟ್ ಮಾರ್ಟಮ್ ಕೇಂದ್ರಗಳನ್ನೊಳಗೊಂಡಂತೆ ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇಲ್ಲದೇ ರೋಗಿಗಳಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
(ಆ)	ಹಾಗಿದ್ದಲ್ಲಿ ಎಲ್ಲಾ ವ್ಯವಸ್ಥೆಗಳನ್ನೊಳಗೊಂಡ ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಲೆನಾಡು ಭಾಗದಲ್ಲಿ ಯಾವ ತಾಲ್ಲೂಕಿನಲ್ಲಿ ನಿರ್ಮಾಣಗೊಳ್ಳಲಿದೆ; ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು; ಆಸ್ಪತ್ರೆ ನಿರ್ಮಾಣ ಪ್ರಸ್ತಾವನೆ ಯಾವ ಹಂತದಲ್ಲಿದೆ (ಸಂಪೂರ್ಣ ಮಾಹಿತಿ ನೀಡುವುದು);	1. ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸುಸಜ್ಜಿತ ಸಿಟಿ ಮತ್ತು ಎಂ.ಆರ್.ಐ ಸ್ಕ್ಯಾನ್ ಸೌಲಭ್ಯ ರೋಗಿಗಳಿಗೆ ಒದಗಿಸಲಾಗುತ್ತಿದೆ. ಸಂಸ್ಥೆಯಲ್ಲಿ ಹೈಟೆಕ್ ಪೋಸ್ಟ್ ಮಾರ್ಟಮ್ ಕೇಂದ್ರವನ್ನು ರೂ.250.00 ಲಕ್ಷಗಳಲ್ಲಿ ಸ್ಥಾಪಿಸಲಾಗುತ್ತಿದೆ. ಸಂಸ್ಥೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಾರ್ಡಿಯಾಲಜಿ ಘಟಕ ಸ್ಥಾಪಿಸಲು ರೂ.3594.54 ಲಕ್ಷಗಳು 2012ನೇ ಸಾಲಿನಿಂದ ಬಿಡುಗಡೆಯಾಗಿದ್ದು, ಬೇಸ್‌ಮೆಂಟ್, ನೆಲಮಹಡಿ ಮತ್ತು ಮೊದಲನೇ ಮಹಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮುಂದುವರೆದು ಕಾರ್ಡಿಯಾಲಜಿ ಘಟಕದ ಉಪಕರಣಗಳು ಸರಬರಾಜಾಗಿದ್ದು, ಇಂಟೀರಿಯರ್ ಕಾಮಗಾರಿ ಮುಕ್ತಾಯವಾದ ನಂತರ ಪ್ರಾರಂಬಿಸಲಾಗುವುದು. 2. ಚಿಕ್ಕಮಗಳೂರು ತಾಲೂಕಿನಲ್ಲಿ ಸರ್ಕಾರದ ವತಿಯಿಂದ 174 ಕೋಟಿ ರೂ.ಗಳ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

.....2

(ಇ)	ಯಾವ ಕಾಲಮಿತಿಯೊಳಗೆ ಆಸ್ಪತ್ರೆ ನಿರ್ಮಾಣವಾಗಲಿದೆ?	ಅನ್ವಯಿಸುವುದಿಲ್ಲ.

ಸಂಖ್ಯೆ:ಎಂಇಡಿ 264 ಆರ್‌ಐ 2020

(ಡಾ.ಕೆ.ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

899

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 899
ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅರಣ್ಯ ಹಕ್ಕು ಕಾಯ್ದೆಯಡಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಎಷ್ಟು ಎಕರೆ ಜಮೀನುಗಳನ್ನು ಮಂಜೂರು ಮಾಡಲಾಗಿದೆ(ತಾಲ್ಲೂಕುವಾರು ಫಲಾನುಭವಿಗಳ ಮಾಹಿತಿ ನೀಡುವುದು);</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಮಂಜೂರು ಮಾಡಿದ ಅರ್ಜಿಗಳ ವಿವರ ಕೆಳಕಂಡಂತಿದೆ.
<table>
<tr><th>ಕ್ಲೇಮುದಾರರ ವಿವರ</th><th>ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ</th><th>ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ</th><th>ಮಂಜೂರು ಮಾಡಿರುವ ಭೂಮಿ ವಿವರ (ಎಕರೆಗಳಲ್ಲಿ)</th><th>ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ</th><th>ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳ ಸಂಖ್ಯೆ</th></tr>
<tr><td>ಪರಿಶಿಷ್ಟ ಪಂಗಡ</td><td>3653</td><td>1908</td><td>2783.01</td><td>1745</td><td>0</td></tr>
<tr><td>ಇತರೆ ಪಾರಂಪರಿಕ ಅರಣ್ಯ ವಾಸಿಗಳು</td><td>17560</td><td>0</td><td>0</td><td>17560</td><td>0</td></tr>
<tr><td>ಸಮುದಾಯ ಹಕ್ಕುಗಳು</td><td>100</td><td>3</td><td>1410</td><td>97</td><td>0</td></tr>
<tr><td>ಒಟ್ಟು</td><td>21313</td><td>1911</td><td>4193.01</td><td>19402</td><td>0</td></tr>
</table>
ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕು ಪತ್ರ ವಿತರಿಸಿದ ಫಲಾನುಭವಿಗಳ ವಿವರ ಕೆಳಕಂಡಂತಿದೆ.
<table>
<tr><td>2017-2018</td><td>ಯಾವುದೇ ಅರ್ಜಿ ಮಂಜೂರು ಮಾಡಿರುವುದಿಲ್ಲ.</td></tr>
<tr><td>2018-2019</td><td>ಯಾವುದೇ ಅರ್ಜಿ ಮಂಜೂರು ಮಾಡಿರುವುದಿಲ್ಲ.</td></tr>
</table></td></tr>
</table>

		2019–2020: 1. ಚಿಕ್ಕಮಗಳೂರು ತಾ ॥ ಶ್ರೀಮಂತ ಬಿನ್ ದಾದಣ್ಣ (ಪ.ವ) ಬಿಂಡಿಗಗ್ರಾಮ, ಹಕ್ಕಿಪಿಕ್ಕಿ ಕಾಲೋನಿ ಮಲ್ಲೇನಹಳ್ಳಿ, ಚಿಕ್ಕಮಗಳೂರು ಸರ್ವೆ ನಂ 1 ವಿಸ್ತೀರ್ಣ 1.10 ಎಕರೆ 2. ಚಿಕ್ಕಮಗಳೂರು ತಾ ॥ ರಾಜು ಬಿನ್ ಶ್ರೀಮಂತ, (ಪ.ವ) ಬಿಂಡಿಗಗ್ರಾಮ, ಹಕ್ಕಿಪಿಕ್ಕಿ ಕಾಲೋನಿ ಮಲ್ಲೇನಹಳ್ಳಿ, ಚಿಕ್ಕಮಗಳೂರು ಸರ್ವೆ ನಂ 1. ವಿಸ್ತೀರ್ಣ 2.10 ಎಕರೆ 3. ಕೊಪ್ಪ, ತಾಲ್ಲೂಕು ಈ ಕೃಷ್ಣಮೂರ್ತಿ ಬಿನ್ ಗೋಪು, (ಪ.ವ) ಚಾವಲ್ಮನೆ, ಹಾಲ್ಮಾತ್ತೂರು ಅಂಚೆ, ಹರಿಹರಪುರ, ಕೊಪ್ಪ, ತಾಲ್ಲೂಕು ಸರ್ವೆ ನಂ 265 ವಿಸ್ತೀರ್ಣ 1.20 ಎಕರೆ 4. ನ.ರಾ ಪುರ ವಿಜಯ ಬಿನ್ ಚನ್ನ (ಪ.ವ) ಹರಾವರಿ ಗ್ರಾಮ ಕಾನೂರು ಗ್ರಾಮ ಪಂಚಾಯಿತಿ, ಸರ್ವೆ ನಂ 156 ವಿಸ್ತೀರ್ಣ 0.36 ಎಕರೆ 5. ನ.ರಾ ಪುರ ತಾಲ್ಲೂಕು ಶಾರದ ಕೋಂ ಚನ್ನ (ಪ.ವ) ಹರಾವರಿ ಗ್ರಾಮ ಕಾನೂರು ಗ್ರಾಮ ಪಂಚಾಯಿತಿ, ಸರ್ವೆ ನಂ 156 ಎಕರೆ.
ಆ)	ಅರಣ್ಯ ಹಕ್ಕು ಕಾಯ್ದೆಯಡಿ ಸಾಗುವಳಿದಾರರಿಗೆ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು (ಸರ್ಕಾರಿ ಆದೇಶದೊಂದಿಗೆ ವಿವರ ನೀಡುವುದು);	ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ2) ಮತ್ತು 2008 ತಿದ್ದುಪಡಿ ನಿಯಮಗಳು 2012ರಡಿ 1. 2005ರ ಡಿಸೆಂಬರ್ 13ಕ್ಕೆ ಮುಂಚೆ ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸಿದ ಮತ್ತು ವಾಸ್ತವಿಕ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯದ ಅಥವಾ ಅರಣ್ಯಗಳ ಜಮೀನಿನ ಮೇಲೆ ಅವಲಂಬಿತವಾಗಿರುವ ಅನುಸೂಚಿತ ಬುಡಕಟ್ಟು ಜನರು. 2. ಇತರ ಪಾರಂಪರಿಕ ಅರಣ್ಯವಾಸಿಗಳು ಎಂದರೆ 2005ರ ಡಿಸೆಂಬರ್ 13 ಕ್ಕಿಂತಲೂ ಮುಂಚೆ ಕೊನೆ ಪಕ್ಷ ಮೂರು ತಲೆಮಾರಿನವರೆಗೆ ಪ್ರಧಾನವಾಗಿ ಅರಣ್ಯಗಳಲ್ಲಿ ವಾಸಿಸಿದ ಮತ್ತು ವಾಸ್ತವಿಕ ಜೀವನೋಪಾಯದ ಅವಶ್ಯಕತೆಗಳಿಗಾಗಿ ಅರಣ್ಯದ ಅಥವಾ ಅರಣ್ಯಗಳ ಜಮೀನಿನ ಮೇಲೆ ಅವಲಂಬಿತವಾಗಿರುವ ಯಾವುದೇ ವ್ಯಕ್ತಿ ಅಥವಾ ಯಾವುದೇ ಸಮುದಾಯದವರನ್ನು ಅರ್ಹರೆಂದು ಪರಿಗಣಿಸಲಾಗುವುದು ನಿಗಧಿತ ದಾಖಲೆ ಹಾಗೂ ಪುರವೆಗಳನ್ನು ಒದಗಿಸತಕ್ಕದ್ದು. ವಿವರಣೆ: ಈ ಖಂಡದ ಉದ್ದೇಶಕ್ಕಾಗಿ "ತಲೆಮಾರು" ಎಂದರೆ, ಇಪ್ಪತ್ತೈದು ವರ್ಷಗಳನ್ನು ಒಳಗೊಂಡಿರುವ ಒಂದು ಅವಧಿ.
ಇ)	ಕಾಯ್ದೆಯಡಿ ಗರಿಷ್ಟ 10 ಎಕರೆ ಮಿತಿಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಸರ್ಕಾರದ ಗಮನಕ್ಕೆ ಇಂತಹ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ

ಸಕಇ 378 ಎಸ್‌ಟಿಪಿ 2020

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	901
ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ಮಹೇಶ್ ಎನ್.
ಉತ್ತರಿಸುವ ದಿನಾಂಕ	:	10-12-2020
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕೊಳ್ಳೇಗಾಲ ನಗರದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿ 2003-04ರಷ್ಟು ಹಿಂದೆಯೇ ಪ್ರಾರಂಭವಾಗಿ ಇನ್ನೂ ಅನುಷ್ಠಾನ ಹಂತದಲ್ಲಿಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ವರ್ಷಗಟ್ಟಲೆ ಕಾಮಗಾರಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ಸರ್ಕಾರಿ ಕಾಮಗಾರಿಗಳ ಮೇಲೆ ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದ್ದು, ಇಲ್ಲಿಯವರೆಗೆ ಒಟ್ಟು 3.24ಕೋಟಿ ರೂ. ಖರ್ಚಾಗಿದ್ದು, ಡಾ॥ ಬಿ.ಆರ್ ಅಂಬೇಡ್ಕರ್ ಭವನದ ಸುಸಜ್ಜಿತವಾಗಿ ರೂಪುಗೊಳ್ಳಲು ಇನ್ನೂ ಹೆಚ್ಚಿನ ಅನುದಾನ ಅಗತ್ಯವಿರುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;	ಸರ್ಕಾರದ ಆದೇಶಗಳ ಸಂಖ್ಯೆ: ಸಕಇ 557 ಪಕವಿ 2003, ದಿನಾಂಕ:-15-03-2004 ಮತ್ತು ಸಕಇ 226 ಪಕವಿ 2014, ದಿನಾಂಕ: 02-05-2015ರಲ್ಲಿ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು ಕೇಂದ್ರದಲ್ಲಿ ರೂ.320.75 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾ॥ ಬಿ.ಆರ್ ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ಸಿದ್ಧಪಡಿಸಿ ಸಲ್ಲಿಸಲಾದ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ನೀಡಿ, ಸಮಾಜ ಕಲ್ಯಾಣ ಇಲಾಖೆಯವತಿಯಿಂದ ಒಟ್ಟಾರೆ ರೂ.200.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಭವನದ ಕಟ್ಟಡ ನಿರ್ಮಾಣ ಸಂಬಂಧವಾಗಿ ಮಂಜೂರಾತಿ ಮೊತ್ತ ರೂ.320.75 ಲಕ್ಷಗಳಿಗೆ ಅನುಗುಣವಾಗಿ ಸರ್ಕಾರದಿಂದ ರೂ.200.00 ಲಕ್ಷ ಹಾಗೂ ಸ್ಥಳೀಯ ಮೂಲಗಳಿಂದ ರೂ.120.75 ಲಕ್ಷ, ಒಟ್ಟಾರೆ ರೂ.320.75 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಸಕಇ 119 ಪಕವಿ 2019, ದಿನಾಂಕ: 02-03-2019ರಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದಲ್ಲಿ ಶೌಚಾಲಯ, ಸುತ್ತುಗೋಡೆ ಮತ್ತು ಅಡುಗೆ ಮನೆ ನಿರ್ಮಾಣ ಕಾಮಗಾರಿಗೆ ಹೆಚ್ಚುವರಿಯಾಗಿ ರೂ.100.00 ಲಕ್ಷಗಳನ್ನು ಮಂಜೂರು ಮಾಡಿ ಆದೇಶಿಸಲಾಗಿರುತ್ತದೆ. ಅದರಂತೆ, ಸದರಿ ಭವನದ ನಿರ್ಮಾಣಕ್ಕೆ ಸರ್ಕಾರದ ಆದೇಶದ ದಿನಾಂಕ: 02-03-2019ರಲ್ಲಿ
ಇ)	ಡಾ॥ ಬಿ.ಆರ್. ಅಂಬೇಡ್ಕರ್ ಭವನದ ಕಾಮಗಾರಿಯನ್ನು ಪೂರ್ಣಗೊಳಿಸಿ ಜನರ ಸೇವೆಗೆ ಅರ್ಪಿಸಲು ಇನ್ನೂ 02 ಕೋಟಿ 47 ಲಕ್ಷ ರೂಪಾಯಿಗಳು ಅಗತ್ಯವಿದ್ದು, ಬಿಡುಗಡೆಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;	
ಈ)	ಪರಿಶಿಷ್ಟ ಜಾತಿಯ ಜನರು ಹೆಚ್ಚಾಗಿರುವ ಹಾಗೂ ಪರಿಶಿಷ್ಟ ಜಾತಿ ಮೀಸಲು ವಿಧಾನಸಭಾ ಕ್ಷೇತ್ರ ಕೊಳ್ಳೇಗಾಲ ನಗರದ ಡಾ॥ ಬಿ.ಆರ್. ಅಂಬೇಡ್ಕರ್ ಭವನ ಈ ವರ್ಷವೇ ಜನರ ಸೇವೆಗೆ ಸಿಗುವಂತಾಗಲು ಉಳಿಕೆ 02 ಕೋಟಿ 47 ಲಕ್ಷರೂಪಾಯಿಗಳು ಈ ಸಾಲಿನಲ್ಲಿಯೇ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	

		ಹೆಚ್ಚುವರಿಯಾಗಿ ಮಂಜೂರಾತಿ ನೀಡಿರುವ ರೂ.100.00 ಲಕ್ಷಗಳನ್ನು ಹೊರತುಪಡಿಸಿ, ಬಾಕಿ ರೂ.147.30 ಲಕ್ಷಗಳನ್ನು ಮಂಜೂರು ಮಾಡಲು ಹಾಗೂ ರೂ.247.30 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರಿಂದ ಪ್ರಸ್ತಾವನೆ ಸ್ವೀಕೃತಗೊಂಡಿದ್ದು, ಸದರಿ ಭವನದ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನದ ಲಭ್ಯತೆಗೆ ಅನುಗುಣವಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿ, ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಸಕಇ 473 ಪಕವಿ 2020

(ಬಿ. ಶ್ರೀರಾಮುಲು)
ಮಾನ್ಯ ಸಮಾಜ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	132
ಮಾನ್ಯ ಸದಸ್ಯರ ಹೆಸರು	ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ್ (ರಾಮದುರ್ಗ)
ಉತ್ತರಿಸಬೇಕಾದ ದಿನಾಂಕ	10-12-2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಮದುರ್ಗ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಎಷ್ಟು ಹುದ್ದೆಗಳು ಮಂಜೂರಾಗಿವೆ; (ವಿವರ ನೀಡುವುದು)	ರಾಮದುರ್ಗ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ 70 ಹುದ್ದೆಗಳು ಮಂಜೂರಾಗಿವೆ. (ಅನುಬಂಧದಲ್ಲಿ ಲಗತ್ತಿಸಿದೆ)
ಆ	ಖಾಲಿಯಿರುವ ಹುದ್ದೆಗಳನ್ನು ತುಂಬದೇ ಇರುವ ಕಾರಣ ಆಸ್ಪತ್ರೆಗೆ ಬರುವ ರೋಗಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಪ್ರಸ್ತುತ ಇರುವ ವೈದ್ಯರು ಮತ್ತು ಸಿಬ್ಬಂದಿಗಳಿಂದ ಹಾಗೂ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಂಡಿರುವ ಸಿಬ್ಬಂದಿಗಳ ಮೂಲಕ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ.
ಇ	ಖಾಲಿಯಿರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ; (ವಿವರ ನೀಡುವುದು)	ಇಲಾಖೆಯಲ್ಲಿ ಖಾಲಿ ಇರುವ 824 ತಜ್ಞ ವೈದ್ಯಾಧಿಕಾರಿಗಳು, 1246 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಮತ್ತು 88 ದಂತ ಆರೋಗ್ಯಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಮುಂದುವರೆದು, ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಸಹ ವಿಶೇಷ ನೇಮಕಾತಿ ನಿಯಮಗಳ ಮೂಲಕ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ.
ಈ	ಖಾಲಿಯಿರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ವಿವರಣೆ ನೀಡುವುದು?	

ಸಂಖ್ಯೆ: ಆಕುಕ 97 ಹೆಚ್‌ಪಿಸಿ 2020

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

132

ಅನೆಂಬಂಧ-1

LAQ - 132

ಸಾರ್ವಜನಿಕ ಆಸ್ಪತ್ರೆ ರಾಮದುರ್ಗ

ಮಂಜೂರು ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ವಿವರ

ಕ್ರಸಂ	ಹುದ್ದೆಗಳ ಸಂಖ್ಯೆ	ಮಂಜೂರಾದ	ಕಾರ್ಯನಿರತ	ಖಾಲಿ	ಷರಾ
1	ಮುಖ್ಯ ವೈದ್ಯಾಧಿಕಾರಿಗಳು	1	1	0	
2	ಫಿಜಿಸಿಯನ್	1	0	1	
3	ಸರ್ಜನ್	1	0	1	
4	ಸ್ತ್ರೀ ರೋಗ ತಜ್ಞರು	1	1	0	
5	ಚಿಕ್ಕ ಮಕ್ಕಳ ತಜ್ಞರು	1	0	1	ಗುತ್ತಿಗೆ ಆಧಾರ 1
6	ಕಿವಿ ಮೂಗು ಗಂಟಲು ತಜ್ಞರು	1	0	1	
7	ಚರ್ಮ ರೋಗ ತಜ್ಞರು	1	0	1	
8	ಕಣ್ಣಿನ ತಜ್ಞರು	1	1	0	
9	ಅರವಳಿಕೆ ತಜ್ಞರು	1	1	0	
10	ಎಲುವು ಕೀಲು ತಜ್ಞರು	1	1	0	
11	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು	1	0	1	
12	ದಂತ ವೈದ್ಯರು	2	0	2	
13	ಸಹಾಯಕ ಆಡಳಿತಾಧಿಕಾರಿಗಳು	1	1	0	
14	ಪ್ರದ. ಸಹಾಯಕರು	2	1	1	
15	ದ್ವಿದ. ಸಹಾಯಕರು	1	0	1	
16	ಹಿರಿಯ ಫಾರ್ಮಾಸಿಸ್ಟ್	1	1	0	
17	ಕಿರಿಯ ಫಾರ್ಮಾಸಿಸ್ಟ್	1	1	0	
18	ಹಿರಿಯ ಪ್ರಯೋಗಾಲಯ ತಂತ್ರಜ್ಞರು	1	0	1	
19	ಕಿರಿಯ ಪ್ರಯೋಗಾಲಯ ತಂತ್ರಜ್ಞರು	2	2	0	
20	ನರ್ಸಿಂಗ್ ಸೂಪರಿಡೆಂಟ್ ಗ್ರೇಡ್ 2	1	0	1	
21	ಸ್ಟಾಫ್ ನರ್ಸ್	13	13	0	ಎನ್.ಆರ್.ಹೆಚ್.ಎಮ್ 5
22	ಕ್ಷ-ಕಿರಣ ತಂತ್ರಜ್ಞರು	1	0	1	
23	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	3	1	2	
24.	ವಾಹನ ಚಾಲಕರು	2	2	0	
25	ಡ ವರ್ಗ ನೌಕರರು	28	16	12	ವಾನ್ ಕ್ಲಿನಿಕ್9
	ಒಟ್ಟು	70	43	27	

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 275
2. ಮಾನ್ಯ ಸದಸ್ಯರ ಹೆಸರು : ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಗ್ರಾಮಾಂತರ ವಿಧಾನಸಭೆಯ ಕ್ಷೇತ್ರ ವ್ಯಾಪ್ತಿಯಲ್ಲಿ ಯಾವ ಯಾವ ಉದ್ಯಮಕ್ಕೆ ಒಳಪಡುವ ಕಾರ್ಮಿಕರಿದ್ದಾರೆ, (ಸಂಪೂರ್ಣ ವಿವರ ನೀಡುವುದು).	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯೊಳಗೆ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆ ಕಾಯ್ದೆ 1961ರಡಿ ನೋಂದಣಿಯಾದ ಸಂಸ್ಥೆಗಳು, ಕಾರ್ಖಾನೆಗಳ ಕಾಯ್ದೆ 1948ರಡಿ ನೋಂದಣಿಯಾದ ಕಾರ್ಖಾನೆಗಳು, ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ಬರುವ ಅನುಸೂಚಿತ ಉದ್ದಿಮೆಗಳ ಮಾಹಿತಿಯನ್ನು ಆಧರಿಸಿ ಈ ಕೆಳಕಂಡ ಉದ್ದಿಮೆಗಳಲ್ಲಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಕೃಷಿ, ಆಟೋಮೊಬೈಲ್, ಬೇಕರಿ, ಬ್ರಿಕ್ಸ್, ಸಾಮಿಲ್, ಇಂಜಿನಿಯರಿಂಗ್, ಫೌಂಡರಿಸ್ಸ್, ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ, ಹೋಟೆಲ್, ಪೆಟ್ರೋಲ್ ಅಂಡ್ ಡೀಸೆಲ್ ಆಯಿಲ್ ಪಂಪ್ಸ್, ರೈಸ್ ಫ್ಲೋರ್ ಮಿಲ್ಸ್, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು, ಹಾಲು ಉತ್ಪಾದನೆ, ಸಂಸ್ಕರಣ & ವಿತರಣೆ, ಕಲ್ಲುಪುಡಿ ಮಾಡುವ ಉದ್ದಿಮೆ ಕಾರ್ಮಿಕರು, ಗಾರ್ಮೆಂಟ್ಸ್ ಮತ್ತು ಸ್ಪಿನ್ನಿಂಗ್ ಮಿಲ್ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಇರುತ್ತಾರೆ.
ಆ)	ಇದುವರೆಗೂ ಈ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಕಾರ್ಮಿಕರಿಗೆ ಕಾರ್ಡಗಳನ್ನು ವಿತರಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು).	1. **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ** ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇದುವರೆಗೆ ಒಟ್ಟು 15802 ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ನೋಂದಣಿ ಮಾಡಲಾಗಿರುವ ಕಾರ್ಮಿಕರಿಗೆ ಕಾರ್ಡ್‌ಗಳನ್ನು ವಿತರಿಸಲಾಗಿದೆ. 2. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**

		• **ಅಂಬೇಡ್ಕರ ಕಾರ್ಮಿಕ ಸಹಾಯ ಹಸ್ತ ಯೋಜನೆ:** ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ, ಶಿವಮೊಗ್ಗ ಗ್ರಾಮಾಂತರಕ್ಕೆ ಸಂಬಂಧಿಸಿದಂತೆ ಮಾಹಿತಿ ಲಭ್ಯವಿರುವುದಿಲ್ಲ. ಆದರೆ, ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ, 11 ವರ್ಗಗಳಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯ 4,507 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. • **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:** ಸಾರಿಗೆ ಇಲಾಖೆಯು ಒದಗಿಸಿರುವ ದತ್ತಾಂಶದ ಪ್ರಕಾರ ಶಿವಮೊಗ್ಗ ಜಿಲ್ಲೆಯಲ್ಲಿ ಊರ್ಜಿತ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲನಾ ಪರವಾನಗಿ ಹೊಂದಿರುವ 22,213 ಚಾಲಕರು ಇರುವುದಾಗಿ ತಿಳಿದುಬಂದಿದ್ದು, ಈ ಎಲ್ಲಾ ಚಾಲಕರು ಯೋಜನಾ ವ್ಯಾಪ್ತಿಗೆ ಒಳಪಟ್ಟಿರುತ್ತಾರೆ. • **ಕೋವಿಡ್-19 ರ ವಿಶೇಷ ಪ್ಯಾಕೇಜ್** ಕೋವಿಡ್-19 ರ ವಿಶೇಷ ಪ್ಯಾಕೇಜ್ ಅಡಿ ಶಿವಮೊಗ್ಗ ಜಿಲ್ಲೆಯಲ್ಲಿ ಅಗಸ ವೃತ್ತಿಯಲ್ಲಿ ತೊಡಗಿರುವ 883 ಕಾರ್ಮಿಕರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 1570 ಕಾರ್ಮಿಕರು ಸೇರಿದಂತೆ ಒಟ್ಟು 2453 ಕಾರ್ಮಿಕರು ನೆರವು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. • **ಪ್ರಧಾನ ಮಂತ್ರಿ ಶ್ರಮ್ ಯೋಗಿ ಮಾನ್-ಧನ್ ಯೋಜನೆ (ಪಿಎಂ-ಎಸ್‌ವೈಎಂ):-** ಇಲ್ಲಿಯವರೆಗೆ ಈ ಯೋಜನೆಯಡಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ಒಟ್ಟು 2535 ಕಾರ್ಮಿಕರನ್ನು ಫಲಾನುಭವಿಯಾಗಿ ನೋಂದಾಯಿಸಲಾಗಿದೆ.

ಇ)	ಎಷ್ಟು ಕಾರ್ಮಿಕರಿಗೆ ಕಾರ್ಮಿಕ ಕಲ್ಯಾಣ ನಿಧಿ ಯೋಜನೆಯಡಿ ಸೌಲಭ್ಯಗಳನ್ನು ವಿತರಿಸಲಾಗಿದೆ? (ಸಂಪೂರ್ಣ ವಿವರ ನೀಡುವುದು).	ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ನೋಂದಾಯಿತ ಕಾರ್ಮಿಕರಿಗೆ ವಿತರಿಸಲಾದ ಸೌಲಭ್ಯಗಳು ಈ ಕೆಳಗಿನಂತಿವೆ.

ಕ್ರ.ಸಂ	ಧನಸಹಾಯದ ವಿವರ	2018–19	2019–20	2020–21
1	ಶೈಕ್ಷಣಿಕ ಧನ ಸಹಾಯ	1261	1114	199
2	ಮದುವೆ ಧನ ಸಹಾಯ	139	82	66
3	ವೈದ್ಯಕೀಯ ಧನ ಸಹಾಯ	23	17	16
4	ಹೆರಿಗೆ ಧನ ಸಹಾಯ	16	3	4
5	ಪಿಂಚಣಿ	13	07	–
6	ಅಂತ್ಯ ಸಂಸ್ಕಾರ ಮತ್ತು ಅನುಗ್ರಹ ರಾಶಿ	09	17	11
7	ಅಪಘಾತ ಪರಿಹಾರ	–	–	01
	ಒಟ್ಟು	1461	1240	297

ಕಾಇ 398 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 279
2. ಮಾನ್ಯ ಸದಸ್ಯರ ಹೆಸರು : ಶ್ರೀ ವೆಂಕಟರಮಣಯ್ಯ ಟಿ (ದೊಡ್ಡಬಳ್ಳಾಪುರ)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಲಾಕ್‌ಡೌನ್ ಅವಧಿಯಲ್ಲಿ ವಲಸೆ ಕಾರ್ಮಿಕರಿಗೆ ರಾಜ್ಯ ಸರ್ಕಾರವು ನೀಡಿರುವ ಸೌಲಭ್ಯಗಳು ಯಾವುವು; ಇವುಗಳಿಗೆ ರಾಜ್ಯ ಸರ್ಕಾರವು ಮಾಡಿರುವ ವೆಚ್ಚವೆಷ್ಟು (ವಿವರಗಳನ್ನು ನೀಡುವುದು);	ಲಾಕ್‌ಡೌನ್ ಅವಧಿಯಲ್ಲಿ ಸಂಕಷ್ಟಕ್ಕೊಳಗಾದ ವಲಸೆ ಕಾರ್ಮಿಕರು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರಿಗೆ ಸದರಿ ಅವಧಿಯಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:–** ➢ ಕೋವಿಡ್–19 ರಿಂದ ರಕ್ಷಣೆ ಪಡೆಯಲು ಮಾಸ್ಕ್, ಸಾಬೂನು, ಸ್ಯಾನಿಟೈಸರ್ ಇತ್ಯಾದಿಗಳನ್ನು ಒದಗಿಸಲು ಹಾಗೂ ಈ ಸಾಂಕ್ರಾಮಿಕ ರೋಗದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ಸಂವಹನ ಚಟುವಟಿಕೆಗಳಿಗಾಗಿ ಪ್ರತಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ.5 ಲಕ್ಷಗಳಂತೆ 41 ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಒಟ್ಟು ರೂ.2.05 ಕೋಟಿಗಳನ್ನು ಬಿಡುಗಡೆಗೊಳಿಸುವ ಮೂಲಕ ವೆಚ್ಚ ಮಾಡಲಾಗಿದೆ. ➢ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರಿಗೆ ಊಟೋಪಚಾರ, ವಸತಿ ಇತ್ಯಾದಿ ಮೂಲಸೌಕರ್ಯಗಳನ್ನು ಒದಗಿಸಲು, ವ್ಯವಸ್ಥೆ ಮಾಡಿದ ಸಮುದಾಯ ಭವನ / ಕಲ್ಯಾಣ ಮಂಟಪ / ಖಾಸಗಿ ಕಲ್ಯಾಣ ಮಂಟಪಗಳ ವೆಚ್ಚವನ್ನು ಭರಿಸಲು ನಿರ್ದೇಶಕರು, ಕರ್ನಾಟಕ ರಾಜ್ಯ ಕಾರ್ಮಿಕರ ಅಧ್ಯಯನ ಸಂಸ್ಥೆಗೆ ರೂ.1.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ➢ ಬೆಂಗಳೂರು ಮತ್ತು ರಾಜ್ಯದಾದ್ಯಂತ ಸಂಕಷ್ಟಕ್ಕೊಳಗಾದ ಅಸಂಘಟಿತ ವಲಯಕ್ಕೆ ಸೇರಿದ ಎಲ್ಲಾ ವಲಸೆ ಕಾರ್ಮಿಕರನ್ನು (ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರನ್ನು ಹೊರತುಪಡಿಸಿ) ಗುರುತಿಸಿ, ಸಿದ್ದಪಡಿಸಿದ ಆಹಾರ ಹಾಗೂ ಪಡಿತರ ಕಿಟ್ ಅನ್ನು ವಿತರಿಸಲು ತಗಲಿರಬಹುದಾದ ಅಂದಾಜು ವೆಚ್ಚ ರೂ. 5.00 ಕೋಟಿ (ಐದು ಕೋಟಿ ರೂಪಾಯಿಗಳು ಮಾತ್ರ)ಗಳನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಮರುಪಾವತಿಸಲಾಗಿದೆ. ➢ ಶೀಘ್ರವಾಗಿ ಹರಡುತ್ತಿರುವ ಕೋವಿಡ್–19ರ ಕಾರಣ, ಕರ್ನಾಟಕದಿಂದ ಇತರೆ ರಾಜ್ಯಗಳಿಗೆ ತೆರಳುತ್ತಿರುವ ಹಾಗೂ ಇತರೆ ರಾಜ್ಯಗಳಿಂದ ಕರ್ನಾಟಕಕ್ಕೆ ಬರಲಿಚ್ಛಿಸುವ ವಲಸೆ ಕಾರ್ಮಿಕರಿಗೆ ಸಹಾಯ ಮಾಡಲು,

		ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಂಟಿಯಾಗಿ 24/7 ಉಚಿತ ಸಹಾಯವಾಣಿಯನ್ನು ತೆರೆಯಲಾಗಿದ್ದು, 2 ಮಂಡಳಿಯು ಸಹಾಯವಾಣಿಗೆ ತಗಲು ವೆಚ್ಚವನ್ನು ಸಮಪ್ರಮಾಣದಲ್ಲಿ ಭರಿಸುವಂತೆ ಸರ್ಕಾರವು ಸೂಚಿಸಿರುತ್ತದೆ. ಪ್ರಸ್ತುತ ಸದರಿ ಉದ್ದೇಶಕ್ಕಾಗಿ ಒಟ್ಟು ರೂ. 77,98,964/- ಗಳನ್ನು ವೆಚ್ಚ ಮಾಡಲಾಗಿದೆ. **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-** 1. ಮಾನ್ಯ ಮುಖ್ಯಮಂತ್ರಿಗಳ ಘೋಷಣೆಯಂತೆ 16,48,431 ಮಂಡಳಿಯ ಫಲಾನುಭವಿಗಳಿಗೆ ತಲಾ ರೂ.5,000/- ಗಳಂತೆ ಒಟ್ಟು ರೂ. 824.21 ಕೋಟಿ ಸಹಾಯ ಧನವನ್ನು ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿರುತ್ತದೆ. 2. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಕೋರೋನಾ ವೈರಸ್ ಬಗ್ಗೆ ಅರಿವು ಮೂಡಿಸಲು ಮತ್ತು ಮಾಸ್ಕ್ ಸ್ಯಾನಿಟೈಸರ್ ಹಾಗೂ ಸೋಪುಗಳನ್ನು ಕಾರ್ಮಿಕರಿಗೆ ವಿತರಣೆ ಮಾಡಲು 41 ಉಪ ವಿಭಾಗ ಮಟ್ಟದ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. 3. ಮಂಡಳಿಯ ವತಿಯಿಂದ ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದ್ದ 10 ಶಿಶುಪಾಲನಾ ಕೇಂದ್ರಗಳಲ್ಲಿನ ಮಕ್ಕಳಿಗಾಗಿ Packed Nutrition Food & Toys ಗಳನ್ನು ಪೋಷಕರ ಮನೆಗಳಿಗೆ ತಲುಪಿಸಲಾಗಿರುತ್ತದೆ. 4. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಆಹಾರ ಒದಗಿಸಲು ಮತ್ತು ಅವರ ಸಮಸ್ಯೆಗಳನ್ನು ಆಲಿಸಲು 24*7 ಸಹಾಯವಾಣಿ (155214) ಯನ್ನು ಸ್ಥಾಪಿಸಲಾಗಿರುತ್ತದೆ. 5. ವಸತಿ ರಹಿತ ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಜಿಲ್ಲಾಡಳಿತದ ಸಹಕಾರದೊಂದಿಗೆ ವಸತಿ ಸೌಲಭ್ಯ ಮತ್ತು ಊಟವನ್ನು ಒದಗಿಸಲಾಗಿರುತ್ತದೆ. 6. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಲಾಕ್‌ಡೌನ್ ಪ್ರಾರಂಭದಿಂದ ಇದುವರೆಗೂ 89.87 ಲಕ್ಷ ಸಿದ್ಧಪಡಿಸಿದ ಆಹಾರದ ಪ್ಯಾಕೆಟ್ ಗಳನ್ನು ವಿತರಿಸಲಾಗಿರುತ್ತದೆ. 7. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ 7.15 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್ ಗಳನ್ನು ತಯಾರಿಸಿ ವಿತರಿಸಲಾಗುತ್ತಿದೆ. 8. ವಲಸೆ ಕಟ್ಟಡ ಕಾರ್ಮಿಕರನ್ನು ತಮ್ಮ ತವರು ರಾಜ್ಯಗಳಿಗೆ ವಿಶೇಷ ಶ್ರಮಿಕ ರೈಲುಗಳ ಮೂಲಕ ಕಳುಹಿಸಲು ಅಗತ್ಯ ಕ್ರಮ ಕೈಗೊಂಡಿದ್ದು, ಪ್ರಯಾಣದ ಸಮಯದಲ್ಲಿ ಆಹಾರ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಮೇಲ್ಕಂಡ ಕ್ರಮಗಳಿಗಾಗಿ ಮಂಡಳಿಯಿಂದ **ರೂ.911.18** ಕೋಟಿಯಷ್ಟು ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ.

(279)

		04	ಉಚಿತ ಸಹಾಯವಾಣಿ (24*7)	ರೂ.0.78 ಕೋಟಿ
			ಒಟ್ಟು ವೆಚ್ಚ	**ರೂ.08.83 ಕೋಟಿ**

<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u>:-

ಈ ಉದ್ದೇಶಕ್ಕಾಗಿ ಮಂಡಳಿಯಿಂದ 52.70 ಕೋಟಿಯಷ್ಟು ಮೊತ್ತವನ್ನು ಖರ್ಚು ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ:

ಕ್ರ ಸಂ.	ಸೌಲಭ್ಯ	ಖರ್ಚಾದ ಮೊತ್ತ
1.	ಆಹಾರ ಸಾಮಾಗ್ರಿಗಳ ಕಿಟ್	51,03,30,385/-
2.	ಊಟದ ಪ್ಯಾಕೇಟ್	1,25,39,400/-
3.	ಮೊಟ್ಟೆ	7,58,835/-
4.	ಬಾಳೆ ಹಣ್ಣು ಮತ್ತು ಮೂಸಂಬಿ	28,67,660/-
5.	ಮಜ್ಜಿಗೆ	5,81,242/-
	ಒಟ್ಟು	**52,70,77,522/-**

ಕಾಇ 401 ಎಲ್‌ಇಟಿ 2020

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಆ)	ಸರ್ಕಾರದಿಂದ ರಾಜ್ಯ ವ್ಯಾಪ್ತಿ ಎಷ್ಟು ವಲಸೆ ಕಾರ್ಮಿಕರಿಗೆ ಆಹಾರ ಕಿಟ್‌ಗಳು, ಹಾಲು, ಹಣ್ಣು ಮುಂತಾದವುಗಳನ್ನು ವಿತರಿಸಲಾಗಿದೆ (ತಾಲ್ಲೂಕುವಾರು ವಿವರಗಳನ್ನು ನೀಡುವುದು)	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರಿಗಾಗಿ 7.15 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ತಯಾರಿಸಿ ವಿತರಿಸಲಾಗಿರುತ್ತದೆ. ಈ ಕಿಟ್ ವಿತರಣೆಯ ಪ್ರದೇಶವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ. ವಲಸೆ ಕಟ್ಟಡ ಕಾರ್ಮಿಕರನ್ನು ತಮ್ಮ ತವರು ರಾಜ್ಯಗಳಿಗೆ ಬೆಂಗಳೂರಿನಿಂದ ವಿಶೇಷ ಶ್ರಮಿಕ ರೈಲುಗಳ ಮೂಲಕ ಕಳುಹಿಸುವ ಸಂದರ್ಭದಲ್ಲಿನ ಪ್ರಯಾಣದ ಸಮಯದಲ್ಲಿ 1,88,715 ಪ್ಯಾಕೇಟ್ಸ್ ಊಟ, 80,300 ಮೊಟ್ಟೆ, 29,959 ಕೆಜಿ ಬಾಳೆ ಹಣ್ಣು, 50,820 ಕೆಜಿ ಮೂಸಂಬಿ ಮತ್ತು 75,400 ಮಜ್ಜಿಗೆ ಪ್ಯಾಕೇಟ್‌ಗಳನ್ನು ವಿತರಿಸಲಾಗಿರುತ್ತದೆ.
ಇ)	ಈ ಉದ್ದೇಶಕ್ಕಾಗಿ ಸರ್ಕಾರ ಖರ್ಚು ಮಾಡಿರುವ ವೆಚ್ಚವೆಷ್ಟು (ವಿವರಗಳನ್ನು ನೀಡುವುದು)	**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-** ಈ ಉದ್ದೇಶಕ್ಕಾಗಿ ಮಂಡಳಿಯ ವತಿಯಿಂದ ಮಾಡಿರುವ ವೆಚ್ಚದ ವಿವರ ಈ ಕೆಳಗಿನಂತಿದೆ:-

ಕ್ರ.ಸಂ.	ಉದ್ದೇಶ	ಮೊತ್ತ (ಕೋಟಿಗಳಲ್ಲಿ)
01	ಸಾಂಕ್ರಾಮಿಕ ರೋಗದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ಸಂವಹನ ಚಟುವಟಿಕೆಗಳಿಗೆ ಹಾಗೂ ಮಾಸ್ಕ್, ಸಾಬೂನು, ಸ್ಯಾನಿಟೈಸರ್ ಇತ್ಯಾದಿಗಳನ್ನು ಒದಗಿಸಲು.	ರೂ.2.05 ಕೋಟಿ
02	ಅಸಂಘಟಿತ ಕಾರ್ಮಿಕರಿಗೆ ಊಟೋಪಚಾರ, ವಸತಿ ಇತ್ಯಾದಿ ಮೂಲಸೌಕರ್ಯಗಳನ್ನು ಒದಗಿಸಲು, ವ್ಯವಸ್ಥೆ ಮಾಡಿದ ಸಮುದಾಯ ಭವನ / ಕಲ್ಯಾಣ ಮಂಟಪ / ಖಾಸಗಿ ಕಲ್ಯಾಣ ಮಂಟಪಗಳ ವೆಚ್ಚಕ್ಕಾಗಿ.	ರೂ.1.00 ಕೋಟಿ
03	ಅಸಂಘಟಿತ ವಲಯಕ್ಕೆ ಸೇರಿದ ಎಲ್ಲಾ ವಲಸೆ ಕಾರ್ಮಿಕರನ್ನು (ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರನ್ನು ಹೊರತುಪಡಿಸಿ) ಗುರುತಿಸಿ, ಸಿದ್ದಪಡಿಸಿದ ಆಹಾರ ಹಾಗೂ ಪಡಿತರ ಕಿಟ್ ಅನ್ನು ವಿತರಿಸಿರುವುದಕ್ಕಾಗಿ.	ರೂ.5.00 ಕೋಟಿ

ಅನುಬಂಧ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಪೂರೈಸಲಾದ ಫುಡ್ ಕಿಟ್‌ಗಳ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಹಂಚಿಕೆ ಮಾಡಲಾಗಿರುವ ಫುಡ್ ಕಿಟ್‌ಗಳ ಸಂಖ್ಯೆ
1	ಬೆಂಗಳೂರು ನಗರ	3,18,705
2	ಬಿ.ಬಿ.ಎಂ.ಪಿ	98,012
3	ಬೆಂಗಳೂರು ಗ್ರಾಮಾಂತರ	14,935
4	ರಾಮನಗರ	9,000
5	ಚಿಕ್ಕಬಳ್ಳಾಪುರ	7,000
6	ಕೋಲಾರ	3,025
7	ತುಮಕೂರು	23,375
8	ಮಂಡ್ಯ	8,798
9	ಹಾಸನ	27,000
10	ಉಡುಪಿ	5,000
11	ಕಲಬುರಗಿ	17,000
12	ಚಿತ್ರದುರ್ಗ	9,000
13	ಕೊಪ್ಪಳ	12,000
14	ಹಾವೇರಿ	30,500
15	ಉತ್ತರ ಕನ್ನಡ	24,000
16	ಹುಬ್ಬಳ್ಳಿ – ಧಾರವಾಡ	27,500
17	ದಾವಣಗೆರೆ	6,250
18	ಬೆಳಗಾವಿ	53,000
19	ಚಾಮರಾಜನಗರ	5,000
20	ಬೀದರ್	4,000
21	ಯಾದಗೀರಿ	3,000
22	ರಾಯಚೂರು	3,000
23	ಗದಗ	12,000
	ಒಟ್ಟು	**7,21,100**

ಮಂಡಳಿಯಿಂದ ಪೂರೈಸಲಾದ ಫುಡ್ ಕಿಟ್‌ಗಳ ಒಟ್ಟು ಸಂಖ್ಯೆ : 7,15,000
ಅಕ್ಷಯ ಪಾತ್ರ ಫೌಂಡೇಶನ್ ರವರಿಂದ ಪ್ರಾಯೋಜಿಸಿದ ಉಚಿತ ಫುಡ್‌ಕಿಟ್‌ಗಳ ಸಂಖ್ಯೆ : 20,000
ಒಟ್ಟು ಕಿಟ್‌ಗಳ ಸಂಖ್ಯೆ : 7,35,000
ಹಂಚಿಕೆ ಮಾಡಲಾದ ಒಟ್ಟು ಫುಡ್ ಕಿಟ್‌ಗಳ ಸಂಖ್ಯೆ : 7,21,100
ಹಂಚಿಕೆಗೆ ಬಾಕಿ ಉಳಿದಿರುವ ಕಿಟ್‌ಗಳ ಸಂಖ್ಯೆ : 13,900

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **429**

ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)

ಉತ್ತರಿಸುವ ದಿನಾಂಕ : 10.12.2020

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೈದ್ರಾಬಾದ್-ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಉಪ ನಿರ್ದೇಶಕರ ಕಛೇರಿ ಹಾಗೂ ಅಪರ ಆಯುಕ್ತರ ಕಛೇರಿಯಲ್ಲಿ ದೀರ್ಘ ಕಾಲದಿಂದ ಒಂದೇ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಂದ ಸರ್ಕಾರ / ಸಾರ್ವಜನಿಕ ಮಹತ್ವದ ಕೆಲಸಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಬಂದಿದೆ.
ಆ)	ಹೈದ್ರಾಬಾದ್-ಕರ್ನಾಟಕ ಪ್ರದೇಶದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪ ನಿರ್ದೇಶಕರ ಕಛೇರಿ ಹಾಗೂ ಅಪರ ಆಯುಕ್ತರ ಕಛೇರಿಯಲ್ಲಿ, 05 ವರ್ಷಗಳಿಗಿಂತ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ಒದಗಿಸುವುದು)	ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ವಿಭಾಗದ ವ್ಯಾಪ್ತಿಯಲ್ಲಿ 5 ವರ್ಷಗಳಿಗಿಂತ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರವನ್ನು **ಅನುಬಂಧ-01** ರಲ್ಲಿ ಒದಗಿಸಿದೆ.
ಇ)	ಇಂತಹ ಸಿಬ್ಬಂದಿಗಳ ತಾತ್ಸಾರ ಮನೋಭಾವನೆಯಿಂದ ಆಡಳಿತ ಮೇಲೆ ದುಷ್ಪರಿಣಾಮ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ;	ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 05 ಸೇನೌವ 2020, ದಿನಾಂಕ:26.06.2020ರ ಆದೇಶದಲ್ಲಿ 2020-21 ನೇ ಸಾಲಿಗೆ ಗ್ರೂಪ್-ಬಿ ಮತ್ತು ಗ್ರೂಪ್-ಸಿ ವರ್ಗದ ಅಧಿಕಾರಿ / ನೌಕರರಿಗೆ ಮಾತ್ರ ಅನ್ವಯವಾಗುವಂತೆ ಮಿತಿಗೊಳಿಸಿ 01 ಜೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ.06%ರನ್ನು ಮೀರದಂತೆ ದಿನಾಂಕ: 10.07.2020ರವರೆಗೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಅನುಮತಿ ನೀಡಲಾಗಿರುತ್ತದೆ. ಒಂದೇ ಜಾಗದಲ್ಲಿ 05 ವರ್ಷಕ್ಕಿಂತ ಹೆಚ್ಚಿನ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಮುಂದಿನ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.
ಈ)	ಇಂತಹ ಸಿಬ್ಬಂದಿಗಳನ್ನು ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡುವ ಕುರಿತು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳುವುದು?	

ಸಂಖ್ಯೆ: ಇಡಿ 53 ಎಸ್‌ಟಿಬಿ 2020

(ಎಸ್.ಸುರೇಶ್‌ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು

ಅನುಬಂಧ-1

4 (429)

ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ

2020-21ನೇ ಸಾಲಿನ ಬೋಧಕೇತರ ಅಧಿಕಾರಿ/ ನೌಕರರ ಸಾಮಾನ್ಯ ವರ್ಗಾವಣೆಯ ಕಾರ್ಯನಿರತ ವೃಂದ ಬಲದ ಮಾಹಿತಿ

ಕ್ರಮ ಸಂಖ್ಯೆ	ಹುದ್ದೆಗಳ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ	ವರ್ಗಾವಣೆ ಮಿತಿ: ಮಿತಿ ಪ್ರತಿಶತ	ವರ್ಗಾವಣೆ ಮಿತಿ: ವರ್ಗಾವಣೆ ಮಿತಿ ಪ್ರಕಾರ ವರ್ಗಾವಣೆ ಮಾಡಲು ಅವಕಾಶ	2, 5 & 7 ವರ್ಷ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ	5 ವರ್ಷ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ	10 ವರ್ಷ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ	15 ವರ್ಷ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ	20 ವರ್ಷ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ	ಒಟ್ಟು
1	2	3	4	5	6	7	8	9	10	11	12	13
1	ರಾಜ್ಯ ಪತ್ರಾಂಕಿತ ಸಹಾಯಕರು	4	4	0	6%	0	1	1	0	0	0	1
2	ಸಹಾಯಕ ನಿರ್ದೇಶಕರು (ವಾಣಿಜ್ಯ)	1	0	1	6%	0	0	0	0	0	0	0
3	ಸಹಾಯಕ ನಿರ್ದೇಶಕರು/ ಪತ್ರಾಂಕಿತ ವ್ಯವಸ್ಥಾಪಕರು	40	36	4	6%	2	9	8	0	1	0	9
4	ಲೆಕ್ಕ ಅಧೀಕ್ಷಕರು	25	19	6	6%	1	4	4	0	0	0	4
5	ಅಧೀಕ್ಷಕರು	96	93	3	6%	6	15	8	4	2	1	15
6	ಶೀಘ್ರಲಿಪಿಗಾರರು	15	4	11	6%	0	4	2	1	1	0	4
7	ಲೆಕ್ಕ ಪ್ರಥಮ ದರ್ಜೆ ಸಹಾಯಕರು	34	0	34	6%	0	0	0	0	0	0	0
8	ಪ್ರಥಮ ದರ್ಜೆ ಸಹಾಯಕರು	532	442	90	6%	27	162	76	48	26	12	162
9	ದ್ವಿತೀಯ ದರ್ಜೆ ಸಹಾಯಕರು	889	651	238	6%	39	347	224	94	21	8	347
10	[illegible]	54	31	23	6%	2	29	16	4	4	5	29
11	ಬೆರಳಚ್ಚುಗಾರರು	21	16	5	6%	1	8	0	8	0	0	8

12	ವಾಹನ ಚಾಲಕರು	39	26	13	6%	2	17	4	3	3	7	17
13	ಅಟೆಂಡರ್/ ವಿಜ್ಞಾನ ಸಹಾಯಕರು	177	107	70	6%	6	60	15	21	8	16	60
14	ಸೇವಕರು	1443	1043	400	6%	63	564	210	165	137	52	564
	ಒಟ್ಟು	3370	2472	898		149	1220	568	348	203	101	1220

(ಜಿ.ಎಂ. ವಿಜಯಕುಮಾರ) 3/12/2020
ಸಹ ನಿರ್ದೇಶಕರು (ಆಡಳಿತ)
ಅಪರ ಆಯುಕ್ತರ ಪರವಾಗಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 548
ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ : 10.12.2020
ಉತ್ತರಿಸುವವರು : ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯದ ಎಷ್ಟು ಎಕರೆ ಅರಣ್ಯ ಪ್ರದೇಶಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಒಟ್ಟು **97,475.715** ಹೆಕ್ಟೇರ್ ಪ್ರದೇಶದಲ್ಲಿ ನೀಲಗಿರಿ ಮರಗಳನ್ನು ಬೆಳೆಸಲಾಗಿದೆ. ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ.
ಆ)	ಅರಣ್ಯ ಪ್ರದೇಶದಿಂದ ನೀಲಗಿರಿ ಮರಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಕಾನೂನು ಮಾರ್ಪಾಡು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 37 ಎಫ್‌ಡಿಪಿ 2017 ದಿನಾಂಕ:23.02.2017 ರಲ್ಲಿ ರಾಜ್ಯಾದ್ಯಂತ ನೀಲಗಿರಿ ಬೆಳೆಯುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ. ಮಾನ್ಯ ಉಚ್ಚ ನ್ಯಾಯಾಲಯವು ಈ ಅಧಿಸೂಚನೆಗೆ ರಿಟ್ ಅರ್ಜಿ ಸಂಖ್ಯೆ: 57852-855/2017 ರಲ್ಲಿನ ದಿನಾಂಕ: 29.01.2019 ರ ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿದ್ದು, ತಡೆಯಾಜ್ಞೆ ಇದುವರೆಗೂ ಮುಂದುವರೆದಿರುತ್ತದೆ (ಅಧಿಸೂಚನೆಯ ಪ್ರತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ).
ಇ)	ಬಂದಿದ್ದರೆ, ಇದುವರೆವಿಗೂ ಎಷ್ಟು ಎಕರೆ ಪ್ರದೇಶದಲ್ಲಿನ ನೀಲಗಿರಿ ಮರಗಳನ್ನು ತೆರವುಗೊಳಿಸಲಾಗಿದೆ; ಉಳಿದ ಪ್ರದೇಶಗಳಲ್ಲಿ ನೀಲಗಿರಿ ಮರಗಳನ್ನು ಎಷ್ಟು ಅವಧಿಯಲ್ಲಿ ತೆರವುಗೊಳಿಸಲಾಗುವುದು? (ವಿವರ ನೀಡುವುದು)	ಕೇಂದ್ರ ಸರ್ಕಾರದಿಂದ ಮಂಜೂರಾದ ವಿವಿಧ ಪ್ರಾದೇಶಿಕ ವಿಭಾಗಗಳ ಕಾರ್ಯ ಯೋಜನೆಯನ್ವಯ ನಿಗಧಿಪಡಿಸಿದ ಕಾಲಾವಧಿಗನುಗುಣವಾಗಿ ನೀಲಗಿರಿ ಮರಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಇದುವರೆಗೂ ರಾಜ್ಯಾದ್ಯಂತ **25106.73 ಹೆಕ್ಟೇರ್** ಪ್ರದೇಶದಲ್ಲಿನ ನೀಲಗಿರಿ ಮರಗಳನ್ನು ತೆರವುಗೊಳಿಸಲಾಗಿದೆ. ಮಂಜೂರಾದ ಕಾರ್ಯ ಯೋಜನೆಯನ್ವಯ ಉಳಿದ ಪ್ರದೇಶಗಳಲ್ಲಿ ನೀಲಗಿರಿ ಮರಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ: ಅಪಜೀ 51 ಎಫ್‌ಡಿಪಿ 2020

(ಆನಂದ್ ಸಿಂಗ್)
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಅನುಬಂಧ – 1

ಕ್ರ ಸಂ	ವೃತ್ತ	ವಿಭಾಗ	ತಾಲ್ಲೂಕು	ಹೆಕ್ಟೇರ್
1.	ಬೆಂಗಳೂರು	ಬೆಂಗಳೂರು ನಗರ	ಬೆಂಗಳೂರು ಉತ್ತರ	35.00
			ಬೆಂಗಳೂರು ದಕ್ಷಿಣ	252.93
		ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	25.00
			ದೊಡ್ಡಬಳ್ಳಾಪುರ	1623.97
			ನೆಲಮಂಗಲ	558.24
			ಹೊಸಕೋಟೆ	1368.88
		ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	2364
			ಗೌರಿಬಿದನೂರು	656
			ಗುಡಿಬಂಡೆ	290
			ಶಿಡ್ಲಘಟ್ಟ	814
			ಬಾಗೇಪಲ್ಲಿ	547
			ಚಿಂತಾಮಣಿ	205
		ಕೋಲಾರ	ಕೋಲಾರ	1499.80
			ಮಾಲೂರು	1499.80
			ಬಂಗಾರಪೇಟೆ	1599.76
			ಕೆ.ಜಿ.ಎಫ್	399.834
			ಮುಳಬಾಗಿಲು	4000
			ಶ್ರೀನಿವಾಸಪುರ	4399.834
		ರಾಮನಗರ	ರಾಮನಗರ	1013.09
			ಚನ್ನಪಟ್ಟಣ	458.24
			ಮಾಗಡಿ	851.161
			ಕನಕಪುರ	86.24
2.	ಚಾಮರಾಜನಗರ	ಕೊಳ್ಳೇಗಾಲ	ಹನೂರು	502
			ಕೊಳ್ಳೇಗಾಲ	145
3.	ಧಾರವಾಡ	ಗದಗ	ಗದಗ	150
			ಶಿರಹಟ್ಟಿ	350
			ಮುಂಡರಗಿ	400
		ಹಾವೇರಿ	ಹಾವೇರಿ	350
4.	ಹಾಸನ	ಹಾಸನ	ಹಾಸನ	1048.75
			ಬೇಲೂರು	1057.5
			ಆಲೂರು	81.25
			ಅರಕಲಗೂಡು	202.5
			ಹೊಳೆನರಸೀಪುರ	377.9
			ಚೆನ್ನರಾಯಪಟ್ಟಣ	553.33
			ಅರಸೀಕೆರೆ	955
		ತುಮಕೂರು	ತುಮಕೂರು	503.77
			ಗುಬ್ಬಿ	1055.16
			ಕುಣಿಗಲ್	664.58
			ತಿಪಟೂರು	578.88
			ಚಿಕ್ಕನಾಯಕನಹಳ್ಳಿ	624.18
			ಮಧುಗಿರಿ	60.03
			ಕೊರಟಗೆರೆ	398.45
			ಶಿರಾ	339.61
			ಪಾವಗಡ	571.67

5.	ಮೈಸೂರು	ಮೈಸೂರು	ಮೈಸೂರು	985.61
			ತಿ.ನರಸೀಪುರ	183.00
			ಹೆಚ್.ಡಿ.ಕೋಟೆ	101.98
			ಸರಗೂರು	509.99
			ನಂಜನಗೂಡು	96.11
		ಹುಣಸೂರು	ಹುಣಸೂರು	99.50
			ಪಿರಿಯಾಪಟ್ಟಣ	619.50
			ಕೆ.ಆರ್.ನಗರ	1011.70
		ಮಂಡ್ಯ	ಕೆ.ಆರ್.ಪೇಟೆ	8274.20
			ಮದ್ದೂರು	798.75
			ಮಳವಳ್ಳಿ	4496.50
			ಮಂಡ್ಯ	6954.78
			ನಾಗಮಂಗಲ	17858.54
			ಪಾಂಡವಪುರ	4758.45
			ಶ್ರೀರಂಗಪಟ್ಟಣ	3847.30
6.	ಕಲಬುರಗಿ	ಬೀದರ್	ಬಸವಕಲ್ಯಾಣ	1194.00
			ಭಾಲ್ಕಿ	535.00
			ಬೀದರ	1355.64
			ಹುಮನಾಬಾದ	1944.60
		ರಾಯಚೂರು	ರಾಯಚೂರು	65.00
			ಲಿಂಗಸೂಗೂರು	25.00
		ಕಲಬುರಗಿ	ಕಲಬುರಗಿ	470.40
			ಚಿಂಚೋಳಿ	632.44
			ಚಿತ್ತಾಪುರ	466.4
			ಆಳಂದ	533.25
7.	ಬೆಳಗಾವಿ	ಬಾಗಲಕೋಟೆ	ಬಾಗಲಕೋಟೆ	623.39
			ಬಾದಾಮಿ	176.30
			ಹುನಗುಂದ	513.75
			ಜಮಖಂಡಿ	137.96
			ಬೀಳಗಿ	225.475
			ಮುಧೋಳ	360.854
		ಗೋಕಾಕ	ಗೋಕಾಕ	494.2
			ಸವದತ್ತಿ	82.616
			ರಾಮದುರ್ಗ	1124.304
			ರಾಯಭಾಗ	135.904
			ಚಿಕ್ಕೋಡಿ	265.983

ಅನುಬಂಧ -2

548

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ-III Part-III	ಬೆಂಗಳೂರು, ಶನಿವಾರ, ಫೆಬ್ರವರಿ ೨೫, ೨೦೧೭ (ಫಾಲ್ಗುಣ ೬, ಶಕ ವರ್ಷ ೧೯೩೮) Bengaluru, Saturday, February 25, 2017 (Palguna 6, Shaka Varsha 1938)	ನಂ. ೨೦೮ No. 208

FOREST, ENVIRONMENT & ECOLOGY SECRETARIAT

NOTIFICATION

No. FEE 37 FDP 2017, Bengaluru, dated: 23.02.2017

Whereas, Eucalyptus species in Karnataka has been a subject of controversy since the 1980s. Though extensively planted with the objectives of getting fuelwood and small timber in the World Bank aided Social Forestry Programme, farmers perceived it to be a species that needed lot of water (drying the soil), not allowing any undergrowth etc. In 1984, its planting in areas receiving more than 750 mm. rainfall was banned by the Government due to it being affected by Phanerochaete salmonicolor, a fungus. The Government also removed eucalyptus from the list of species to be planted under the rural development schemes sponsored by the Government if India. In 1990, the Government restricted the planting of this species to areas receiving a rainfall of between 500 mm and 750 mm.

Whereas, in 2011, a Circular was issued by the Government vide No. FEE 29 FAP 2011, dated: 19.03.2011 banning raising of Eucalyptus seedlings in nurseries of Forest Department and planting of Eucalyptus in any of the afforestation schemes on Forest lands and Government lands in the entire State..Public representatives and members of publics in different districts sought ban on cultivation of Eucalyptus in private lands also. Pursuant to this, in 2016 the Karnataka Preservation of Trees (Amendment) Act, 2016 was enacted with the following provision, namely:-

> "**27AA. Power of State Government to regulate the choice of species planted.**- The State Government may, if it considers necessary in public interest that planting, propagating or cultivating any tree species is detrimental to the environment or ground water availability, or the species is or liable to cause colonization of alien or invasive species, or is the host or alternate host for pests and vectors that can cause diseases adversely affecting the hygiene of the environment, by notification regulate the planting or cultivation of such species in such areas, and for such time as may be deemed necessary."

Whereas, since 24the November 2016, representations were being made by people of the State, generally addressed to the Honourable Chief Minister of Karnataka and copied to offices of the Forest department against banning the cultivation of Acacia auriculiformis and Eucalyptus species. And some requesting to ban the cultivation of Acacia auriculiformis and Eucalyptus species.

Whereas, a meeting was held under the Chairpersonship of the Honourable Minister for Forests, Ecology and Environment Department, Karnataka on 16.01.2017 to discuss the matter of taking a decision on the cultivation of Acacia auriculiformis and Eucalyptus in Karnataka.

Whereas, in the discussions that took place in the meeting, amongst others the following papers/findings/orders were considered-

(A) The paper "Eucalyptus in Indis" written by Mr. R.M. Palanna, IFS, the then Conservator of Forests, Kanara Circle, Karnataka published in FAO (taken from the FAO Corporate document repository available online. It details the findings of a collaborative research taken up between the Karnataka Forest Department, the Institute of Hydrology (UK) and Mysore Paper-Mills, at three sites receiving 800 mm. average rainfall. Two of the sites were in Shimoga district and one in Hosakote (Bangalore Rural district). As per the third and fourth findings, the usage of water by forests (eucalyptus plantations) was higher than agriculture crops (about 2 times higher than from Ragi) and in Hosakote, there were indications that water usage by eucalyptus over three dry years of measurement was greater than the rainfall.

(B) The paper "Impact of Eucalyptus plantations on Ground Water availability in South India" written by Mukund Joshi and K. Palanisami (both are in the field of academics, one in University of Agriculture Sciences, Bangalore, and another with the International Water Management Institute, Hyderabad) which deals with ground water availability of Kolar District. The last two paragraphs of the conclusions are cited below –

"The study indicated that 20 years of continuous cultivation of Eucalyptus in private and public lands deepened the freshly dug bore wells up to 260 m, as compared to mean depth of bore wells (177 m) in the study area of 21 villages of Kolar district. The distance from the eucalyptus plantation had negative correlation with the depth of freshly dug bore wells. The bore well yields were reduced by 35 to 42 per cent in the study area during the span of 3-5 years, when they were located within a diameter of 1 Km from Eucalyptus plantation. The reduction was to the tune of 25 to 37 percent, when bore wells were located within a diameter of 1-3 Km from such plantations. These observations were recorded under identical set of soil, rainfall, rock formations and cropping.

Eucalyptus is a well-known forest species of high water uptake ranging from 50 Lt/d/plant to even 90 Lt/d/plant, depending upon the adequacy of supply. But, it is also reported that, in stress situation, its roots can grow even up to 20-30 feet and extract more water. In fact, Eucalyptus along with Dalbergia is recommended as bio-drainage species to poorly drained areas suggesting its great potentiality of water uptake. It may not be wise to continue Eucalyptus plantations in these districts, in the larger interest of protecting the ground water resources. It may be even necessary to ban its cultivation by law."

This paper was submitted to the Honourable High Court of Karnataka in Writ Petition 24046 of 2015 praying that the State ban the cultivation of Eucalyptus all over the State by law. The complete order of this case is as below-

ORDER

1. *A representation has been submitted on June 1, 2015, addressed to the Additional Chief Secretary, Forests, Ecology and Environment Department,*

548

Government of Karnataka, Bengaluru, regarding cultivation of eucalyptus trees in the State.

2. We dispose of this writ petition, requesting the Additional Chief Secretary to consider the representation, after giving opportunities of hearing to all concerned in the matter and if necessary, by holding an investigation as to the allegations regarding method of cultivation of the said trees in the State.

3. We make no order as to costs.

(C) The paper "Effects of Exotic Eucalyptus Plantation on the Ground and Surface Water of District Malakand, Pakistan" written by Hazrat Bilal, Sabia Nisa and Syed Shahid Ali who are researchers in the International Islamic University, Islamabad, Pakistan. The concluding part of the paper is cited below –

> *"The results indicate that introduction of Eucalyptus species plantation has adverse impacts on surface and ground water in district Malakand. Eucalyptus has been debated for decades because of its adverse impacts like soil erosion, dryness of springs, lowering water table, competition with crops, micro climate change, affect soil fertility, and consumption of much ground water associated with its high growth rate. Ground water and surface water resources should be monitored regularly to determine the conservation and regeneration of natural forests and better utilization and improvement of marginal and degraded lands. Moreover introduction of new plant species to an area should be made after scientific observation of climatic conditions of the area and keeping in mind the possible effects of these species on the environment. Caution needs to be exercised while planning large scale transfer of lands into Eucalyptus plantation."*

(D) The impact of Eucalyptus on environment and ground water came up before the Honourable National Green Tribunal, Principal Bench, New Delhi, in Original Application No.9 of 2014, the Safal Bharat Guru Parampara Vs. State of Punjab & others. Many research papers, national and international, related to eucalyptus were debated upon in the case. The Honourable National Green Tribunal settled the matter of species controversy in paragraph 32 as follows –

> *"In view of the same while reiterating the findings of the Tribunal dated 16-04-2015 in respect of eucalyptus plants, we record the above said studies and hold that there cannot be a complete ban on eucalyptus plantation in the State of Punjab. However it is for the Forest department to evolve appropriate policy by regulating and restricting the growth of the said plantation in the water logged and safe areas by way of proper regulations and continuously monitoring of the same. Issue No. 2 is answered accordingly"*

Whereas, the second sentence of this paragraph 32 indicates that the Honourable National Green Tribunal probably felt that Eucalyptus is a water demanding (the efficiency of water use is not the point) species that is suited for waterlogged and areas with higher (nearer to surface) water table levels only.

Whereas, it is a well-known fact that ground water tables in most districts of the State are going further down over the years quite rapidly. In terms of status of groundwater exploitation, many taluks in the State are over exploited or in critical or semi-critical stage. But Eucalyptus plantations are quite common in many districts. They are not the areas the Honourable National Green Tribunal found favour with for planting / Eucalyptus in the aforecietd order. In view of the

research findings and orders cited above, there is sufficient reason to believe that the high intensit and number of Eucalyptus plantations is one of the many causes for the falling levels of water table. This needs to be checked.

Whereas, it is also a fact that the Forest department has stopped raising eucalyptus plantations in all notified forests, Government lands and al lands in Malnad and Semi Malnad areas vide Government of Karnataka Circular No. FEE 29 FAP 2011, dated 19.03.2011. Hence, the following Notification, namely:-

And whereas, Government of Karnataka considers it necessary in public interest that planting, propagating of cultivating the tree species of Eucalyptus is detrimental to the environment or groundwater availability or the said species causes colonization of alien or invasive species or is the host or alternate host for pests and vectors that can cause diseases adversely affecting the hygiene of the environment in the districts of Karnataka State.

Now therefore, in exercise of the powers conferred by section 27AA of the Karnataka Preservation of Trees Act, 1976 (Karnataka Act 76 of 1976) the Government of Karnataka hereby notify that no fresh cultivation and planting of species of Eucalyptus shall be done in all the districts of Karnataka State with immediate effect and until further notification:

Provided that this restriction shall not apply to the Eucalyptus already planted as on the date of issue of this notification and for the coppice that may shoot up after the harvest of existing tree or plantation of Eucalyptus.

By Order and in the name of the Governor of the Karnataka

H.S.BHAGYALAKSHMI
Under Secretary to Government
Forest, Ecology and Environment Department

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	549
ಮಾನ್ಯ ಸದಸ್ಯರ ಹೆಸರು	:	ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ	ಕರ್ನಾಟಕ ರಾಜ್ಯದ ಎಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೆಂಟರ್‌ಗಳನ್ನು ತೆರೆಯಲಾಗಿದೆ; ಪ್ರತಿನಿತ್ಯ ಎಷ್ಟು ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿ 167 ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೆಂಟರ್‌ಗಳನ್ನು ತೆರೆಯಲಾಗಿದೆ; ಪ್ರತಿನಿತ್ಯ 1620 ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ. (ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)
ಆ	ಡಯಾಲಿಸಿಸ್ ಸೆಂಟರ್‌ಗಳ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಿದ್ದು, ಅಗತ್ಯ ಮೂಲ ಔಷಧಿ ಸಾಮಗ್ರಿಗಳಿಲ್ಲದೆ ಸರಿಯಾಗಿ ಕಾರ್ಯನಿರ್ವಹಿಸದೆ ಡಯಾಲಿಸಿಸ್ ಪಡೆಯುವ ರೋಗಿಗಳಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಇ	ಬಂದಿದ್ದರೆ, ನ್ಯೂನತೆ ಸರಿಪಡಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?	ಹೊಸದಾಗಿ ಟೆಂಡರ್ ಕರೆಯುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಸಂಖ್ಯೆ: ಆಕುಕ 74 ಎಸ್‌ಟಿಕ್ಯೂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

(549)

Annexure for LAQ 549

Sl No	District	Sl No	Dialysis Center Name	Patients
1	BELAGAVI	1	Athani	18
		2	Bailhongal	12
		3	Chikodi	18
		4	Gokak	23
		5	Hukkeri	14
		6	Ramdurga	10
		7	Raibag	17
2	BALLARI	8	Ballari DH	54
		9	Hagaribommanahalli	8
		10	Hosapete	18
		11	Huvina Hadagali	6
		12	Kudligi	8
		13	Sandur	4
		14	Siruguppa	6
3	BANGALORE RURAL	15	Devanahalli	12
		16	Doddaballapur	35
		17	Hosakote	30
		18	Nelamangala	7
4	BIDAR	19	Aurad	18
		20	Basavakalyan	12
		21	Bhalki	17
		22	Humnabad	16
5	BIJAPUR	23	Vijayapur DH	78
		24	Basavan Bagewadi	17
		25	Indi	15
		26	Muddebihal	18
		27	Sindagi	12
6	CHAMARAJANAGAR	28	Chamarajanagara DH	54
		29	Kollegala	36
		30	Gundlupet	13
7	CHIKKABALLAPUR	31	Chikkaballapur DH	48
		32	Chintamani	20
		33	Bagepalli	5
		34	Gowribidanur	13
		35	Gudibande	8
		36	Shidlaghatta	11
8	CHIKKAMGALUR	37	Chikkamagalur DH	80
		38	Tarikere	33
		39	Kadur	17
		40	Koppa	17
		41	Mudigere	14
		42	NR Pura	14
9	CHITRADURGA	43	Chitradurga DH	85
		44	Challakere	15
		45	Channagiri	14

		46	Hiriyur	14
		47	Holalkere	10
		48	Hosadurga	16
		49	Molakalmuru	10
10	DAVANGERE	50	Davanagere DH	110
		51	Jagalur	13
		52	Harapanahalli	8
		53	Harihara	8
11	KALABURAGI	54	Kalaburagi DH	89
		55	Afzalpur	8
		56	Aland	6
		57	Chincholi	8
		58	Chitapur	14
		59	Jewargi	15
		60	Sedam	6
12	HASSAN	61	Arasikere	28
		62	Arakalgud	11
		63	Belur	16
		64	Channarayapatna	16
		65	Holenarasipura	36
		66	Sakaleshapura	10
13	HAVERI	67	Haveri DH	52
		68	Byadagi	12
		69	Hangal	17
		70	Hirekerur	10
		71	Ranebennur	11
		72	Savanur	12
		73	Shiggaon	15
14	KODAGU	74	Kodagu DH	56
		75	Somwarpet	21
		76	Virajpet	31
15	KOLAR	77	Kolar DH	57
		78	K.G.F	38
		79	Malur	8
		80	Mulbagal	14
		81	Srinivaspura	18
16	KOPPAL	82	Koppal DH	50
		83	Gangavathi	14
		84	Kustagi	5
		85	Yalburga	9
17	MANDYA	86	Krishnarajpete	18
		87	Maddur	15
		88	Malavalli	35
		89	Nagamangala	16
		90	Pandavapura	26
		91	Srirangapattna	30
18	MYSORE	92	Hunsur	27
		93	HD Kote	12
		94	KrishnarajaNagar	30
		95	Nanjangud	18

		96	Periyapatna	16
		97	T. Narasipur	26
19	RAICHUR	98	Lingsuguru	14
		99	Devadurga	5
		100	Manvi	21
		101	Sindhanur	10
20	RAMANAGAR	102	Ramanagara DH	52
		103	Channapatna	25
		104	Kanakapura	12
		105	Magadi	11
21	UDUPI	106	Udupi DH	90
		107	Kundapura	42
		108	Karkala	11
22	UTTARA KANNADA	109	Karwar DH	56
		110	Ankola	18
		111	Bhatkal	36
		112	Dandeli	11
		113	Haliyal	16
		114	Honnavara	33
		115	Joida	-
		116	Kumta	37
		117	Mundagod	5
		118	Siddapura	16
		119	Sirsi	27
23	YADGIRI	120	Yadagiri DH	37
		121	Shahapur	18
		122	Shorapur	12
24	BENGALURU URBAN	123	K C GH	106
		124	JAYANAGAR GH	49
		125	CV RAMAN GH	71
		126	K R PURAM GH	30
		127	AL-BILAL TRUST	69
		128	YELEHANKA GH	43
		129	HHS	44
		130	ANEKAL GH	12
25	TUMAKURU	131	TUMKUR DH	84
		132	MADHUGIRI GH	10
		133	KUNIGAL GH	14
		134	TURUVEKERE GH	11
		135	SIRA GH	12
		136	CHIKANAYAKANHALLI GH	15
		137	GUBBI GH	2
		138	PAVAGADA GH	24
		139	TIPTUR GH	23
		140	KORATEGERE GH	5
26	BAGALAKOTE	141	BAGALAKOTE DH	32
		142	BADAMI GH	7
		143	JAMAKHANDI GH	8
		144	HUNAGUNDA GH	9
		145	BILIGI GH	3

		146	MUDHOL GH	8
		147	GULEDAGUDDA	7
27	DHARWAD	148	DHARWAD DH	29
		149	KALGHATGI GH	5
		150	KUNDGOL GH	5
		151	NAVALGUNDA GH	8
28	GADAG	152	GADAG DH	42
		153	SHIRHATTI GH	7
		154	RON GH	8
		155	NARGUNDA GH	10
		156	MUNDARGI GH	3
29	DAKSHINA KANNADA	157	WENLOCK DH	81
		158	PUTTUR GH	51
		159	BELTHANGDI GH	58
		160	BANTWAL GH	22
		161	SULIYA GH	30
30	SHIVAMOGGA	162	SAGAR GH	64
		163	THIRTHAHALLI GH	33
		164	SHIKARIPURA GH	24
		165	SORABA GH	16
		166	BHADRAVATI GH	31
		167	HOSANAGAR	14

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	566
ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ (ತೇರದಾಳ)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	2019-20ರ ಸಾಲಿನ ಪ್ರವಾಹದಲ್ಲಿ ಇಲ್ಲಿಯವರೆಗೆ ಹಾಳಾದ ಶಾಲಾ ಕೊಠಡಿಗಳೆಷ್ಟು; (ತೇರದಾಳ ಮತಕ್ಷೇತ್ರ ಗ್ರಾಮವಾರು ಸಂಪೂರ್ಣ ಮಾಹಿತಿಯನ್ನು ನೀಡುವುದು)	2019-20ನೇ ಸಾಲಿನಲ್ಲಿ ತೇರದಾಳ ಮತಕ್ಷೇತ್ರದಲ್ಲಿ ಪ್ರವಾಹದಿಂದ ಹಾಳಾದ ಶಾಲಾ ಕೊಠಡಿಗಳು – 66. (ಶಾಲಾವಾರು ವಿವರ ಒದಗಿಸಿದೆ)
ಆ)	ಸಂಪೂರ್ಣ ಹಾಳಾದ ಶಾಲೆಗಳೆಷ್ಟು; ಭಾಗಶ: ಹಾಳಾದ ಶಾಲೆಗಳೆಷ್ಟು; ಇಲ್ಲಿಯವರೆಗೆ ಅವುಗಳ ದುರಸ್ತಿಗಾಗಿ ಬಿಡುಗಡೆಯಾದ ಅನುದಾನವೆಷ್ಟು;	2019-20ನೇ ಸಾಲಿನಲ್ಲಿ 04 ಶಾಲೆಯ 15 ಕೊಠಡಿಗಳು ಸಂಪೂರ್ಣ ಹಾಳಾಗಿರುತ್ತವೆ. 08 ಶಾಲೆಗಳ 51 ಕೊಠಡಿಗಳು ಭಾಗಶ: ಹಾಳಾಗಿರುತ್ತವೆ. ಭಾಗಶ: ಹಾಳಾಗಿರುವ 8 ಶಾಲೆಗಳಲ್ಲಿನ 51 ಕೊಠಡಿಗಳ ದುರಸ್ಥಿಗಾಗಿ ರೂ.31.45 ಲಕ್ಷ ಅನುದಾನವನ್ನು ಈಗಾಗಲೇ ಎಸ್.ಡಿ.ಎಮ್.ಸಿ ರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಹಾಗೂ ದುರಸ್ಥಿ ಕಾಮಗಾರಿಗಳು ಮುಕ್ತಾಯವಾಗಿರುತ್ತವೆ.
ಇ)	ಸಂಪೂರ್ಣ ಹಾಳಾದ ಶಾಲೆಗಳನ್ನು ನಿರ್ಮಾಣ ಮಾಡಲು ಯಾವ ಗುತ್ತಿಗೆದಾರರಿಗೆ ವಹಿಸಲಾಗಿದೆ; ತೇರದಾಳ ಕ್ಷೇತ್ರದ ವ್ಯಾಪ್ತಿಯಲ್ಲಿ ಢವಳೇಶ್ವರ ಗ್ರಾಮದ ಶಾಲೆ ಸಂಪೂರ್ಣ ಹಾಳಾಗಿದ್ದು ಇದುವರೆಗೆ ಕಟ್ಟಡ ನಿರ್ಮಾಣ ಮಾಡದಿರಲು ಕಾರಣವೇನು; ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು; ಅಲ್ಲಿಯವರೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗುವುದು?	ಸಂಪೂರ್ಣವಾಗಿ ಹಾಳಾಗಿರುವ 4 ಶಾಲೆಗಳ 15 ಕೊಠಡಿಗಳಲ್ಲಿ 03 ಶಾಲೆಗಳ 07 ಕೊಠಡಿಗಳಿಗೆ ಆರ್.ಐ.ಡಿ.ಎಫ್-25 ಯೋಜನೆಯಡಿ ಲೋಕೋಪಯೋಗಿ ಇಲಾಖೆಯ ಮೂಲಕ ಮರುನಿರ್ಮಾಣ ಮಾಡಲು ರೂ.84.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. ತೇರದಾಳ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಢವಳೇಶ್ವರ ಪ್ರಾಥಮಿಕ ಶಾಲೆಯು ಸಂಪೂರ್ಣ ಹಾಳಾಗಿದ್ದು ಸದರಿ ಶಾಲಾ ಕಟ್ಟಡವನ್ನು ವಿಪ್ರೋ ಕಂಪನಿ ಬೆಂಗಳೂರು, ಇವರು ದತ್ತು ಪಡೆದಿದ್ದು, ಸಂಪೂರ್ಣ ಶಾಲಾ ಕಟ್ಟಡ ನಿರ್ಮಾಣ ಮಾಡಿಕೊಡಲು ಅಗತ್ಯಕ್ರಮ ವಹಿಸಲಾಗಿದೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸದರಿ ಊರಿನಲ್ಲಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ತರಗತಿಗಳನ್ನು ನಡೆಸಲು ಪರ್ಯಾಯ ವ್ಯವಸ್ಥೆ ಮಾಡಲಾಗಿರುತ್ತದೆ.

ಇಪಿ 222 ಯೋಸಕ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ

2019-20 ನೇ ಸಾಲಿನಲ್ಲಿ ನೆರೆಹಾನಿಯಿಂದ ಶಿಥಿಲಗೊಂಡಿದ್ದು ಅತೀ ತುರ್ತಾಗಿ ಮೇಜರ್ ಹಾಗೂ ಮೈನರ್ ರಿಪೇರಿಗಾಗಿ ಶಾಲೆಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ

ಅ.ನಂ	ಮತಕ್ಷೇತ್ರ	ತಾಲೂಕಿನ ಹೆಸರು	ಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ಮಂಜೂರಾದ ಅನುದಾನ (ರೂ ಲಕ್ಷಗಳಲ್ಲಿ)	ಕಾಮಗಾರಿ ಹಂತ
1	ತೇರದಾಳ	ಜಮಖಂಡಿ	ಹೆಚ್.ಪಿ.ಎಸ್ ತಮದಡ್ಡಿ			
2	ತೇರದಾಳ	ಜಮಖಂಡಿ	ಹೆಚ್.ಪಿ.ಎಸ್ ಆಸಂಗಿ	12	4.8	ಮುಕ್ತಾಯ
3	ತೇರದಾಳ	ಜಮಖಂಡಿ	ಕೆ.ಜಿ ಹೆಚ್.ಪಿ.ಎಸ್ ಹಿಪ್ಪರಗಿ	4	1.6	ಮುಕ್ತಾಯ
4	ತೇರದಾಳ	ಜಮಖಂಡಿ	ಯು.ಹೆಚ್.ಪಿ.ಎಸ್ ಕುಲಹಳ್ಳಿ	6	2.4	ಮುಕ್ತಾಯ
5	ತೇರದಾಳ	ಜಮಖಂಡಿ	ಹೆಚ್.ಪಿ.ಎಸ್ ಕುಲಹಳ್ಳಿ	2	0.6	ಮುಕ್ತಾಯ
6	ತೇರದಾಳ	ಜಮಖಂಡಿ	ಜಿ.ಹೆಚ್.ಎಸ್ ತಮದಡ್ಡಿ	8	4.8	ಮುಕ್ತಾಯ
7	ತೇರದಾಳ	ಮುಧೋಳ	ಸ ಕಿ ಪ್ರಾ ಶಾಲೆ ನಂದಗಾಂವ ವಸ್ತಿ ನಂದಗಾಂವ	8	4.8	ಮುಕ್ತಾಯ
8	ತೇರದಾಳ	ಮುಧೋಳ	ಸ ಹಿ ಪ್ರಾ ಶಾಲೆ, ಮಾರಾಪೂರ	4	7.6	ಮುಕ್ತಾಯ
				7	4.85	ಮುಕ್ತಾಯ
			ಒಟ್ಟು	51	31.45	

2019-20 ನೇ ಸಾಲಿನಲ್ಲಿ ನೆರೆಹಾನಿಯಿಂದ ಶಿಥಿಲಗೊಂಡ ಭಾಗಶಃ ಹಾಳಾದ ಶಾಲೆಗಳ ಮರು ನಿರ್ಮಾಣ ವಿವರ

ಅ.ನಂ	ಮತಕ್ಷೇತ್ರ	ತಾಲೂಕಿನ ಹೆಸರು	ಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ಮಂಜೂರಾದ ಅನುದಾನ (ರೂ ಲಕ್ಷಗಳಲ್ಲಿ)	ಕಾಮಗಾರಿ ಹಂತ
1	ತೇರದಾಳ	ಜಮಖಂಡಿ	ಹೆಚ್.ಪಿ.ಎಸ್ ಆಸಂಗಿ			
2	ತೇರದಾಳ	ಜಮಖಂಡಿ	ಯು.ಹೆಚ್.ಪಿ.ಎಸ್ ರಾಂಪೂರ	4	48.00	ಕಾಮಗಾರಿಗಳು ಪ್ರಗತಿಯಲ್ಲಿವೆ
3	ತೇರದಾಳ	ಜಮಖಂಡಿ	ಹೆಚ್.ಪಿ.ಎಸ್ ರಾಂಪೂರ	1	12.00	
				2	24.00	
			ಒಟ್ಟು	7	84.00	

2019-20 ನೇ ಸಾಲಿನಲ್ಲಿ ನೆರೆಹಾನಿಯಿಂದ ಸಂಪೂರ್ಣ ಹಾಳಾದ ಶಾಲೆಯ ವಿವರ

ಅ.ನಂ	ಮತಕ್ಷೇತ್ರ	ತಾಲೂಕಿನ ಹೆಸರು	ಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ಮಂಜೂರಾದ ಅನುದಾನ (ರೂ ಲಕ್ಷಗಳಲ್ಲಿ)	ಕಾಮಗಾರಿ ಹಂತ
1	ತೇರದಾಳ	ಮುಧೋಳ	ಹೆಚ್.ಪಿ.ಎಸ್ ಢವಳೇಶ್ವರ			
				8	0.00	
			ಒಟ್ಟು	8	0.00	

ನೆರೆಹಾವಳಿಯಿಂದ ಮುಧೋಳ ತಾಲೂಕಿನಲ್ಲಿ ಸಂಪೂರ್ಣ ಹಾಳಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಢವಳೇಶ್ವರ ಶಾಲೆಯನ್ನು ವಿಪ್ರೋ ಕಂಪನಿ ಬೆಂಗಳೂರವರು ದತ್ತು ಪಡೆದಿರುತ್ತಾರೆ.

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಬಾಗಲಕೋಟೆ

ಕರ್ನಾಟಕ ವಿಧಾನಸಭೆ

ಪ್ರಶ್ನೆ ಸಂಖ್ಯೆ:	572
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸಬೇಕಾದ ದಿನಾಂಕ	10.12.2020
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕರ ಕಛೇರಿಯನ್ನು ಪ್ರಾರಂಭಿಸ ಲಾಗಿದೆಯೇ?	ಹೌದು ವಿಜಯಪುರ ಜಿಲ್ಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ನಿರ್ದೇಶಕರು (ಅಪರ ನಿರ್ದೇಶಕರು) ಕಛೇರಿಯನ್ನು ಪ್ರಾರಂಭ ಮಾಡಲಾಗಿದೆ.
ಆ)	ಈ ಕಛೇರಿಗೆ ಯಾವ ಯಾವ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.	ಈ ಕಛೇರಿಗೆ ಮಂಜೂರು/ಸ್ಥಳಾಂತರಿಸಲಾದ ಹುದ್ದೆಗಳ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಇ)	ಮಂಜೂರಾದ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ? ನೇಮಿಸದೇ ಇದ್ದಲ್ಲಿ ಕಾರಣಗಳೇನು?	ಅಪರ ನಿರ್ದೇಶಕರ ಹುದ್ದೆಯಲ್ಲಿ ಪ್ರಸ್ತುತ ಹೆಚ್ಚುವರಿ ಪ್ರಭಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಪರ ನಿರ್ದೇಶಕರ ಹಾಗೂ ಉಪ ನಿರ್ದೇಶಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಸಿಬ್ಬಂದಿಗಳನ್ನು ಪದೋನ್ನತಿ/ವರ್ಗಾವಣೆ/ನೇರ ನೇಮಕಾತಿ ಮೂಲಕ ನೇಮಿಸಲಾಗುತ್ತದೆ.
ಈ)	ಯಾವ ನಿರ್ದಿಷ್ಟ ಕಾಲಮಿತಿಯಲ್ಲಿ ಮಂಜೂ ರಾದ ಹುದ್ದೆಗಳಿಗೆ ಸಿಬ್ಬಂದಿಗಳನ್ನು ನೇಮಿಸ ಲಾಗುವುದು?	ಸದರಿ ಹುದ್ದೆಗಳನ್ನು ಪದೋನ್ನತಿ/ವರ್ಗಾವಣೆ/ನೇರ ನೇಮ ಕಾತಿ ಮೂಲಕ ನೇಮಕ ಮಾಡಲಾವುದು.

ಆಕುಕ 78 ಹೆಚ್‌ಎಸ್‌ಡಿ 2020

(ಡಾ॥ ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಳಗಾವಿ ಮತ್ತು ಕಲಬುರಗಿ ವಿಭಾಗೀಯ ಸಹ ನಿರ್ದೇಶಕರ ಕಛೇರಿ ಉಸ್ತುವಾರಿಗೆ ಪ್ರತ್ಯೇಕವಾಗಿ ಉತ್ತರ ಕರ್ನಾಟಕಕ್ಕೆ ಅಪರ ನಿರ್ದೇಶಕರ ಕಚೇರಿ ಸ್ಥಾಪಿಸುವ ಬಗ್ಗೆ.

<u>ಓದಲಾಗಿದೆ:</u>

1. ಸರ್ಕಾರದ ಆದೇಶ ಸಂಖ್ಯೆ:ಆಕುಕ 492 ಎಚ್‌ಎಸ್‌ಎಚ್ 2018, ದಿನಾಂಕ:28.11.2018
2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಏಕ ಕಡತ ಸಂಖ್ಯೆ:ಹೆಚ್‌ಆರ್‌ಓ/184/2018-19.

<u>ಪ್ರಸ್ತಾವನೆ:</u>

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ಹಾಗೂ ಉಸ್ತುವಾರಿ ಮಾಡುವ ಸಲುವಾಗಿ 5 ಜಂಟಿ ನಿರ್ದೇಶಕರ ಹುದ್ದೆಗಳನ್ನು ವಿಭಾಗೀಯ ಸಹ ನಿರ್ದೇಶಕ ಹುದ್ದೆಗಳೆಂದು ಮರುಪದನಾಮೀಕರಿಸಿ, ಪೂರಕ ಹುದ್ದೆಗಳನ್ನು ಸ್ಥಳಾಂತರಿಸಿ ಮರುಹೊಂದಾಣಿಕೆ ಮಾಡಲು ಕೆಲವು ಷರತ್ತುಗಳೊಂದಿಗೆ ಸರ್ಕಾರ ಮಂಜೂರಾತಿ ನೀಡಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿ, ಕರ್ನಾಟಕ ಆರೋಗ್ಯ ಪ್ರೊಫೈಲ್ 2016-17ರಲ್ಲಿ ನಮೂದಿಸಿರುವ ಅಂಕಿ ಅಂಶಗಳ ಆಧಾರದಲ್ಲಿ ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದಾಗ ಹೈದ್ರಾಬಾದ್-ಕರ್ನಾಟಕ (ಕಲಬುರಗಿ ವಿಭಾಗ) ಮತ್ತು ಬೆಳಗಾವಿ ವಿಭಾಗದಲ್ಲಿಯ ಜಿಲ್ಲೆಗಳ ಎಲ್ಲಾ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಕಡಿಮೆ ಇರುವುದು ಕಂಡುಬಂದಿರುತ್ತದೆ ಹಾಗೂ ಈ ಜಿಲ್ಲೆಗಳಲ್ಲಿ ಸಾಂಕ್ರಾಮಿಕ ರೋಗಗಳ ಪ್ರಕರಣಗಳು ಹೆಚ್ಚಾಗಿರುತ್ತವೆ. ಬೆಳಗಾವಿ ಮತ್ತು ಕಲಬುರಗಿ ವಿಭಾಗೀಯ ಸಹ ನಿರ್ದೇಶಕರ ಕಚೇರಿಯ ವ್ಯಾಪ್ತಿಯಲ್ಲಿ ಬರುವ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಲ್ಪಡುವ ಕಲಬುರಗಿ, ಯಾದಗಿರಿ, ಬಳ್ಳಾರಿ, ರಾಯಚೂರು, ಬೀದರ್ ಮತ್ತು ಕೊಪ್ಪಳ(ಹೈದ್ರಾಬಾದ್-ಕರ್ನಾಟಕ) ಪ್ರದೇಶದ ಜನರು ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿರುವುದನ್ನು ಗಮನಿಸಿ ಆರೋಗ್ಯ ಮಾನದಂಡಗಳನ್ವಯ ಉತ್ತರ ಕರ್ನಾಟಕ ವಿಭಾಗದಲ್ಲಿಯ ಜಿಲ್ಲೆಗಳಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ಉತ್ತಮಪಡಿಸಲು ಮತ್ತು ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಲು ಹಾಗೂ ಗುಣಮಟ್ಟದ ಆರೋಗ್ಯ ಸೇವೆಯನ್ನು ಖಾತ್ರಿಗೊಳಿಸಿ ಭೌಗೋಳಿಕ ಸಮಾನತೆ ಹೊಂದಲು ಹಾಗೂ ಬೆಳಗಾವಿ ಮತ್ತು ಕಲಬುರಗಿ ವಿಭಾಗೀಯ ಸಹ ನಿರ್ದೇಶಕರ ಕಚೇರಿ ಮೇಲುಸ್ತುವಾರಿ ಮಾಡಲು ಒಂದು ಉತ್ತರ ಕರ್ನಾಟಕ ಅಪರ ನಿರ್ದೇಶಕರ ಕಚೇರಿ ಸ್ಥಾಪಿಸುವಂತೆ ಕೋರಲಾಗಿದೆ.

ಬೆಳಗಾವಿ ಮತ್ತು ಕಲಬುರಗಿ ವಿಭಾಗೀಯ ಸಹ ನಿರ್ದೇಶಕರ ಕಚೇರಿಯ ಮೇಲುಸ್ತುವಾರಿ ಮಾಡಲು ಅನುವಾಗುವಂತೆ ವಿಜಯಪುರದಲ್ಲಿ ಒಂದು ಉತ್ತರ ಕರ್ನಾಟಕ ಅಪರ ನಿರ್ದೇಶಕರ ಕಚೇರಿಯನ್ನು ಸ್ಥಾಪಿಸಿ, ಅಪರ ನಿರ್ದೇಶಕರು, ಸಾರ್ವಜನಿಕ ಆರೋಗ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರನ್ನು ಸ್ಥಳಾಂತರಿಸಲು ಹಾಗೂ ಕಚೇರಿಗೆ ಅಗತ್ಯವಿರುವ ಅಧಿಕಾರಿ/ಸಿಬ್ಬಂಧಿಗಳನ್ನು ಧಾರವಾಡ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಮತ್ತು ಅಧೀನ ಕಚೇರಿಗಳಿಂದ ಸ್ಥಳಾಂತರಿಸಲು ನಿರ್ಧರಿಸಲಾಗಿದ್ದು, ಅದರಂತೆ ಈ ಆದೇಶ.

<u>ಸರ್ಕಾರಿ ಆದೇಶ ಸಂಖ್ಯೆ: ಆಕುಕ 174 ಎಚ್‌ಎಸ್‌ಎಚ್ 2019, ಬೆಂಗಳೂರು, ದಿನಾಂಕ:24.7.2019.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮರುಪದನಾಮೀಕರಿಸಿ ಸ್ಥಳಾಂತರಿಸಿರುವ ಬೆಳಗಾವಿ ಮತ್ತು ಕಲಬುರಗಿಯ ವಿಭಾಗೀಯ ಸಹ ನಿರ್ದೇಶಕರ ಕಚೇರಿಗಳನ್ನು ಮೇಲುಸ್ತುವಾರಿ ಮಾಡಲು ಹಾಗೂ ಈ ಕಚೇರಿಗಳ ವ್ಯಾಪ್ತಿಗೆ ಬರುವ ಜನರ ಆರೋಗ್ಯ ಸೇವೆಯನ್ನು ಉತ್ತಮಪಡಿಸಲು ವಿಜಯಪುರದಲ್ಲಿ ಒಂದು ಉತ್ತರ ಕರ್ನಾಟಕ ಅಪರ ನಿರ್ದೇಶಕರ ಕಚೇರಿಯನ್ನು ಸ್ಥಾಪಿಸಲು ಸರ್ಕಾರ ಅನುಮೋದನೆ ನೀಡಿದೆ.

.....2

ಸದರಿ ಅಪರ ನಿರ್ದೇಶಕರ ಕಚೇರಿಗೆ ಆಡಳಿತಾತ್ಮಕವಾಗಿ ಅಗತ್ಯವಿರುವ ಅಧಿಕಾರಿ/ಸಿಬ್ಬಂದಿಗಳನ್ನು ಸ್ಥಳಾಂತರಿಸಬೇಕಾದ ವಿವರಗಳನ್ನು ಹಾಗೂ ಅಪರ ನಿರ್ದೇಶಕರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯ.ಶಿವಶಂಕರ) 24/7/19
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಇವರಿಗೆ:

1. ಮಹಾಲೇಖಪಾಲಕರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
5. ವಿಭಾಗೀಯ ಸಹ ನಿರ್ದೇಶಕರು, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆ.
6. ಅಪರ ನಿರ್ದೇಶಕರು, ಸಾರ್ವಜನಿಕ ಆರೋಗ್ಯ, ಆಕುಕ ಸೇವೆಗಳು, ಬೆಂಗಳೂರು.
7. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು } (ಆಯುಕ್ತರು, ಆಕುಕ ಸೇವೆಗಳು
8. ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರುಗಳು } ಇವರ ಮೂಲಕ)

ಪ್ರತಿ ಮಾಹಿತಿಗಾಗಿ:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಕುಕ ಇಲಾಖೆ
3. ಸರ್ಕಾರದ ಉಪ ಕಾರ್ಯದರ್ಶಿ-1, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರ ಆಪ್ತ ಶಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

(3)

(572)

ಸರ್ಕಾರಿ ಆದೇಶ ಸಂಖ್ಯೆ:ಆಕುಕ 174 ಎಚ್‌ಎಸ್‌ಎಚ್ 2019, ದಿನಾಂಕ: 24.7.2019ಕ್ಕೆ

ಅನುಬಂಧ-1

ಕ್ರ. ಸಂಖ್ಯೆ	ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	ಷರಾ
1.	ಅಪರ ನಿರ್ದೇಶಕರು	1	ಸಾರ್ವಜನಿಕ ಆರೋಗ್ಯ, ಆಕುಕ ಸೇವೆಗಳು
2.	ಉಪ ನಿರ್ದೇಶಕರು	1	
3.	ಆರೋಗ್ಯ ಮೇಲ್ವಿಚಾರಕರು	1	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಧಾರವಾಡ ಇಲ್ಲಿ ಮಂಜೂರಾಗಿರುವ 3 ಹುದ್ದೆಗಳಲ್ಲಿ 1 ಹುದ್ದೆಯನ್ನು ಸ್ಥಳಾಂತರಿಸಿದೆ.
4.	ಸಹಾಯಕ ಆಡಳಿತಾಧಿಕಾರಿಗಳು	1	
5	ಕಚೇರಿ ಅಧೀಕ್ಷಕರು	1	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 2 ಹುದ್ದೆಗಳಲ್ಲಿ 1 ಹುದ್ದೆ ಸ್ಥಳಾಂತರಿಸುವುದು.
6	ಪ್ರಥಮ ದರ್ಜೆ ಸಹಾಯಕರು	2	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 5 ಹುದ್ದೆಗಳಲ್ಲಿ 2 ಹುದ್ದೆ ಸ್ಥಳಾಂತರಿಸುವುದು.
7	ದ್ವಿತೀಯ ದರ್ಜೆ ಸಹಾಯಕರು	2	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 4 ಹುದ್ದೆಗಳಲ್ಲಿ 2 ಹುದ್ದೆ ಸ್ಥಳಾಂತರಿಸುವುದು.
8	ಕಂಪ್ಯೂಟರ್ ಆಪರೇಟರ್	2	ಹೊರ ಗುತ್ತಿಗೆ ಆಧಾರದ ಮೇಲೆ ಪಡೆಯುವುದು
9	ವಾಹನ ಚಾಲಕರು	2	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 9 ಹುದ್ದೆಗಳಲ್ಲಿ 2 ಹುದ್ದೆ ಸ್ಥಳಾಂತರಿಸುವುದು.
10	ಗ್ರೂಪ್ – ಡಿ	5	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 11 ಹುದ್ದೆಗಳಲ್ಲಿ 3 ಹುದ್ದೆಗಳನ್ನು, ಜಿಲ್ಲಾ ಮಲೇರಿಯಾಧಿಕಾರಿ ಕಚೇರಿ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 4 ಹುದ್ದೆಗಳಲ್ಲಿ 1 ಹುದ್ದೆಯನ್ನು ಮತ್ತು ಜಿಲ್ಲಾ ಪ್ರಯೋಗಾಲಯ, ಧಾರವಾಡ ಇಲ್ಲಿಗೆ ಮಂಜೂರಾಗಿರುವ 4 ಹುದ್ದೆಗಳಲ್ಲಿ 1 ಹುದ್ದೆಯನ್ನು ಸ್ಥಳಾಂತರಿಸುವುದು.

(ಯ.ಶಿವಶಂಕರ) 24/7/19

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಸೇವೆಗಳು)

24/7

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 174 ಎಚ್‌ಎಸ್‌ಎಚ್ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ:29.8.2019.

ಸೇರ್ಪಡೆ ಆದೇಶ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಬೆಳಗಾವಿ ಮತ್ತು ಕಲಬುರಗಿಯ ವಿಭಾಗೀಯ ಸಹ ನಿರ್ದೇಶಕರ ಕಚೇರಿಗಳನ್ನು ಮೇಲುಸ್ತುವಾರಿ ಮಾಡಲು ವಿಜಯಪುರದಲ್ಲಿ ಉತ್ತರ ಕರ್ನಾಟಕ ಅಪರ ನಿರ್ದೇಶಕರ ಕಚೇರಿಯನ್ನು ಸ್ಥಾಪಿಸಲು ಅನುಮೋದನೆ ನೀಡಿರುವ ಸರ್ಕಾರದ ಆದೇಶ ಸಂಖ್ಯೆ:ಆಕುಕ 174 ಎಚ್‌ಎಸ್‌ಎಚ್ 2019, ದಿನಾಂಕ:24.7.2019ರ ಅನುಬಂಧ-1 ರಲ್ಲಿನ ಕ್ರಮ ಸಂಖ್ಯೆ(2)ರ ಷರಾ ಕಾಲಂನಲ್ಲಿ "ಜಿಲ್ಲಾ ಆಸ್ಪತ್ರೆ, ವಿಜಯಪುರ ಇಲ್ಲಿ 2 ನಿವಾಸಿ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, 1 ಹುದ್ದೆಯನ್ನು ಸ್ಥಳಾಂತರಿಸಿ ಅದೇ ಸಮನಾಂತರ ವೇತನ ಶ್ರೇಣಿ ಮತ್ತು ದರ್ಜೆಯುಳ್ಳ ಉಪ ನಿರ್ದೇಶಕರ ಹುದ್ದೆಯೆಂದು ಮರುಪದನಾಮೀಕರಿಸುವುದು" ಎಂದು ಮತ್ತು ಕ್ರಮ ಸಂಖ್ಯೆ(4)ರ ಷರಾ ಕಾಲಂನಲ್ಲಿ "ಜಿಲ್ಲಾ ಆಸ್ಪತ್ರೆ, ವಿಜಯಪುರ ಇಲ್ಲಿ 2 ಸಹಾಯಕ ಆಡಳಿತಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು 1 ಹುದ್ದೆಯನ್ನು ಸ್ಥಳಾಂತರಿಸಬಹುದು" ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಪರಿಭಾವಿಸಿ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 1996, ದಿನಾಂಕ:10.7.1996ರ ಅನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯ.ಶಿವಶಂಕರ) 29/8/19
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲು
ಮಾನ್ಯ ಆಯುಕ್ತರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

30 AUG 2019

ಆಯುಕ್ತರ ಆಪ್ತ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಇವರಿಗೆ:

1. ಮಹಾಲೇಖಪಾಲಕರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.
5. ವಿಭಾಗೀಯ ಸಹ ನಿರ್ದೇಶಕರು, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆ.
6. ಅಪರ ನಿರ್ದೇಶಕರು, ಸಾರ್ವಜನಿಕ ಆರೋಗ್ಯ, ಆಕುಕ ಸೇವೆಗಳು, ಬೆಂಗಳೂರು.
7. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು } (ಆಯುಕ್ತರು, ಆಕುಕ ಸೇವೆಗಳು
8. ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಜಿಲ್ಲಾ ಶಸ್ತ್ರ ಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರುಗಳು } ಇವರ ಮೂಲಕ)

ಪ್ರತಿ ಮಾಹಿತಿಗಾಗಿ:

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆಕುಕ ಇಲಾಖೆ
3. ಸರ್ಕಾರದ ಉಪ ಕಾರ್ಯದರ್ಶಿ-1, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆರವರ ಆಪ್ತ ಶಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 587
2. ಮಾನ್ಯ ಸದಸ್ಯರ ಹೆಸರು : ಶ್ರೀಮತಿ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್ (ದೇವನಹಳ್ಳಿ)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕರ್ನಾಟಕದಲ್ಲಿ ಕೋವಿಡ್-19 ಪರಿಣಾಮ ಲಾಕ್‌ಡೌನ್ ಆಗಿದ್ದಂತಹ ಸಂದರ್ಭದಲ್ಲಿ ಕಾರ್ಮಿಕರ ಅನುಕೂಲಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಇದಕ್ಕಾಗಿ ಖರ್ಚು ಮಾಡಿದ ಒಟ್ಟು ಹಣವೆಷ್ಟು; (ಪೂರ್ಣ ಮಾಹಿತಿ ನೀಡುವುದು)	**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-** ಕೋವಿಡ್-19 ಲಾಕ್‌ಡೌನ್ ಸಮಯದಲ್ಲಿ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದು, ಆ ಸಂದರ್ಭದಲ್ಲಿ ಮಂಡಳಿಯಿಂದ ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರ ರಕ್ಷಣೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. 1. ಮಾನ್ಯ ಮುಖ್ಯಮಂತ್ರಿಗಳ ಘೋಷಣೆಯಂತೆ 16,48,431 ಮಂಡಳಿಯ ಫಲಾನುಭವಿಗಳಿಗೆ ತಲಾ ರೂ.5,000/-ಗಳಂತೆ ಒಟ್ಟು ರೂ. 824.21 ಕೋಟಿ ಸಹಾಯ ಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿರುತ್ತದೆ. 2. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಕೋರೋನಾ ವೈರಸ್ ಬಗ್ಗೆ ಅರಿವು ಮೂಡಿಸಲು ಮತ್ತು ಮಾಸ್ಕ್, ಸ್ಯಾನಿಟೈಸರ್ ಹಾಗೂ ಸೋಪುಗಳನ್ನು ಕಾರ್ಮಿಕರಿಗೆ ವಿತರಣೆ ಮಾಡಲು 41 ಉಪ ವಿಭಾಗ ಮಟ್ಟದ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ.10 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. 3. ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದ್ದ 10 ಶಿಶುಪಾಲನಾ ಕೇಂದ್ರಗಳಲ್ಲಿನ ಮಕ್ಕಳಿಗಾಗಿ Packed Nutrition Food & Toysಗಳನ್ನು ಪೋಷಕರ ಮನೆಗಳಿಗೆ ತಲುಪಿಸಲಾಗಿರುತ್ತದೆ. 4. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಆಹಾರ ಒದಗಿಸಲು ಮತ್ತು ಅವರ ಸಮಸ್ಯೆಗಳನ್ನು ಆಲಿಸಲು 24*7 ಸಹಾಯವಾಣಿ (155214) ಯನ್ನು ಸ್ಥಾಪಿಸಲಾಗಿರುತ್ತದೆ. 5. ವಸತಿ ರಹಿತ ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ ಜಿಲ್ಲಾಡಳಿತದ ಸಹಕಾರದೊಂದಿಗೆ ವಸತಿ ಸೌಲಭ್ಯ ಮತ್ತು ಊಟವನ್ನು ಒದಗಿಸಲಾಗಿರುತ್ತದೆ.

		6. ಲಾಕ್ ಡೌನ್ ಅವಧಿ ಪ್ರಾರಂಭದಿಂದ ಇದುವರೆಗೂ ಕಟ್ಟಡ ಮತ್ತು ವಲಸೆ ಕಾರ್ಮಿಕರಿಗೆ ಒಟ್ಟು 89.87 ಲಕ್ಷ ಸಿದ್ಧಪಡಿಸಿದ ಆಹಾರದ ಪ್ಯಾಕೆಟ್ ಗಳನ್ನು ವಿತರಿಸಲಾಗಿರುತ್ತದೆ. 7. ಕಟ್ಟಡ ಮತ್ತು ವಲಸೆ ಕಟ್ಟಡ ಕಾರ್ಮಿಕರಿಗೆ 7.15 ಲಕ್ಷ ಆಹಾರ ಸಾಮಾಗ್ರಿಗಳ ಕಿಟ್ ಗಳನ್ನು ತಯಾರಿಸಿ ವಿತರಿಸಲಾಗಿರುತ್ತದೆ. 8. ವಲಸೆ ಕಟ್ಟಡ ಕಾರ್ಮಿಕರನ್ನು ಅವರುಗಳ ತವರು ರಾಜ್ಯಗಳಿಗೆ ಆಹಾರ ಮತ್ತು ಅಗತ್ಯ ಸೌಲಭ್ಯಗಳೊಂದಿಗೆ ವಿಶೇಷ ಶ್ರಮಿಕ ರೈಲುಗಳ ಮೂಲಕ ಕಳುಹಿಸಿಕೊಡಲಾಗಿರುತ್ತದೆ. ಮೇಲ್ಕಂಡ ಕ್ರಮಗಳಿಗಾಗಿ ಮಂಡಳಿಯಿಂದ ಒಟ್ಟು ರೂ.911.18 ಕೋಟಿಯಷ್ಟು ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ. ವಿವರವನ್ನು **ಅನುಬಂಧ- 1** ರಲ್ಲಿ ಲಗತ್ತಿಸಿದೆ. **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ</u>** ಕೋವಿಡ್-19 ರ ಕಾರಣ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರ ಹಿತರಕ್ಷಣೆಗಾಗಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ: ➢ ಕೋವಿಡ್-19 ರಿಂದ ರಕ್ಷಣೆ ಪಡೆಯಲು ಮಾಸ್ಕ್, ಸಾಬೂನು, ಸ್ಯಾನಿಟೈಸರ್ ಇತ್ಯಾದಿಗಳನ್ನು ಒದಗಿಸಲು ಹಾಗೂ ಈ ಸಾಂಕ್ರಾಮಿಕ ರೋಗದ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಮತ್ತು ಸಂವಹನ ಚಟುವಟಿಕೆಗಳಿಗಾಗಿ ಪ್ರತಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ ರೂ.5 ಲಕ್ಷಗಳಂತೆ 41 ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆ ಮಾಡುವ ಮೂಲಕ ಒಟ್ಟು **ರೂ.2.05 ಕೋಟಿಗಳನ್ನು** ವೆಚ್ಚ ಮಾಡಲಾಗಿದೆ. ➢ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರಿಗೆ ಊಟೋಪಚಾರ, ವಸತಿ ಇತ್ಯಾದಿ ಮೂಲಸೌಕರ್ಯಗಳನ್ನು ಒದಗಿಸಲು, ವ್ಯವಸ್ಥೆ ಮಾಡಿದ ಸಮುದಾಯ ಭವನ / ಕಲ್ಯಾಣ ಮಂಟಪ / ಖಾಸಗಿ ಕಲ್ಯಾಣ ಮಂಟಪಗಳ ವೆಚ್ಚವನ್ನು ಭರಿಸಲು ನಿರ್ದೇಶಕರು, ಕರ್ನಾಟಕ ರಾಜ್ಯ ಕಾರ್ಮಿಕರ ಅಧ್ಯಯನ ಸಂಸ್ಥೆಗೆ **ರೂ.1.00 ಕೋಟಿಗಳನ್ನು** ಬಿಡುಗಡೆಗೊಳಿಸಲಾಗಿದೆ. ➢ ಅಸಂಘಟಿತ ಕಾರ್ಮಿಕರನ್ನು ಕೊರೋನಾ ವೈರಸ್ ಸೋಂಕಿನಿಂದ ರಕ್ಷಣೆ ಪಡೆಯಲು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಸಂವಹನ ಚಟುವಟಿಕೆ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು **ರೂ.5 ಲಕ್ಷಗಳನ್ನು** ಮೆ॥ ಎಂ.ಸಿ. & ಎ ಸಂಸ್ಥೆಗೆ ಬಿಡುಗಡೆಗೊಳಿಸಿದೆ.

- ಬೆಂಗಳೂರು ಮತ್ತು ರಾಜ್ಯದಾದ್ಯಂತ ಸಂಕಷ್ಟಕ್ಕೊಳಗಾದ ಅಸಂಘಟಿತ ವಲಯಕ್ಕೆ ಸೇರಿದ ಎಲ್ಲಾ ವಲಸೆ ಕಾರ್ಮಿಕರನ್ನು (ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರನ್ನು ಹೊರತುಪಡಿಸಿ) ಗುರುತಿಸಿ, ಸಿದ್ದಪಡಿಸಿದ ಆಹಾರ ಹಾಗೂ ಪಡಿತರ ಕಿಟ್ ಅನ್ನು ವಿತರಿಸಲು ತಗಲಿರಬಹುದಾದ ಅಂದಾಜು ವೆಚ್ಚ **ರೂ. 5.00 ಕೋಟಿ** (ಐದು ಕೋಟಿ ರೂಪಾಯಿಗಳು ಮಾತ್ರ)ಗಳನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಮರುಪಾವತಿಸಲಾಗಿದೆ.

- ಕೋವಿಡ್-19ರ ಕಾರಣ, ಕರ್ನಾಟಕದಿಂದ ಇತರೆ ರಾಜ್ಯಗಳಿಗೆ ತೆರಳುತ್ತಿರುವ ಹಾಗೂ ಇತರೆ ರಾಜ್ಯಗಳಿಂದ ಕರ್ನಾಟಕಕ್ಕೆ ಬರಲಿಚ್ಛಿಸುವ ವಲಸೆ ಕಾರ್ಮಿಕರಿಗೆ ಸಹಾಯ ಮಾಡಲು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಂಟಿಯಾಗಿ 24/7 ಉಚಿತ ಸಹಾಯವಾಣಿಯನ್ನು ತೆರೆಯಲಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಉಭಯ ಮಂಡಳಿಗಳು ಸಮಾನವಾಗಿ ಭರಿಸಲು ಸರ್ಕಾರವು ಸೂಚಿಸಿದ್ದು, ಪ್ರಸ್ತುತ ಮಂಡಳಿ ವತಿಯಿಂದ ರೂ.77,98,964/-ಗಳನ್ನು ವೆಚ್ಚ ಮಾಡಲಾಗಿದೆ.

- **ಅಗಸರು ಮತ್ತು ಕ್ಷೌರಿಕ ವೃತ್ತಿ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ರೂ. 5,000/-ಗಳ ಒಂದು ಬಾರಿ ನೆರವಿನ ವಿಶೇಷ ಪ್ಯಾಕೇಜ್:**

ಕೋವಿಡ್-19ರ ಲಾಕ್‌ಡೌನ್ ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಸಂಕಷ್ಟಕ್ಕೊಳಗಾದ ರಾಜ್ಯದ ಅಗಸರು ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ವಲಯದ ಕಾರ್ಮಿಕರಿಗೆ ರೂ.5000/-ಗಳ ಒಂದು ಬಾರಿ ನೆರವಿನ ವಿಶೇಷ ಪ್ಯಾಕೇಜ್ ಅಡಿ ಅಗಸ ವೃತ್ತಿಯಲ್ಲಿ ತೊಡಗಿರುವ 74782 ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 66820 ಕಾರ್ಮಿಕರು ಸೇರಿದಂತೆ, ಒಟ್ಟು 1,41,602 ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಅದರಲ್ಲಿ ಈವರೆಗೆ ಅಗಸ ವೃತ್ತಿಯಲ್ಲಿ ತೊಡಗಿರುವ 64176 ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 55466 ಕಾರ್ಮಿಕರು ಸೇರಿದಂತೆ ಒಟ್ಟು 1,19,642 ಅರ್ಜಿದಾರರಿಗೆ ರೂ.59.82 ಕೋಟಿಗಳ ನೆರವನ್ನು ವಿತರಿಸಲಾಗಿದೆ. ಬಾಕಿ ಉಳಿದ ಅರ್ಜಿದಾರರ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದ್ದು, ಎಲ್ಲಾ ಅರ್ಹ ಅರ್ಜಿದಾರರಿಗೆ ನೆರವಿನ ಮೊತ್ತವನ್ನು ಬಿಡುಗಡೆಗೊಳಿಸಲು ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.

<table>
<tr>
<td>ಆ)</td>
ವಿಧಾನಸಭಾ ಕ್ಷೇತ್ರ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಮೀಸಲು ಅರಣ್ಯ/ರಾಜ್ಯ ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಗ್ರಾಮ ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ರಕ್ಷಿತ ಅರಣ್ಯ/ಕಿರು ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಸೆಕ್ಷನ್-4	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಖಾಸಗಿ ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಅವರ್ಗೀಕೃತ ಅರಣ್ಯ(ಪರಿಭಾವಿತ ಅರಣ್ಯ)	ಒಟ್ಟು ಅರಣ್ಯ
ಶಿವಮೊಗ್ಗ ನಗರ	3961 48	0	1549 74	1162 42	0	0	6673.64
ತೀರ್ಥಹಳ್ಳಿ	4968.16	0	2025.92			0	7106.22
ತರಿಕೆರೆ	12483.17	0	3366.57	727 6	0	233547.5761	250124.9161
ಕಡೂರು	73 77	0	0	61 44	0	233547.5761	233682.7861
ಶಿಕಾರಿಪುರ	21818.26	0	8875.43	493.88		2775.98	33963.55
ಸೊರಬ	17255 2	253.25	10504.51053	2917 13	0	1023.969	31954.05953
ಸಾಗರ	39900 3021	0	1661.573	7570 418	0	0	49132.2931
ತೀರ್ಥಹಳ್ಳಿ	16644 92168	104.8609227	0	4593.7	0	0	21343.48261
ಶಿವಮೊಗ್ಗ	4738.67	0	733.2200204	0	0	0	5471.89002
ಹೊನಹಳ್ಳಿ	604.1864794	0	800.1861557	0	0	0	1404 372635
ಸಾಗರ	3339.460953	0	0	104 4090569	0	803.899	4247.769015
ಶಿಕಾರಿಪುರ	704.7813682	0	149.8047389	0	0	0	854.5861071
ಶಿವಮೊಗ್ಗ	2638.099189	0	2605 835576	74.25992999	0	1235.577993	6553.772688
ಶಿವಮೊಗ್ಗ ನಗರ	8935.280549	404.3524008	3768 398049	231.0252727	0	0	13339.05627
ತೀರ್ಥಹಳ್ಳಿ	11448.52391	0	26356.45778	4681.876126	0	18299.3973	60786.25511
ಮಾವಳ್ಳಿ	10903 5	0	0	0	0	0	10903.5
ಕನಕಪುರ	24372 5	0	0	0	0	0	24372.5
ಹನೂರು	173881 94	0	0	331 75	0	2741.87	179655.56
ಕೊಳ್ಳೇಗಾಲ	562	0	0	0	0	736.44	1298.44
ಚಾಮರಾಜನಗರ	26172 3	0	0	159.92	0	0	26332.22
ಕೊಳ್ಳೇಗಾಲ	23592.42	0	0	2146 05	0	0	25738.47
ಮಡಿಕೇರಿ	47751 093	0	5717.01	4480.23	0	17164.42	75112.76
ವಿರಾಜಪೇಟೆ	51886.592	0	1601.67	466 74	0	131.25	54065.40893
ಶಿರಸಿ	121090.653	0	39188 564	0	0	0	160279.217
ಉತ್ತರ ಕನ್ನಡ	100300.198	246 35	785.2406564	0	0	751.7	102083 4886
ಅಂಕೋಲ ಕಾರವಾರ	12594 47053	0	0	0	0	0	12594 47053
ಯಲ್ಲಾಪುರ	167697.6416	0	8229 262	0	0	0	175926 9036
ಭಟ್ಕಳ-ಹೊನ್ನಾವರ	137716 97	1713 27	2386 41	2	0	350.98	142169.63
ಹಳಿಯಾಳ-ಜೋಯಿಡ	240378 97	26 93	5698.08	0	0	0	246103.98
ಬೆಳಗಾವಿ	7211 969	0	54 535	4 05	0	270 455	7541 009

ವಿಧಾನಸಭಾ ಕ್ಷೇತ್ರ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಮೀಸಲು ಅರಣ್ಯ/ರಾಜ್ಯ ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಗ್ರಾಮ ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ರಕ್ಷಿತ ಅರಣ್ಯ/ಕಿರು ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಸೆಕ್ಷನ್-4	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಖಾಸಗಿ ಅರಣ್ಯ	ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಅವರ್ಗೀಕೃತ ಅರಣ್ಯ(ಪರಿಭಾವಿತ ಅರಣ್ಯ)	ಒಟ್ಟು ಅರಣ್ಯ
ಯಮಕನಮರಡಿ	26440.7	0	0	0	0	2087.911	28528.611
ಗೋಕಾಕ್	8238.79	0	0	0	0	994.893	9233.683
ಕಿತ್ತೂರು	9293.297	0	0	55.77	0	2321.655	11670.722
ಖಾನಪೂರ	90844.401	0	0	149.49	0	6810.495	97804.386
ಬಾದಾಮಿ	31095.163	0	0	0	0	0	31095.163
ಬಾಗಲಕೋಟ	11482.206	0	0	0	0	305.4	11787.606
ಹುನಗುಂದ	9652.864	0	0	0	0	12.5	9665.364
ಬೀಳ್ಗಿ	11702.596	0	0	0	0	0	11702.596
ತೇರದಾಳ	2800.779	0	0	0	0	0	2800.779
ಜಮಖಂಡಿ	8020.447	0	0	5.7	0	231.544	8257.691
ಮುಧೋಳ	4148.322	0	0	1816.83	0	0	5965.152
ವಿಜಯಪುರ	0	0	0	0	0	0	0
ಬಬಲೇಶ್ವರ	630.66	0	11.23	0	0	124.8	766.69
ಇಂಡಿ	0	0	0	18.63	0	51.4	70.03
ನಾಗಠಾಣ	0	0	0	0	0	0	0
ಸಿಂದಗಿ	0	0	0	0	0	99.96	99.96
ದೇವರಹಿಪ್ಪರಗಿ	0	0	0	0	0	0	0
ಮುದ್ದೇಬಿಹಾಳ	0	0	0	0	0	0	0
ಬಸವನ ಬಾಗೇವಾಡಿ	1145.47	0	0	0	0	49.07	1194.54
ಗೋಕಾಕ್	14652.708	0	0	15.6	0	192.59	14860.898
ಅರಬಾವಿ	0	0	0	0	0	0	0
ಸವದತ್ತಿ	8852.73	0	0	41	0	102.25	8995.98
ಬೈಲಹೊಂಗಲ	4152.71	0	0	35.67	0	104.61	4292.99
ರಾಮದುರ್ಗ	15478.69	0	0	12.14	0	1752.92	17243.75
ಅಥಣಿ	97.28	163.88	502.35	0	0	0	763.51
ಕಾಗವಾಡ	16.22	69.56	0	0	0	0	85.78
ನಿಪ್ಪಾಣಿ	465.6	0	85.89	0	0	154.65	706.14
ಚಿಕ್ಕೋಡಿ-ಸದಲಗ	30.06	0	91.07	0	0	109.26	230.39
ಹುಕ್ಕೇರಿ	48.61	0	92.22	0	0	591.39	732.22
ರಾಯಬಾಗ	2896.376	0	0	239.28	0	221.471	3357.127
ಕುಡಚಿ	178.774	0	0	0	0	134.679	313.453

738

ಅನುಬಂಧ-2

ರಾಜ್ಯದ ನೆಡುತೋಪು ಪ್ರದೇಶದ ಒಟ್ಟು ವಿಸ್ತೀರ್ಣ(ಹೆಕ್ಟೇರುಗಳಲ್ಲಿ)

ಕ್ರ.ಸಂ	ವೃತ್ತ	ವಿಭಾಗ	ವಿಸ್ತೀರ್ಣ
1	ಬಳ್ಳಾರಿ	ಬಳ್ಳಾರಿ	1561.77
		ಚಿತ್ರದುರ್ಗ	5075.2
		ದಾವಣಗೆರೆ	1551.21
		ಕೊಪ್ಪಳ	491
2	ಬೆಳಗಾವಿ	ಬಾಗಲಕೋಟೆ	3907.7
		ಗೋಕಾಕ್	994.1
		ಬೆಳಗಾವಿ	0
		ವಿಜಾಪುರ	2375 73
3	ಬೆಂಗಳೂರು	ಬೆಂಗಳೂರು ನಗರ	0
		ಬೆಂಗಳೂರು ಗ್ರಾಮಂತರ	0
		ರಾಮನಗರ	73
		ಕೋಲಾರ	0
		ಚಿಕ್ಕಬಳ್ಳಾಪುರ	0
		ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ	0
4	ಚಾಮರಾಜ ನಗರ	ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ	0
		ಬಿಆರ್‌ಟಿ	1418.55
		ಮಲೆ ಮಹಾದೇಶ್ವರ ಬೆಟ್ಟ	162.05
		ಕಾವೇರಿ ವನ್ಯಜೀವಿ ವಲಯ	0
5	ಚಿಕ್ಕಮಗಳೂರು	ಕೊಪ್ಪ	192
		ಚಿಕ್ಕಮಗಳೂರು	1488.01
		ಭದ್ರ ಹುಲಿ ಸಂರಕ್ಷಿತ ಪ್ರದೇಶ	0
6	ಧಾರವಾಡ	ಧಾರವಾಡ	673.18
		ಹಾವೇರಿ	1020.5
		ಗದಗ	120.78
7	ಹಾಸನ	ಹಾಸನ	12815.47
		ತುಮಕೂರು	2725.35
8	ಕಲಬುರ್ಗಿ	ಕಲಬುರ್ಗಿ	2461.23
		ರಾಯಚೂರು	1808.81
		ಬೀದರ್	8998.98
		ಯಾದಗಿರಿ	0
9	ಕೊಡಗು	ಮಡಿಕೇರಿ	1689.8
		ನಾಗರಹೊಳೆ ರಾಷ್ಟ್ರೀಯ ಉದ್ಯಾನವನ	0
		ವಿರಾಜಪೇಟೆ	0
		ಮಡಿಕೇರಿ ವನ್ಯಜೀವಿ ವಿಭಾಗ	0
10	ಮಂಗಳೂರು	ಕಾರ್ಕಳ	0
		ಕುಂದಾಪುರ	1557.77
		ಮಂಗಳೂರು	220.64
11	ಮೈಸೂರು	ಹುಣಸೂರು	0
		ಮಂಡ್ಯ	23835.74
		ಮೈಸೂರು	3211.34
		ಮೈಸೂರು ವನ್ಯಜೀವಿ	0
12	ಶಿವಮೊಗ್ಗ	ಭದ್ರಾವತಿ	155
		ಸಾಗರ	2292.26
		ಶಿವಮೊಗ್ಗ	1178.01
		ಶಿವಮೊಗ್ಗ ವನ್ಯಜೀವಿ	0
13	ಕೆನರಾ	ಕಾಳೀ ಹುಲಿ ಸಂರಕ್ಷಿತ ಪ್ರದೇಶ	0
		ಹಳಿಯಾಳ	15.30
		ಹೊನ್ನಾವರ	0
		ಕಾರವಾರ	140.5
		ಶಿರಸಿ	0
		ಯಲ್ಲಾಪುರ	0
ಒಟ್ಟು ವಿಸ್ತೀರ್ಣ			84210.98

736

ಅನುಬಂಧ -3

ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ) ಇವರ ಪ್ರಶ್ನೆ ಸಂಖ್ಯೆ 736 ಕ್ಕೆ ಹಾಸನ ಜಿಲ್ಲೆಯಲ್ಲಿ ಖಾಲಿ ಇರುವ ವಿವಿಧ ದರ್ಜೆಯ ಹುದ್ದೆಗಳ ತಾಲ್ಲೂಕುವಾರು ವಿವರ

ದರ್ಜೆ	ಪದನಾಮ	ಹಾಸನ	ಆಲೂರು	ಬೇಲೂರು	ಅರಸೀಕೆರೆ	ಚನ್ನರಾಯಪಟ್ಟಣ	ಹೊಳೆನರಸೀಪುರ	ಅರಕಲಗೂಡು	ಸಕಲೇಶಪುರ
ಎ	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	01							
ಬಿ	ಪತ್ರಾಂಕಿತ ವ್ಯವಸ್ಥಾಪಕರು	01							
ಸಿ	ಅಧೀಕ್ಷಕರು	02							
	ಪ್ರ.ದ.ಸ	02							
	ಬೆರಳಚ್ಚುಗಾರರು	03							
	ಆಶುಲಿಪಿ ರಚನಾಕಾರರು ಗ್ರೇಡ್-2	01							
	ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರ	02						01	01
	ಅರಣ್ಯ ರಕ್ಷಕ	04	01	05		02	02	04	10
	ವಾಹನಚಾಲಕ	02			02				
	ಅರಣ್ಯ ವೀಕ್ಷಕ	01	01		01			01	
ಡಿ	ಕಛೇರಿ ಸೇವಕ / ಮಾಲಿ / ರಾತ್ರಿಕಾವಲುಗಾರ / ಕ್ಲಿನರ್	03							01
	ಕೇರ್‌ಟೇಕರ್	01		01					
	ಒಟ್ಟು	23	02	06	03	02	02	06	12

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 739

ಮಾನ್ಯ ಸದಸ್ಯರ ಹೆಸರು : ಶ್ರೀ ಕುಮಾರಸ್ವಾಮಿ ಹೆಚ್.ಕೆ (ಸಕಲೇಶಪುರ)

ಉತ್ತರಿಸುವ ದಿನಾಂಕ: : **10.12.2020**

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎ.ಐ.ಸಿ.ಟಿ.ಇ ನಿಯಮಾನುಸಾರ ಬೋಧಕ/ ಬೋಧಕೇತರ ಹುದ್ದೆಗಳನ್ನು ಸೃಜಿಸಲಾಗಿದ್ದು, ಈ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿಯಿರುವುದರಿಂದ ವಿದ್ಯಾರ್ಥಿಗಳಿಗೆ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಪ್ರಸ್ತುತ 14 ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಗಳಿಗೆ ಮಂಜೂರಾದ ಭರ್ತಿಯಾದ ಖಾಲಿಯಿರುವ ಹುದ್ದೆಗಳ ವಿವರಗಳು ಈ ಕೆಳಕಂಡಂತಿವೆ.

ಇಂಜಿನಿಯರಿಂಗ್ ಕಾಲೇಜುಗಳು (ಬೋಧಕ)

ಕ್ರಸಂ	ಹುದ್ದೆಯ ವರ್ಗ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿಯಾದ ಹುದ್ದೆಗಳ ಸಂಖ್ಯೆ
1	ಎ	229	112	117
2	ಬಿ	417	235	182
ಒಟ್ಟು		**646**	**347**	**299**

ಇಂಜಿನಿಯರಿಂಗ್ ಕಾಲೇಜುಗಳು (ಬೋಧಕೇತರ)

ಕ್ರಸಂ	ಹುದ್ದೆಯ ವರ್ಗ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿಯಾದ ಹುದ್ದೆಗಳ ಸಂಖ್ಯೆ
1	ಎ	10	1	9
2	ಬಿ	21	16	5
3	ಸಿ	680	113	567
4	ಡಿ	439	12	427
ಒಟ್ಟು		**1150**	**142**	**1008**

ಆ)	ರಾಜ್ಯದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಎ.ಐ.ಸಿ.ಟಿ.ಇ ನಿಯಮಾನುಸಾರ ಹಲವಾರು ಬೋಧಕ/	ಖಾಲಿ ಇರುವ ಬೋಧಕ ಹುದ್ದೆಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರಸ್ತುತ 268 ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಪಾಠ ಪ್ರವಚನ ನಡೆಸಲಾಗುತ್ತಿದೆ ಮತ್ತು ಸಂಸ್ಥೆಗಳ ಆಡಳಿತಾತ್ಮಕ ಹಿತದೃಷ್ಟಿಯಿಂದ ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳ ಎದುರಾಗಿ 210 ಅರೆಕಾಲಿಕ ಅಕುಶಲದಾಳುಗಳನ್ನು ನೇಮಿಸಿಕೊಂಡು ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

	ಬೋಧಕೇತರ ಹುದ್ದೆಗಳನ್ನು ಸೃಜಿಸಿ ಭರ್ತಿ ಮಾಡಬೇಕಾಗಿದ್ದು, ಈ ಹುದ್ದೆಗಳು ಸೃಜನೆಯಾಗದೆ ಮತ್ತು ಭರ್ತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕೇತರ ಸಿಬ್ಬಂದಿಗಳನ್ನು ಭರ್ತಿಮಾಡಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ.

ಹುದ್ದೆಗಳ ಪದನಾಮ	**ಕರ್ನಾಟಕ ಲೋಕಸೇವಾ ಆಯೋಗದ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಭರ್ತಿಮಾಡಲು ಕ್ರಮವಹಿಸಿರುವ ಹುದ್ದೆಗಳ ಸಂಖ್ಯಾ ವಿವರದ ಮಾಹಿತಿ.**	**ಪ್ರಸ್ತುತ ಹಂತ**
ಬೆರಳಚ್ಚುಗಾರರು	16 ಹುದ್ದೆಗಳನ್ನು ಭರ್ತಿ ಮಾಡಲು ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ದಿನಾಂಕ: 17.02.2016ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.	ಕೆ.ಪಿ.ಎಸ್.ಸಿ ಯಿಂದ 15 ಅರ್ಹ ಅಭ್ಯರ್ಥಿಗಳ ಆಯ್ಕೆಪಟ್ಟಿ ಬಂದಿದ್ದು, ನೇಮಕಾತಿ ಆದೇಶ ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ.
ಶಿಕ್ಷಕರು	37 ಹುದ್ದೆಗಳನ್ನು ಭರ್ತಿ ಮಾಡಲು ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ದಿನಾಂಕ: 17.02.2016ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.	ಕರ್ನಾಟಕ ಲೋಕ ಸೇವಾ ಆಯೋಗದ ಪತ್ರ ಸಂಖ್ಯೆ: ಆರ್(2)763/2020-21/ಪಿಎಸ್ಸಿ, ದಿ:15.06.2020 ರಲ್ಲಿ ಸ್ಪಷ್ಟ ಮಾಹಿತಿ/ ದಾಖಲೆಗಳೊಂದಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರನ್ನು ಕೋರಿದ್ದು, ಅದರಂತೆ ಮಾಹಿತಿ ಒದಗಿಸಲು ಕ್ರಮ ವಹಿಸುತ್ತಿದ್ದಾರೆ.
ಮೆಕ್ಯಾನಿಕ್	70 ಹುದ್ದೆಗಳನ್ನು ಭರ್ತಿ ಮಾಡಲು ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ದಿನಾಂಕ: 29.02.2016 & 10.06.2016ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.	
ಕಾರ್ಯಗಾರ ಸಹಾಯಕರು	ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ದಿನಾಂಕ: 21.11.2016ರಲ್ಲಿ 231 ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿಯಿರುವ ಕಾರ್ಯಗಾರ ಸಹಾಯಕರ ಹುದ್ದೆಗಳಿಗೆದುರಾಗಿ 210 ಅರೆಕಾಲಿಕ ಅಕುಶಲದಾಳುಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲಾಗುತ್ತಿರುತ್ತದೆ.	
ಒಟ್ಟು	**354**	

		ಹುದ್ದೆಗಳ ಪದನಾಮ		ಆರ್ಥಿಕ ಮಿತವ್ಯಯ ಜಾರಿಯಲ್ಲಿರುವ ಪ್ರಯುಕ್ತ ಆರ್ಥಿಕ ಸಹಮತಿಗಾಗಿ ಸಲ್ಲಿಸಲಾದ ಹುದ್ದೆಗಳ ಸಂಖ್ಯಾ ವಿವರದ ಮಾಹಿತಿ.
		ಪ್ರ.ದ.ಸ	165	ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ದಿನಾಂಕ:03.06.2019ರಲ್ಲಿ 165 ಪ್ರಥಮ ದರ್ಜೆ ಸಹಾಯಕರ ಮತ್ತು 65 ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದನ್ವಯ ದಿನಾಂಕ:20.05.2020ರ ಸರ್ಕಾರದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಗೆ ಮಂಜೂರಾಗಿರುವ ಪ್ರಥಮ ದರ್ಜೆ ಸಹಾಯಕ ಮತ್ತು ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳನ್ನು ಸಮಗ್ರವಾಗಿ ಪರಾಮರ್ಶಿ ಕಾರ್ಯದೊತ್ತಡ ಅಧಿಕವಾಗಿರುವ ಕಛೇರಿಗಳಿಗೆ ಹುದ್ದೆಗಳನ್ನು ಹಂಚಿಕೆ ಮಾಡಿ, ಹೆಚ್ಚುವರಿ ಹುದ್ದೆಗಳನ್ನು ರದ್ದು ಮಾಡುವಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ತಿಳಿಸಲಾಗಿದೆ.
		ದ್ವಿ.ದ.ಸ	65	
		ಶಿಕ್ಷಕರು	94	ತಾಂತ್ರಿಕ ಶಿಕ್ಷಣ ಇಲಾಖೆಯ ಪತ್ರ ದಿನಾಂಕ:11.01.2017ರಲ್ಲಿ ಒಟ್ಟು 898 ಕಾರ್ಯಗಾರ ವಿಭಾಗದ (ಶಿಕ್ಷಕರು, ಮೆಕ್ಯಾನಿಕ್, ಕಾರ್ಯಗಾರ ಸಹಾಯಕರು) ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದನ್ವಯ ದಿನಾಂಕ:18.09.2019ರ ಸರ್ಕಾರದ ಪತ್ರದಲ್ಲಿ ನೂತನವಾಗಿ ಪ್ರಾರಂಭವಾದ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ಶಿಕ್ಷಕರು, ಮೆಕ್ಯಾನಿಕ್, ಕಾರ್ಯಗಾರ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ AICTE Revised Norms ರನ್ವಯ ಪರಿಶೀಲಿಸಿ, ಈ ಹಿಂದೆ Norms ಬದಲಾವಣೆಗೆ ಮುನ್ನ ಇದ್ದ ಸಿಬ್ಬಂದಿ ಮಾದರಿಯನ್ನು ಪರಿಷ್ಕರಿಸಿ, ಅದರಂತೆ ಗುರುತಿಸಿರುವ ಹೆಚ್ಚುವರಿ ಸಿಬ್ಬಂದಿ ಮಾಹಿತಿಯನ್ನು ನೀಡುವಂತೆ ಹಾಗೂ Re-distribution/Re-deployment ಮಾಡಿದ ನಂತರ ಅವಶ್ಯವಿರುವ ಸಿಬ್ಬಂದಿಗೆ ಮಾತ್ರ ಪುನರ್ ಪರಿಶೀಲಿಸಿ ಮರುಪ್ರಸ್ತಾವನೆ ಸಲ್ಲಿಸುವಂತೆ ಹಾಗೂ ಅಲ್ಲಿಯವರೆಗೆ ಯಾವುದೇ ನೇಮಕಾತಿ ಪ್ರಕ್ರಿಯೆಯನ್ನು ಮಾಡದೇ, ಮಾಡಿದ್ದಲ್ಲಿ ಸ್ಥಗಿತಗೊಳಿಸುವಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ತಿಳಿಸಲಾಗಿದೆ.
		ಮೆಕ್ಯಾನಿಕ್	166	
		ಕಾರ್ಯಗಾರ ಸಹಾಯಕರು	638	
		ಒಟ್ಟು	**1128**	

ಇ)	ರಾಜ್ಯದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಲವಾರು ವರ್ಷಗಳಿಂದ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯವಾಗಿ ಬೇಕಾಗಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಗಳನ್ನು ಎ.ಐ.ಸಿ.ಟಿ.ಇ ನಿಯಮಗಳನ್ವಯ ಭರ್ತಿಮಾಡಬೇಕಾಗಿದ್ದು, ಮಾರ್ಚ್ 2019 ರಂದು 07ನೇ ಎ.ಐ.ಸಿ.ಟಿ.ಇ ನಿಯಮಗಳನ್ನು ಜಾರಿಗೆ ಬಂದಿದ್ದು, ಇದರನ್ವಯ ನೇಮಕಾತಿ ವಿಧಾನ, ವಿದ್ಯಾರ್ಹತೆ ಮತ್ತು ಸೇವಾ ಷರತ್ತುಗಳನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅಳವಡಿಸಿಕೊಂಡ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿರುತ್ತದೆ. ತಾಂತ್ರಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳು ಪರಿಷ್ಕರಣೆಯಾಗಿ ಜಾರಿಗೆ ಬಂದ ನಂತರ ಖಾಲಿಯಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು.
ಈ)	ಹಾಗಿದ್ದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮಾರ್ಪಡಿಸಲು ಇರುವ ತೊಂದರೆಗಳೇನು; ಯಾವ ಕಾಲಮಿತಿಯೊಳಗೆ ಸರ್ಕಾರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು/ ಮಾರ್ಪಡಿಸಿ ಖಾಲಿ ಇರುವ ಬೋಧಕ/ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗುವುದು?	

ಇಡಿ 181 ಟಿಇಸಿ 2020

(ಡಾ॥ ಅಶ್ವತ್ಥನಾರಾಯಣ.ಸಿ.ಎನ್)
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

ಕರ್ನಾಟಕ ವಿಧಾನ ಸಭೆ

ಮಾನ್ಯ ಸದಸ್ಯರ ಹೆಸರು	:	ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	741
ಉತ್ತರಿಸುವ ದಿನಾಂಕ	:	10.12.2020
ಉತ್ತರಿಸುವ ಸಚಿವರು	:	ಮಾನ್ಯ ಕಾರ್ಮಿಕ ಹಾಗೂ ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದ ಎಲ್ಲಾ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ನೌಕರರಿಗೆ ಕನಿಷ್ಟ ವೇತನ ಕಾಯ್ದೆಯಡಿ ವೇತನವನ್ನು ನೀಡಲಾಗುತ್ತಿದೆಯೇ;	ಹೌದು.
ಆ)	ಕನಿಷ್ಟ ವೇತನ ಕಾಯ್ದೆಯನ್ವಯ ಒಬ್ಬ ಗುತ್ತಿಗೆ ಆಧಾರದ ನೌಕರನಿಗೆ ನೀಡಬೇಕಾದ ಕನಿಷ್ಟ ವೇತನವೆಷ್ಟು; (ವಿವರ ನೀಡುವುದು)	ಸರ್ಕಾರದ ಸುತ್ತೋಲೆ ಸಂಖ್ಯೆ: ಕಾಇ 51 ಎಲ್ ಡಬ್ಲ್ಯೂಎ 2017 ದಿನಾಂಕ: 29.12.2017 (ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ)ರನ್ವಯ ಅನುಸೂಚಿತ ಉದ್ದಿಮೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆ ಆಧಾರದ ನೌಕರನಿಗೆ ದಿನಾಂಕ: 01.04.2020 ರಿಂದ 31.03.2021 ರ ಅವಧಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳ ಪಟ್ಟಿಯನ್ನು ಕ್ರಮವಾಗಿ ಅನುಬಂಧ-2, 3 ಹಾಗೂ 4 ರಲ್ಲಿ ಲಗತ್ತಿಸಿದೆ.
ಇ)	ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಸರ್ಕಾರದಿಂದ ನೀಡಲಾಗುತ್ತಿರುವ ಕನಿಷ್ಟ ಸೌಲಭ್ಯಗಳೇನು; (ವಿವರ ನೀಡುವುದು)	ಕಾರ್ಮಿಕ ಕಾಯ್ದೆಯ ಪ್ರಾವಧಾನಗಳನ್ವಯ ಅರ್ಹ ಗುತ್ತಿಗೆ ಕಾರ್ಮಿಕರಿಗೆ ಕ್ಯಾಂಟೀನ್, ರೆಸ್ಟ್‌ರೂಮ್, ಕುಡಿಯುವ ನೀರು, ಶೌಚಾಲಯ, ಪ್ರಥಮ ಚಿಕಿತ್ಸೆ ಸೌಲಭ್ಯ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಹೊರಗುತ್ತಿಗೆ ನೌಕರರನ್ನು ಪೂರೈಸುವ ಗುತ್ತಿಗೆದಾರರು ಅಥವಾ ಮೂಲ ಮಾಲೀಕರು ನೀಡಬೇಕಾಗಿರುತ್ತದೆ.
ಈ)	ಕೊಪ್ಪಳ ಜಿಲ್ಲೆಯಲ್ಲಿ ಕನಿಷ್ಟ ವೇತನ ಕಾಯ್ದೆಯನ್ವಯ ನಿಯಮಿತವಾಗಿ ವೇತನ ಬಟವಾಡೆ ಮಾಡದಿರುವ ಕುರಿತು ದೂರುಗಳೇನಾದರೂ ಬಂದಿದೆಯೇ;	ಹೌದು.
ಉ)	ಬಂದಿದ್ದಲ್ಲಿ, ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?	ಕನಿಷ್ಠ ವೇತನ ಪಾವತಿಸದೇ ಇರುವ ಕುರಿತು ಸಕ್ಷಮ ಪ್ರಾಧಿಕಾರಿಗಳ ಮುಂದೆ 2017-18 ರಿಂದ 2020-21 ರವರೆಗೆ ಒಟ್ಟು 124 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.60,62,088/- ಮೊತ್ತದ 08 ಕ್ಲೇಮ್ ಅರ್ಜಿಗಳು ಸ್ವೀಕೃತವಾಗಿದ್ದು, ಸಕ್ಷಮ ಪ್ರಾಧಿಕಾರಿಗಳಲ್ಲಿ ಪ್ರಕರಣ ದಾಖಲಿಸಿದ್ದು ವಿಚಾರಣೆಗಾಗಿ ಬಾಕಿ ಇರುತ್ತವೆ.

ಸಂಖ್ಯೆ: ಎಲ್‌ಡಿ 148 ಎಲ್‌ಡಬ್ಲ್ಯೂಎ 2020

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಹಾಗೂ ಸಕ್ಕರೆ ಸಚಿವರು

741

ಅನುಬಂಧ I

ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 51 ಎಲ್‌ಡಬ್ಲ್ಯೂಎ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 29-12-2017

ಸುತ್ತೋಲೆ

ವಿಷಯ: ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡುವ ಬಗ್ಗೆ.

ಉಲ್ಲೇಖ:
1) ಸಿಆಸು ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 20 ಸೇಸ್ಥಅ 94, ದಿನಾಂಕ: 21-11-1994.
2) ಕಾರ್ಮಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಇ 173 ಎಲ್‌ಎಂಡಬ್ಲ್ಯು 2006, ದಿನಾಂಕ: 30-04-2007.

****

ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಗೊಂಡ ದಿನಗೂಲಿಯ ನೌಕರರು ಆಯಾ ಹುದ್ದೆಗಳಲ್ಲಿ, ನಿರ್ವಹಿಸುತ್ತಿರುವ ಕೆಲಸಗಳು/ಕಾರ್ಯಭಾರಗಳು, ಕನಿಷ್ಠ ವೇತನದ ಕಾಯ್ದೆಯಡಿಯಲ್ಲಿ ಬರುವ ಉದ್ಯೋಗಗಳಲ್ಲಿನ ಆಯಾ ಹುದ್ದೆಗಳಿಗೆ ಸರಿಸಮಾನವಾದ ಪಕ್ಷದಲ್ಲಿ, ದಿನಗೂಲಿ ನೌಕರರಿಗೂ ಕೂಡ ಕನಿಷ್ಠ ವೇತನಕ್ಕಿಂತ ಕಡಿಮೆ ಇಲ್ಲದ ವೇತನವನ್ನು ನೀಡುವಂತೆ ಉಲ್ಲೇಖ (1)ರ ಆದೇಶದಲ್ಲಿ ಸೂಚಿಸಲಾಗಿದೆ.

1948ರ ಕನಿಷ್ಠ ವೇತನದ ಕಾಯ್ದೆಯಡಿ ಬರುವ ಉದ್ಯೋಗಗಳಿಗೆ ಕಾಲಕಾಲಕ್ಕೆ ಕಾರ್ಮಿಕ ಇಲಾಖೆಯಿಂದ ಕನಿಷ್ಠ ವೇತನವನ್ನು ಪರಿಷ್ಕರಿಸಿ ಅಧಿಸೂಚನೆಗಳನ್ನು ಹೊರಡಿಸಲಾಗುತ್ತಿದೆ. ಆದರೆ ಕನಿಷ್ಠ ವೇತನದ ಅಧಿಸೂಚನೆಗಳಲ್ಲಿ, ದಿನಗೂಲಿಯನ್ನು ನಿಗಧಿಪಡಿಸದೇ ಇರುವ ಕೆಲವು ಹುದ್ದೆಗಳಿಗೆ ಅಂದರೆ ಶೀಘ್ರಲಿಪಿಗಾರರು/ಬೆರಳಚ್ಚುಗಾರರು/ದ್ವಿತೀಯ ದರ್ಜೆ ಸಹಾಯಕರು ಇವರುಗಳಿಗೆ ಸಿನಿಮಾ ಉದ್ದಿಮೆಗಳಿಗೆ ನಿಗಧಿಪಡಿಸಿದ ಕನಿಷ್ಠ ವೇತನ ದರಗಳನ್ನು ಹಾಗೂ ಗ್ರೂಪ್ "ಡಿ" ಹುದ್ದೆಗಳ ನೌಕರರಿಗೆ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಉದ್ದಿಮೆಗಳಿಗೆ ನಿಗಧಿಪಡಿಸಿದ ಕನಿಷ್ಠ ದರಗಳನ್ನು ಅನ್ವಯಿಸಿಕೊಂಡು ದಿನಗೂಲಿ ವೇತನವನ್ನು ಮತ್ತು ಜೀವನ ನಿರ್ವಹಣೆಯ ಭತ್ಯೆಯನ್ನು ನೀಡುವ ಬಗ್ಗೆ ಉಲ್ಲೇಖ (2)ರ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಪ್ರಸ್ತುತ ಸರ್ಕಾರದ ವಿವಿಧ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾಲಯಗಳು, ಮಹಾವಿದ್ಯಾಲಯಗಳು, ಶಾಲೆಗಳು, ಸ್ಥಳೀಯ ಸಂಸ್ಥೆಗಳು, ಶಾಸನಬದ್ಧ ಸಂಸ್ಥೆಗಳು, ಸೊಸೈಟಿಗಳು, ಪರಿಷತ್ತುಗಳು, ಯಾವುದೇ ರೀತಿಯ ರಾಜ್ಯ ಸರ್ಕಾರದ ಅಧೀನ / ಸ್ವಾಯತ್ತ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ನೇಮಕಗೊಂಡು ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪಾವತಿಸಬೇಕಾದ ಕನಿಷ್ಠ ವೇತನದ ಕುರಿತು ಹಲವಾರು ಇಲಾಖೆಗಳು ಕಾರ್ಮಿಕ ಇಲಾಖೆಗೆ ಸ್ಪಷ್ಟೀಕರಣಗಳನ್ನು ಕೋರಿರುತ್ತಾರೆ. ಉಲ್ಲೇಖ (1)ರ ಸಿ.ಆ.ಸು. ಇಲಾಖೆಯ ಆದೇಶ ಮತ್ತು ಉಲ್ಲೇಖ (2)ರ ಕಾರ್ಮಿಕ ಇಲಾಖೆಯ ಸುತ್ತೋಲೆಯು 10 ವರ್ಷಗಳಿಗೂ ಮೀರಿದ ಅವಧಿಯದ್ದಾಗಿರುವುದರಿಂದ ಪ್ರಸ್ತುತ ಅವಧಿಯಲ್ಲಿನ ವಿದ್ಯಮಾನಗಳಿಗೆ

ಅನ್ವಯವಾಗುವಂತೆ ಈ ಕೆಳಕಂಡ ಉದ್ದಿಮೆಗಳಿಗೆ ಸಂಬಂಧಿಸಿದಂತೆ, ಹೊರಡಿಸಿರುವ ಕನಿಷ್ಠ ವೇತನ ದರಗಳನ್ನು ಅನ್ವಯಿಸಿಕೊಳ್ಳಲು ಸುತ್ತೋಲೆಯನ್ನು ಹೊರಡಿಸಲಾಗಿದೆ.

1. ಹೊರಗುತ್ತಿಗೆ ಸಿಬ್ಬಂದಿಗಳನ್ನು ಭದ್ರತಾ ಏಜೆನ್ಸಿ ಮುಖಾಂತರ ನೇಮಿಸಿಕೊಂಡಿದ್ದಲ್ಲಿ "ಭದ್ರತಾಏಜೆನ್ಸಿ" ಅನುಸೂಚಿತ ಉದ್ದಿಮೆಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 123 ಎಲ್‌ಡಬ್ಲ್ಯೂಎ 2015, ದಿನಾಂಕ: 29-02-2016ರಲ್ಲಿ ತಿಳಿಸಿರುವ ಕನಿಷ್ಠ ವೇತನ ದರಗಳನ್ನು ಪಾವತಿಸತಕ್ಕದ್ದು.
2. ಇತರೆ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಹೊರಗುತ್ತಿಗೆ ಸಿಬ್ಬಂದಿಗಳನ್ನು ನೇಮಿಸಿಕೊಂಡಲ್ಲಿ, "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು" ಅನುಸೂಚಿತ ಉದ್ದಿಮೆಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 71 ಎಲ್‌ಡಬ್ಲ್ಯೂಎ 2015, ದಿನಾಂಕ: 05-08-2016ರಲ್ಲಿ ತಿಳಿಸಿರುವ ಕನಿಷ್ಠ ವೇತನ ದರಗಳನ್ನು ಪಾವತಿಸತಕ್ಕದ್ದು.
3. ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವ ಹಾಗೂ ಅದೇ ರೀತಿಯ ಕೆಲಸಗಳಲ್ಲಿ ನಿರತರಾಗಿರುವ ಕಾರ್ಮಿಕರುಗಳಿಗೆ "ಖಾಸಗಿ ಸಫಾಯಿ ಕರ್ಮಚಾರಿ" ಅನುಸೂಚಿತ ಉದ್ದಿಮೆಗೆ ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 82 ಎಲ್‌ಡಬ್ಲ್ಯೂಎ 2015, ದಿನಾಂಕ: 04-08-2016ರಲ್ಲಿ ತಿಳಿಸಿರುವ ಕನಿಷ್ಠ ವೇತನ ದರಗಳನ್ನು ಪಾವತಿಸತಕ್ಕದ್ದು.
4. ಕಾರ್ಮಿಕರ ಕೆಲಸದ ಸ್ವರೂಪದ ಬಗ್ಗೆ ಸ್ಪಷ್ಟತೆ ಇರದಿದ್ದಲ್ಲಿ, ಈ ಬಗ್ಗೆ ಸ್ಪಷ್ಟವಾಗಿ ನಿರ್ಣಯಕ್ಕೆ ಬರಲು ಇಲಾಖೆಗಳ/ಅಧೀನ ಸಂಸ್ಥೆಗಳ ಸಕ್ಷಮ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಿ ಯಾವ ಸ್ವರೂಪದ ಕೆಲಸಗಳು ಅಧಿಸೂಚನೆಯಲ್ಲಿ ನಮೂದಾಗಿರುವ ಕೆಲಸದ ಸ್ವರೂಪಗಳಿಗೆ ಸಮಾನವಾಗಿವೆ ಎಂಬುದನ್ನು ಅಧ್ಯಯನ ಮಾಡಿ, ನಿರ್ಣಯಕ್ಕೆ ಬಂದು ಆಯಾ ಸ್ವರೂಪದ ಕೆಲಸಗಳಿಗೆ ವೇತನ ಅನ್ವಯಿಸಿಕೊಳ್ಳಬಹುದಾಗಿರುತ್ತದೆ.
5. ಹೊರಗುತ್ತಿಗೆ/ಗುತ್ತಿಗೆಯ ಆಧಾರದ ಮೇಲೆ ನೌಕರರನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಸರ್ಕಾರವು ಒಬ್ಬ ಆದರ್ಶ ಉದ್ಯೋಗದಾತನಾಗಿರಬೇಕು.
6. ಕಾಲ ಕಾಲಕ್ಕೆ ಯಾವುದೇ ನವೀಕರಿಸಿದ ವ್ಯತ್ಯಸ್ಥ ತುಟ್ಟಿಭತ್ಯೆ ದರಗಳು ವಾಸ್ತವವಾಗಿ ಕನಿಷ್ಠವೆಂದು ಪರಿಗಣಿಸಬಹುದಾದ ದರಗಳಲ್ಲಿರಬೇಕು.
7. ಕನಿಷ್ಠ ದರಗಳು, ತಳಮಟ್ಟದ ದರಗಳಾಗಿರಬೇಕು. ಕನಿಷ್ಠ ದರಕ್ಕಿಂತಲೂ ಹೆಚ್ಚಿನ ದರಗಳಲ್ಲಿ ನಿಗಧಿಪಡಿಸುವಲ್ಲಿ ಇಲಾಖೆಯು ಸ್ವತಂತ್ರವಾಗಿರುತ್ತಿದ್ದು, ನಿಯಮಿತ ಉದ್ಯೋಗಿಗಳಿಗಾಗಿ ಒಂದೇ ರೀತಿಯ ಕೆಲಸಕ್ಕಾಗಿರುವ ಕನಿಷ್ಠ ದರಗಳಿಗೆ ಹತ್ತಿರವಾಗಿ ನಿರ್ಧರಿಸುವಂತಿರಬೇಕು.
8. ವಿರಾಮವು ಒಳಗೊಂಡಂತೆ ಒಂದು ದಿನಕ್ಕೆ ಎಂಟು ಘಂಟೆಗಳ ಕೆಲಸಕ್ಕಾಗಿ ಕನಿಷ್ಠ ವೇತನವಿದ್ದು, ಎಂಟು ತಾಸಿಗಿಂತಲೂ ಹೆಚ್ಚಿನ ಕೆಲಸಕ್ಕಾಗಿ ಹೆಚ್ಚುವರಿ ಭತ್ಯೆಯನ್ನು ಘಂಟೆಯು ಹೆಚ್ಚಾದಂತೆ ದ್ವಿಗುಣ ದರದಲ್ಲಿ ನೀಡುವುದು. ಒಂದು ದಿನದಲ್ಲಿ ಕಡಿಮೆ ತಾಸು ಕೆಲಸ ನಿರ್ವಹಿಸಿದ್ದಕ್ಕಾಗಿ ಸರಾಸರಿ ಮೊತ್ತವನ್ನು ಕಡಿತಗೊಳಿಸುವುದು.
9. ಮಾಹೆಯಾನ 4 ದಿವಸಗಳಿಗೆ ಪಾವತಿಸಿದ ರಜಾ ದಿವಸಗಳನ್ನು ಸೇರಿಸಿ ದಿನಗೂಲಿ ದರವನ್ನು ಲೆಖ್ಖ ಹಾಕುವುದು.

$$\frac{\text{ತಿಂಗಳ ವೇತನ}}{\text{26 ದಿನಗಳು}} = \frac{\text{ದಿನದ ವೇತನ}}{\text{8 ತಾಸು}} = \text{ಘಂಟೆಯ ವೇತನ}$$

10. ಒಂದು ತಿಂಗಳಿನ ನಾಲ್ಕು ರಜಾ ದಿವಸಗಳಲ್ಲಿ ಕಾರ್ಮಿಕನು ಕೆಲಸ ಮಾಡಲು ಇಚ್ಛಿಸಿದಲ್ಲಿ ದ್ವಿಗುಣ ದಿನಭತ್ಯೆ ದರವನ್ನು ಹೆಚ್ಚಿನ ಭತ್ಯೆಯನ್ನಾಗಿ ಪ್ರತಿ ದಿನಕ್ಕೆ ಅವನು/ಅವಳು ಪಡೆಯುತ್ತಾರೆ.

11. ವಾಸ್ತವವಾಗಿ ಕೆಲಸ ನಿರ್ವಹಿಸಲಾದ ದಿವಸಗಳಿಗೆ ದಿನಭತ್ಯೆಯನ್ನು ಲೆಕ್ಕ ಹಾಕಿ ತಿಂಗಳ ಭತ್ಯೆಯನ್ನು ಪಾವತಿಸಬೇಕು.
12. ನೌಕರರ ಭಾಗದ ಇ.ಎಸ್.ಐ./ಪಿ.ಎಫ್. ವಂತಿಗೆ ಹಣವನ್ನು ಖಟಾಯಿಸಿದ ನಂತರ ನೌಕರರಿಗೆ ವೇತನವನ್ನು ಉದ್ಯೋಗದಾತರು ನೇರವಾಗಿ ನೌಕರರ ಬ್ಯಾಂಕ್ ಖಾತೆಗೆ ವರ್ಗಾಯಿಸುವ ಮೂಲಕ ಪಾವತಿಸತಕ್ಕದ್ದು.
13. ಮಾಲೀಕರ ಭಾಗದ ಇ.ಎಸ್.ಐ./ಪಿ.ಎಫ್. ವಂತಿಗೆ ಹಣವನ್ನು ನೌಕರರ ಭಾಗದ ಇ.ಎಸ್.ಐ/ ಪಿ.ಎಫ್ ವಂತಿಗೆಗೆ ಸೇರಿಸಿ, ಮಾಲೀಕರು ನೌಕರರ ಇ.ಎಸ್.ಐ / ಪಿ.ಎಫ್ ಖಾತೆಗೆ ಜಮಾ ಮಾಡತಕ್ಕದ್ದು.
14. ಮಾನವ ಸಂಪನ್ಮೂಲ ಪೂರೈಸುವ ಗುತ್ತಿಗೆದಾರ ಸಂಸ್ಥೆಗಳ ಮೇಲೆ ಮೂಲ ಗುತ್ತಿಗೆದಾರರು ಈ ಕೆಳಕಂಡ ಅಂಶಗಳ ಬಗ್ಗೆ ನಿಗಾ ವಹಿಸತಕ್ಕದ್ದು:-
    ಅ) ಮೇಲಿನ ನಿಯಮಗಳಂತೆ, ವೇತನವನ್ನು ಪಾವತಿಸತಕ್ಕದ್ದು.
    ಆ) ಪ್ರತಿ ತಿಂಗಳು 5ನೇ ದಿನಾಂಕದೊಳಗೆ ನೌಕರರ ಬ್ಯಾಂಕ್ ಖಾತೆಗೆ ವೇತನದ ಹಣವನ್ನು ಜಮಾ ಮಾಡತಕ್ಕದ್ದು.
    ಇ) ಕ್ರಮಬದ್ಧವಲ್ಲದ ಯಾವುದೇ ಕಟಾವಣೆಗಳನ್ನು ಮಾಡಕೂಡದು.
    ಈ) ನೌಕರರ ಇ.ಎಸ್.ಐ /ಪಿ.ಎಫ್ ನೊಂದಾಯಿಸಿದ ನೋಂದಾವಣೆ ಸಂಖ್ಯೆಗಳಿಗೆ ಅನುಗುಣವಾಗಿ ಇ.ಎಸ್.ಐ / ಪಿ.ಎಫ್ ವಂತಿಗೆ ಹಣವನ್ನು ಗುತ್ತಿಗೆದಾರ ಕಟಾಯಿಸಿ, ನಿರ್ವಹಿಸಿರುವ ದಾಖಲೆ ಪ್ರಸ್ತುತ ಅವಧಿಗಳಿಗೆ ಸಂಬಂಧಿಸಿರುವುದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

15. ನೌಕರರ ಹಾಜರಾತಿಯನ್ನು ಆಧಾರ ಸಂಖ್ಯೆಗೆ ಜೋಡಣೆಯಾಗಿರುವ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆ (AEBAS)ಯ ಮುಖಾಂತರ ನಿರ್ವಹಿಸತಕ್ಕದ್ದು ಹಾಗೂ (AEBAS) ವ್ಯವಸ್ಥೆಯ ಮೂಲಕ ಹಾಜರಾತಿಯನ್ನು ನಿರ್ವಹಿಸಲಾಗದ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುವ ನೌಕರರ ಹಾಜರಾತಿಯನ್ನು ಸೂಕ್ತ ವ್ಯವಸ್ಥೆಯ ಮೂಲಕ ನಿರ್ವಹಿಸತಕ್ಕದ್ದು.
16. ಯಾವುದೇ ಪ್ರದೇಶ ಅಥವಾ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಕನಿಷ್ಠ ವೇತನ ದರಗಳಿಗಿಂತ ಹೆಚ್ಚಿನ ವೇತನವನ್ನು ಪಡೆಯುತ್ತಿದ್ದಲ್ಲಿ, ಸದರಿ ಹೆಚ್ಚಿನ ವೇತನವನ್ನು ಪಡೆಯಲು ಕಾರ್ಮಿಕರು ಅರ್ಹರಾಗಿದ್ದು, ಅದನ್ನು ಪಾವತಿಸಲು ಉದ್ಯೋಗದಾತರರು ಭಾದ್ಯಸ್ಥರಾಗಿರುತ್ತಾರೆ.

17. ಕನಿಷ್ಠ ವೇತನ ದರಗಳು ಶಾಸನಬದ್ಧ ಪರಿಮಿತಿಯಾಗಿರುವುದರಿಂದ, ಕನಿಷ್ಠ ವೇತನ ದರಗಳನ್ನು ನಮೂದಿಸದೆ ಟೆಂಡರ್ ದಾಖಲೆಯಲ್ಲಿ ಕೇವಲ "ಸೇವಾ ಶುಲ್ಕವನ್ನು" ಮಾತ್ರ ನಮೂದಿಸುವ ಅವಕಾಶವನ್ನು ಮಾನವ ಸಂಪನ್ಮೂಲ ಪೂರೈಕೆ ಸಂಸ್ಥೆಗಳಿಗೆ ಕಲ್ಪಿಸುವ ಷರತ್ತಿನೊಂದಿಗೆ ಟೆಂಡರ್‌ನ್ನು ಪ್ರಕಟಿಸತಕ್ಕದ್ದು. ಟೆಂಡರ್‌ನಲ್ಲಿ ಭಾಗವಹಿಸುವ ಎಲ್ಲಾ ಮಾನವ ಸಂಪನ್ಮೂಲ ಪೂರೈಕೆ ಸಂಸ್ಥೆಗಳ ಪೂರ್ವಾಪರಗಳನ್ನು ಪರಿಶೀಲಿಸಿ, (ಅ) ಸದರಿ ಸಂಸ್ಥೆಗಳು ಈ ಹಿಂದೆ ನೌಕರರ ಇ.ಎಸ್.ಐ ಮತ್ತು ಪಿ.ಎಫ್ ವಂತಿಗೆಯನ್ನು ಸರಿಯಾಗಿ ಪಾವತಿಸಿರುವ ಕುರಿತು ಹಿಂದಿನ ಕೆಲವು ವರ್ಷಗಳ ದಾಖಲೆಗಳನ್ನು ಪರಿಶೀಲಿಸಬೇಕು. (ಆ) ಇತರೆ ಅನ್ವಯವಾಗುವ ಕಾರ್ಮಿಕ ಕಾನೂನುಗಳನ್ನು ಪಾಲಿಸಿವೆಯೇ ಎಂಬುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳಬೇಕು. (ಇ)

ಸದರಿ ಗುತ್ತಿಗೆದಾರರು ಈ ಹಿಂದೆ ಯಾವುದೇ ಸಕ್ಷಮ ನ್ಯಾಯಾಲಯದಿಂದ ಕಾರ್ಮಿಕ ಕಾನೂನಿನ ಉಲ್ಲಂಘನೆಗಾಗಿ ದಂಡನೆಗೊಳಗಾಗಿಲ್ಲದಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಟೆಂಡರ್ ದಾಖಲೆಗಳಲ್ಲಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಅಳವಡಿಸಿಕೊಂಡು ಟೆಂಡರ್ ದಾಖಲೆಯನ್ನು ಪ್ರಕಟಿಸತಕ್ಕದ್ದು.

(ಆಮ್ಲನ್ ಆದಿತ್ಯ ಬಿಸ್ವಾಸ್)
ಸರ್ಕಾರದ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:-

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಮಹಾಲೇಖಪಾಲರು, ಲೆಕ್ಕಪತ್ರ/ಲೆಕ್ಕ ಪರಿಶೋಧನೆ, ಕರ್ನಾಟಕ, ಬೆಂಗಳೂರು.
3. ಸರ್ಕಾರದ ಎಲ್ಲಾ ಇಲಾಖೆಗಳ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಅಪರ ಮುಖ್ಯ ಕಾರ್ಯದರ್ಶಿ ರವರಿಗೆ
4. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ)
6. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, (ಕಾರ್ಮಿಕ ಆಯುಕ್ತರ ಮೂಲಕ)
7. ಎಲ್ಲಾ ಜಿಲ್ಲೆಗಳ ವಿಭಾಗಾಧಿಕಾರಿಗಳು. (ಕಾರ್ಮಿಕ ಆಯುಕ್ತರ ಮೂಲಕ)
8. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ವಿಕಾಸ ಸೌಧ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಶಾಖೆ, ವಿಕಾಸ ಸೌಧ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಅನುಬಂಧ - II

66. Employment in Security Agency (Industries and Establishments wherein Office Staff and Security Guards are Appointed by such Agency)

Notification No. KAE 123 LWA 2015 dated 29-02-2016
Cost of Living Allowance to be paid over and above 5780 points
Minimum Wages with effect from 01-01-2016
Cost of Living Index: 7616– 5780 = 1836 points
Minimum wages and VDA from 01.04.2020 to 31.03.2021.

SCHEDULE

Sl. No.	Class of Employments		Minimum rates of wages			
			Zone.I		Zone.II	
			Per Day	Per Month	Per Day	Per Month
1	Security Officer	Basic	475.38	12360.00	465.38	12100.00
2	Field Officer	VDA	84.74	2203.20	84.74	2203.20
		Total	**560.12**	**14563.20**	**550.12**	**14303.20**
3	Security Inspector	Basic	437.38	11372.00	423.38	11008.00
4	Security Superwiser	VDA	84.74	2203.20	84.74	2203.20
5	Assistant Security Officer	Total	**506.06**	**13575.20**	**492.06**	**12793.60**
6	Head Gauard	Basic	426.38	11086.00	413.38	10748.00
7	Intelligence & Fire Fighting	VDA	84.74	2203.20	84.74	2203.20
		Total	**511.12**	**13289.20**	**498.12**	**12951.20**
8	Security Guard	Basic	398.00	10350.00	385.00	10012.00
9	Lady Guard / Lady Searcher	VDA	84.74	2203.20	84.74	2203.20
		Total	**482.74**	**12553.20**	[illegible].74	**12215.20**
	Driver/cleaners					
1	Driver	Basic	410.38	10670.00	397.38	10332.00
		VDA	84.74	2203.20	84.74	2203.20
		Total	**495.118**	**12873.20**	**482.12**	**12535.20**
2	Cleaner	Basic	375.38	9760.00	365.38	9500.00
		VDA	84.74	2203.20	84.74	2203.20
		Total	**460.118**	**11963.20**	**450.12**	**11703.20**

	Office staff					
1	Manager/ Personal Officer	Basic	508.38	13218.00	492.38	12802.00
		VDA	84.74	2203.20	84.74	2203.20
		Total	**593.12**	**15421.20**	**577.12**	**15005.20**
2	Assistant Manager/ Assistant Personal Manager	Basic	**490.38**	12750.00	475.38	12360.00
		VDA	84.74	2203.20	84.74	2203.20
		Total	**575.12**	**14953.20**	**560.12**	**14563.20**
3	Accountant	Basic	470.38	12230.00	455.38	11840.00
		VDA	84.74	2203.20	84.74	2203.20
		Total	**555.12**	**14433.20**	**540.12**	**14043.20**
4	Cashier/ Sineor Clerk	Basic	460.38	11970.00	437.38	11372.00
5	Stenographer/ Computer Operator	VDA	84.74	2203.20	84.74	2203.20
6	Store Keeper/ Telephone Operator	Total	545.12	**14173.20**	**522.12**	**13575.20**
7	Typist/Data Entry Operator	Basic	450.38	11710.00	427.38	11112.00
		VDA	84.74	2203.20	84.74	2203.20
8	Clerk	Total	**535.12**	**13913.20**	**512.12**	**13315.20**
9	Office Boy/ Peon/Watchman/ Sweeper/Attender	Basic	360.00	9360.00	350.00	9100.00
		VDA	84.74	2203.20	84.74	2203.20
		Total	**444.74**	**11563.20**	**434.74**	**11303.20**

Zone - I : Shall comprise Bruhat Bengaluru Mahanagar Palike, All City Corporations and Agglomeration Areas in the State (City Corporations).

Zone - II : Shall comprise all other areas which are not covered in Zone - I.

V.D.A. : In addition to the basic wages, all Category of Employees in the state shall be paid V.D.A. at the rate of 4 Paise per point over and above 5780 points.

ಅನುಬಂಧ - III

79. Employment in Urban Local Bodies (ULBs), and Panchayath Raj Institutions (PRIs).

Notification No. KAE 71 LWA 2015, dated 05.08.2016
Published in Gazette dated 06-08-2016.
Minimum Wages with effect from 05.08.2016
Cost of Living Allowance to be paid over and above 6205 points
Cost of Living Index: 7616- 6205 = 1411 points
Minimum wages and VDA from 01.04.2020 to 31.03.2021

SCHEDULE

Sl. No	Class of Employment	Minimum rates of wages payable for different zones				
			BBMP, All other City Corporations and Zilla Panchayat Institutions of the State	All Municipalities and Talluk Panchayat Institution of the State (Grade- I)	All Municipalities of the State (Grade-II)	All Town Municipaiities Pattana Panchayath and gram panchayats
			Per Month			
1	Chemist Supervisor (Sanitary)	Basic	14630.00	14190.00	13761.00	13200.00
		VDA	1693.20	1693.20	1693.20	1693.20
		Total	16323.20	15883.20	15454.20	14893.20
2	Clerk/ Computer Operator/ Data Entry Operator/ Tax Collector/ Electrician/ Lab Technician/ Assistant Librarian	Basic	13365.00	12958.00	12606.00	12122.00
		VDA	1693.20	1693.20	1693.20	1693.20
		Total	15058.20	14651.20	14299.20	13815.20
3	Driver cum Operators U.G.D/ J.C.B. Compact Machine/ sweeping Machine	Basic	12650.00	12265.00	11935.00	11440.00
		VDA	1693.20	1693.20	1693.20	1693.20
		Total	14343.20	13958.20	13628.20	13133.20
4	Drivers Lorry/Bus/ Tractor/ Jeep /Car	Basic	12045.00	11715.00	11385.00	10945.00
		VDA	1693.20	1693.20	1693.20	1693.20
		Total	13738.20	13408.20	13078.20	12638.20
	Cleaners	Basic	11011.00	10725.00	10439.00	10010.00
		VDA	1693.20	1693.20	1693.20	1693.20
		Total	12704.20	12418.20	12132.20	11703.20

5	Pump Operator, Mechanic, Balawadi Workers, Plumbers, Horticulture Assistant, Pump Repairer, Water Man, Valveman	Basic VDA Total	11632.00 1693.20 **13325.20**	11330.00 1693.20 **13023.20**	11028.00 1693.20 12721.20	10588.00 1693.20 **12281.20**
6	Peons/ Attender/ Gardner/ Dafedar/ Cremetorium Watchman/ Watchman/ Office and Premises Cleening other unskilled Category.	Basic VDA Total	11011.00 1693.20 **12704.20**	10725.00 1693.20 **12418.20**	10439.00 1693.20 12132.20	10010.00 1693.20 **11703.20**
7	Sweeping the roads, Sewerage, Bathroom and latrines Cleaning with the help of Machnicines Segregating Loading and Unloading of wastes	Basic VDA Total	14040.00 1693.20 **15733.20**	13650.00 1693.20 **15343.20**	13260.00 1693.20 14953.20	12870.00 1693.20 **14563.20**

V.D.A : In addition to the basic wages, all Category of Employees in the state

Note: as per the Government Notification No. KAE 85 LWA 2017 Dated 04-09-2017
Librarian and Librarian Supervisor Categories deleted.

59. Employment in Cleaning / Scavenging of Bathrooms, Toilets, Wash Rooms, Drainages etc as Private Safai Karmacharis excluding such works in Urban Local Bodies and Panchayath Raj Institutions

Notification No. KAE 82 LWA 2015 dated 04.08.2016
Published in Gazette dated 06.08.2016
Minimum Wages With effect from 04.08.2016
Cost of Living Allowance to be paid over and above 5780 points
Cost of Living Index: 7616-5780 = 1836 points
Minimum wages and VDA from 01.04.2020 to 31.03.2021.

SCHEDULE

Sl. No.	Class of Employments	Minimum rates of wages (In Rs.)						
			Zone-I		Zone-II		Zone-III	
			Per Day	per Month	Per Day	per Month	Per Day	per Month
1	Safai Karmacharis, Underground drainage, Floor, Bath Room & Toilet, and other workers engaged in similar kinds of work including such works being carried on with the help of Machines	Basic VDA Total	540.00 84.74 **624.74**	14040.00 2203.20 **16243.20**	525.00 84.74 **609.74**	13650.00 2203.20 **15853.20**	490.00 84.74 **574.74**	12740.00 2203.20 **14943.20**

Zone - I : Shall Comprise the City Agglomeration Areas. And District Head quarters Agglomeration Areas.

Zone - II : Comprises District Headquarters.

Zone - III : Comprises of other area.

V.D.A. : In addition to the basic wages, all Category of Employees in the state shall be paid V.D.A. at the rate of 4 Paise per point over and above 5780 points.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	753
ಮಾನ್ಯ ಸದಸ್ಯರ ಹೆಸರು	:	ಶ್ರೀ ಶರತ್ ಕುಮಾರ್ ಬಚ್ಚೇಗೌಡ (ಹೊಸಕೋಟೆ)
ಉತ್ತರಿಸಬೇಕಾದ ದಿನಾಂಕ	:	10.12.2020
ಉತ್ತರಿಸಬೇಕಾದ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ಕೋವಿಡ್-19 ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಆರ್.ಟಿ.ಪಿ.ಸಿ.ಆರ್ ಮತ್ತು ಇತರೆ ಟೆಸ್ಟ್‌ಗಳನ್ನು ಮಾಡಲಾಗಿದೆ;	ರಾಜ್ಯದಲ್ಲಿ ಕೋವಿಡ್-19 ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ 7708824 ಆರ್.ಟಿ.ಪಿ.ಸಿ.ಆರ್ ಮತ್ತು 3345791 ಇತರೆ ಟೆಸ್ಟ್‌ಗಳನ್ನು ಮಾಡಲಾಗಿದೆ.
ಆ	ಇದುವರೆಗೆ ರಾಜ್ಯದಲ್ಲಿ ಎಷ್ಟು ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ, ಅದಕ್ಕಾಗಿ ಖರ್ಚು ಮಾಡಲಾಗಿರುವ ಹಣ ಎಷ್ಟು;	ಇದುವರೆಗೆ ರಾಜ್ಯದಲ್ಲಿ 893006 ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೂ ಔಷಧಿಗಳು, ಯಂತ್ರೋಪಕರಣಗಳು, ಪರೀಕ್ಷೆಗಾಗಿ ಹಾಗೂ ಆಸ್ಪತ್ರೆಗಳಲ್ಲಿ ದಾಖಲಾಗುವ ರೋಗಿಗಳಿಗೆ ಖರ್ಚು ಮಾಡಿರುವ ಹಣದ ವಿವರಗಳನ್ನು ಅನುಬಂಧದಲ್ಲಿರಿಸಿದೆ.
ಇ	ಕೋರೋನ ಸೋಂಕಿತರ ಚಿಕಿತ್ಸೆಗಾಗಿ ಇದುವರೆಗೆ ಎಷ್ಟು ವೆಂಟಿಲೇಟರ್‌ಗಳನ್ನು ಖರೀದಿಸಲಾಗಿದೆ, ಅದಕ್ಕಾಗಿ ಖರ್ಚುಮಾಡಲಾಗಿರುವ ಹಣ ಎಷ್ಟು?	ಕೇಂದ್ರ ಸರ್ಕಾರದಿಂದ 2025 ವೆಂಟಿಲೇಟರ್‌ಗಳು ಉಚಿತವಾಗಿ ಸರಬರಾಜಾಗಿರುತ್ತದೆ. ರಾಜ್ಯ ಸರ್ಕಾರದಿಂದ ರೂ.10,61,62,560/- ಗಳ ವೆಚ್ಚದಲ್ಲಿ 158 ವೆಂಟಿಲೇಟರ್‌ಗಳನ್ನು ಖರೀದಿ ಮಾಡಲಾಗಿದೆ.

ಸಂಖ್ಯೆ: ಆಕುಕ 69 ಎಸ್‌ಟಿಕ್ಯೂ 2020

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ.

753

ಕೋವಿಡ್-19ರ ನಿರ್ವಹಣೆಗಾಗಿ ಗುತ್ತಿಗೆ/ಹೊರಗುತ್ತಿಗೆ ಅಡಿಯಲ್ಲಿ ನೇಮಿಸಿಕೊಂಡಿರುವ ಅಧಿಕಾರಿ/ಸಿಬ್ಬಂದಿಗಳಿಗೆ ವೇತನ ಪಾವತಿ ಹಾಗೂ ಔಷಧಿ/ಯಂತ್ರೋಪಕರಣ/ ಇತ್ಯಾದಿ ಖರೀದಿಯ ಖರ್ಚು ವೆಚ್ಚ ಮಾಡಿರುವ ಮೊತ್ತದ ವಿವರದ ತಖ್ತೆ. (07/12/2020 ರಂತೆ)

ಲೆಕ್ಕ ಶೀರ್ಷಿಕೆ	ಕೋವಿಡ್-19ರ ವಿವರ	ಬಿಡುಗಡೆ ಮಾಡಿರುವ ಅನುದಾನ	ವೇತನ ಪಾವತಿ ಹಾಗೂ ಖರ್ಚು ವೆಚ್ಚ ಮಾಡಿರುವ ವಿವರ	ಉಳಿಕೆ ಅನುದಾನ
	ಎನ್‌ಹೆಚ್‌ಎಂಗೆ ಅನುದಾನ ಬಿಡುಗಡೆ			
2210-03-800-0-18 ಉ.ಶಿ-059	2019-20ನೇ ಸಾಲು	989500000	989500000	0
	2020-21ನೇ ಸಾಲು			
	1ನೇ ಕಂತು	1289200000	1289200000	0
	2ನೇ ಕಂತು	532300000	269092000	263208000
	ಒಟ್ಟು- (ಅ)	**2811000000**	**2547792000**	**263208000**
2210-80-101-0-01 (ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ)	9 ಜಿಲ್ಲೆಗಳ ಖಾಸಗಿ ಪ್ರಯೋಗಾಲಯಗಳಿಗೆ ಅನುದಾನ ಬಿಡುಗಡೆ	916500000	336957826	579542174
	ಒಟ್ಟು- (ಆ)	**916500000**	**336957826**	**579542174**
	ಒಟ್ಟು ಮೊತ್ತ (ಅ+ಆ)	**3727500000**	**2884749826**	**842750174**
	ಕೆ.ಡಿ.ಎಲ್.ಡಬ್ಲ್ಯೂ.ಎಸ್			
	ಔಷಧ (ಪಿ.ಓ-121)	3368555795	2685091213	683464582
	ಯಂತ್ರೋಪಕರಣಗಳು (ಪಿ.ಓ-175)	4414528496	3663262112	751266384
	ಇತರೆ ವೆಚ್ಚ			
	(ಎಸ್‌ಡಿಆರ್‌ಎಫ್ ನಿಂದ 50.00 ಕೋಟಿ, ಎನ್‌ಹೆಚ್‌ಎಂ ನಿಂದ 148.27 ಕೋಟಿ ಹಾಗೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ 31.62 ಕೋಟಿ ಒಟ್ಟು ರೂ. 229.89 ಕೋಟಿ ಇತರೆ ಸಂಸ್ಥೆಗಳಿಂದ ಪಡೆಯಾಗಿದ್ದು ರೂ. 569.40 ಕೋಟಿ ಸ್ವಂತ ನಿಧಿಯಿಂದ ಭರಿಸಿದೆ)	209880520	209880520	0
	ಒಟ್ಟು	**7992964811**	**6558233845**	**1434730966**

ನೇರವಾಗಿ ಖಾತೆಗೆ ಬಂದಿರುತ್ತದೆ	ವಿಪತ್ತು ಪರಿಹಾರ ನಿಧಿ	200000000	200000000	0
2245-80-102-0-01 ಉ.ಶಿ-059	(ಕೆ.ಡಿ.ಎಲ್.ಡಬ್ಲ್ಯೂ.ಎಸ್)	500000000	500000000	0
	ಒಟ್ಟು	**700000000**	**700000000**	**0**
2210-01-110-1-22 ಉ.ಶಿ-034	ವೈದ್ಯಕೀಯ ಗುತ್ತಿಗೆ/ಹೊರಗುತ್ತಿಗೆ ಅಡಿಯಲ್ಲಿ ವೈದ್ಯಕೀಯ ಅಧಿಕಾರಿ/ಸಿಬ್ಬಂದಿಗಳನ್ನು ನೇಮಿಸಿಕೊಂಡಿರುವುದಕ್ಕೆ ವೇತನ ಬಿಡುಗಡೆ ಮಾಡಿರುವ ವಿವರ	409060000	312232642	96827358
	ಒಟ್ಟು	**409060000**	**312232642**	**96827358**
	ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗಕ್ಕೆ ಎನ್.ಹೆಚ್.ಎಂ. ವಿಭಾಗದಿಂದ ಗ್ಯಾಸ್ ಪೈಪ್ ಲೈನ್ ಅಳವಡಿಕೆಗೆ ಬಿಡುಗಡೆ (1ನೇ ಕಂತು-2880.00+8030.00 ಮತ್ತು 2ನೇ ಕಂತು-9888.00+75000000)	2087300000	1344668000	742632000
	ಒಟ್ಟು	**2087300000**	**1344668000**	**742632000**
	ಒಟ್ಟು ಮೊತ್ತ	**14916824811**	**11799884313**	**3116940498**
	ಕೆ.ಡಿ.ಎಲ್.ಡಬ್ಲ್ಯೂ.ಎಸ್. ರವರಿಗೆ ಬಿಡುಗಡೆಗೊಳಿಸಿರುವ ಮೊತ್ತದಲ್ಲಿ ಆಯುಕ್ತಾಲಯದಿಂದ 50.00 ಕೋಟಿ ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ ಬಿಡುಗಡೆಗೊಳಿಸಿದೆ.	500000000	500000000	0
	ಎನ್.ಹೆಚ್.ಎಂ. ಬಿಡುಗಡೆಗೊಳಿಸಿರುವ ರೂ. 281.10 ಕೋಟಿಯಲ್ಲಿ ರೂ. 1482676000 ಕೆ.ಡಿ.ಎಲ್.ಡಬ್ಲ್ಯೂ.ಎಸ್. ರವರಿಗೆ ಬಿಡುಗಡೆಗೊಳಿಸಿರುವುದರಲ್ಲಿ ಸೇರಿದೆ.	1482676000	1482676000	0
	ಒಟ್ಟು ಕಡಿತಗೊಳಿಸಬೇಕಾದ ಮೊತ್ತ	**1982676000**	**1982676000**	**0**
	ಒಟ್ಟಾರೆ ಬಿಡುಗಡೆ ಮತ್ತು ಖರ್ಚಿನ ವಿವರ	**12934148811**	**9817208313**	**3116940498**

ಕರ್ನಾಟಕ ವಿಧಾನಸಭೆ		
1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	760
2	ಮಾನ್ಯ ಸದಸ್ಯರ ಹೆಸರು	ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)
3	ಉತ್ತರಿಸಬೇಕಾದ ದಿನಾಂಕ	10.12.2020
4	ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಎಷ್ಟು ಸರ್ಕಾರಿ ವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ; ಈ ಸಂಸ್ಥೆಗಳಲ್ಲಿ ಬೋಧಕ ಮತ್ತು ಬೋದಕೇತರ ಹುದ್ದೆಗಳ ಸಂಖ್ಯೆ ಎಷ್ಟು; ಎಷ್ಟು ಹುದ್ದೆಗಳು ಭರ್ತಿಯಾಗಿವೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆ; (ಸಂಪೂರ್ಣ ವಿವರ ಒದಗಿಸುವುದು)	ರಾಜ್ಯದಲ್ಲಿ ಒಟ್ಟು 17 ಸರ್ಕಾರಿ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಸ್ಥೆಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಬೋಧಕ ಹಾಗೂ ಬೋಧಕೇತರ ಹುದ್ದೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
(ಆ)	ಕೋವಿಡ್-19 ಹಿನ್ನೆಲೆಯಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡದೇ ಇರುವುದರಿಂದ ಕೋವಿಡ್-19 ಮಹಾಮಾರಿಯ ನಿರ್ವಹಣೆಯಲ್ಲಿ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ನಿಜವೇ;	ಕೋವಿಡ್-19 ಪ್ರಕರಣಗಳನ್ನು ಸಂಪರ್ಕವಾಗಿ ನಿಭಾಯಿಸುವ ನಿಟ್ಟಿನಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಲು ಅಗತ್ಯವಾದ 637 ಹುದ್ದೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ 6 ತಿಂಗಳ ಮಟ್ಟಿಗೆ ಭರ್ತಿ ಮಾಡಿಕೊಳ್ಳಲು ಆದೇಶ ಸಂಖ್ಯೆ:ಎಂಇಡಿ 165 ಎಂಎಸ್ಎಫ್ 2020, ದಿನಾಂಕ:01.06.2020ರಲ್ಲಿ ಸರ್ಕಾರವು ಆದೇಶಿಸಿದ್ದು, ಅದರಂತೆ ತಾತ್ಕಾಲಿಕವಾಗಿ ನೇಮಿಸಿಕೊಂಡು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲಾಗಿದೆ.

..2

(ಇ)	ಸರ್ಕಾರವು ಕಾಲಮಿತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವುದೇ?	ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಗಳಲ್ಲಿ ಖಾಲಿ ಇರುವ ಬೋಧಕ (ಗ್ರೂಪ್ -ಎ ಮತ್ತು ಗ್ರೂಪ್-ಬಿ) ಹುದ್ದೆಗಳನ್ನು ಎಂ.ಐ.ಸಿ. ನಿಯಮಾವಳಿಯಂತೆ ಕಾಲಕಾಲಕ್ಕೆ ಸಂಸ್ಥೆಯ ಬೈಲಾದನ್ವಯ ವೃಂದ ಮತ್ತು ಮೀಸಲಾತಿಗೆ ಒಳಪಟ್ಟು ನೇರ ಸಂದರ್ಶನ ಸಮಿತಿಯ ಮುಖಾಂತರ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಗ್ರೂಪ್ "ಸಿ" ನಲ್ಲಿ ಖಾಲಿ ಇರುವ ಶುಶ್ರೂಷಕ ಹುದ್ದೆಗಳನ್ನು ಕರ್ನಾಟಕ ಪರಿಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಮೂಲಕ ಮತ್ತು ಇನ್ನಿತರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಗ್ರೂಪ್ "ಡಿ" ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿದೆ.

ಎಂಇಡಿ 262 ಆರ್‌ಐ 2020

(ಡಾ.ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

ಕ್ರಸಂ	ಸಂಸ್ಥೆಯ ಹೆಸರು	ಬೋಧಕ ಹುದ್ದೆಗಳು			ಬೋಧಕೇತರ ಹುದ್ದೆಗಳು		
		ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಮಂಜೂರಾದ ಹುದ್ದೆಗಳು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.	888	616	272	2834	2486	348
2	ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.	433	281	152	1430	499	931
3	ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ.	486	320	166	1062	387	675
4	ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ.	424	212	132	902	478	427
5	ಬೆಳಗಾಂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾಂ.	227	115	36	517	279	89
6	ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.	262	248	19	514	275	221
7	ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.	274	192	82	568	415	153
8	ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್	287	235	48	782	455	239
9	ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು.	297	246	51	523	492	32
10	ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ.	363	233	130	820	726	94
11	ಬೌರಿಂಗ್ ಲೇಡಿಕರ್ಜನ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಸಂಸ್ಥೆ ಬೆಂಗಳೂರು.	151	33	118	659	214	445
12	ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಾಮರಾಜನಗರ	36	22	9	122	77	45
13	ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಡಗು	228	127	101	250	230	20
14	ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ	493	272	218	337	271	66
15	ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ	234	151	83	316	316	0
16	ಕೊಪ್ಪಳ ವೈದ್ಯಕೀಯ ವಿಜ್ಞಾನಗಳಸಂಸ್ಥೆ, ಕೊಪ್ಪಳ	228	132	90	416	407	9
17	ಗುಲ್ಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗುಲ್ಬರ್ಗಾ	235	192	43	113	113	0

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 763
ಸದಸ್ಯರ ಹೆಸರು : ಡಾ॥ ಯತೀಂದ್ರ ಸಿದ್ಧರಾಮಯ್ಯ
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ 2018-19 ಮತ್ತು 2019-20ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಯೋಜನೆಗಾಗಿ ನಿಗದಿಪಡಿಸಲಾಗಿದೆ; ಈವರೆಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ;</td><td>(ರೂ.ಕೋಟಿಗಳಲ್ಲಿ)
<table>
<tr><th>ವರ್ಷ</th><th colspan="3">ಹಂಚಿಕೆ</th><th colspan="3">ಬಿಡುಗಡೆ</th></tr>
<tr><td></td><td>SCSP</td><td>TSP</td><td>ಒಟ್ಟು</td><td>SCSP</td><td>TSP</td><td>ಒಟ್ಟು</td></tr>
<tr><td>2018-2019</td><td>20700.81</td><td>8614.04</td><td>29314.85</td><td>19951.10</td><td>8241.83</td><td>28192.93</td></tr>
<tr><td>2019-2020</td><td>19521.90</td><td>7879.12</td><td>27401.00</td><td>19190.90</td><td>7703.22</td><td>26894.07</td></tr>
</table>
</td></tr>
<tr><td>ಆ)</td><td>ಆ ಪೈಕಿ ಎಷ್ಟು ಅನುದಾನವನ್ನು ಹಿಂಪಡೆಯಲಾಗಿದೆ; (ವರ್ಷವಾರು, ಯೋಜನಾವಾರು ವಿವರ ನೀಡುವುದು)</td><td rowspan="2">ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಅಡಿ ಯಾವುದೇ ಅನುದಾನವನ್ನು ಹಿಂಪಡೆದಿರುವುದಿಲ್ಲ. ಆದಾಗ್ಯೂ ಹಂಚಿಕೆ ಮಾಡಿದ ಅನುದಾನವನ್ನು ಪೂರ್ಣಮಟ್ಟದಲ್ಲಿ ವೆಚ್ಚ ಮಾಡಲು ಸಾಧ್ಯವಿಲ್ಲದೇ ಇದ್ದ ಇಲಾಖೆಗಳಿಂದ ಅನುದಾನದ ಬೇಡಿಕೆ ಹೆಚ್ಚಿರುವ ಕೆಲವು ಇಲಾಖೆಗಳಿಗೆ ಎಸ್.ಸಿ.ಎಸ್.ಪಿ /ಟಿ.ಎಸ್.ಪಿ ಕಾರ್ಯಕ್ರಮಗಳನ್ನು ಮಾತ್ರ ಅನುಷ್ಠಾನ ಮಾಡಲು ಅನುದಾನ ಮರುಹಂಚಿಕೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ.
(ರೂ. ಕೋಟಿಗಳಲ್ಲಿ)
<table>
<tr><th rowspan="2">ವರ್ಷ</th><th colspan="2">ಆಧ್ಯರ್ಪಿಸಿರುವ ಅನುದಾನ</th><th colspan="2">ಮರುಹಂಚಿಕೆ ಮಾಡಿರುವ ಅನುದಾನ</th></tr>
<tr><th>SCSP</th><th>TSP</th><th>SCSP</th><th>TSP</th></tr>
<tr><td>2018-19</td><td>791.66</td><td>314.17</td><td>931.61</td><td>450.14</td></tr>
<tr><td>2019-20</td><td>352.63</td><td>190.82</td><td>352.63</td><td>189.87</td></tr>
</table>
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭಿವೃದ್ಧಿಗೆ ಮಾತ್ರ ಸದರಿ ಅನುದಾನವನ್ನು ವಿನಿಯೋಗಿಸಿದ್ದು, ಬೇರೆ ಉದ್ದೇಶಕ್ಕೆ ಉಪಯೋಗಿಸಿರುವುದಿಲ್ಲ. ವಿವರವನ್ನು ಅನುಬಂಧ-1 & 2 ರಲ್ಲಿ ನೀಡಿದೆ.</td></tr>
<tr><td>ಇ)</td><td>ಈ ರೀತಿ ಹಿಂಪಡೆಯಲಾದ ಅನುದಾನವನ್ನು ಬೇರೆ ಉದ್ದೇಶಕ್ಕೆ ಉಪಯೋಗಿಸ ಲಾಗಿದೆಯೇ? (ವಿವರ ನೀಡುವುದು)</td></tr>
</table>

ಸಕಇ 429 ಎಸ್‌ಎಲ್‌ಪಿ 2020

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು

ಅನುಬಂಧ - 1 (6)

(763)

ಮಾನ್ಯ ವಿಧಾನಸಭಾ ಸದ್ಯರರಾದ ಡಾ|| ಯತೀಂದ್ರ ಸಿದ್ದರಾಮಯ್ಯ (ವರುಣ) ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ763

2018-19ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯಡಿ ವಿವಿಧ ಇಲಾಖೆಗಳು ಆದ್ಯರ್ಪಿಸಿದ ಮತ್ತು ಮರುಹಂಚಿಕೆ ಮಾಡಿರುವ ಅನುದಾನದ ವಿವರ

ಅ

(ರೂ. ಕೋಟಿಗಳಲ್ಲಿ)

ಕ್ರಸಂ	ಇಲಾಖೆಗಳು	ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಕಾರ್ಯಕ್ರಮ	ಆದ್ಯರ್ಪಿಸಿದ ಮೊತ್ತ		
				ಎಸ್.ಸಿ.ಎಸ್.ಪಿ	ಟಿ.ಎಸ್.ಪಿ	ಒಟ್ಟು
1	ಕೃಷಿ ಮತ್ತು ಜಲಾನಯನ ಅಭಿವೃದ್ಧಿ	ಆಇ 73 ವೆಚ್ಚ-4/2019 ದಿನಾಂಕ:19-01-2019	ಸೂಕ್ಷ್ಮ ನೀರಾವರಿ ಯೋಜನೆ 2401-00-108-1-15	25.00	10.00	35.00
			ಮಳೆ ಆಧಾರಿತ ಪ್ರದೇಶದ ಅಭಿವೃದ್ಧಿ 2401-00-108-1-16	2.50	1.00	3.50
			ರೈತರಿಗೆ ಆರ್ಥಿಕ ಬೆಂಬಲ 2401-00-800-1-72	200.00	70.00	270.00
			ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2402-00-102-0-30	15.00	10.00	25.00
			ಕೃಷಿ ತಾಂತ್ರಿಕತೆ ಗುಚ್ಚಗಳ ಅಭಿವೃದ್ಧಿ 4401-00-108-0-01	25.00	10.00	35.00
	ಒಟ್ಟು			**267.50**	**101.00**	**368.50**
2	ತೋಟಗಾರಿಕೆ	ಆಇ 71 ವೆಚ್ಚ-4/2018 ದಿನಾಂಕ:19-01-2019	ತೋಟಗಾರಿಕೆ ತಾಂತ್ರಿಕತೆ ಗುಚ್ಚಗಳ ಅಭಿವೃದ್ಧಿ 4401-00-108-0-02	25.00	10.00	35.00
	ಒಟ್ಟು			**25.00**	**10.00**	**35.00**
3	ಪಶುಸಂಗೋಪನೆ	ಆಇ 70 ವೆಚ್ಚ-4/2018 ದಿನಾಂಕ:19-01-2019	ಹಾಲು ಉತ್ಪಾದಕರಿಗೆ ಉತ್ತೇಜನ 2404-00-191-1-17	30.00	20.00	50.00
	ಒಟ್ಟು			**30.00**	**20.00**	**50.00**
4	ಆರ್.ಡಿ.ಪಿ.ಆರ್	ಆಇ 492 ವೆಚ್ಚ-6/2018 ದಿನಾಂಕ 19-01-2019	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ 5054-03-337-0-71	44.00	26.00	70.00
	ಒಟ್ಟು			**44.00**	**26.00**	**70.00**
5	ಅರಣ್ಯ	ಆಇ 809 ವೆಚ್ಚ-5/2018 ದಿನಾಂಕ 19-01-2019	ವಿಶೇಷ ಘಟಕ ಯೋಜನೆ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆ (2406-01-789-0-00 & 2406-01-796-0-00)	8.08	0.00	8.08
				0.00	5.78	5.78
	ಒಟ್ಟು			**8.08**	**5.78**	**13.86**
6	ಸಹಕಾರ	ಆಇ 11 ವೆಚ್ಚ-2/2019 ದಿನಾಂಕ 19-01-2019	ಬೆಳೆ ಸಾಲಕ್ಕಾಗಿ ಹಾಗೂ ಸ್ವಸಹಾಯ ಸಂಘಗಳಿಗೆ ಬಡ್ಡಿ ಸಹಾಯಧನ 2425-00-107-2-41	121.56	42.32	163.88
			ಯಶಸ್ವಿನಿ 2425-00-108-0-57	5.00	3.00	8.00
	ಒಟ್ಟು			**126.56**	**45.32**	**171.88**
7	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ಆಇ 763 ವೆಚ್ಚ-10/2018 ದಿನಾಂಕ:27-12-2018	ಭಾಗ್ಯ ಲಕ್ಷ್ಮಿ 2235-02-102-0-25	0.00	15.00	15.00
			ಐ.ಸಿ.ಡಿ.ಎಸ್ 2236-02-197-6-01	120.00	15.00	135.00
	ಒಟ್ಟು			**120.00**	**30.00**	**150.00**
			ಖನಿಜ ಸಂಸ್ಕರಣಾ ಕೋಶ ಸೃಜನೆ 2853-02-102-0-14	1.00	1.00	2.00
			ವಸತಿ ಮತ್ತು ಕಾರ್ಯಾಗಾರ 2851-00-103-0-55	1.35	0.55	1.90
			ನೇಕಾರರ ಯೋಜನೆ 2851-00-103-0-62	10.24	5.00	15.24
		ಆಇ 17(ತ) ವೆಚ್ಚ-1/2019	ಸಿದ್ದ ಉಡುಪು ನೀತಿ 2852-08-202-7-01	10.00	4.00	14.00

(ರೂ. ಕೋಟಿಗಳಲ್ಲಿ)

ಕ್ರಸಂ	ಇಲಾಖೆಗಳು	ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ	ಕಾರ್ಯಕ್ರಮ	ಆದ್ಯರ್ಪಿಸಿದ ಮೊತ್ತ		
				ಎಸ್.ಸಿ.ಎಸ್.ಪಿ	ಟಿ.ಎಸ್.ಪಿ	ಒಟ್ಟು
8	ವಾಣಿಜ್ಯ ಮತ್ತು ಕೈಗಾರಿಕೆ	[illegible] ದಿನಾಂಕ:18.01.2019	ಕೈಗಾರಿಕಾ ಮೂಲಭೂತ ಸೌಕರ್ಯಗಳು 4852–80–004–0–01	30.00	15.00	45.00
			ಕೈಗಾರಿಕೆಗಳಿಗೆ ನೆರವು ಮತ್ತು ಇತರೆ ವೆಚ್ಚ 2851–00–102–0–83	5.00	1.00	6.00
			ಔದ್ಯಮಿಕ ಸಮೂಹಗಳ ಸ್ಥಾಪನೆ ಮತ್ತು ಸುಧಾರಣೆ 2851–00–102–0–84	10.00	1.00	11.00
			ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಕೈಗಾರಿಕಾ ಮೂಲಭೂತ ಸೌಕರ್ಯಗಳು 4851–00–102–0–20	20.00	8.00	28.00
	ಒಟ್ಟು			**87.59**	**35.55**	**123.14**
9	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	ಆಇ 68 ವೆಚ್ಚ–5/2019 ದಿನಾಂಕ:18.01.2019	ಕಟ್ಟಡ ನಿರ್ವಹಣೆ 4210-01-110-1-21	35.00	20.00	55.00
			ರಾಮನಗರದಲ್ಲಿ ಅತೀ ವಿಶಿಷ್ಟ ಆಸ್ಪತ್ರೆ ಸ್ಥಾಪನೆ 4210–01–110–7–03	7.00	4.00	11.00
			ತಾಯಿ ಭಾಗ್ಯ 2210–80–800–0–17	8.18	4.55	12.73
			ರಾಷ್ಟ್ರೀಯ ಸ್ವಾಸ್ಥ್ಯ ಯೋಜನೆ 2210–80–800–0–27	5.00	3.00	8.00
	ಒಟ್ಟು			**55.18**	**31.55**	**86.73**
10	ಕನ್ನಡ ಮತ್ತು ಸಂಸ್ಕೃತಿ	ಆಇ 55 ವೆಚ್ಚ–7/2019 ದಿನಾಂಕ:18–01–2019	ಪರಿಶಿಷ್ಟ ಜಾತಿ ಉಪಯೋಜನೆ 2205–00–102–1–44	15.00	0.00	15.00
			ಪರಿಶಿಷ್ಟ ಪಂಗಡ ಉಪಯೋಜನೆ 2205–00–786–0–01	0.00	5.00	5.00
	ಒಟ್ಟು			**15.00**	**5.00**	**20.00**
11	ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ	ಆಇ 139 ವೆಚ್ಚ–9/2019 ದಿನಾಂಕ:19–01–2019	ಎನ್.ಯು.ಎಲ್.ಎಂ 3604–00–191–5–52	5.00	0.50	5.50
	ಒಟ್ಟು			**5.00**	**0.50**	**5.50**
12	ನಗರಾಭಿವೃದ್ಧಿ	ಆಇ 140 ವೆಚ್ಚ–9/2019 ದಿನಾಂಕ:21–01–2019	ಸ್ವಚ್ಛ ಭಾರತ 2217–80–800–0–35	7.76	3.47	11.23
	ಒಟ್ಟು			**7.76**	**3.47**	**11.23**
	ಒಟ್ಟು ಮೊತ್ತ			**791.67**	**314.17**	**1105.84**

763

ಮಾನ್ಯ ವಿಧಾನಸಭಾ ಸದ್ಯರರಾದ ಡಾ॥ ಯತೀಂದ್ರ ಸಿದ್ದರಾಮಯ್ಯ (ವರುಣ) ರವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ763 ಕ್ಕೆ ಅನುಬಂಧ-2

2018-19ನೇ ಸಾಲಿನಲ್ಲಿ ಮರುಹಂಚಿಕೆ ಮಾಡಿರುವ ಅನುದಾನದ ವಿವರ.

ಕ್ರ.ಸಂ	ಇಲಾಖೆಗಳು	ಯೋಜನೆ	ಎಸ್.ಸಿ.ಎಸ್.ಪಿ	ಟಿ.ಎಸ್.ಪಿ	ಒಟ್ಟು
1	ಕೃಷಿ ಮತ್ತು ಜಲಾನಯನ ಅಭಿವೃದ್ಧಿ	ಸೂಕ್ಷ್ಮ ನೀರಾವರಿ ಯೋಜನೆ 2401-00-108-1-15	5.00	10.00	15.00
2		ಕೃಷಿ ವಿಸ್ತರಣೆ ಮತ್ತು ತರಬೇತಿ 2401-00-800-1-53	16.00	5.83	21.83
3		ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2402-00-102-0-30	0.00	0.20	0.20
4	ತೋಟಗಾರಿಕೆ	ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ತಾಳೆ ಎಣ್ಣೆಯ ವ್ಯವಸಾಯ 2401-00-108-2-18	1.26	0.59	1.86
5		ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2401-00-108-2-30	56.65	19.17	75.83
6		ರಾಷ್ಟ್ರೀಯ ತೋಟಗಾರಿಕಾ ಅಭಿಯಾನ 2401-00-119-4-06	8.33	2.21	10.55
7	ಪಶುಸಂಗೋಪನೆ	ರಾಷ್ಟ್ರೀಯ ಜಾನುವಾರು ಮಿಷನ್2404-00-102-0-03	0.02	0.01	0.03
8	ಸಾರಿಗೆ	ಬಿ.ಎಂ.ಟಿ.ಸಿ 3055-00-190-0-03	7.14	0.00	7.14
9		ವಾಯುವ್ಯ ಕರ್ನಾಟಕ ಸಾರಿಗೆ ನಿಗಮ 3055-00-190-0-04	6.41	4.63	11.04
10		ಈಶಾನ್ಯ ಕರ್ನಾಟಕ ಸಾರಿಗೆ ನಿಗಮ3055-00-190-0-05	10.67	7.30	17.97
11		ಕೆ.ಎಸ್.ಆರ್.ಟಿ.ಸಿ ಯಿಂದ ಬಸ್ ಪಾಸ್ ಸೌಲಭ್ಯ 3055-00-190-0-10	14.63	8.09	22.73
12	ಆರ್.ಡಿ.ಪಿ.ಆರ್	ಗ್ರಾಮೀಣ ಕುಡಿಯುವ ನೀರು ಯೋಜನೆ 4215-01-102-2-01	99.00	51.00	150.00
13	ಅರಣ್ಯ	ರಾಷ್ಟ್ರೀಯ ಬಿದಿರು ಅಭಿವೃದ್ಧಿ ಅಭಿಯಾನ 2406-01-101-2-30	2.70	1.10	3.80
14	ಸಮಾಜ ಕಲ್ಯಾಣ ಇಲಾಖೆ	ವಿವಿಧ ಅಭಿವೃದ್ಧಿ ಯೋಜನೆ 2225-01-796-0-02	40.67	0.00	40.67
15		ಕ್ರೈಸ್ ವಸತಿ ನಿಲಯಗಳ ಕಟ್ಟಡ ನಿರ್ಮಾಣ 4225-01-277-2-03	330.00	0.00	330.00
16	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	ಕ್ರೈಸ್ ವಸತಿ ನಿಲಯಗಳ ಕಟ್ಟಡ ನಿರ್ಮಾಣ 4225-01-277-2-03	0.00	170.00	170.00
17	ವಸತಿ	ಡಾ.ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆ 2216-03-104-0-03	330.00	170.00	500.00
18	ನಗರಾಭಿವೃದ್ಧಿ	ರಾಜೀವ್ ಆವಾಸ್ ಯೋಜನೆ 3604-00-191-6-51	3.11	0.00	3.11
	ಒಟ್ಟು		931.61	450.14	1381.75

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 766

ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸಬೇಕಾದ ದಿನಾಂಕ : 10.12.2020

ಉತ್ತರಿಸುವವರು : ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	"ಡೀಮ್ಡ್ ಫಾರೆಸ್ಟ್ ವಲಯದ ಸಮಸ್ಯೆಗಳ ನಿವಾರಣೆಗಾಗಿ ಇಲಾಖೆಯವರು ಕೈಗೊಂಡ ಕ್ರಮಗಳೇನು; ಸದರಿ ವಲಯದಲ್ಲಿ ವಸತಿ ವ್ಯವಸ್ಥೆಯನ್ನು ಹೊಂದಿರುವ ಅಲ್ಪ ಸ್ವಲ್ಪ ಜಮೀನನ್ನು ತಮ್ಮದೆಂದುಕೊಂಡು ಕೃಷಿ ಇತ್ಯಾದಿಗಳಿಂದ ಜೀವನೋಪಾಯವನ್ನು ನಡೆಸಿಕೊಂಡು ಬಂದ ಆದಿವಾಸಿಗರಿಗೆ ಇಲಾಖೆಯವರು ನೀಡುತ್ತಿರುವ ಪರಿಹಾರಗಳೇನು;	ರಾಜ್ಯದ ಡೀಮ್ಡ್ ಫಾರೆಸ್ಟ್ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ವಿವರಗಳನ್ನು ಹೊಂದಿರುವ Interlocutory Application ಅನ್ನು ರಿಟ್ ಪಿಟಿಷನ್ ಸಂಖ್ಯೆ: 202/1995ರಲ್ಲಿ ದಿನಾಂಕ:23.02.2019 ರಂದು ಅಫಿಡವಿಟ್ ಮೂಲಕ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡುವ ನಿರ್ದೇಶನಗಳನ್ವಯ ಕ್ರಮಕೈಗೊಳ್ಳಲಾಗುತ್ತದೆ. ಅರಣ್ಯ ಪ್ರದೇಶದಲ್ಲಿ ಕೃಷಿ ಇತ್ಯಾದಿಗಳಿಂದ ಜೀವನೋಪಾಯವನ್ನು ನಡೆಸಿಕೊಂಡು ಬಂದ ಆದಿವಾಸಿಗರಿಗೆ ಅರಣ್ಯ ಹಕ್ಕು ಕಾಯ್ದೆ-2005 ಪ್ರಕಾರ ಹಕ್ಕುಪತ್ರ ನೀಡಲು ಅವಕಾಶ ಕಲ್ಪಿಸಲಾಗಿದೆ.
ಆ)	ಬೃಹತ್ ಗಿರಿಜನ ವಿವಿದೋದ್ದೇಶ ಸಹಕಾರಿ ಸಂಘಗಳ ಮೂಲಕ ಗಿರಿಜನರಿಗೆ ಒದಗಿಸಿಕೊಡುತ್ತಿರುವ ಸೌಲಭ್ಯ ಸೌಕರ್ಯಗಳು ಯಾವುವು; ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನ ಫಲಾನುಭವಿಗಳು ಯೋಜನಾ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ;	ಸರ್ಕಾರದ ಆದೇಶ ಸಂಖ್ಯೆ: ಅಪಜೀ 94 ಎಫ್‌ಡಿಪಿ 2015, ದಿನಾಂಕ 16.12.2015, ಸರ್ಕಾರದ ತಿದ್ದುಪಡಿ ಸಂಖ್ಯೆ: ಅಪಜೀ 63 ಎಫ್‌ಡಿಪಿ 2016, ದಿನಾಂಕ 18.08.2016 ಮತ್ತು 06.10.2016 ರನ್ವಯ ಬೃಹತ್ ಗಿರಿಜನ ವಿವಿದೋದ್ದೇಶ ಸಹಕಾರಿ ಸಂಘದವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಅರಣ್ಯ ಪ್ರದೇಶಗಳಲ್ಲಿ ದೊರಕುವ ರಾಂಪತ್ರೆ, ದಾಲ್ಚಿನಿ, ಅಂಟುವಾಳ, ಮಾಂತುಹುಳಿ, ದೂಪದಕಾಯಿ ಮತ್ತು ಇತ್ಯಾದಿಗಳನ್ನು ಸಂಗ್ರಹಿಸಲು ಗ್ರಾಮ ಅರಣ್ಯ ಸಮಿತಿಯ ಪ್ರದೇಶಗಳನ್ನು ಹೊರತುಪಡಿಸಿ ಅನುಮತಿ ನೀಡಲಾಗುತ್ತಿದೆ. ಪುತ್ತೂರು ತಾಲ್ಲೂಕಿನಲ್ಲಿ 60 ಫಲಾನುಭವಿಗಳು, ಸುಳ್ಯ ತಾಲ್ಲೂಕಿನಲ್ಲಿ 28 ಫಲಾನುಭವಿಗಳು ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ 1900 ಮಂದಿ ಫಲಾನುಭವಿಗಳು ಯೋಜನಾ ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ.
ಇ)	ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆಯಡಿ ಮೂಡಬಿದರೆ ಮತ್ತು ಮೂಲ್ಕಿ ನೂತನ ತಾಲ್ಲೂಕುಗಳಲ್ಲಿ ಯಾವ ಗ್ರಾಮಗಳನ್ನು ಗುರುತಿಸಿ ಯೋಜನಾನುಷ್ಠಾನಗೊಳಿಸಲಾಗಿದೆ;	ರಾಜ್ಯದ 236 ತಾಲ್ಲೂಕುಗಳಿಗೆ ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆಯಡಿ 2020-21ನೇ ಸಾಲಿಗೆ ರೂ.54.024 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಮುಂದುವರೆದು, ಮೂಡುಬಿದರೆ ಮತ್ತು ಮೂಲ್ಕಿ ನೂತನ ತಾಲ್ಲೂಕುಗಳಲ್ಲಿ ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆಯಡಿ ಯಾವುದೇ ಪ್ರಸ್ತಾವನೆಯು ಬಂದಿರುವುದಿಲ್ಲ. ಹಾಗಾಗಿ, ಸದರಿ ಯೋಜನೆಯಡಿ ಮೇಲ್ಕಂಡ ಎರಡು ತಾಲ್ಲೂಕುಗಳಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.

...2...

ಈ)	ತಾಲ್ಲೂಕು ಅರಣ್ಯ ಪ್ರದೇಶಗಳೆಂದು ಮೂಡಬಿದರೆ ಮತ್ತು ಮೂಲ್ಕಿ ಪ್ರದೇಶಗಳಲ್ಲಿ ಗುರುತಿಸಿ ಅಭಿವೃದ್ಧಿಪಡಿಸುತ್ತಿರುವ ಕುರಿತಾದ ವಿವರಗಳೇನು?	ಮೂಡಬಿದರೆ ಮತ್ತು ಮೂಲ್ಕಿ ತಾಲ್ಲೂಕುಗಳಲ್ಲಿನ ಅರಣ್ಯ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ವಿವರ **ಅನುಬಂಧದ**ಲ್ಲಿ ಒದಗಿಸಿದೆ.

ಸಂಖ್ಯೆ: ಅಪಜೀ 130 ಎಫ್‌ಎಫ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕುಂದಾಪುರ ಅರಣ್ಯ ವಿಭಾಗ

ವಿಧಾನ ಸಭೆಯ ಸದಸ್ಯರಾದ ಶ್ರೀ ಉಮಾನಾಥ್ ಎ. ಕೋಟ್ಯಾನ್ (ಮೂಡಬಿದ್ರೆ)ರವರ ಪ್ರಶ್ನೆ ಸಂಖ್ಯೆ: 766

ಪ್ರಶ್ನೆ ಸಂ. ಈ) ಮೂಡಬಿದ್ರೆ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ 2020-21ನೇ ಸಾಲಿನಲ್ಲಿ ಕೈಗೊಳ್ಳಲಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ವಿವರ

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ಯೋಜನೆ	ಮಂಜೂರು ಮಾಡಿದ ಅನುದಾನ(ರೂ. ಲಕ್ಷಗಳಲ್ಲಿ)	ಅಭಿವೃದ್ಧಿ ಕಾಮಗಾರಿಗಳ ವಿವರ	ಪರಿಮಾಣ
	ಮೂಲ್ಕಿ-ಮೂಡಬಿದ್ರೆ	ನಗರ ಹಸುರೀಕರಣ	13.120	ನೆಡುತೋಪು ನಿರ್ಮಾಣ	1ಕಿ.ಮೀ.
				ನೆಡುತೋಪು ಪೋಷಣೆ	6.00 ಕಿ.ಮೀ.
2				ಸಸಿಗಳ ಪೋಷಣೆ	500 ಸಂ.
3		ರಸ್ತೆಬದಿ ನೆಡುತೋಪು	8.130	ರಸ್ತೆಬದಿ ನೆಡುತೋಪು ನಿರ್ಮಾಣ	3.00 ಕಿ.ಮೀ.
4				ರಸ್ತೆಬದಿ ನೆಡುತೋಪು ಪೋಷಣೆ	3.00 ಕಿ.ಮೀ.
5		ಆರ್.ಎಸ್.ಪಿ.ಡಿ.	2.350	ಸಸಿಗಳ ಪೋಷಣೆ	26000 ಸಂ.
6				ಸಸಿ ಬೆಳೆಸುವುದು	8800 ಸಂ.
7		ಸಿರಿಚಂದನವನ	0.069	ಸಸಿಗಳ ಪೋಷಣೆ	1000 ಸಂ.
8		ಮಗುವಿಗೊಂದು ಮರ ಶಾಲೆಗೊಂದು ವನ	0.105	ಸಸಿಗಳ ಪೋಷಣೆ	1500 ಸಂ.
9		ಹಸಿರು ಕರ್ನಾಟಕ	0.315	ಸಸಿಗಳ ಪೋಷಣೆ	9000 ಸಂ.
10		ಎಸ್‌ಸಿಪಿ	1.640	ಎಲ್‌ಪಿಜಿ ಗ್ಯಾಸ್ ರೀಫಿಲ್ಲಿಂಗ್	280 ಸಂ.
11		ಟಿಎಸ್‌ಪಿ	0.840	ಎಲ್‌ಪಿಜಿ ಗ್ಯಾಸ್ ರೀಫಿಲ್ಲಿಂಗ್	121 ಸಂ.
12		ಕೆಎಫ್‌ಡಿಎಫ್ ಇತರೆ ನೆಡುತೋಪು ಯೋಜನೆ	44.800	ನೆಡುತೋಪು ನಿರ್ಮಾಣ	15.00 ಹೆ.
13				ನೆಡುತೋಪು ಪೋಷಣೆ	90.00 ಹೆ.
14		ಕ್ಯಾಂಪಾ	20.360	ನೆಡುತೋಪು ಪೋಷಣೆ	86.186 ಹೆ.
15				ನೆಡುತೋಪು ನಿರ್ಮಾಣ	50.00 ಹೆ.
16		ಟ್ರೀ ಪಾರ್ಕ್	74.460	ಕಡಲ್ಕೆರೆಯಲ್ಲಿ ಟ್ರೀ ಪಾರ್ಕ್ ನಿರ್ಮಾಣ	1 ಸಂ.
17		ಮಾನವ ಪ್ರಾಣಿ ಸಂಘರ್ಷ ನಿಯಂತ್ರಣ	2.380	ಕೇಜ್ ಇತ್ಯಾದಿ ಖರೀದಿ	1 ಸಂ.
18		ರಾಷ್ಟ್ರೀಯ ಬಿದಿರು ಅಭಿವೃದ್ಧಿ ಯೋಜನೆ	21.000	ಬಿದಿರು ಡೆಮಾನ್‌ಸ್ಟ್ರೇಷನ್ ಪ್ಲಾಟ್ ನಿರ್ಮಾಣ	1.00 ಹೆ.
				ಬಿದಿರು ನರ್ಸರಿ ಅಭಿವೃದ್ಧಿ	1 ಸಂ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 771
ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸುವ ದಿನಾಂಕ : 10-12-2020
ಉತ್ತರಿಸುವ ಸಚಿವರು : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರಸಂ.	ಪ್ರಶ್ನೆಗಳು	ಉತ್ತರಗಳು
ಅ)	ಗ್ರಾಮೀಣ ಭಾಗಗಳ ಪ್ರಮುಖ ಸಾರ್ವಜನಿಕ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿ ಪಡಿಸುವಾಗ ಹಲವೆಡೆ ಅರಣ್ಯ ಇಲಾಖೆಯ ಆಕ್ಷೇಪಣೆಗಳು ಇದ್ದು, ಇದನ್ನು ಪರಿಹರಿಸಿ ಸಾರ್ವಜನಿಕ ರಸ್ತೆಗಳ ಅಭಿವೃದ್ಧಿಗೆ ಅನುಮತಿ ನೀಡುವಲ್ಲಿನ ಸರ್ಕಾರದ ಮಾನದಂಡಗಳೇನು;	ರಾಜ್ಯದ ಕಾಯ್ದಿಟ್ಟ ಅರಣ್ಯ ಪ್ರದೇಶದ ಪಕ್ಕದಲ್ಲಿ ಮತ್ತು ಅರಣ್ಯ ಎನ್‌ಕ್ಲೋಸರ್ (Forest enclosure) ರೂಪದಲ್ಲಿ ಇರುವ ಹಾಗೂ ವನ್ಯಜೀವಿ ಅರಣ್ಯ ಪ್ರದೇಶಗಳ ವ್ಯಾಪ್ತಿಯಲ್ಲಿರುವ ಜನ ವಸತಿ ಪ್ರದೇಶಗಳಿಗೆ ಹಾದು ಹೋಗುವ ದಾರಿಗಳನ್ನು ಆಯಾ ಅರಣ್ಯ ಪ್ರದೇಶದ ಅಧಿಸೂಚನೆಗಳಲ್ಲಿಯೇ ಸಾಮಾನ್ಯವಾಗಿ ನಿರ್ದಿಷ್ಟ ಅಗಲದ ಕಾಲು ದಾರಿ (Right of way) ಅಥವಾ ಬಂಡಿ ದಾರಿ (Cart track) ರೂಪದಲ್ಲಿ ಅವಕಾಶ ನೀಡಲಾಗಿರುತ್ತದೆ. ಅಂತಹ ದಾರಿಗಳನ್ನು ಸಂಬಂಧಿಸಿದವರು ಸಾಮಾನ್ಯ ಬಳಕೆಗಾಗಿ ಉಪಯೋಗಿಸಬಹುದಾಗಿರುತ್ತದೆ. ಮೇಲಿನ ಅವಕಾಶವನ್ನು ಹೊರತುಪಡಿಸಿ ಅರಣ್ಯ ಪ್ರದೇಶದಲ್ಲಿ ಈ ದಾರಿಗಳ ಅಗಲವನ್ನು ವಿಸ್ತರಿಸಲು ಅಥವಾ ಬೇರೆ ಯಾವುದೇ ಬದಲಿ ಅರಣ್ಯೇತರ ಪ್ರದೇಶಗಳಲ್ಲಿ ದಾರಿಯು ಲಭ್ಯವಿಲ್ಲದಿದ್ದಲ್ಲಿ ಅರಣ್ಯ ಪ್ರದೇಶದಲ್ಲಿ ಹೊಸ ರಸ್ತೆಗಳನ್ನು ನಿರ್ಮಿಸಲು 1980ರ ಅರಣ್ಯ (ಸಂರಕ್ಷಣೆ) ಕಾಯ್ದೆಯಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಅವಶ್ಯವಿರುತ್ತದೆ. ಮೇಲಿನಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ಪ್ರಕರಣಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಯವರು ಅಡ್ಡಿಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಆ)	ಗ್ರಾಮಗಳನ್ನು ಸಂಪರ್ಕಿಸುವ ಪ್ರಮುಖ ಸಾರ್ವಜನಿಕ ಸಂಪರ್ಕ ರಸ್ತೆಗಳಲ್ಲಿ ಅರಣ್ಯ ಇಲಾಖೆಯ ಆಕ್ಷೇಪಣೆ ಇರುವ ರಸ್ತೆಗಳು ಎಷ್ಟು; (ಉಡುಪಿ ಜಿಲ್ಲೆಯ ವಿವರಗಳನ್ನು ಒದಗಿಸುವುದು)	ಕುಂದಾಪುರ ಅರಣ್ಯ ವಿಭಾಗ ವ್ಯಾಪ್ತಿಯ ಉಡುಪಿ ಜಿಲ್ಲೆಯಲ್ಲಿ ಗ್ರಾಮಗಳನ್ನು ಸಂಪರ್ಕಿಸುವ (ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ) ರಸ್ತೆಗಳನ್ನು ನಿರ್ಮಾಣ ಮಾಡಲು ಅಥವಾ ದುರಸ್ತಿ ಮಾಡಲು ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿ ಅನುಮೋದನೆಯನ್ನು ಕೋರಿ ಇದುವರೆಗೆ ಒಟ್ಟು ಮೂರು (3) ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗಳ ಪ್ರಸ್ತುತ ಹಂತದ ವಿವರಗಳನ್ನು ತಯಾರಿಸಿ ಅನುಬಂಧದಲ್ಲಿ ಲಗತ್ತಿಸಿ ಸಲ್ಲಿಸಿದೆ.
ಇ)	ಅರಣ್ಯ ಇಲಾಖೆಗೆ ಸಂಬಂಧಿಸಿದ ಜಾಗ ಇದ್ದರೂ, ಸಾರ್ವಜನಿಕ ಹಿತದೃಷ್ಟಿಯಿಂದ ಅನುಕೂಲ ಕಲ್ಪಿಸುವಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರಗಳನ್ನು ಒದಗಿಸುವುದು)	

ಸಂಖ್ಯೆ: ಅಪಜೀ 85 ಎಫ್‌ಎಲ್‌ಎಲ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

7-71

ಅನುಬಂಧ

ಕುಂದಾಪುರ ವಿಭಾಗ, ಉಡುಪಿ ಜಿಲ್ಲೆಯಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ / ದುರಸ್ತಿ ಮಾಡಲು ಸ್ವೀಕೃತವಾದ ಪ್ರಸ್ತಾವನೆಗಳ ವಿವರ.

ಕ್ರ ಸಂ.	ಪ್ರಸ್ತಾವನೆ ಸಂಖ್ಯೆ ಮತ್ತು ವಿವರ	ಪ್ರಸ್ತುತ ಹಂತ
1	FP/KA/ROAD/34603/2018 ಈದು ಪಲ್ಕೆ ಯಿಂದ ಬೆಟ್ಟಾಣಿ ಕೇರಾ ವರೆಗಿನ ನಾರಾವಿ ಮೀಸಲು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಕಚ್ಚಾ ರಸ್ತೆಯನ್ನು ಡಾಂಬರೀಕರಣ ಮಾಡಲು 0.65 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಉಪಯೋಗಿಸಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ (ಉಪಯೋಗಿ ಸಂಸ್ಥೆ) ಇವರ ಪ್ರಸ್ತಾವನೆ	ಉಪಯೋಗಿ ಸಂಸ್ಥೆಯವರು ದಿನಾಂಕ 07-07-2018ರಂದು ಸಲ್ಲಿಸಿದ್ದ ಪ್ರಸ್ತಾವನೆಯು ಅಪೂರ್ಣವಾಗಿದ್ದುದರಿಂದ ದಿನಾಂಕ 24-08-2018ರಂದು ಹಿಂದಿರುಗಿಸಲಾಗಿತ್ತು. ಅಲ್ಲದೇ ದಿನಾಂಕ 19-03-2019ರಂದು ಮರು ಸಲ್ಲಿಸಿದ ಪ್ರಸ್ತಾವನೆಯು ಸಹ ಅಪೂರ್ಣವಾಗಿದ್ದುದರಿಂದ ದಿನಾಂಕ 07-06-2019ರಂದು ಹಿಂದಿರುಗಿಸಲಾಗಿರುತ್ತದೆ. ಆದರೆ, Forest Rights Act, 2006ರಡಿಯಲ್ಲಿ ಜಿಲ್ಲಾ ಮಟ್ಟದ ಸಮಿತಿಯು ಅನುಮೋದನೆ ನೀಡಿರುವುದರಿಂದ ಉಪಯೋಗಿ ಸಂಸ್ಥೆಯು ಪ್ರಸ್ತಾವನೆಯನ್ನು ಹಿಂಪಡೆಯಲು ದಿನಾಂಕ 25-03-2019ರಂದು ಕೋರಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಸದರಿ ವಿಷಯದ ಬಗ್ಗೆ ದಿನಾಂಕ 27-11-2019ರಂದು ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ನಿರ್ದೇಶನವನ್ನು ಕೋರುತ್ತಾರೆ. ಈ ಹಿನ್ನೆಲೆಯಲ್ಲಿ ದಿನಾಂಕ: 18-04-2020ರಂದು ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ ಇವರಿಗೆ ಪತ್ರ ಬರೆದು, ಯಾವ ಕಾಯ್ದೆ/ ನಿಯಮಗಳನ್ವಯ ಕ್ರಮವಹಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟೀಕರಣ ಕೋರಲಾಗಿದೆ.
2	FP/KA/ROAD/36042/2018 ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕು, ರಟ್ಟಡಿ ಗ್ರಾಮದ ಸರ್ವೆ ನಂ 124 ಹಾಗೂ ಕುಲಂಜೆ ಗ್ರಾಮದ ಸರ್ವೆ ನಂ 114ರಲ್ಲಿ 1.225 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಹಾಲಾಡಿಯಿಂದ ಅಮಾಸೆಬೈಲು,	ಕೇಂದ್ರ ಸರ್ಕಾರದ ಪರಿಸರ ಮತ್ತುಅರಣ್ಯ ಮಂತ್ರಾಲಯವು ಪತ್ರ ಸಂಖ್ಯೆ F.No.11-48/2002-FC ದಿನಾಂಕ 14-09-2004 ಮತ್ತು 30-04-2005ರ ಮೂಲಕ ಹೊರಡಿಸಿದ ಮಾರ್ಗಸೂಚಿಗಳ ಅನ್ವಯ ಅರಣ್ಯ ಸಂರಕ್ಷಣಾ ಕಾಯ್ದೆ 1980 ಜಾರಿಗೆ ಬರುವ ಪೂರ್ವದಲ್ಲಿ (25-10-1980) ಅರಣ್ಯ ಪ್ರದೇಶದಲ್ಲಿರುವ ರಸ್ತೆಗಳನ್ನು ದುರಸ್ತಿ ಮಾಡಲು ಮತ್ತು ಡಾಂಬರೀಕರಣ ಮಾಡಲು ರಾಜ್ಯದ ಅರಣ್ಯ ಇಲಾಖೆ ಅಧಿಕಾರಿಗಳ (ಆಯಾ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ) ಅನುಮೋದನೆ ಪಡೆದು ನಿರ್ವಹಿಸಲು ಅವಕಾಶವಿರುತ್ತದೆ. ಆದುದರಿಂದ,

	ಬುಕುಡಿಹೊಲ ಸಂರಕ್ಷಿತ ಅರಣ್ಯ ಪ್ರದೇಶ, ಶಂಕರನಾರಾಯಣ ವಲಯದವರೆಗೆ ರಸ್ತೆಯನ್ನು ಅಗಲೀಕರಣ ಮಾಡುವ ಸಲುವಾಗಿ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ವಿಭಾಗ ಇವರ ಪ್ರಸ್ತಾವನೆ	ಹಾಲಿ ಇರುವ ರಸ್ತೆಯನ್ನು ಮರುಡಾಂಬರೀಕರಣ ಮಾಡಲು ಅನುಮತಿಸಲಾಗಿರುತ್ತದೆ.
3	FP/KA/ROAD/15173/2015 ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಹೆಂಗವಳ್ಳಿ ಇರಗಿ ಯಿಂದ ರಾಜ್ಯ ಹೆದ್ದಾರಿಗೆ ತಲುಪುವ ರಸ್ತೆಯ ಸುಧಾರಣೆಯ ಕಾಮಗಾರಿಗಾಗಿ 1.38 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಉಪಯೋಗಿಸಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ (ಉಪಯೋಗಿ ಸಂಸ್ಥೆ) ಇವರ ಪ್ರಸ್ತಾವನೆ	ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ದಿನಾಂಕ 01-08-2016ರಂದು ತಾತ್ವಿಕ (Stage-I) ಅನುಮೋದನೆ ನೀಡಿರುತ್ತದೆ. ಸದರಿ ಅನುಮೋದನೆಯಲ್ಲಿ ವಿಧಿಸಿದ ಷರತ್ತುಗಳಿಗೆ ಅನುಪಾಲನಾ ವರದಿಯನ್ನು ರಾಜ್ಯ ಸರ್ಕಾರದ ಮುಖಾಂತರ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಪರಿಹಾರಾತ್ಮಕ ನೆಡುತೋಪು ಬೆಳೆಸುವ ಪ್ರದೇಶದ ಬದಲಾವಣೆಯ ಕುರಿತು ಹೆಚ್ಚುವರಿ ಮಾಹಿತಿಯನ್ನು ಕೋರಿರುತ್ತಾರೆ. ಪರಿಹಾರಾತ್ಮಕ ನೆಡುತೋಪು ಬೆಳೆಸಲು ಇಲಾಖೆಗೆ ಮಂಜೂರು ಮಾಡಿದ ಯಡಾಡಿ-ಮತ್ಯಾಡಿ ಗ್ರಾಮದ ಸ.ನಂ.210ರಲ್ಲಿ 3.50 ಎಕರೆ ಹಾಗೂ ಸ.ನಂ.221ರಲ್ಲಿ 2.18 ಎಕರೆ ಒಟ್ಟು 5.68 ಎಕರೆ ಅರಣ್ಯೇತರ ಪ್ರದೇಶವು ಕಕ್ಕುಂಜೆ-ಹೋರಿಗೊಡ್ಲು ಬ್ಲಾಕ್ ಮೀಸಲು ಅರಣ್ಯದಿಂದ 1630 ಮೀಟರ್ ದೂರದಲ್ಲಿರುತ್ತದೆ. ಆದ ಕಾರಣ ಕೇಂದ್ರ ಸರ್ಕಾರದ ದಿನಾಂಕ: 08.11.2017ರ ಅರಣ್ಯ ಸಂರಕ್ಷಣೆ ಮಾರ್ಗಸೂಚಿಗಳನ್ವಯ ಮತ್ತು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ಇವರ ದಿನಾಂಕ: 14.07.2020ರ ಸುತ್ತೋಲೆಯಂತೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾದ 5.68 ಎಕರೆ ಬದಲಿ ಅರಣ್ಯೇತರ ಜಮೀನನ್ನು ಒದಗಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ವಿಭಾಗ ಇವರು ದಿನಾಂಕ: 23.11.2020ರ ಪತ್ರದಲ್ಲಿ ಉಪಯೋಗಿ ಸಂಸ್ಥೆಗೆ ತಿಳಿಸಿರುತ್ತಾರೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 772
ಸದಸ್ಯರ ಹೆಸರು	: ಶ್ರೀ ರಘುಪತಿ ಭಟ್ ಕೆ.(ಉಡುಪಿ)
ಉತ್ತರಿಸುವ ದಿನಾಂಕ	: 10.12.2020
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದೆ; (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಪ್ರಸ್ತುತ 13 ಹಗಲು ಹಾಗೂ 1 ಸಂಜೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದೆ. ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.
ಆ)	ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಿಸುವ ಬಗ್ಗೆ ಸರ್ಕಾರದ ನಿಲುವೇನು;	ಪ್ರಸ್ತುತ ಇರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆ ನೀಡುತ್ತಿರುವುದರಿಂದ ಹಾಗೂ ಪ್ರಸಕ್ತ ಕೋವಿಡ್-19 ಪ್ರಯುಕ್ತ ಆರ್ಥಿಕ ನಿರ್ಬಂಧ ಜಾರಿಯಲ್ಲಿರುವುದರಿಂದ ಹೊಸ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡುತ್ತಿಲ್ಲ.
ಇ)	ಉಡುಪಿ ಜಿಲ್ಲೆಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಿಸುವ ಬಗ್ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಯೋಜನೆ ರೂಪಿಸಲಾಗಿದೆಯೇ ? (ವಿವರನೀಡುವುದು)	ಬಂದಿದೆ. ಮೇಲೆ ತಿಳಿಸಿರುವ ಕಾರಣಗಳಿಂದ ಹೊಸದಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ಮಂಜೂರು ಮಾಡುತ್ತಿಲ್ಲ.

ಸಂಖ್ಯೆ: ಇಡಿ 125 ಹೆಚ್‌ಪಿಟಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ತಾಂತ್ರಿಕ ಶಿಕ್ಷಣ ಇಲಾಖೆ

ಅನುಬಂಧ-1

ಕ್ರಮ ಸಂಖ್ಯೆ	ಸರ್ಕಾರಿ ಇಂಜಿನಯರಿಂಗ್ ಕಾಲೇಜುಗಳ ವಿವರ	ಜಿಲ್ಲೆ
1	ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ, ಬೆಂಗಳೂರು	ಬೆಂಗಳೂರು
2	ಸರ್ಕಾರಿ ಎಸ್‌ಕೆಎಸ್‌ಜೆಟಿ ಸಂಸ್ಥೆ (ಸಂಜೆ), ಬೆಂಗಳೂರು	
3	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ	ಬಳ್ಳಾರಿ
4	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ	ಚಾಮರಾಜನಗರ
5	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ	ರಾಮನಗರ
6	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ	ಮಂಡ್ಯ
7	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ	ಕೊಡಗು
8	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ	ಹಾಸನ
9	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಳ್ಳಿ	
10	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ	ಹಾವೇರಿ
11	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ	ಉತ್ತರ ಕನ್ನಡ
12	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು	ರಾಯಚೂರು
13	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ	ಕೊಪ್ಪಳ
14	ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್	

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು - 560 001.

ಕರ್ನಾಟಕ ವಿಧಾನ ಸಭೆ

1 ಮಾನ್ಯ ಸದಸ್ಯರ ಹೆಸರು : ಶ್ರೀ ರಘುಪತಿ ಭಟ್ ಕೆ. (ಉಡುಪಿ)

2 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 773

3 ಉತ್ತರಿಸಬೇಕಾದ ದಿನಾಂಕ : 10-12-2020

4 ಉತ್ತರಿಸಬೇಕಾದವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಉಡುಪಿ ಜಿಲ್ಲೆಯಲ್ಲಿ ಇಎಸ್ಐ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ ಯೋಜನೆ ರೂಪಿಸಲಾಗಿದೆಯೇ;	ಉಡುಪಿ ಜಿಲ್ಲೆಯಲ್ಲಿ ಇಎಸ್ಐ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ ಯೋಜನೆ ರೂಪಿಸಲಾಗಿರುವುದಿಲ್ಲ. ಆದರೆ, ಪ್ರಸ್ತುತ ಉಡುಪಿಯಲ್ಲಿ 04 ಕಾ.ರಾ.ವಿ. ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಉಡುಪಿಯಿಂದ 55 ಕಿ.ಮೀ. ಅಂತರದಲ್ಲಿರುವ ಮಂಗಳೂರಿನಲ್ಲಿ ಇಎಸ್ಐ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ.
(ಆ)	ಪ್ರಮುಖ ಜಿಲ್ಲೆಯಾಗಿರುವ ಉಡುಪಿಯಲ್ಲಿ ಲಕ್ಷಾಂತರ ಕಾರ್ಮಿಕರು ಇರುವುದರಿಂದ ಇಎಸ್ಐ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ ಹಲವಾರು ವರ್ಷಗಳ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಉಡುಪಿ ಜಿಲ್ಲೆಯಲ್ಲಿ ದಿನಾಂಕ: 13-08-2020 ರ ಅಂಕಿ ಅಂಶಗಳ ಅನುಸಾರ ವಿಮಾ ಕಾರ್ಮಿಕರ ಸಂಖ್ಯೆ: 67629 ಮಾತ್ರ ಆಗಿರುತ್ತದೆ ಪ್ರಸ್ತುತ ಉಡುಪಿ ಜಿಲ್ಲೆಯಲ್ಲಿ 04 ಕಾರಾವಿ ಚಿಕಿತ್ಸಾಲಯಗಳು (1. ಮಣಿಪಾಲ, 2. ಉಡುಪಿ, 3. ಕಾರ್ಕಾಳ ಮತ್ತು 4. ಕುಂದಾಪುರ) ಹಾಗೂ 07 ಖಾಸಗಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ವಿಮಾ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ.
(ಇ)	ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಇಎಸ್ಐ ಆಸ್ಪತ್ರೆಗಳನ್ನು ಪ್ರಾರಂಭಿಸುವ ಬಗ್ಗೆ ಬೇಡಿಕೆ ಇದೆ;	ರಾಜ್ಯದಲ್ಲಿ ಕಾರ್ಮಿಕರ ವಿಮಾ ಕಾರ್ಡುಗಳ ಸಂಖ್ಯೆಯನ್ನಾಧರಿಸಿ, ಅದರನ್ವಯ ಆಸ್ಪತ್ರೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿ, ಇ.ಎಸ್.ಐ ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆ. 1. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, 2. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೆಂಗಳೂರು ನಗರ, 3. ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶ, 4. ತುಮಕೂರು ಜಿಲ್ಲೆಯ ವಸಂತ ನರಸಾಪುರ ಕೈಗಾರಿಕಾ ಪ್ರದೇಶ, 5. ಶಿವಮೊಗ್ಗ ಜಿಲ್ಲೆ, 6. ಬಳ್ಳಾರಿ ಜಿಲ್ಲೆ 7. ರಾಮನಗರ ಜಿಲ್ಲೆಯ ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಇಎಸ್ಐ ಆಸ್ಪತ್ರೆಗಳನ್ನು ಕಾರಾವಿ. ನಿಗಮದ ಸಹಮತಿಯೊಂದಿಗೆ ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ.

..........2

(ಈ)	ಹೊಸದಾಗಿ ಎಷ್ಟು ಇಎಸ್‌ಐ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಹೊಸದಾಗಿ ಯಾವುದೇ ಕಾರಾವಿ ಆಸ್ಪತ್ರೆಗಳನ್ನು ಪ್ರಾರಂಭಿಸಿರುವುದಿಲ್ಲ, ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿ ದಿನಾಂಕ: 08-03-2019 ರಂದು ಕಾರಾವಿ. ಚಿಕಿತ್ಸಾಲಯವನ್ನು ಪ್ರಾರಂಭಿಸಲಾಗಿರುತ್ತದೆ.
(ಉ)	ಹೊಸದಾಗಿ 61 ಇಎಸ್‌ಐ ಆಸ್ಪತ್ರೆಗಳನ್ನು ಪ್ರಾರಂಭಿಸುವ ಬಗ್ಗೆ 2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಈ ಬಗ್ಗೆ ಕೈಗೊಂಡ ಕ್ರಮಗಳೇನು. ಪ್ರಸ್ತುತ ರಾಜ್ಯದಲ್ಲಿ ಒಟ್ಟು ಎಷ್ಟು ಇಎಸ್‌ಐ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ? (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	2017-18 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಹೊಸದಾಗಿ 61 ಇಎಸ್‌ಐ ಆಸ್ಪತ್ರೆಗಳ ಪೈಕಿ 11 ಕಾರಾವಿ. ಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಅನುಮೋದನೆಯಾಗಿದ್ದು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ರಾಜ್ಯದಲ್ಲಿ ಒಟ್ಟು 07 ಕಾರಾವಿ. ಆಸ್ಪತ್ರೆ ಹಾಗೂ 02 ರೋಗ ಪತ್ತೆ ಹಚ್ಚುವ ಕೇಂದ್ರಗಳು ಮತ್ತು 113 ಕಾರಾವಿ. ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿದೆ (ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ)

LD-LSI/215/2020

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಅನುಬಂಧ

ಕ್ರಮ ಸಂಖ್ಯೆ	ಕಾ.ರಾ.ವಿ ಆಸ್ಪತ್ರೆಗಳು	ಸ್ಥಳ
1	ಕಾ.ರಾ.ವಿ ಆಸ್ಪತ್ರೆ	ಇಂದಿರಾನಗರ, ಬೆಂಗಳೂರು
2	ಕಾ.ರಾ.ವಿ ಆಸ್ಪತ್ರೆ	ಮಂಗಳೂರು
3	ಕಾ.ರಾ.ವಿ ಆಸ್ಪತ್ರೆ	ದಾವಣಗೆರೆ
4	ಕಾ.ರಾ.ವಿ ಆಸ್ಪತ್ರೆ	ಹುಬ್ಬಳ್ಳಿ
5	ಕಾ.ರಾ.ವಿ ಆಸ್ಪತ್ರೆ	ಬೆಳಗಾಂ
6	ಕಾ.ರಾ.ವಿ ಆಸ್ಪತ್ರೆ	ಮೈಸೂರು
7	ಕಾ.ರಾ.ವಿ ಆಸ್ಪತ್ರೆ	ದಾಂಡೇಲಿ
8	ರೋಗ ಪತ್ತೆ ಹಚ್ಚುವ ಕೇಂದ್ರ, ಬಸವನಗುಡಿ	ಬೆಂಗಳೂರು
9	ರೋಗ ಪತ್ತೆ ಹಚ್ಚುವ ಕೇಂದ್ರ,	ನಂಜನಗೂಡು
	ಕಾ.ರಾ.ವಿ ಚಿಕಿತ್ಸಾಲಯಗಳು	ಬೆಂಗಳೂರು ನಗರ
1	ಕಾರಾವಿ ಚಿಕಿತ್ಸಾಲಯ	ಬನಶಂಕರಿ
2	ಕಾರಾವಿ ಚಿಕಿತ್ಸಾಲಯ	ಬಸವನಗುಡಿ
3	ಕಾರಾವಿ ಚಿಕಿತ್ಸಾಲಯ	ಬೊಮ್ಮನಹಳ್ಳಿ
4	ಕಾರಾವಿ ಚಿಕಿತ್ಸಾಲಯ	ಬಿನ್ನಿಪೇಟೆ
5	ಕಾರಾವಿ ಚಿಕಿತ್ಸಾಲಯ	ಬೊಮ್ಮಸಂದ್ರ
6	ಕಾರಾವಿ ಚಿಕಿತ್ಸಾಲಯ	ಕಾಟನ್ ಪೇಟೆ
7	ಕಾರಾವಿ ಚಿಕಿತ್ಸಾಲಯ	ದಾಸರಹಳ್ಳಿ
8	ಕಾರಾವಿ ಚಿಕಿತ್ಸಾಲಯ	ದ್ಯಾವಸಂದ್ರ
9	ಕಾರಾವಿ ಚಿಕಿತ್ಸಾಲಯ	ಪ್ರೇಜರ್ ಟೌನ್
10	ಕಾರಾವಿ ಚಿಕಿತ್ಸಾಲಯ	ಹನುಮಂತನಗರ
11	ಕಾರಾವಿ ಚಿಕಿತ್ಸಾಲಯ	ಜಯನಗರ
12	ಕಾರಾವಿ ಚಿಕಿತ್ಸಾಲಯ	ಜಾಲಹಳ್ಳಿ
13	ಕಾರಾವಿ ಚಿಕಿತ್ಸಾಲಯ	ಕೆ.ಆರ್.ಪುರಂ-1
14	ಕಾರಾವಿ ಚಿಕಿತ್ಸಾಲಯ	ಕೆ.ಆರ್.ಪುರಂ-2
15	ಕಾರಾವಿ ಚಿಕಿತ್ಸಾಲಯ	ಕೆಂಗೇರಿ
16	ಕಾರಾವಿ ಚಿಕಿತ್ಸಾಲಯ	ಕೋಣನಕುಂಟೆ
17	ಕಾರಾವಿ ಚಿಕಿತ್ಸಾಲಯ	ಮೈಸೂರು ರಸ್ತೆ
18	ಕಾರಾವಿ ಚಿಕಿತ್ಸಾಲಯ	ಮಾಗಡಿರಸ್ತೆ
19	ಕಾರಾವಿ ಚಿಕಿತ್ಸಾಲಯ	ಮಾರತಹಳ್ಳಿ
20	ಕಾರಾವಿ ಚಿಕಿತ್ಸಾಲಯ	ಮುನಿರೆಡ್ಡಿಪಾಳ್ಯ
21	ಕಾರಾವಿ ಚಿಕಿತ್ಸಾಲಯ	ಮಾರತಹಳ್ಳಿ

22	ಕಾರಾವಿ ಚಿಕಿತ್ಸಾಲಯ	ಪೀಣ್ಯ
23	ಕಾರಾವಿ ಚಿಕಿತ್ಸಾಲಯ	ರಾಜಾಜಿನಗರ-1
24	ಕಾರಾವಿ ಚಿಕಿತ್ಸಾಲಯ	ರಾಜಾಜಿನಗರ-2
25	ಕಾರಾವಿ ಚಿಕಿತ್ಸಾಲಯ	ರಸಲ್ ಮಾರ್ಕೆಟ್-2
26	ಕಾರಾವಿ ಚಿಕಿತ್ಸಾಲಯ	ಶೇಷಾದ್ರಿಪುರಂ
27	ಕಾರಾವಿ ಚಿಕಿತ್ಸಾಲಯ	ಶ್ರೀರಾಮಪುರಂ
28	ಕಾರಾವಿ ಚಿಕಿತ್ಸಾಲಯ	ಸುಬ್ರಮಣ್ಯಪುರಂ
29	ಕಾರಾವಿ ಚಿಕಿತ್ಸಾಲಯ	ವಿಜಯನಗರ
30	ಕಾರಾವಿ ಚಿಕಿತ್ಸಾಲಯ	ವಿಶ್ವನೀಡಂ
31	ಕಾರಾವಿ ಚಿಕಿತ್ಸಾಲಯ	ವಿವೇಕನಗರ
32	ಕಾರಾವಿ ಚಿಕಿತ್ಸಾಲಯ	ವೈಟ್ ಫೀಲ್ಡ್
33	ಕಾರಾವಿ ಚಿಕಿತ್ಸಾಲಯ	ವಿಲ್ಸನ್ ಗಾರ್ಡನ್
34	ಕಾರಾವಿ ಚಿಕಿತ್ಸಾಲಯ	ಯಶವಂತಪುರ
35	ಕಾರಾವಿ ಚಿಕಿತ್ಸಾಲಯ	ಯಲಹಂಕ
36	ಕಾರಾವಿ ಚಿಕಿತ್ಸಾಲಯ	ಹಲಸೂರು
37	ಕಾರಾವಿ ಚಿಕಿತ್ಸಾಲಯ	ಲಗ್ಗೆರೆ
38	ಕಾರಾವಿ ಚಿಕಿತ್ಸಾಲಯ	ಅತ್ತಿಬೆಲೆ
39	ಕಾರಾವಿ ಚಿಕಿತ್ಸಾಲಯ	ಸಿಂಗಸಂದ್ರ
40	ಕಾರಾವಿ ಚಿಕಿತ್ಸಾಲಯ	ಜಿಗಣಿ
	ಬೆಂಗಳೂರು ಗ್ರಾಮಾಂತರ	
41	ಕಾರಾವಿ ಚಿಕಿತ್ಸಾಲಯ	ಚನ್ನಪಟ್ಟಣ
42	ಕಾರಾವಿ ಚಿಕಿತ್ಸಾಲಯ	ದೊಡ್ಡಬಳ್ಳಾಪುರ
43	ಕಾರಾವಿ ಚಿಕಿತ್ಸಾಲಯ	ಹೊಸಕೋಟೆ
44	ಕಾರಾವಿ ಚಿಕಿತ್ಸಾಲಯ	ಗೊಟ್ಟಿಗೆರೆ
45	ಕಾರಾವಿ ಚಿಕಿತ್ಸಾಲಯ	ನೆಲಮಂಗಲ
46	ಕಾರಾವಿ ಚಿಕಿತ್ಸಾಲಯ	ದೇವನಹಳ್ಳಿ
	ಚಿತ್ರದುರ್ಗ ಜಿಲ್ಲೆ	
47	ಕಾರಾವಿ ಚಿಕಿತ್ಸಾಲಯ	ಚಿತ್ರದುರ್ಗ
	ದಾವಣಗೆರೆ ಜಿಲ್ಲೆ	
48	ಕಾರಾವಿ ಚಿಕಿತ್ಸಾಲಯ	ಸಿಟಿ ದಾವಣಗೆರೆ
49	ಕಾರಾವಿ ಚಿಕಿತ್ಸಾಲಯ	ಹರಿಹರ
50	ಕಾರಾವಿ ಚಿಕಿತ್ಸಾಲಯ	ಕೆ.ಬಿ. ಬಡಾವಣೆ

	ಕೋಲಾರ ಜಿಲ್ಲೆ	
51	ಕಾರಾವಿ ಚಿಕಿತ್ಸಾಲಯ	ರಾಬರ್ಟ್‌ಸನ್ ಪೇಟೆ
52	ಕಾರಾವಿ ಚಿಕಿತ್ಸಾಲಯ	ಮಾಲೂರು
	ಶಿವಮೊಗ್ಗ ಜಿಲ್ಲೆ	
53	ಕಾರಾವಿ ಚಿಕಿತ್ಸಾಲಯ	ಭದ್ರಾವತಿ
54	ಕಾರಾವಿ ಚಿಕಿತ್ಸಾಲಯ	ಎಂ.ಪಿ.ಎಂ. ಭದ್ರಾವತಿ
55	ಕಾರಾವಿ ಚಿಕಿತ್ಸಾಲಯ	ಶಿವಮೊಗ್ಗ
56	ಕಾರಾವಿ ಚಿಕಿತ್ಸಾಲಯ	ಸಾಗರ ರಸ್ತೆ
57	ಕಾರಾವಿ ಚಿಕಿತ್ಸಾಲಯ	ಎನ್.ಟಿ. ರಸ್ತೆ
	ತುಮಕೂರು ಜಿಲ್ಲೆ	
58	ಕಾರಾವಿ ಚಿಕಿತ್ಸಾಲಯ	ತುಮಕೂರು
59	ಕಾರಾವಿ ಚಿಕಿತ್ಸಾಲಯ	ಕುಣಿಗಲ್
60	ಕಾರಾವಿ ಚಿಕಿತ್ಸಾಲಯ	ತಿಪಟೂರು
	ರಾಮನಗರ ಜಿಲ್ಲೆ	
61	ಕಾರಾವಿ ಚಿಕಿತ್ಸಾಲಯ	ರಾಮನಗರ
62	ಕಾರಾವಿ ಚಿಕಿತ್ಸಾಲಯ	ಬಿಡದಿ
	ದಕ್ಷಿಣ ಕನ್ನಡ ಜಿಲ್ಲೆ	
63	ಕಾರಾವಿ ಚಿಕಿತ್ಸಾಲಯ	ಕರಂಗಲ್‌ಪಾಡಿ
64	ಕಾರಾವಿ ಚಿಕಿತ್ಸಾಲಯ	ಕುಲಶೇಖರ
65	ಕಾರಾವಿ ಚಿಕಿತ್ಸಾಲಯ	ಮಾರ್ಗನ್ಸ್ ಗೇಟ್
66	ಕಾರಾವಿ ಚಿಕಿತ್ಸಾಲಯ	ಪಣಂಬೂರು
67	ಕಾರಾವಿ ಚಿಕಿತ್ಸಾಲಯ	ಪುತ್ತೂರು
	ಹಾಸನ ಜಿಲ್ಲೆ	
68	ಕಾರಾವಿ ಚಿಕಿತ್ಸಾಲಯ	ಹಾಸನ
	ಮಂಡ್ಯ ಜಿಲ್ಲೆ	
69	ಕಾರಾವಿ ಚಿಕಿತ್ಸಾಲಯ	ಮಂಡ್ಯ
70	ಕಾರಾವಿ ಚಿಕಿತ್ಸಾಲಯ	ಬೆಳಗೊಳ
71	ಕಾರಾವಿ ಚಿಕಿತ್ಸಾಲಯ	ಮದ್ದೂರು
	ಮೈಸೂರು ಜಿಲ್ಲೆ	
72	ಕಾರಾವಿ ಚಿಕಿತ್ಸಾಲಯ	ಬೆಳವಾಡಿ
73	ಕಾರಾವಿ ಚಿಕಿತ್ಸಾಲಯ	ಹುಣಸೂರು

(12)

74	ಕಾರಾವಿ ಚಿಕಿತ್ಸಾಲಯ	ಬೃಂದಾವನ ಬಡಾವಣೆ
75	ಕಾರಾವಿ ಚಿಕಿತ್ಸಾಲಯ	ಕೇಂದ್ರ, ಮೈಸೂರು
76	ಕಾರಾವಿ ಚಿಕಿತ್ಸಾಲಯ	ದಕ್ಷಿಣ, ಮೈಸೂರು
77	ಕಾರಾವಿ ಚಿಕಿತ್ಸಾಲಯ	ಎನ್.ಆರ್. ಮೊಹಲ್ಲಾ
78	ಕಾರಾವಿ ಚಿಕಿತ್ಸಾಲಯ	ನಂಜನಗೂಡು
79	ಕಾರಾವಿ ಚಿಕಿತ್ಸಾಲಯ	ಟಿ. ನರಸೀಪುರ
80	ಕಾರಾವಿ ಚಿಕಿತ್ಸಾಲಯ	ವಿ.ವಿ.ಪುರಂ
	ಉಡುಪಿ ಜಿಲ್ಲೆ	
81	ಕಾರಾವಿ ಚಿಕಿತ್ಸಾಲಯ	ಮಣಿಪಾಲ್
82	ಕಾರಾವಿ ಚಿಕಿತ್ಸಾಲಯ	ಉಡುಪಿ
83	ಕಾರಾವಿ ಚಿಕಿತ್ಸಾಲಯ	ಕಾರ್ಕಳ
84	ಕಾರಾವಿ ಚಿಕಿತ್ಸಾಲಯ	ಕುಂದಾಪುರ
	ಬೆಳಗಾವಿ ಜಿಲ್ಲೆ	
85	ಕಾರಾವಿ ಚಿಕಿತ್ಸಾಲಯ	ಆನಂದವಾಡಿ (ಶಹಾಪುರ)
86	ಕಾರಾವಿ ಚಿಕಿತ್ಸಾಲಯ	ಪೀರನವಾಡಿ
87	ಕಾರಾವಿ ಚಿಕಿತ್ಸಾಲಯ	ಗೋಕಾಕ್
88	ಕಾರಾವಿ ಚಿಕಿತ್ಸಾಲಯ	ಕೊಣ್ಣೂರು
89	ಕಾರಾವಿ ಚಿಕಿತ್ಸಾಲಯ	ಕೆ.ಎಸ್.ಆರ್.ಟಿ.ಸಿ. ಬೆಳಗಾವಿ
90	ಕಾರಾವಿ ಚಿಕಿತ್ಸಾಲಯ	ಉದ್ಯಮ್ ಭಾಗ (ಭಾಗ್ಯನಗರ)
91	ಕಾರಾವಿ ಚಿಕಿತ್ಸಾಲಯ	ಯಮುನಾಪುರ
92	ಕಾರಾವಿ ಚಿಕಿತ್ಸಾಲಯ	ನಿಪ್ಪಾಣಿ
	ಧಾರವಾಡ ಜಿಲ್ಲೆ	
93	ಕಾರಾವಿ ಚಿಕಿತ್ಸಾಲಯ	ಧಾರವಾಡ
94	ಕಾರಾವಿ ಚಿಕಿತ್ಸಾಲಯ	ಹುಬ್ಬಳ್ಳಿ-1
95	ಕಾರಾವಿ ಚಿಕಿತ್ಸಾಲಯ	ಬೇಲೂರು
96	ಕಾರಾವಿ ಚಿಕಿತ್ಸಾಲಯ	ತಾರಿಹಾಳ
97	ಕಾರಾವಿ ಚಿಕಿತ್ಸಾಲಯ	ಗೋಕುಲ
98	ಕಾರಾವಿ ಚಿಕಿತ್ಸಾಲಯ	ವರೂರು
	ಗದಗ ಜಿಲ್ಲೆ	
99	ಕಾರಾವಿ ಚಿಕಿತ್ಸಾಲಯ	ಗದಗ
100	ಕಾರಾವಿ ಚಿಕಿತ್ಸಾಲಯ	ಹುಲಕೋಟಿ

733

ಉತ್ತರ ಕನ್ನಡ ಜಿಲ್ಲೆ		
101	ಕಾರಾವಿ ಚಿಕಿತ್ಸಾಲಯ	ದಾಂಡೇಲಿ
ಬಾಗಲಕೋಟೆ ಜಿಲ್ಲೆ		
102	ಕಾರಾವಿ ಚಿಕಿತ್ಸಾಲಯ	ಬಾಗಲಕೋಟೆ
103	ಕಾರಾವಿ ಚಿಕಿತ್ಸಾಲಯ	ಬನಹಟ್ಟಿ
ಬಳ್ಳಾರಿ ಜಿಲ್ಲೆ		
104	ಕಾರಾವಿ ಚಿಕಿತ್ಸಾಲಯ	ಬಳ್ಳಾರಿ
105	ಕಾರಾವಿ ಚಿಕಿತ್ಸಾಲಯ	ಟಿ.ಬಿ. ಡ್ಯಾಂ
ಬಿಜಾಪುರ ಜಿಲ್ಲೆ		
106	ಕಾರಾವಿ ಚಿಕಿತ್ಸಾಲಯ	ಬಿಜಾಪುರ
ಗುಲ್ಬರ್ಗಾ ಜಿಲ್ಲೆ		
107	ಕಾರಾವಿ ಚಿಕಿತ್ಸಾಲಯ	ಎಂ.ಎಸ್.ಕೆ. ಮಿಲ್ಸ್
108	ಕಾರಾವಿ ಚಿಕಿತ್ಸಾಲಯ	ಮಳಖೇಡ
109	ಕಾರಾವಿ ಚಿಕಿತ್ಸಾಲಯ	ಸೇಡಂ
110	ಕಾರಾವಿ ಚಿಕಿತ್ಸಾಲಯ	ಶಹಬಾದ
111	ಕಾರಾವಿ ಚಿಕಿತ್ಸಾಲಯ	ವಾಡಿ
ರಾಯಚೂರು ಜಿಲ್ಲೆ		
112	ಕಾರಾವಿ ಚಿಕಿತ್ಸಾಲಯ	ರಾಯಚೂರು
ಕೊಪ್ಪಳ ಜಿಲ್ಲೆ		
113	ಕಾರಾವಿ ಚಿಕಿತ್ಸಾಲಯ	ಕೊಪ್ಪಳ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 778
ಸದಸ್ಯರ ಹೆಸರು	: **ಶ್ರೀ.ಬಾಲಕೃಷ್ಣ.ಸಿ.ಎನ್(ಶ್ರವಣಬೆಳಗೊಳ)**
ಉತ್ತರಿಸುವ ದಿನಾಂಕ	: 10.12.2020
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಇರುವ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ ಎಷ್ಟು; (ಕಾಲೇಜುಗಳ ವಿಳಾಸವಾರು ಮಾಹಿತಿಯನ್ನು ನೀಡುವುದು)	ರಾಜ್ಯದಲ್ಲಿ 85 ಸರ್ಕಾರಿ, 44 ಅನುದಾನಿತ ಹಾಗೂ 152 ಖಾಸಗಿ **ಪಾಲಿಟೆಕ್ನಿಕ್ ಕಾಲೇಜುಗಳು ಒಟ್ಟು 281 ಕಾಲೇಜುಗಳು ಇರುತ್ತವೆ.** ಕಾಲೇಜುಗಳ ವಿಳಾಸವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನಮೂದಿಸಿದೆ.
ಆ)	ಸದರಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಎ.ಐ.ಸಿ.ಟಿ.ಇ ನಿಯಮಾನುಸಾರ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಾದ ಕಂಪ್ಯೂಟರ್ ಲ್ಯಾಬ್ ಅಂದರೆ, ಕಂಪ್ಯೂಟರ್, ಪ್ರಿಂಟರ್, ಕಂಪ್ಯೂಟರ್ ಟೇಬಲ್‌ಗಳು ಹಾಗೂ ಇನ್ನಿತರೆ ಸಾಮಾಗ್ರಿಗಳು ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಬೇಕಾಗುವ ಡೆಸ್ಕ್‌ಗಳು, ಗ್ರಂಥಾಲಯದಲ್ಲಿ ಅಗತ್ಯವಿರುವ ಪುಸ್ತಕಗಳು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳು ಲಭ್ಯವಿಲ್ಲದೆ, ಗ್ರಾಮೀಣ ಪ್ರದೇಶದಿಂದ ಬಂದಂತಹ ವಿದ್ಯಾರ್ಥಿಗಳ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಅಗತ್ಯವಾಗಿ ಬೇಕಾಗಿರುವ ಡೆಸ್ಕ್‌ಗಳು, ಕಂಪ್ಯೂಟರ್ ಹಾಗೂ ಇತರೆ ಸಾಮಾಗ್ರಿಗಳನ್ನು ಹಾಗೂ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಒದಗಿಸಲು ಹಾಗೂ ಇತರೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಅವಶ್ಯಕ ಅನುದಾನವನ್ನು ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 85ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಅಗತ್ಯವಿರುವ ಡೆಸ್ಕ್‌ಗಳು, ಕಂಪ್ಯೂಟರ್ ಹಾಗೂ ಇತರೆ ಸಾಮಾಗ್ರಿಗಳನ್ನು ಹಾಗೂ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಒದಗಿಸುವ ಸಂಬಂದ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ (see table below). **ಅತ್ಯಗತ್ಯ** ಮೂಲಭೂತ ಸೌಕರ್ಯಗಳನ್ನು ಅನುದಾನದ **ಲಭ್ಯತೆಯನುಸಾರ** ಹಂತ ಹಂತವಾಗಿ **ಒದಗಿಸಲಾಗುತ್ತಿದೆ.**

ವರ್ಷ	ಯಂತ್ರೋಪಕರಣ, ಪುಸ್ತಕ ಹಾಗೂ ಪೀಠೋಪಕರಣ ಒದಗಿಸಲು ಬಿಡುಗಡೆ ಮಾಡಲಾದ ಅನುದಾನದ ವಿವರ (ರೂ. ಲಕ್ಷಗಳಲ್ಲಿ)
2019-20	1932.93
2018-19	252.64
2017-18	413.26
ಒಟ್ಟು	2598.83

ಸಂಖ್ಯೆ: ಇಡಿ 122 ಹೆಚ್‌ಪಿಟಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಅನುಬಂಧ-1778

ಜಿಲ್ಲಾವಾರು ಪಾಲಿಟೆಕ್ನಿಕ್ ಕಾಲೇಜುಗಳ ವಿವರ 2019–20

ಸರ್ಕಾರಿ ಪಾಲಿಟೆಕ್ನಿಕ್‌ಗಳು

ಬೆಂಗಳೂರು ನಗರ ಜಿಲ್ಲೆ

1	102	ಸರ್ಕಾರಿ ಎಸ್.ಜೆ ಪಾಲಿಟೆಕ್ನಿಕ್, ಬೆಂಗಳೂರು
2	125	ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು
3	126	ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಅರಮನೆ ರಸ್ತೆ, ಬೆಂಗಳೂರು
4	119	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು
5	123	ಸರ್ಕಾರಿ ಜಿ.ಆರ್.ಇನ್ಸ್‌ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟೀಸ್, ಬೆಂಗಳೂರು
6	101	ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಕೆ.ಆರ್. ವೃತ್ತ, ಬೆಂಗಳೂರು.
7	127	ಸರ್ಕಾರಿ ಆರ್.ಸಿ.ಎನ್ ಇನ್ಸ್‌ಟಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಬೆಂಗಳೂರು
8	140	ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು.
9	183	ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ,, ಬೆಂಗಳೂರು.
10	175	ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ, ಬೆಂಗಳೂರು

ರಾಮನಗರ ಜಿಲ್ಲೆ

11	142	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ
12	111	ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ.
13	159	ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ.

ಕೊಪ್ಪಳ ಜಿಲ್ಲೆ

14	137	ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ.
15	138	ಸರ್ಕಾರಿ ಪಾಲಿಟೆಕ್ನಿಕ್, ಕುಷ್ಟಗಿ.
16	165	ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ.

ಬೆಳಗಾವಿ ಜಿಲ್ಲೆ

17	113	ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ.
18	179	ಸರ್ಕಾರಿ ಪಾಲಿಟೆಕ್ನಿಕ್, ಅಥಣಿ

ಬಳ್ಳಾರಿ ಜಿಲ್ಲೆ

19	104	ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ.
20	174	ಸರ್ಕಾರಿ ಪಾಲಿಟೆಕ್ನಿಕ್, ಕೂಡ್ಲಿಗಿ.
21	172	ಸರ್ಕಾರಿ ಪಾಲಿಟೆಕ್ನಿಕ್, ಕಂಪ್ಲಿ.

ಬೀದರ್ ಜಿಲ್ಲೆ

22	115	ಸರ್ಕಾರಿ ಪಾಲಿಟೆಕ್ನಿಕ್, ಬೀದರ್.
23	181	ಸರ್ಕಾರಿ ಪಾಲಿಟೆಕ್ನಿಕ್, ಔರಾದ್.

ಬಿಜಾಪುರ ಜಿಲ್ಲೆ

24 120 ಸರ್ಕಾರಿ ಪಾಲಿಟೆಕ್ನಿಕ್, ಬಿಜಾಪುರ.
25 176 ಸರ್ಕಾರಿ ಪಾಲಿಟೆಕ್ನಿಕ್, ಝಳಕಿ.

ಚಿಕ್ಕಮಗಳೂರು ಜಿಲ್ಲೆ

26 110 ಸರ್ಕಾರಿ ಡಿ.ಎ.ಸಿ.ಜಿ ಪಾಲಿಟೆಕ್ನಿಕ್, ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆ

27 124 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು.
28 103 ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು.
29 163 ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ.
30 186 ಕರ್ನಾಟಕ ಸರ್ಕಾರಿ (ಸಂಜೆ) ಪಾಲಿಟೆಕ್ನಿಕ್, ಮಂಗಳೂರು. (2017–18)

ಧಾರವಾಡ ಜಿಲ್ಲೆ

31 121 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ.
32 171 ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ.

ಕಲಬುರ್ಗಿ ಜಿಲ್ಲೆ

33 141 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರ್ಗಿ
34 109 ಸರ್ಕಾರಿ ಪಾಲಿಟೆಕ್ನಿಕ್, ಕಲಬುರ್ಗಿ
35 161 ಸರ್ಕಾರಿ ಪಾಲಿಟೆಕ್ನಿಕ್, ಅಫಜಲಪೂರ
36 166 ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ.

ಹಾಸನ ಜಿಲ್ಲೆ

37 132 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ
38 105 ಶ್ರೀಮತಿ.ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್, ಹಾಸನ.
39 153 ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು.
40 154 ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸಿಪುರ.
41 189 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮೊಸಳೆಹೊಸಳ್ಳಿ (ಹೊಸದು 2019–20)
42 188 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹೊಳೆನರಸೀಪುರ (ಹೊಸದು 2019–20)

ಕೊಡಗು ಜಿಲ್ಲೆ

43 118 ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ.

ಕೋಲಾರ ಜಿಲ್ಲೆ

44 131 ಸರ್ಕಾರಿ ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್.
45 156 ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು.
46 169 ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್

ಚಿಕ್ಕಬಳ್ಳಾಪುರ ಜಿಲ್ಲೆ

47 107 ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ.
48 136 ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ,

ಮಂಡ್ಯ ಜಿಲ್ಲೆ

49 116 ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ.
50 157 ಸರ್ಕಾರಿ ಪಾಲಿಟೆಕ್ನಿಕ್, ಶ್ರೀರಂಗಪಟ್ಟಣ.
51 158 ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ.

ಮೈಸೂರು ಜಿಲ್ಲೆ

52 108 ಸಿಪಿಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು.
53 160 ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ.

ರಾಯಚೂರು ಜಿಲ್ಲೆ

54 117 ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು,
55 146 ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸಗೂರು
56 184 ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ.

ತುಮಕೂರು ಜಿಲ್ಲೆ

57 112 ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು.
58 155 ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ.
59 187 ಸರ್ಕಾರಿ ಪಾಲಿಟೆಕ್ನಿಕ್, ಶಿರಾ (ಹೊಸದು 2019-20)

ಉತ್ತರ ಕನ್ನಡ ಜಿಲ್ಲೆ

60 114 ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ.
61 162 ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡ.
62 177 ಸರ್ಕಾರಿ ಪಾಲಿಟೆಕ್ನಿಕ್, ಸಿದ್ದಾಪುರ
63 167 ಸರ್ಕಾರಿ ಪಾಲಿಟೆಕ್ನಿಕ್, ಮಂಡಗೋಡ್

ಶಿವಮೊಗ್ಗ ಜಿಲ್ಲೆ

64 139 ಸರ್ಕಾರಿ ಪಾಲಿಟೆಕ್ನಿಕ್, ಸೊರಬ.
65 128 ಸರ್ಕಾರಿ ವಿ.ಐ.ಎಸ್.ಎಸ್.ಜೆ ಪಾಲಿಟೆಕ್ನಿಕ್, ಭದ್ರಾವತಿ.
66 135 ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ.
67 143 ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ.

ದಾವಣಗೆರೆ ಜಿಲ್ಲೆ

68 106 ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ.
69 170 ಸರ್ಕಾರಿ ಪಾಲಿಟೆಕ್ನಿಕ್, ಹರಪ್ಪನಹಳ್ಳಿ,
70 173 ಸರ್ಕಾರಿ ಪಾಲಿಟೆಕ್ನಿಕ್, ಹರಿಹರ

ಚಾಮರಾಜನಗರ ಜಿಲ್ಲೆ

71 130 ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ

ಉಡುಪಿ ಜಿಲ್ಲೆ

72 144 ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳ.
73 145 ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ.

ಗದಗ ಜಿಲ್ಲೆ

74 147 ಸರ್ಕಾರಿ ಪಾಲಿಟೆಕ್ನಿಕ್, ಗದಗ.
75 148 ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಘಡ.

ಚಿತ್ರದುರ್ಗ ಜಿಲ್ಲೆ

76 149 ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ.
77 182 ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು
78 168 ಸರ್ಕಾರಿ ಪಾಲಿಟೆಕ್ನಿಕ್, ಹೊಸದುರ್ಗ.

ಹಾವೇರಿ ಜಿಲ್ಲೆ

79 150 ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್.
80 185 ಶ್ರೀ ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್, ಗುಡ್ಡದ ಚನ್ನಾಪುರ, ಬಂಕಾಪುರ.

ಬಾಗಲಕೋಟೆ ಜಿಲ್ಲೆ

81 152 ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ.
82 151 ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ.
83 164 ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ
84 178 ಸರ್ಕಾರಿ ಪಾಲಿಟೆಕ್ನಿಕ್, ರಬಕವಿ ಬನಹಟ್ಟಿ,

ಯಾದಗಿರಿ ಜಿಲ್ಲೆ

85 180 ಸರ್ಕಾರಿ ಪಾಲಿಟೆಕ್ನಿಕ್, ಸುರಪುರ.

ಅನುದಾನಿತ ಪಾಲಿಟೆಕ್ನಿಕ್‌ಗಳು

ಬೆಂಗಳೂರು ನಗರ ಜಿಲ್ಲೆ

1	204	ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು
2	207	ಎಂ.ಇ.ಐ (ಸಂಜೆ) ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು.
3	203	ಎ.ಪಿ.ಎಸ್. ಪಾಲಿಟೆಕ್ನಿಕ್, ಸೋಮನಹಳ್ಳಿ, ಬೆಂಗಳೂರು.
4	330	ಇಂಪ್ಯಾಕ್ಟ್ ಪಾಲಿಟೆಕ್ನಿಕ್, ಕೊಡಿಗೇಹಳ್ಳಿ, ಬೆಂಗಳೂರು
5	433	ಪಿ.ವಿ.ಪಿ ಪಾಲಿಟೆಕ್ನಿಕ್, ಮಲ್ಲತ್ತಹಳ್ಳಿ, ಬೆಂಗಳೂರು
6	331	ಅಲ್-ಖತೀಬ್ ಪಾಲಿಟೆಕ್ನಿಕ್, ಭೂಪಸಂದ್ರ, ಬೆಂಗಳೂರು
7	364	ಶ್ರೀ.ವೆಂಕಟೇಶ್ವರ ಪಾಲಿಟೆಕ್ನಿಕ್, ಬನ್ನೇರುಘಟ್ಟ, ಬೆಂಗಳೂರು

ಕೊಪ್ಪಳ ಜಿಲ್ಲೆ

8	351	ಡಾ॥ ಜಿ.ಎಸ್ ಮೇಲ್ಕೋಟೆ ಗ್ರಾಮೀಣ ಪಾಲಿಟೆಕ್ನಿಕ್, ಕುಕ್ಕನೂರು, ಯಲಬುರ್ಗಾ ತಾ॥

ಬೆಳಗಾವಿ ಜಿಲ್ಲೆ

9	303	ಮರಾಠ ಮಂಡಳ ಪಾಲಿಟೆಕ್ನಿಕ್, ಬೆಳಗಾಂ.
10	312	ಗೊಮಟೇಶ್ ಪಾಲಿಟೆಕ್ನಿಕ್, ಹಿಂದುವಾಡಿ, ಬೆಳಗಾಂ.
11	315	ಮೋತಿ ಚಂದ್ ಲೆಂಗಡೆ ಭರತೇಶ್ ಪಾಲಿಟೆಕ್ನಿಕ್, ಬೆಳಗಾಂ.

ಬಳ್ಳಾರಿ ಜಿಲ್ಲೆ

12	316	ಟಿ.ಎಂ.ಎ.ಇ. ಸೊಸೈಟಿ ಪಾಲಿಟೆಕ್ನಿಕ್, ಹೊಸಪೇಟೆ.
13	363	ಸಿರಗುಪ್ಪ ಎಜುಕೇಷನ್ ಸೊಸೈಟಿ ಪಾಲಿಟೆಕ್ನಿಕ್, ಸಿರಗುಪ್ಪ

ಬೀದರ್ ಜಿಲ್ಲೆ

14	310	ಜವಹಾರ್ ಲಾಲ್ ನೆಹರು ಪಾಲಿಟೆಕ್ನಿಕ್, ಠಾಣಕುಶನೂರು

ಚಿಕ್ಕಮಗಳೂರು ಜಿಲ್ಲೆ

15	353	ಎಸ್.ಜೆ.ಎಂ. ವಿದ್ಯಾಪೀಠ ಪಾಲಿಟೆಕ್ನಿಕ್, ಬೀರೂರು

ದಕ್ಷಿಣ ಕನ್ನಡ ಜಿಲ್ಲೆ

16	338	ಕೆ.ವಿ.ಜಿ ಪಾಲಿಟೆಕ್ನಿಕ್, ಸುಳ್ಯ
17	340	ಶ್ರೀ.ನಿರಂಜನ ಸ್ವಾಮಿ ಪಾಲಿಟೆಕ್ನಿಕ್, ಸುಂಕದಕಟ್ಟೆ
18	337	ಎಸ್.ಎನ್. ಮೂಡಬಿದ್ರೆ ಪಾಲಿಟೆಕ್ನಿಕ್, ಮೂಡಬಿದ್ರೆ, ಮಂಗಳೂರು ತಾ॥

ಧಾರವಾಡ ಜಿಲ್ಲೆ

19	202	ಕೆ.ಹೆಚ್.ಕೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಧಾರವಾಡ.
20	301	ಟಿಪ್ಪು ಶಾಹೀದ್ ಪಾಲಿಟೆಕ್ನಿಕ್, ಹುಬ್ಬಳ್ಳಿ.
21	404	ಎಸ್.ಜಿ.ಇ.ಎಸ್ ರೂರಲ್ ಪಾಲಿಟೆಕ್ನಿಕ್, ತಾರಿಹಾಳ.

ಕಲಬುರ್ಗಿ ಜಿಲ್ಲೆ

22	307	ಕೆ.ಸಿ.ಟಿ ಪಾಲಿಟೆಕ್ನಿಕ್, ಕಲಬುರ್ಗಿ
23	323	ನೂತನ ವಿದ್ಯಾಲಯ ಪಾಲಿಟೆಕ್ನಿಕ್, ಕಲಬುರ್ಗಿ

ಚಿಕ್ಕಬಳ್ಳಾಪುರ ಜಿಲ್ಲೆ

24 332 ಕೆ.ವಿ.ಟಿ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ.

ಮೈಸೂರು ಜಿಲ್ಲೆ

25 324 ಜೆ.ಎಸ್.ಎಸ್. ಪಾಲಿಟೆಕ್ನಿಕ್, ನಂಜನಗೂಡು.

26 325 ಡಿ.ಬನುಮಯ್ಯ ಪಾಲಿಟೆಕ್ನಿಕ್, ಮೈಸೂರು.

27 208 ಜೆ.ಎಸ್.ಎಸ್. ಪಾಲಿಟೆಕ್ನಿಕ್ ಫಾರ್ ವುಮೆನ್ಸ್, ಮೈಸೂರು.

28 210 ಜೆ.ಎಸ್.ಎಸ್. ಅಂಗವಿಕಲರ ಪಾಲಿಟೆಕ್ನಿಕ್, ಮೈಸೂರು.

ತುಮಕೂರು ಜಿಲ್ಲೆ

29 306 ಹೆಚ್.ಎಂ.ಎಸ್. ಪಾಲಿಟೆಕ್ನಿಕ್, ತುಮಕೂರು

ಉತ್ತರ ಕನ್ನಡ ಜಿಲ್ಲೆ

30 370 ಶ್ರೀ.ವಿಧ್ಯಾದಿರಾಜ ಪಾಲಿಟೆಕ್ನಿಕ್, ಕುಮುಟಾ

31 327 ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್, ಶಿರಸಿ.

ಶಿವಮೊಗ್ಗ ಜಿಲ್ಲೆ

32 346 ಡಿ.ವಿ.ಎಸ್ ಪಾಲಿಟೆಕ್ನಿಕ್, ಶಿವಮೊಗ್ಗ.

33 371 ಸಹ್ಯಾದ್ರಿ ಪಾಲಿಟೆಕ್ನಿಕ್, ತೀರ್ಥಹಳ್ಳಿ.

34 308 ಸಂಜಯ್ ಮೆಮೋರಿಯಲ್ ಪಾಲಿಟೆಕ್ನಿಕ್, ಸಾಗರ.

ದಾವಣಗೆರೆ ಜಿಲ್ಲೆ

35 335 ಬಾಪೂಜಿ ಪಾಲಿಟೆಕ್ನಿಕ್, ಶಾಬನೂರು, ದಾವಣಗೆರೆ.

36 302 ಎಸ್.ಟಿ.ಜೆ ಪಾಲಿಟೆಕ್ನಿಕ್, ಹರಪ್ಪನಹಳ್ಳಿ.

ಉಡುಪಿ ಜಿಲ್ಲೆ

37 309 ಎನ್.ಆರ್.ಎ.ಎಂ. ಪಾಲಿಟೆಕ್ನಿಕ್, ನಿಟ್ಟೆ

ಗದಗ ಜಿಲ್ಲೆ

38 333 ಅಂಜುಮನ್–ಎ–ಇಸ್ಲಾಂ ಪಾಲಿಟೆಕ್ನಿಕ್, ಗದಗ.

39 304 ಆರ್.ಟಿ.ಇ.ಎಸ್. ರೂರಲ್ ಪಾಲಿಟೆಕ್ನಿಕ್, ಹುಲ್ಕೋಟಿ

ಚಿತ್ರದುರ್ಗ ಜಿಲ್ಲೆ

40 321 ಎಸ್.ಜೆ.ಎಂ ಪಾಲಿಟೆಕ್ನಿಕ್, ಚಿತ್ರದುರ್ಗ.

ಹಾವೇರಿ ಜಿಲ್ಲೆ

41 311 ಎಂ.ವಿ.ಪಿ ರೂರಲ್ ಪಾಲಿಟೆಕ್ನಿಕ್, ಹಂಸಭಾವಿ.

ಬಾಗಲಕೋಟೆ ಜಿಲ್ಲೆ

42 205 ಬಿ.ವಿ.ವಿ.ಎಸ್ ಪಾಲಿಟೆಕ್ನಿಕ್, ಬಾಗಲಕೋಟೆ.

43 319 ಸಿ.ವಿ. ಚರಂತಿಮಠ ಗ್ರಾಮೀಣ ಪಾಲಿಟೆಕ್ನಿಕ್, ಹುನಗುಂದ.

44 320 ಬಿ.ವಿ.ವಿ.ಎಸ್ ಎಸ್.ಆರ್ ವಸ್ತ್ರದ್ ಗ್ರಾಮೀಣ ಪಾಲಿಟೆಕ್ನಿಕ್, ಗುಳೇದಗುಡ್ಡ

ಖಾಸಗಿ ಪಾಲಿಟೆಕ್ನಿಕ್‌ಗಳು

ಬೆಂಗಳೂರು ನಗರ ಜಿಲ್ಲೆ

1	305	ದಯಾನಂದ ಸಾಗರ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಪಾಲಿಟೆಕ್ನಿಕ್), ಕುಮಾರಸ್ವಾಮಿ ಲೇಔಟ್, ಬೆಂಗಳೂರು
2	372	ಆರ್.ಜಿ.ಎಸ್ ಪಾಲಿಟೆಕ್ನಿಕ್, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು ದಕ್ಷಿಣ ತಾ॥, ಬೆಂಗಳೂರು
3	362	ವಿ.ಇ.ಟಿ ಬಿ.ವಿ.ಎಲ್ ಪಾಲಿಟೆಕ್ನಿಕ್, ಜೆ.ಪಿ.ನಗರ 2ನೇ ಹಂತ, ಬೆಂಗಳೂರು
4	314	ಪಿ.ಇ.ಎಸ್ ಪಾಲಿಟೆಕ್ನಿಕ್, ಹನುಮಂತನಗರ, ಬೆಂಗಳೂರು
5	400	ದಿ ಆಕ್ಸ್‌ಫರ್ಡ್ ಪಾಲಿಟೆಕ್ನಿಕ್, ಜೆ.ಪಿ ನಗರ 1ನೇ ಹಂತ, ಬೆಂಗಳೂರು
6	470	ದಿ ಆಕ್ಸ್‌ಫರ್ಡ್[ಸಂಜೆ] ಪಾಲಿಟೆಕ್ನಿಕ್, ಜೆ.ಪಿ ನಗರ 1ನೇ ಹಂತ, ಬೆಂಗಳೂರು
7	401	ಗೌಸಿಯಾ ಮಹಿಳಾ ಪಾಲಿಟೆಕ್ನಿಕ್, ಹೊಸೂರು ರಸ್ತೆ, ಬೆಂಗಳೂರು
8	421	ಮೆಹಮೂದ್ ಷರೀಫ್ ಪಾಲಿಟೆಕ್ನಿಕ್, ಯಶವಂತನಗರ, ಬೆಂಗಳೂರು
9	413	ಎಂ.ಎನ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್, ಕಮ್ಮಗೊಂಡನಹಳ್ಳಿ, ಬೆಂಗಳೂರು ಉತ್ತರ, ಬೆಂಗಳೂರು
10	435	ಬಿ.ಟಿ.ಎಲ್ ಪಾಲಿಟೆಕ್ನಿಕ್, ಬೊಮ್ಮಸಂದ್ರ, ಆನೇಕಲ್ ತಾ॥, ಬೆಂಗಳೂರು
11	455	ಸಹಕಾರಿ ವಿದ್ಯಾಕೇಂದ್ರ ಪಾಲಿಟೆಕ್ನಿಕ್, ಜಯನಗರ 9ನೇ ಬ್ಲಾಕ್, ಬೆಂಗಳೂರು
12	465	ಕೆ.ಎಸ್ ಪಾಲಿಟೆಕ್ನಿಕ್, ರಘುವನ ಹಳ್ಳಿ, ಕನಕಪುರ ರಸ್ತೆ, ಬೆಂಗಳೂರು
13	461	ರಾಜೀವ್‌ಗಾಂಧಿ ಮೆಮೋರಿಯಲ್ ಪಾಲಿಟೆಕ್ನಿಕ್, ಮಲ್ಲತ್ತಹಳ್ಳಿ ಬಡಾವಣೆ, ಬೆಂಗಳೂರು
14	434	ಆಚಾರ್ಯ ಪಾಲಿಟೆಕ್ನಿಕ್, ಸೋಲದೇವನಹಳ್ಳಿ ಹೆಸರಘಟ್ಟ, ಬೆಂಗಳೂರು ಉತ್ತರ, ಬೆಂಗಳೂರು
15	471	ಕಾಲಭೈರವೇಶ್ವರ ಪಾಲಿಟೆಕ್ನಿಕ್, ಹೆಸರಘಟ್ಟ ಬೆಂಗಳೂರು
16	476	ಎಂ.ಎಸ್.ರಾಮಯ್ಯ ಪಾಲಿಟೆಕ್ನಿಕ್, ಎಂ.ಎಸ್.ಆರ್.ಐ.ಟಿ ಕ್ಯಾಂಪಸ್, ಬೆಂಗಳೂರು
17	473	ಭುವನ ಪಾಲಿಟೆಕ್ನಿಕ್, ವೆಂಕಟಾಲ, ಯಲಹಂಕ, ಬೆಂಗಳೂರು
18	388	ಐ.ಆರ್. ಪಾಲಿಟೆಕ್ನಿಕ್, ಪೀಣ್ಯ 3ನೇ ಹಂತ, ಬೆಂಗಳೂರು
19	430	ಎಸ್.ಜಿ.ರೆಡ್ಡಿ ಪಾಲಿಟೆಕ್ನಿಕ್, ಮಾರತ್ತಹಳ್ಳಿ, ಬೆಂಗಳೂರು.
20	437	ರಾಮನ್ ಪಾಲಿಟೆಕ್ನಿಕ್, ಕಾಮಾಕ್ಷಿ ಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು
21	367	ಶ್ರೀ ವೆಂಕಟರಾಜು ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಪಾಲಿಟೆಕ್ನಿಕ್), ಜೆ.ಪಿ.ನಗರ 6ನೇ ಹಂತ, ಬೆಂಗಳೂರು
22	482	ಎಸ್.ಸಿ.ಟಿ.ಪಾಲಿಟೆಕ್ನಿಕ್, ಕಗ್ಗದಾಸಪುರ ಮೈನ್ ರೋಡ್, ವಿಜ್ಞಾನ ನಗರ, ಬೆಂಗಳೂರು
23	390	ನಾಡಗೀರ್ ಪಾಲಿಟೆಕ್ನಿಕ್, ಮೋದಿ ಆಸ್ಪತ್ರೆ ಹತ್ತಿರ, ರಾಜಾಜಿನಗರ, ಬೆಂಗಳೂರು
24	441	ನಾಡಗೀರ್ [ಸಂಜೆ] ಪಾಲಿಟೆಕ್ನಿಕ್, ಮೋದಿ ಆಸ್ಪತ್ರೆ ಹತ್ತಿರ, ರಾಜಾಜಿನಗರ, ಬೆಂಗಳೂರು
25	450	ಆರ್.ಇ.ಎಸ್ ಪಾಲಿಟೆಕ್ನಿಕ್, ಸುಂಕದಕಟ್ಟೆ, ಮಾಗಡಿ ರಸ್ತೆ, ಬೆಂಗಳೂರು
26	480	ಜಿಟಿಟಿಸಿ ಮಹಿಳಾ ಪಾಲಟೆಕ್ನಿಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು
27	133	ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಲೆದರ್ ಟೆಕ್ನಾಲಜಿ, ಉಳ್ಳಾಲ ಉಪನಗರ, ಬೆಂಗಳೂರು ಉತ್ತರ ತಾ॥, ಬೆಂಗಳೂರು
28	482	ಬಿ.ಇ.ಎಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, 16ನೇ ಮೈನ್, 4ನೇ ಬ್ಲಾಕ್ ಜಯನಗರ, ಬೆಂಗಳೂರು
29	408	ಹೆಚ್.ಇ.ಎ. ಪಾಲಿಟೆಕ್ನಿಕ್, ಮಾರತ್ತಹಳ್ಳಿ, ಬೆಂಗಳೂರು ಪೂರ್ವ ತಾ॥, ಬೆಂಗಳೂರು
30	487	ಶ್ರೀ ಕೃಷ್ಣ ಪಾಲಿಟೆಕ್ನಿಕ್, ಚಿಮ್ನಿ ಹಿಲ್ಸ್, ಪೈಪ್‌ಲೈನ್ ರಸ್ತೆ, ಚಿಕ್ಕ ಬಾಣಾವರ ಅಂಚೆ, ಬೆಂಗಳೂರು
31	499	ಈಸ್ಟ್–ವೆಸ್ಟ್ ಪಾಲಿಟೆಕ್ನಿಕ್, ಮಾಗಡಿ ರಸ್ತೆ, ಬೆಂಗಳೂರು
32	382	ಎಸ್.ಜೆ.ಇ.ಎಸ್ ಪಾಲಿಟೆಕ್ನಿಕ್, ಮೇಡಹಳ್ಳಿ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು
33	535	ಪಂಚಶೀಲ ಪಾಲಿಟೆಕ್ನಕ್, ಬೆಂಗಳೂರು
34	544	ಆರ್.ಆರ್ ಪಾಲಿಟೆಕ್ನಿಕ್, ಹೆಸರಘಟ್ಟ ಮುಖ್ಯರಸ್ತೆ, ಚಿಕ್ಕಬಾಣಾವಾರ, ಬೆಂಗಳೂರು ಉತ್ತರ ತಾ॥
35	565	ಅಶೋಕ ಪಾಲಿಟೆಕ್ನಿಕ್, ಕಮ್ಮಗೊಂಡನಹಳ್ಳಿ, ಬೆಂಗಳೂರು
36	597	**ಈಸ್ಟ್‌ವೆಸ್ಟ್ ಇನ್ಸ್‌ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಯಲಹಂಕ ನ್ಯೂ ಟೌನ್, ಬೆಂಗಳೂರು (2015–16)**
37	568	ನಿಟ್ಟೆ ಮೀನಾಕ್ಷಿ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಯಲಹಂಕ, ಬೆಂಗಳೂರು ಉತ್ತರ ತಾ॥ (2nd Shift College)

38 577 ವಿಜಯ ವಿಠ್ಠಲ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ದೊಡ್ಡ ಗುಬ್ಬಿ, ಬೆಂಗಳೂರು (2nd Shift College)
39 579 ಆಲ್ಫಾ ಕಾಲೇಜ್ ಆಫ್ ಇಂಜಿನಿಯರಿಂಗ್, ಕನ್ನೂರು, ಬೆಂಗಳೂರು (2nd Shift College)
40 578 ಬೃಂದಾವನ ಕಾಲೇಜ್ ಆಫ್ ಇಂಜಿನಿಯರಿಂಗ್, ಯಲಹಂಕ, ಬೆಂಗಳೂರು (2nd Shift College)

ಬೆಂಗಳೂರು ಗ್ರಾಮಾಂತರಜಿಲ್ಲೆ

41 377 ಎಸ್.ಜೆ.ಎಂ ಪಾಲಿಟೆಕ್ನಿಕ್, ಬಿನ್ನಮಂಗಲ, ನೆಲಮಂಗಲ ಬೈ-ಪಾಸ್, ಬೆಂಗಳೂರು ಗ್ರಾಮಾಂತರ ಜಿಲ್ಲೆ
42 566 ಡಾ॥ ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮಿ ಪಾಲಿಟೆಕ್ನಿಕ್, ನೆಲಮಂಗಲ, ಬೆಂಗಳೂರು
43 599 ಆರ್.ಎಲ್.ಜಾಲಪ್ಪ ಪಾಲಿಟೆಕ್ನಿಕ್, ದೊಡ್ಡಬಳ್ಳಾಪುರ, ಬೆಂ. ಗ್ರಾ. ಜಿಲ್ಲೆ (2016-17)

ರಾಮನಗರ ಜಿಲ್ಲೆ

44 509 ಶಾಂತಿನಿಕೇತನ ಪಾಲಿಟೆಕ್ನಿಕ್, ರಾಮನಗರ
45 592 ಅಮೃತ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಸೈನ್ಸ್, ಬಿಡದಿ, ಬೆಂಗಳೂರು (2ನೇ ಪಾಳಿ)

ಕೊಪ್ಪಳ ಜಿಲ್ಲೆ

46 525 ಎಂ.ಎಸ್.ಎಂ.ಎಸ್. ರೂರಲ್ ಪಾಲಿಟೆಕ್ನಿಕ್, ಮರಳಿ, ಗಂಗಾವತಿ ತಾ॥

ಬೆಳಗಾವಿ ಜಿಲ್ಲೆ

47 349 ರಾಯಭಾಗ ಪಾಲಿಟೆಕ್ನಿಕ್, ರಾಯಭಾಗ, ಬೆಳಗಾವಿ
48 339 ಕೆ.ಎಲ್.ಇ ಸೊಸೈಟಿ ಸಿ.ಬಿ.ಕೋರೆ ಪಾಲಿಟೆಕ್ನಿಕ್, ಚಿಕ್ಕೋಡಿ
49 389 ಶ್ರೀ ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್, ಬೆಳಗಾವಿ
50 414 ಎಸ್.ಎನ್.ಜೆ.ಪಿ.ಎಸ್. ಎನ್.ಎಂ. ಟ್ರಸ್ಟ್ ಪಾಲಿಟೆಕ್ನಿಕ್, ನಿಡಸೋಸಿ, ಹುಕ್ಕೇರಿ, ಬೆಳಗಾವಿ.
51 472 ಶ್ರೀ ಲಕ್ಷ್ಮಣರಾವ್ ಜಾರಕಿ ಹೋಳಿ ಪಾಲಿಟೆಕ್ನಿಕ್, ಗೋಕಾಕ್, ಬೆಳಗಾವಿ.
52 457 ಕೆ.ಎಲ್.ಎಸ್ ವಸಂತರಾವ್ ಪೋತ್‌ದಾರ್ ಪಾಲಿಟೆಕ್ನಿಕ್, ತಿಲಕವಾಡಿ, ಬೆಳಗಾವಿ
53 500 ಕೆ.ಎಲ್.ಎಸ್ ಸೊಸೈಟಿ ಪಾಲಿಟೆಕ್ನಿಕ್ ಬೈಲಹೊಂಗಲ
54 527 ಎಸ್.ಜಿ.ಇ.ಎಸ್ ಡಾ.ಎನ್.ಎ ಮುಗದುಂ ಪಾಲಿಟೆಕ್ನಿಕ್, ಅಂಕಲಿ
55 528 ಬಿ.ಟಿ. ಪಾಟೀಲ್ & ಸನ್ಸ್ ಪಾಲಿಟೆಕ್ನಿಕ್, ಸ್ತವನಿಧಿ, ನಿಪ್ಪಾಣಿ ತಾಲ್ಲೂಕು.
56 573 ಜೈನ್ ಪಾಲಿಟೆಕ್ನಿಕ್, ಬೆಳಗಾವಿ
57 567 ವಿ.ಎಸ್.ಎಂ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ನಿಪ್ಪಾಣಿ, ಬೆಳಗಾವಿ ಜಿಲ್ಲೆ (2ನೇ ಪಾಳಿ)
58 574 ಅಂಗಡಿ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ & ಮ್ಯಾನೇಜ್‌ಮೆಂಟ್, ಬೆಳಗಾವಿ (2ನೇ ಪಾಳಿ)

ಬಳ್ಳಾರಿ ಜಿಲ್ಲೆ

59 446 ಸಂಡೂರು ಪಾಲಿಟೆಕ್ನಿಕ್, ಯಶವಂತನಗರ, ಸಂಡೂರು ತಾ॥
60 459 ಸಂಜಯಗಾಂಧಿ ಪಾಲಿಟೆಕ್ನಿಕ್, ಬಳ್ಳಾರಿ
61 479 ಹಾನಗಲ್ ಶ್ರೀ ಕುಮಾರೇಶ್ವರ ಪಾಲಿಟೆಕ್ನಿಕ್, ಬಳ್ಳಾರಿ
62 494 ರಾಜೀವ್ ಗಾಂಧಿ ಇನ್ಸ್‌ಟಿಟ್ಯೂಟ್ ಆಫ್ ಸ್ಟೀಲ್ ಟೆಕ್ನಾಲಜಿ, ತೋರಣಗಲ್, ಬಳ್ಳಾರಿ
63 520 ಬಳ್ಳಾರಿ ರೂರಲ್ ಪಾಲಿಟೆಕ್ನಿಕ್, ಕೋಳೂರು, ಬಳ್ಳಾರಿ
64 508 ಶ್ರೀ.ಎಂ.ವಿಶ್ವೇಶ್ವರಯ್ಯ ಪಾಲಿಟೆಕ್ನಿಕ್, ಹೊಸಪೇಟೆ

ಬೀದರ್ ಜಿಲ್ಲೆ

65 396 ನಿಟ್ಟೂರು ಪಾಲಿಟೆಕ್ನಿಕ್, ಬೀದರ್,

66 530 ಹೆಚ್.ಕೆ.ಡಿ.ಇ.ಟಿ.ಐ ಪಾಲಿಟೆಕ್ನಿಕ್, ಹುಂನಬಾದ್

67 596 **ಬಸವಕಲ್ಯಾಣ ಪಾಲಿಟೆಕ್ನಿಕ್, ಬಸವಕಲ್ಯಾಣ (2015-16)**

ಬಿಜಾಪುರ ಜಿಲ್ಲೆ

68 393 ಬಿಎಲ್‌ಡಿಇ ಅಸೋಸಿಯೇಷನ್ಸ್ ಪಾಲಿಟೆಕ್ನಿಕ್, ಬಿಜಾಪುರ

69 329 ಮಲ್ಲಿಕ್ ಸಂಡಲ್ ಪಾಲಿಟೆಕ್ನಿಕ್, ಬಿಜಾಪುರ

70 507 ಶ್ರೀ ಸುಭಾಷ್ ನಾಗೂರ್ ಮೆಮೋರಿಯಲ್ ಪಾಲಿಟೆಕ್ನಿಕ್, ಬಿಜಾಪುರ

71 551 ಎಸ್.ಪಿ.ವಿ.ವಿ. ಸಂಘ ಪಾಲಿಟೆಕ್ನಿಕ್, ಬಿಜಾಪುರ ರೋಡ್, ಸಿಂದಗಿ – 586 128

ಚಿಕ್ಕಮಗಳೂರು ಜಿಲ್ಲೆ

72 440 ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪಾಲಿಟೆಕ್ನಿಕ್, ಚಿಕ್ಕಮಗಳೂರು

ದಕ್ಷಿಣ ಕನ್ನಡ ಜಿಲ್ಲೆ

73 391 ವಿವೇಕಾನಂದ ಪಾಲಿಟೆಕ್ನಿಕ್, ಪುತ್ತೂರು, ದಕ್ಷಿಣ ಕನ್ನಡ

74 493 ಪಿ.ಎ ಪಾಲಿಟೆಕ್ನಿಕ್, ಮೋಂಟೆ ಪಾದರ್ ಅಂಚೆ, ಕೈರಂಗಲ ಹಳ್ಳಿ, ಬಂಟ್ವಾಳ, ಮಂಗಳೂರು

75 492 ಪ್ರಸನ್ನ ಪಾಲಿಟೆಕ್ನಿಕ್, ಉಜಿರೆ, ದಕ್ಷಿಣ ಕನ್ನಡ

76 497 ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪಾಲಿಟೆಕ್ನಿಕ್, ಉಜಿರೆ, ದಕ್ಷಿಣ ಕನ್ನಡ

77 536 ಕರಾವಳಿ ಪಾಲಿಟೆಕ್ನಿಕ್, ಮಂಗಳೂರು

78 593 ಬೆರೀಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಂಗಳೂರು (2ನೇ ಪಾಳಿ)

ಧಾರವಾಡ ಜಿಲ್ಲೆ

79 341 ಕೆ.ಎಲ್.ಇ.ಸೊಸೈಟಿ ಶ್ರೀಮತಿ ಸಿ.ಐ.ಮುನವಳ್ಳಿ ಪಾಲಿಟೆಕ್ನಿಕ್, ಹುಬ್ಬಳ್ಳಿ

80 466 ಸೆಂಟ್ ಜಾನ್ಸ್ ಪಾಲಿಟೆಕ್ನಿಕ್, ಗೋಪನಕೊಪ್ಪ, ಹುಬ್ಬಳ್ಳಿ

81 460 ನಳಂದ ಫೌಂಡೇಷನ್ ಪಾಲಿಟೆಕ್ನಿಕ್, ವಿದ್ಯಾರಣ್ಯ, ಹುಬ್ಬಳ್ಳಿ

82 496 ಅಂಜುಮಾನ್ ಪಾಲಿಟೆಕ್ನಿಕ್, ಅಯೋಧ್ಯನಗರ, ಹುಬ್ಬಳ್ಳಿ

83 501 ಆಕ್ಸ್‌ಫರ್ಡ್ ಪಾಲಿಟೆಕ್ನಿಕ್, ಹುಬ್ಬಳ್ಳಿ

84 505 ಮೌಂಟ್ ಫರಾನ್ ಪಾಲಿಟೆಕ್ನಿಕ್, ಹೈ ಲ್ಯಾಂಡ್ಸ್, ಆನಂದ ನಗರ ರಸ್ತೆ, ಹಳೇ ಹುಬ್ಬಳ್ಳಿ, ಹುಬ್ಬಳ್ಳಿ

85 515 ಎ.ಜಿ.ಎಂ ರೂರಲ್ ಪಾಲಿಟೆಕ್ನಿಕ್, ವರೂರು, ಹುಬ್ಬಳ್ಳಿ ತಾ॥

86 555 ಗಂಗಾಧರ್ ಪಾಲಿಟೆಕ್ನಿಕ್, ಧಾರವಾಡ

87 600 ಶ್ರೀ ಸಿ.ಬಿ.ಯಲಿಗಾರ ಪಾಲಿಟೆಕ್ನಿಕ್, ಧಾರವಾಡ. (2017-18)

ಕಲಬುರ್ಗಿ ಜಿಲ್ಲೆ

88 385 ಶ್ರೀ ಷಣ್ಮುಖ ಶಿವಯೋಗಿ ರೂರಲ್ ಪಾಲಿಟೆಕ್ನಿಕ್, ಜೇವರ್ಗಿ
89 397 ಹೆಚ್.ಕೆ.ಇ ಸೊಸೈಟಿಯ ಪಾಲಿಟೆಕ್ನಿಕ್, ಕಲಬುರಗಿ
90 359 ಹೆಚ್‌ಕೆಇ ಸೊಸೈಟಿಯ ಮಹಿಳಾ ಪಾಲಿಟೆಕ್ನಿಕ್, ಕಲಬುರಗಿ
91 380 ಎನ್.ಇ.ಎಸ್ ಪಾಲಿಟೆಕ್ನಿಕ್, ರಾಜಪುರ, ಕಲಬುರಗಿ
92 531 ಶ್ರೀ.ಶೆಟ್ಟಿ ಪಾಲಿಟೆಕ್ನಿಕ್, ಕಲಬುರಗಿ
93 532 ಆರ್.ಎಂ. ಪಾಲಿಟೆಕ್ನಿಕ್, ಕಲಬುರಗಿ
94 560 ಬಾಲಾಜಿ ಪಾಲಿಟೆಕ್ನಿಕ್, ಕಲಬುರಗಿ

ಹಾಸನ ಜಿಲ್ಲೆ

95 398 ಶ್ರೀ ಬಾಹುಬಲಿ ಪಾಲಿಟೆಕ್ನಿಕ್, ಶ್ರವಣಬೆಳಗೊಳ
96 524 ರಾಜೀವ್ ಪಾಲಿಟೆಕ್ನಿಕ್, ಹಾಸನ

ಕೊಡಗು ಜಿಲ್ಲೆ

97 402 ಕಾವೇರಿ ಪಾಲಿಟೆಕ್ನಿಕ್, ಗೋಣಿಕೊಪ್ಪಲ್

ಕೋಲಾರ ಜಿಲ್ಲೆ

98 416 ಕೆ.ಜೆ.ಟಿ.ಇ.ಟಿ. ಪಾಲಿಟೆಕ್ನಿಕ್, ಮುಳಬಾಗಿಲು
99 368 ಭಾರತ್ ಪಾಲಿಟೆಕ್ನಿಕ್, ಬಂಗಾರಪೇಟೆ
100 503 ಮದರ್ ತೆರೆಸಾ ಪಾಲಿಟೆಕ್ನಿಕ್, ಕೋಲಾರ
101 526 ವಿನಾಯಕ ಪಾಲಿಟೆಕ್ನಿಕ್, ಕೆ.ಜಿ.ಎಫ್, ಕೋಲಾರ
102 545 ಸಾಯಿ ಕೃಷ್ ಪಾಲಿಟೆಕ್ನಿಕ್, ಕೆ.ಜಿ.ಎಫ್, ಕೋಲಾರ
103 546 ಶ್ರೀ ಸಿದ್ಧಾರ್ಥ ಪಾಲಿಟೆಕ್ನಿಕ್, ಬಂಗಾರಪೇಟೆ.

ಚಿಕ್ಕಬಳ್ಳಾಪುರ ಜಿಲ್ಲೆ

104 498 ಬಿ.ಜಿ.ಎಸ್ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ

ಮಂಡ್ಯ ಜಿಲ್ಲೆ

105 410 ಬಿ.ಇ.ಟಿ. ಪಾಲಿಟೆಕ್ನಿಕ್, ಭಾರತಿ ನಗರ, ಕೆ.ಎಂ.ದೊಡ್ಡಿ, ಮದ್ದೂರು ತಾಲ್ಲೂಕು
106 477 ಎಸ್.ಇ.ಟಿ. ಪಾಲಿಟೆಕ್ನಿಕ್, ಮೇಲುಕೋಟೆ, ಪಾಂಡವಪುರ ತಾಲ್ಲೂಕು
107 541 ಎಸ್.ಜೆ. ಬಿ.ಜಿ.ಎಸ್ ಪಾಲಿಟೆಕ್ನಿಕ್, ಬಿ.ಜಿ.ನಗರ, ನಾಗಮಂಗಲ

778

ಮೈಸೂರು ಜಿಲ್ಲೆ

108 418 ಜೆ.ಎಸ್.ಎಸ್. ಮಹಾವಿದ್ಯಾಪೀಠ ಪಾಲಿಟೆಕ್ನಿಕ್, ಮೈಸೂರು
109 454 ಫರುಕೀಯಾ ಮಹಿಳಾ ಪಾಲಿಟೆಕ್ನಿಕ್, ಉದಯಗಿರಿ, ಮೈಸೂರು
110 445 ಶ್ರೀ ಗುರುಮಲ್ಲೇಶ್ವರ ಪಾಲಿಟೆಕ್ನಿಕ್, ದೇವನೂರು
111 456 ವಿದ್ಯಾವಿಕಾಸ್ ಪಾಲಿಟೆಕ್ನಿಕ್, ಇಂದಿರಾನಗರ, ಮೈಸೂರು
112 488 ವಿದ್ಯಾವರ್ಧಕ ಸಂಘದ ಪಾಲಿಟೆಕ್ನಿಕ್, ಶೇಷಾದ್ರಿ ಐಯರ್ ರಸ್ತೆ, ಮೈಸೂರು

ರಾಯಚೂರು ಜಿಲ್ಲೆ

113 406 ಹೆಚ್.ಕೆ.ಇ.ಎಸ್ ಪಾಲಿಟೆಕ್ನಿಕ್, ರಾಯಚೂರು
114 548 ಸಂಜೀವ್ ಪಾಲಿಟೆಕ್ನಿಕ್, ಲಿಂಗಸಗೂರು

ತುಮಕೂರು ಜಿಲ್ಲೆ

115 442 ಸಿದ್ಧಗಂಗಾ ಪಾಲಿಟೆಕ್ನಿಕ್, ಎಪಿಎಂಸಿ ಯಾರ್ಡ್ ಎದುರು, ಬಡವಾಡಿ, ತುಮಕೂರು
116 347 ಎಂಇಎಸ್ ಪಾಲಿಟೆಕ್ನಿಕ್, ಮಧುಗಿರಿ–572 132 ತುಮಕೂರು ಜಿಲ್ಲೆ
117 326 ಆರ್ಯಭಾರತಿ ಪಾಲಿಟೆಕ್ನಿಕ್, ತುಮಕೂರು–572 101
118 485 ಶ್ರೀ ಸಿದ್ಧರಾಮೇಶ್ವರ ಪಾಲಿಟೆಕ್ನಿಕ್, ಹಾಸನ ರಸ್ತೆ, ತಿಪಟೂರು–572 201
119 510 ಕೆಂಪೇಗೌಡ ಮೆಮೋರಿಯಲ್ ಪಾಲಿಟೆಕ್ನಿಕ್, ತುಮಕೂರು
120 533 ಶ್ರೀದೇವಿ ಪಾಲಿಟೆಕ್ನಿಕ್, ತುಮಕೂರು
121 491 ಹೆಚ್.ಎಂ.ಎಸ್. ರೂರಲ್ ಪಾಲಿಟೆಕ್ನಿಕ್, ಮಂಚ್ಕಲಕುಪ್ಪೆ, ತುಮಕೂರು
122 601 ಸಾರಂಗ್ ಇನ್ಸ್‌ಟಿಟ್ಯೂಟ್ ಆಫ್ ಪಾಲಿಟೆಕ್ನಿಕ್, ಕುಣಿಗಲ್ ರಸ್ತೆ, ಗೂಳೂರು, ತುಮಕೂರು. (2017–18)
123 570 ಅಕ್ಷಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು (2ನೇ ಪಾಳಿ)
124 571 ಚನ್ನಬಸವೇಶ್ವರ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಗುಬ್ಬಿ, ತುಮಕೂರು ಜಿಲ್ಲೆ (2ನೇ ಪಾಳಿ)
125 595 ಹೆಚ್.ಎಂ.ಎಸ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ತುಮಕೂರು (2ನೇ ಪಾಳಿ)

ಉತ್ತರ ಕನ್ನಡ ಜಿಲ್ಲೆ

126 447 ಆರ್.ಎನ್.ಶೆಟ್ಟಿ ರೂರಲ್ ಪಾಲಿಟೆಕ್ನಿಕ್, ಮುರುಡೇಶ್ವರ, ಭಟ್ಕಳ ತಾ॥

ಶಿವಮೊಗ್ಗ ಜಿಲ್ಲೆ

127 356 ಟಿ.ಎಂ.ಎ.ಇ.ಎಸ್ ಪಾಲಿಟೆಕ್ನಿಕ್, ಜೇಡಿಕಟ್ಟೆ, ಭದ್ರಾವತಿ.
128 502 ಡಿ.ಎಸ್.ದಿನಕರ್ ನ್ಯಾಷನಲ್ ಪಾಲಿಟೆಕ್ನಿಕ್, ಶಿವಮೊಗ್ಗ
129 563 ಪಿ.ಇ.ಎಸ್ ಪಾಲಿಟೆಕ್ನಿಕ್, ಶಿವಮೊಗ್ಗ

ದಾವಣಗೆರೆ ಜಿಲ್ಲೆ

130 586 ಜೈನ್ ಪಾಲಿಟೆಕ್ನಿಕ್, ದಾವಣಗೆರೆ
131 591 ಎಸ್.ಜೆ.ವಿ.ಪಿ ಪಾಲಿಟೆಕ್ನಿಕ್, ಹರಿಹರ
132 569 ಜಿ.ಎಂ. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ದಾವಣಗೆರೆ (2ನೇ ಪಾಳಿ)

ಚಾಮರಾಜನಗರ ಜಿಲ್ಲೆ

133 588 ಏಕಲವ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಚಾಮರಾಜನಗರ (2ನೇ ಪಾಳಿ)

ಉಡುಪಿ ಜಿಲ್ಲೆ

134 478 ಇಂದಿರಾ ಶಿವರಾವ್ ಪಾಲಿಟೆಕ್ನಿಕ್, ಉಡುಪಿ
135 369 ಡಾ॥ ಟಿ.ಎಂ.ಎ ಪೈ ಪಾಲಿಟೆಕ್ನಿಕ್, ಮಣಿಪಾಲ
136 495 ಕಾಮತ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಪಾಲಿಟೆಕ್ನಿಕ್), ಹೊಂಬಾಡಿ, ಕುಂದಾಪುರ

ಗದಗ ಜಿಲ್ಲೆ

137 386 ಶ್ರೀ ತೋಂಟದ ಸಿದ್ದಲಿಂಗೇಶ್ವರ ಕಲ್ಯಾಣ ಕೇಂದ್ರ ಪಾಲಿಟೆಕ್ನಿಕ್, ಗದಗ
138 534 ಬಿ.ಸಿ.ಎನ್ ಪಾಲಿಟೆಕ್ನಿಕ್, ಲಕ್ಷ್ಮೇಶ್ವರ
139 575 ಸರ್.ಎಂ.ವಿಶ್ವೇಶ್ವರಯ್ಯ ಪಾಲಿಟೆಕ್ನಿಕ್, ನರಗುಂದ

ಚಿತ್ರದುರ್ಗ ಜಿಲ್ಲೆ

140 423 ಜ್ಞಾನ ವಿಕಾಸ ಪಾಲಿಟೆಕ್ನಿಕ್, ಕಬೀರ್ ಮೌಲಾ ಆಶ್ರಮ ರಸ್ತೆ, ಚಿತ್ರದುರ್ಗ
141 375 ಎಸ್.ಜೆ.ಎಂ. ಪಾಲಿಟೆಕ್ನಿಕ್, ಚಳ್ಳಕೆರೆ
142 513 ಸೆಂಟ್ ಮೇರಿಸ್ ಪಾಲಿಟೆಕ್ನಿಕ್, ಜೋಗಿಮಠ ರೋಡ್, ಚಿತ್ರದುರ್ಗ
143 517 ಶ್ರೀ.ಮಲ್ಲಿಕಾರ್ಜುನ ಪಾಲಿಟೆಕ್ನಿಕ್, ಚಿತ್ರದುರ್ಗ

ಹಾವೇರಿ ಜಿಲ್ಲೆ

144 342 ಕೆಎಲ್ಇ ಸೊಸೈಟೀಸ್ ಸಿ.ಬಿ. ಕೊಳ್ಳಿ ಪಾಲಿಟೆಕ್ನಿಕ್, ಹಾವೇರಿ
145 540 ಕೆ.ವಿ.ಪಾಲಿಟೆಕ್ನಿಕ್, ರಾಣಿಬೆನ್ನೂರು
146 576 ಎಸ್.ಟಿ.ಜೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಣಿಬೆನ್ನೂರು, ಹಾವೇರಿ ಜಿಲ್ಲೆ (2ನೇ ಪಾಳಿ)

ಬಾಗಲಕೋಟೆ ಜಿಲ್ಲೆ

147 511 ಕೆ.ಎಲ್.ಇ ಸೊಸೈಟಿ ಪಾಲಿಟೆಕ್ನಿಕ್, ಮಹಾಲಿಂಗಪುರ
148 512 ಜೆ.ವಿ.ಮಂಡಲ್ ಪಾಲಿಟೆಕ್ನಿಕ್, ತೇರದಾಳ್

ಯಾದಗಿರಿ ಜಿಲ್ಲೆ

149 514 ನಿವೇದಿತ ಪಾಲಿಟೆಕ್ನಿಕ್, ಯಾದಗಿರಿ
150 344 ಯಾದಗಿರ್ ಪಾಲಿಟೆಕ್ನಿಕ್, ಯಾದಗಿರಿ
151 537 ಮಹಾತ್ಮ ಪಾಲಿಟೆಕ್ನಿಕ್, ಯಾದಗಿರಿ
152 562 ಜವಾಹರ್ ಪಾಲಿಟೆಕ್ನಿಕ್, ಯಾದಗಿರಿ

ಆಯುಕ್ತರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 779
ಸದಸ್ಯರ ಹೆಸರು : **ಶ್ರೀ.ಬಾಲಕೃಷ್ಣ.ಸಿ.ಎನ್(ಶ್ರವಣಬೆಳಗೊಳ)**
ಉತ್ತರಿಸುವ ದಿನಾಂಕ : 10.12.2020
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಸಂಖ್ಯೆ ಎಷ್ಟು; ಸದರಿ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;(ಕಾಲೇಜುಗಳ ವಿಳಾಸವಾರು, ವಿಭಾಗಗಳವಾರು ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವದಲ್ಲಿರುತ್ತವೆ. ಸದರಿ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಎಲ್ಲಾ ಸೆಮಿಸ್ಟರ್‌ಗಳಲ್ಲಿ **ಒಟ್ಟು 8325 ವಿದ್ಯಾರ್ಥಿಗಳು** ಪ್ರವೇಶಾತಿ ಹೊಂದಿರುತ್ತಾರೆ. ಕಾಲೇಜುಗಳ ವಿಳಾಸ, ವಿಭಾಗವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ.
ಆ)	ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಎ.ಐ.ಸಿ.ಟಿ.ಇ ನಿಯಮಾನುಸಾರ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಾದ ಕಂಪ್ಯೂಟರ್ ಲ್ಯಾಬ್ ಅಂದರೆ, ಕಂಪ್ಯೂಟರ್, ಪ್ರಿಂಟರ್, ಕಂಪ್ಯೂಟರ್ ಟೇಬಲ್‌ಗಳು ಹಾಗೂ ಇನ್ನಿತರ ಸಾಮಾಗ್ರಿಗಳು, ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಬೇಕಾಗುವ ಡೆಸ್ಕ್‌ಗಳು, ಗ್ರಂಥಾಲಯದಲ್ಲಿ ಅಗತ್ಯವಿರುವ ಪುಸ್ತಕಗಳು ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳು ಲಭ್ಯವಿಲ್ಲದೆ ಗ್ರಾಮೀಣ ಪ್ರದೇಶದಿಂದ ಬಂದಂತಹ ವಿದ್ಯಾರ್ಥಿಗಳ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅತ್ಯಗತ್ಯವಾಗಿ ಬೇಕಾಗಿರುವ ಡೆಸ್ಕ್‌ಗಳು, ಕಂಪ್ಯೂಟರ್ ಹಾಗೂ ಇತರೆ ಸಾಮಾಗ್ರಿಗಳನ್ನು ಹಾಗೂ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಒದಗಿಸಲು ಹಾಗೂ ಇತರೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಅವಶ್ಯಕ ಅನುದಾನವನ್ನು ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು?(ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿ ಒಟ್ಟು 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅಗತ್ಯವಿರುವ ಡೆಸ್ಕ್‌ಗಳು, ಕಂಪ್ಯೂಟರ್ ಹಾಗೂ ಇತರೆ ಸಾಮಾಗ್ರಿಗಳನ್ನು ಹಾಗೂ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಒದಗಿಸುವ ಸಂಬಂಧ ಕಳೆದ 3 ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ (see table below) **ಅತ್ಯಗತ್ಯ** ಮೂಲಭೂತ ಸೌಕರ್ಯಗಳನ್ನು ಅನುದಾನದ **ಲಭ್ಯತೆಯನುಸಾರ** ಹಂತ ಹಂತವಾಗಿ ಒದಗಿಸಲಾಗುತ್ತಿದೆ.

ವರ್ಷ	ಯಂತ್ರೋಪಕರಣ, ಪುಸ್ತಕ ಹಾಗೂ ಪೀಠೋಪಕರಣ ಒದಗಿಸಲು ಬಿಡುಗಡೆ ಮಾಡಲಾದ ಅನುದಾನದ ವಿವರ (ರೂ. ಲಕ್ಷಗಳಲ್ಲಿ)
2019-20	622.39
2018-19	95.36
2017-18	59.74
ಒಟ್ಟು	777.49

ಸಂಖ್ಯೆ: ಇಡಿ 123 ಹೆಚ್‌ಪಿಟಿ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್)
ಉಪ ಮುಖ್ಯಮಂತ್ರಿ ಹಾಗೂ
ಉನ್ನತ ಶಿಕ್ಷಣ ಸಚಿವರು

ಅನುಬಂಧ–1

2019–20ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಕೋರ್ಸುವಾರು ಪ್ರವೇಶಾತಿ ವಿವರ.

ಕ್ರ.ಸಂ.	ಸಂಸ್ಥೆಯ ಹೆಸರು	ಕೋರ್ಸುಗಳು	ಪ್ರಥಮ ವರ್ಷ	ದ್ವಿತೀಯ ವರ್ಷ	ತೃತೀಯ ವರ್ಷ	ನಾಲ್ಕನೇ ವರ್ಷ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
1	ಎಸ್.ಕೆ.ಎಸ್.ಜೆ.ಟಿ.ಐ, ಬೆಂಗಳೂರು	ಸಿವಿಲ್ ಇಂಜಿ.	39	56	73	69	237
		ಕಂಪ್ಯೂಟರ್ ಸೈನ್ಸ್ ಇಂಜಿ.	45	68	71	67	251
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	49	54	75	71	249
		ಸಿಲ್ಕ್ ಟೆಕ್ನಾಲಜಿ	4	6	3	10	23
		ಟೆಕ್ಸ್‌ಟೈಲ್ ಟೆಕ್ನಾಲಜಿ	10	30	21	39	100
		ಒಟ್ಟು	147	214	243	256	860
2	ಎಸ್.ಕೆ.ಎಸ್.ಜೆ.ಟಿ.ಐ, (ಸಂಜೆ) ಬೆಂಗಳೂರು	ಟೆಕ್ಸ್‌ಟೈಲ್ ಟೆಕ್ನಾಲಜಿ	-	1	7	2	10
		ಒಟ್ಟು	0	1	7	2	10
3	ಸರ್ಕಾರಿ ಇಂಜಿನಿಯರಿಂಗ್, ಚಾಮರಾಜನಗರ	ಸಿವಿಲ್ ಇಂಜಿ.	22	64	72	65	223
		ಕಂಪ್ಯೂಟರ್ ಸೈನ್ಸ್ ಇಂಜಿ.	22	55	37	48	162
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	29	59	51	49	188
		ಮೆಕ್ಯಾನಿಕಲ್ ಇಂಜಿ.	25	52	62	52	191
		ಒಟ್ಟು	98	230	222	214	764
4	ಸರ್ಕಾರಿ ಇಂಜಿನಿಯರಿಂಗ್, ಹಾಸನ	ಸಿವಿಲ್ ಇಂಜಿ.	58	65	75	70	268
		ಕಂಪ್ಯೂಟರ್ ಸೈನ್ಸ್ ಇಂಜಿ.	54	65	74	64	257
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	57	69	67	71	264
		ಮೆಕ್ಯಾನಿಕಲ್ ಇಂಜಿ.	49	65	70	71	255
		ಒಟ್ಟು	218	264	286	276	1044

ಕ್ರ.ಸಂ.	ಸಂಸ್ಥೆಯ ಹೆಸರು	ಕೋರ್ಸುಗಳು	ಪ್ರಥಮ ವರ್ಷ	ದ್ವಿತೀಯ ವರ್ಷ	ತೃತೀಯ ವರ್ಷ	ನಾಲ್ಕನೇ ವರ್ಷ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
5	ಸರ್ಕಾರಿ ಇಂಜಿನಿಯರಿಂಗ್, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ	ಸಿವಿಲ್ ಇಂಜಿ.	36	64	58	64	222
		ಕಂಪ್ಯೂಟರ್ ಸೈನ್ಸ್ ಇಂಜಿ.	43	57	62	64	226
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	42	63	62	70	237
		ಮೆಕ್ಯಾನಿಕಲ್ ಇಂಜಿ.	32	61	56	63	212
		ಒಟ್ಟು	153	245	238	261	897
6	ಸರ್ಕಾರಿ ಇಂಜಿನಿಯರಿಂಗ್, ರಾಮನಗರ	ಸಿವಿಲ್ ಇಂಜಿ.	45	67	54	79	245
		ಕಂಪ್ಯೂಟರ್ ಸೈನ್ಸ್ ಇಂಜಿ.	44	56	46	48	194
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	43	57	39	61	200
		ಮೆಕ್ಯಾನಿಕಲ್ ಇಂಜಿ.	20	59	44	52	175
		ಒಟ್ಟು	152	239	183	240	814
7	ಸರ್ಕಾರಿ ಇಂಜಿನಿಯರಿಂಗ್, ಕುಶಾಲನಗರ, ಕೊಡಗು ಜಿಲ್ಲೆ	ಸಿವಿಲ್ ಇಂಜಿ.	41	55	62	74	232
		ಕಂಪ್ಯೂಟರ್ ಸೈನ್ಸ್ ಇಂಜಿ.	46	53	60	56	215
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	47	60	65	67	239
		ಮೆಕ್ಯಾನಿಕಲ್ ಇಂಜಿ.	45	60	65	56	226
		ಒಟ್ಟು	179	228	252	253	912
8	ಸರ್ಕಾರಿ ಇಂಜಿನಿಯರಿಂಗ್, ರಾಯಚೂರು	ಸಿವಿಲ್ ಇಂಜಿ.	33	66	63	69	231
		ಕಂಪ್ಯೂಟರ್ ಸೈನ್ಸ್ ಇಂಜಿ.	35	36	28	34	133
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	21	34	37	56	148
		ಮೆಕ್ಯಾನಿಕಲ್ ಇಂಜಿ.	20	57	71	46	194
		ಒಟ್ಟು	109	193	199	205	706
9	ಸರ್ಕಾರಿ ಇಂಜಿನಿಯರಿಂಗ್, ದೇವಗಿರಿ, ಹಾವೇರಿ	ಸಿವಿಲ್ ಇಂಜಿ.	53	56	72	76	257
		ಕಂಪ್ಯೂಟರ್ ಸೈನ್ಸ್ ಇಂಜಿ.	41	46	40	54	181
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	51	59	48	60	218
		ಮೆಕ್ಯಾನಿಕಲ್ ಇಂಜಿ.	47	59	51	63	220
		ಒಟ್ಟು	192	220	211	253	876

779

ಕ್ರ.ಸಂ.	ಸಂಸ್ಥೆಯ ಹೆಸರು	ಕೋರ್ಸುಗಳು	ಪ್ರಥಮ ವರ್ಷ	ದ್ವಿತೀಯ ವರ್ಷ	ತೃತೀಯ ವರ್ಷ	ನಾಲ್ಕನೇ ವರ್ಷ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
10	ಸರ್ಕಾರಿ ಇಂಜಿನಿಯರಿಂಗ್, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ	ಸಿವಿಲ್ ಇಂಜಿ.	18	53	61	54	186
		ಕಂಪ್ಯೂಟರ್ ಸೈನ್ಸ್ ಇಂಜಿ.	24	24	23	34	105
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	19	32	18	57	126
		ಮೆಕ್ಯಾನಿಕಲ್ ಇಂಜಿ.	14	56	48	35	153
		ಒಟ್ಟು	75	165	150	180	570
11	ಸರ್ಕಾರಿ ಇಂಜಿನಿಯರಿಂಗ್, ಕಾರವಾರ	ಸಿವಿಲ್ ಇಂಜಿ.	13	66	40	58	177
		ಕಂಪ್ಯೂಟರ್ ಸೈನ್ಸ್ ಇಂಜಿ.	27	38	43	38	146
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	12	30	27	51	120
		ಮೆಕ್ಯಾನಿಕಲ್ ಇಂಜಿ.	11	53	41	54	159
		ಒಟ್ಟು	63	187	151	201	602
12	ಸರ್ಕಾರಿ ಇಂಜಿನಿಯರಿಂಗ್, ತಳಕಲ್, ಕೊಪ್ಪಳ ಜಿಲ್ಲೆ	ಸಿವಿಲ್ ಇಂಜಿ.	35				
		ಕಂಪ್ಯೂಟರ್ ಸೈನ್ಸ್ ಇಂಜಿ.	34				
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	19				
		ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್	27				
		ಮೆಕ್ಯಾನಿಕಲ್ ಇಂಜಿ.	19				
		ಒಟ್ಟು	99				
13	ಸರ್ಕಾರಿ ಇಂಜಿನಿಯರಿಂಗ್, ವಿಪ್ರಸಾಯಿನಗರ, ಗಂಗಾವತಿ, ಕೊಪ್ಪಳ ಜಿಲ್ಲೆ	ಸಿವಿಲ್ ಇಂಜಿ.	14				
		ಕಂಪ್ಯೂಟರ್ ಸೈನ್ಸ್ ಇಂಜಿ.	16				
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	8				
		ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್	7				
		ಮೆಕ್ಯಾನಿಕಲ್ ಇಂಜಿ.	2				
		ಒಟ್ಟು	33				

ಕ್ರ.ಸಂ.	ಸಂಸ್ಥೆಯ ಹೆಸರು	ಕೋರ್ಸುಗಳು	ಪ್ರಥಮ ವರ್ಷ	ದ್ವಿತೀಯ ವರ್ಷ	ತೃತೀಯ ವರ್ಷ	ನಾಲ್ಕನೇ ವರ್ಷ	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ
14	ಸರ್ಕಾರಿ ಇಂಜನಿಯರಿಂಗ್, ವಿಪ್ರಸಾಯಿನಗರ, ಗಂಗಾವತಿ, ಕೊಪ್ಪಳ ಜಿಲ್ಲೆ	ಸಿವಿಲ್ ಇಂಜಿ.	34				
		ಕಂಪ್ಯೂಟರ್ ಸೈನ್ಸ್ ಇಂಜಿ.	41				
		ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್	35				
		ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್	34				
		ಮೆಕ್ಯಾನಿಕಲ್ ಇಂಜಿ.	28				
		ಒಟ್ಟು	138				
	GRAND TOTAL		1656	2186	2142	2341	8325

ಆಯುಕ್ತರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 791
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು)
ಉತ್ತರಿಸಬೇಕಾದ ದಿನಾಂಕ : 10.12.2020
ಉತ್ತರಿಸುವವರು : ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಅರಣ್ಯ ಕಾಯ್ದೆ–1963ರ ಸೆಕ್ಷನ್ 4ರಲ್ಲಿ ಉದ್ಘೋಷಣೆಗೊಂಡ ಸೆಕ್ಷನ್ 17ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುವ ಪ್ರಕರಣಗಳೇಷ್ಟು; (ಪ್ರಕರಣವಾರು ಮಾಹಿತಿಯನ್ನು ನೀಡುವುದು)	ವಿವರವನ್ನು **ಅನುಬಂಧ–1**ರಲ್ಲಿ ಒದಗಿಸಿದೆ.
ಆ)	1963ರ ಸೆಕ್ಷನ್ 4ರಲ್ಲಿ ಬಾಕಿ ಇರುವ ಅರಣ್ಯದ ವಿಸ್ತೀರ್ಣ ಎಷ್ಟು; ಎಷ್ಟು ಸಮಯದಿಂದ ಬಾಕಿ ಉಳಿದಿರುತ್ತವೆ; (ವಿವರ ನೀಡುವುದು)	ವಿವರವನ್ನು **ಅನುಬಂಧ–2**ರಲ್ಲಿ ಒದಗಿಸಿದೆ.
ಇ)	ಈ ರೀತಿ ಅರಣ್ಯ ಕಾಯ್ದೆ–1963ರ ಸೆಕ್ಷನ್ 4ರಲ್ಲಿ ಅಧಿಸೂಚನೆಗೊಂಡಿರುವ ಪ್ರದೇಶಗಳಲ್ಲಿ ಎಷ್ಟು ಪ್ರದೇಶಗಳು ಒತ್ತುವರಿ ಅಥವಾ ಅತಿಕ್ರಮಣಗೊಂಡಿವೆ; (ಪ್ರಕರಣವಾರು ಮಾಹಿತಿ ನೀಡುವುದು)	ಅರಣ್ಯ ಕಾಯ್ದೆ 1963 ರ ಸೆಕ್ಷನ್ 4 ರಲ್ಲಿ ಅಧಿಸೂಚನೆಗೊಂಡಿರುವ ಪ್ರದೇಶಗಳಲ್ಲಿ ಒಟ್ಟು 4901 ಪ್ರಕರಣಗಳಲ್ಲಿ 17698.11 ಹೆಕ್ಟೇರ್ ಪ್ರದೇಶಗಳು ಒತ್ತುವರಿ ಅಥವಾ ಅತಿಕ್ರಮಣಗೊಂಡಿವೆ. (ವೃತ್ತವಾರು ವಿವರ ಕೆಳಗಿನ ಪಟ್ಟಿಯಲ್ಲಿದೆ)

ಕ್ರ.ಸಂ	ವೃತ್ತ	ಪ್ರಕರಣ	ವಿಸ್ತೀರ್ಣ
1)	ಬೆಂಗಳೂರು	580	2964.12
2)	ಬೆಳಗಾವಿ	---	---
3)	ಬಳ್ಳಾರಿ	1150	4376.63
4)	ಚಿಕ್ಕಮಗಳೂರು	1071	1740.28
5)	ಚಾಮರಾಜನಗರ	---	---
6)	ಧಾರವಾಡ	9	168.37
7)	ಹಾಸನ	722	966.39
8)	ಕಲಬುರುಗಿ	730	1625.92
9)	ಕೊಡಗು	56	4480.23
10)	ಕೆನರಾ	---	---
11)	ಮೈಸೂರು	531	467.74
12)	ಮಂಗಳೂರು	52	908.43
13)	ಶಿವಮೊಗ್ಗ	ಕಾಲಾವಕಾಶ ಕೋರಿದೆ	
	ಒಟ್ಟು	**4901**	**17698.11**

ಕ್ರ.ಸಂ	ಪ್ರಶ್ನೆ	ಉತ್ತರ
ಈ)	ಒತ್ತುವರಿ ಅಥವಾ ಅತಿಕ್ರಮಣವನ್ನು ತೆರವುಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)	ಒತ್ತುವರಿದಾರರ ವಿರುದ್ಧ ಅರಣ್ಯ ಮೊಕದ್ದಮೆಯನ್ನು ದಾಖಲಿಸಿ, ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಭೂ ಕಬಳಿಕೆ ವಿಶೇಷ ನ್ಯಾಯಾಲಯದಲ್ಲಿ ದಾವೆ ಹೂಡುತ್ತಿದ್ದು ಹಾಗೂ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 64(ಎ) ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.
ಉ)	ಈ ರೀತಿ ಒತ್ತುವರಿಗೆ ಅವಕಾಶ ಮಾಡಿಕೊಟ್ಟಿರುವ ಅಧಿಕಾರಿಗಳ ವಿರುದ್ಧ ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮಗಳೇನು?	ಅಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ.

ಸಂಖ್ಯೆ: ಅಪಜೀ 132 ಎಫ್‌ಎಎಫ್ 2020

(ಆನಂದ್ ಸಿಂಗ್)
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು

Annexure-1

Karnataka Forest Act-1963, Sec-4 Notified Areas

Sl.no	Circles	Division	Number of Cases	Extent (Ha.)
1	Ballari	Ballari	46	34758.2
		Chitradurga	39	7110.56
		Davangere	40	5888.23
		Koppal	43	5824.13
2	Belgavi	Bagalkot	13	1822.53
		Gokak	5	104.34
		Belgavi	5	209.31
		Vijaypura	1	18.63
3	Bangalore	Bangalore Urban	3	278.86
		Bangalore Rural	7	945.42
		Ramnagar	29	3341.53
		Kolar	18	1055.29
		Chikkaballapur	73	8194.07
		Bannerghatta National Park	0	0
4	Chamarajnagar	Bandipura Tiger reserve	0	0
		BRT	10	2305
		M.M Hills	4	4097.5
		Cauvery WL	0	0
5	Chikkamagalur	Koppa	169	31388.28
		Chikkamagalur	56	17308.87
		Bhadra Tiger Reserve	0	0
6	Dharwad	Dharwad	8	78.251
		Haveri	4	187.29
		Gadag	2	140.99
7	Hassan	Hassan	36	8060.24
		Tumakur	37	12466.14
8	Kalburgi	Kalburgi	25	7826.24
		Raichur	0	0
		Bidar	59	1787.76
		Yadgir	16	15562.91
9	Kodagu	Madikeri	57	4474.79
		Nagarahole NP	0	0
		Virajpet	16	464.74
		Madikeri wild life	0	0
10	Mangaluru	Karkala W.L	0	0
		Kundapur	20	1674.27
		Mangaluru	36	4425.95
11	Mysore	Hunsur	19	813.76
		Mandya	41	2201.05
		Mysore	24	4705.02
		Mysore WL	0	0
12	Shimoga	Bhadravathi	51	5783.955
		Sagara	101	15575.25
		Shivammoga	33	4523.1
		Shivammoga WL	9	1396.17
13	Canara	Kali Tiger Reserve	0	0
		Haliyala	0	0
		Honnavara	1	2
		Karwar	0	0
		Sirsi	0	0
		Yellapura	0	0
		Total:	**1156**	**216800.63**

Annexure-2

No. of Proposals pending for Sec-17 under Karnataka Forest Act-1963

Sl.no	Circles	Division	More than 5 Year	More than 10 Year	More than 25 Year	Number of total cases	Extent
1	Ballari	Ballari	7	2	37	46	34758.2
		Chitradurga	4	1	34	39	7110.56
		Davangere	7	0	33	40	5888.23
		Koppal	8	0	35	43	5824.13
2	Belgavi	Bagalkot	1	0	12	13	1822.53
		Gokak	3	2	0	5	104.34
		Belgavi	2	3	0	5	209.31
		Vijaypura	1	0	0	1	18.63
3	Bangalore	Bangalore Urban	0	0	3	3	278.86
		Bangalore Rural	2	4	1	7	945.42
		Ramnagar	0	0	29	29	3341.53
		Kolar	0	0	18	18	1055.29
		Chikkaballapur	0	0	73	73	8194.07
		Bannerghatta National Park	0	0	0	0	0
4	Chamarajnagar	Bandipura Tiger reserve	0	0	0	0	0
		BRT	0	0	10	10	2305
		M.M Hills	0	0	4	4	4097.5
		Cauvery WL	0	0	0	0	0
5	Chikkamagalur	Koppa	121	37	11	169	31388.28
		Chikkamagalur	8	10	38	56	17308.87
		Bhadra Tiger Reserve	0	0	0	0	0
6	Dharwad	Dharwad	0	1	7	8	78.251
		Haveri	0	0	4	4	187.29
		Gadag	0	0	2	2	140.99
7	Hassan	Hassan	0	0	36	36	8060.24
		Tumakur	1	2	34	37	12466.14
8	Kalburgi	Kalburgi	0	0	25	25	7826.24
		Raichur	0	0	0	0	0
		Bidar	0	0	59	59	1787.76
		Yadgir	0	0	16	16	15562.91
9	Kodagu	Madikeri	0	0	57	57	4474.79
		Nagarahole NP	0	0	0	0	0
		Virajpet	0	0	16	16	464.74
		Madikeri wild life	0	0	0	0	0
10	Mangaluru	Karkala W.L	0	0	0	0	0
		Kundapur	0	0	20	20	1674.27
		Mangaluru	0	0	36	36	4425.95
11	Mysore	Hunsur	0	2	17	19	813.76
		Mandya	0	0	41	41	2201.05
		Mysore	0	3	21	24	4705.02
		Mysore WL	0	0	0	0	0
12	Shimoga	Bhadravathi	3	2	46	51	5783.955
		Sagara	3	2	96	101	15575.25
		Shivammoga	1	1	31	33	4523.1
		Shivammoga WL	0	0	9	9	1396.17
13	Canara	Kali Tiger Reserve	0	0	0	0	0
		Haliyala	0	0	0	0	0
		Honnavara	0	0	1	1	2
		Karwar	0	0	0	0	0
		Sirsi	0	0	0	0	0
		Yellapura	0	0	0	0	0
		Total:	**172**	**72**	**912**	**1156**	**216800.63**

<u>ಕರ್ನಾಟಕ ವಿಧಾನ ಸಭೆ</u>

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 792
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ (ಹುಣಸೂರು)
3. ಉತ್ತರಿಸಬೇಕಾದ ದಿನಾಂಕ : 10/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಜಾರಿಯಲ್ಲಿರುವ ವಿವಿಧ ಕಾರ್ಮಿಕ ವರ್ಗಗಳ ಅಭಿವೃದ್ಧಿ ಮತ್ತು ನೆರವಿಗಾಗಿ ಇರುವ ಯೋಜನೆಗಳು ಯಾವುವು; ಅವುಗಳನ್ನು ಜಾರಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಕಾರ್ಮಿಕ ಇಲಾಖೆಯು ತನ್ನ ಅಧೀನದಲ್ಲಿ ಬರುವ ವಿವಿಧ ಮಂಡಳಿಗಳ ಮೂಲಕ ಅಸಂಘಟಿತ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಅವುಗಳ ವಿವರ ಈ ಕೆಳಗಿನಂತಿದೆ: **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u>** ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು, ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. (1) **<u>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:–</u>** ಖಾಸಗಿ ವಾಣಿಜ್ಯ ಸಾರಿಗೆ ವಾಹನ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಜಾರಿಗೊಳಿಸುತ್ತಿರುವ ಈ ಯೋಜನೆಯಡಿ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ. **(ಅ) ಅಪಘಾತ ಪರಿಹಾರ:–** ➢ ಅಪಘಾತದಿಂದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳು ಮರಣ ಹೊಂದಿದಲ್ಲಿ, ಅವರ ನಾಮನಿರ್ದೇಶಿತರಿಗೆ ರೂ.5 ಲಕ್ಷ ಪರಿಹಾರ. ➢ ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ಗರಿಷ್ಠ ರೂ.2 ಲಕ್ಷದ ವರೆಗೆ ಪರಿಹಾರ. ❖ ಅಪಘಾತಕ್ಕೊಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 50,000/– ರವರೆಗೆ, ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಪಾವತಿಸಲಾಗುವುದು.

		❖15 ದಿನಗಳಿಗಿಂತ ಹೆಚ್ಚು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ, ಗರಿಷ್ಠ ರೂ. 1 ಲಕ್ಷದವರೆಗೆ ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಸಲಾಗುವುದು. **(ಆ) <u>ಶೈಕ್ಷಣಿಕ ಧನಸಹಾಯ:-</u>** ಅಪಘಾತದಿಂದ ನಿಧನರಾದ ಹಾಗೂ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲಕರು, ಯೋಜನೆಯಡಿ ನೋಂದಾಯಿತ ನಿರ್ವಾಹಕರು ಹಾಗೂ ಕ್ಲೀನರ್‌ಗಳ ಗರಿಷ್ಠ ಇಬ್ಬರು ಮಕ್ಕಳಿಗೆ 1 ರಿಂದ 12ನೇ ತರಗತಿಯವರೆಗೆ ವ್ಯಾಸಂಗಕ್ಕಾಗಿ ವಾರ್ಷಿಕ ತಲಾ ರೂ.10,000/-ಗಳ ಶೈಕ್ಷಣಿಕ ಧನ ಸಹಾಯ ನೀಡಲಾಗುತ್ತಿದೆ. (ಇ) **ಅಪಘಾತ ಜೀವ ರಕ್ಷಕ:-** ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ಸ್ವಯಂಸೇವಕರನ್ನು ಸೃಷ್ಟಿಸುವ ಉದ್ದೇಶದಿಂದ ಅಪಘಾತ ಜೀವರಕ್ಷಕ ಕಾರ್ಯಕ್ರಮದಡಿ ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಲಾಗುತ್ತಿದೆ. **ಈ ಯೋಜನೆಯಡಿ:-** ❖ ಈವರೆಗೆ ಒಟ್ಟು **38,569** ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿ ನೀಡಿ ಅಪಘಾತ ಜೀವರಕ್ಷಕರನ್ನಾಗಿ ಸಜ್ಜುಗೊಳಿಸಿದೆ. **(2) <u>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>** (ಅ) **"ಸ್ಮಾರ್ಟ್ ಕಾರ್ಡ್":-** ಯೋಜನೆಯಡಿ ಪ್ರಸ್ತುತ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ. **(ಆ) ಕಾರ್ಮಿಕ ಸೇವಾ ಕೇಂದ್ರ :-** ➢ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 9ರನ್ವಯ ಫಲಾನುಭವಿಗಳಲ್ಲಿ ಅಸಂಘಟಿತ ಕಾರ್ಮಿಕರಿಗೆ ಲಭ್ಯವಿರುವ ಎಲ್ಲಾ ಯೋಜನೆಗಳ ಕುರಿತು ಮಾಹಿತಿ ನೀಡಲು, ಯೋಜನೆಗಳ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಶ್ಯಕವಿರುವ ದಾಖಲಾತಿಗಳನ್ನು ಸಿದ್ಧಪಡಿಸಲು ಹಾಗೂ ನಿಗಧಿಪಡಿಸಿದ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ಸಂಬಂಧಪಟ್ಟವರಿಗೆ ರವಾನಿಸಲು ಸಹಾಯವಾಗುವಂತೆ ರಾಜ್ಯದ ಎಲ್ಲಾ 175

ರವಾನಿಸಲು ಸಹಾಯವಾಗುವಂತೆ ರಾಜ್ಯದ ಎಲ್ಲಾ 175 ತಾಲ್ಲೂಕುಗಳಲ್ಲಿ ತಲಾ ಒಂದರಂತೆ ಕಾರ್ಮಿಕ ಸೇವಾ ಕೇಂದ್ರಗಳನ್ನು ಹಾಗೂ ಬೆಂಗಳೂರು ವ್ಯಾಪ್ತಿಯಲ್ಲಿ 6 ಕಾರ್ಮಿಕ ಸೇವಾ ಕೇಂದ್ರಗಳು ಸೇರಿ ಒಟ್ಟು 181 ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲು ನಿರ್ಣಯಿಸಿದ್ದು, ಈಗಾಗಲೇ 159 ತಾಲ್ಲೂಕುಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

- ಕಾರ್ಮಿಕ ಇಲಾಖೆ ಹಾಗೂ ಅದರ ಅಧೀನದಲ್ಲಿ ಬರುವ ಮಂಡಳಿಗಳು ಅಸಂಘಟಿತ ಕಾರ್ಮಿಕರಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಕುರಿತು ಮಾಹಿತಿ, ಸಹಾಯ ಹಾಗೂ ಸೌಲಭ್ಯಗಳನ್ನು, ಸದರಿ ಸೇವಾ ಕೇಂದ್ರಗಳಲ್ಲಿ ಕಾರ್ಮಿಕ ಬಂಧುಗಳ ಮೂಲಕ ಪಡೆಯಲು ವ್ಯವಸ್ಥೆ ಮಾಡಲಾಗುತ್ತಿದೆ.

(3) (ಅ) ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ (ಪಿಎಂ-ಎಸ್‌ವೈಎಂ):-

ಕೇಂದ್ರ ಸರ್ಕಾರದ ಈ ಯೋಜನೆಯಡಿ 18 – 40 ವರ್ಷ ವಯೋಮಾನದ ಅಸಂಘಟಿತ ಕಾರ್ಮಿಕರು ನೊಂದಾಯಿಸಿಕೊಂಡು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3,000/- ಗಳ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಅವರ ವಯಸ್ಸಿನ ಆಧಾರದ ಮೇಲೆ ಮಾಸಿಕ ತಲಾ ರೂ. 55/- ರಿಂದ ರೂ. 200/- ರವರೆಗೆ ಕೇಂದ್ರ ಸರ್ಕಾರವು ಸಮಾನಾಂತರ ವಂತಿಕೆಯನ್ನು ಪಾವತಿಸುತ್ತದೆ.

(ಆ) ಎನ್.ಪಿ. ಎಸ್ ಫಾರ್ ಟ್ರೇಡರ್ಸ್ ಯೋಜನೆ:-

ಈ ಯೋಜನೆಯಡಿ ನೋಂದಾಯಿತ ಅಂಗಡಿ ಮಾಲೀಕರು, ಚಿಲ್ಲರೆ ವ್ಯಾಪಾರಿಗಳು, ಅಕ್ಕಿ ಗಿರಣಿ ಮಾಲೀಕರು, ಎಣ್ಣೆ ಗಿರಣಿ ಮಾಲೀಕರು, ವರ್ಕ್‌ಶಾಪ್ ಮಾಲೀಕರು, ಕಮಿಷನ್ ಏಜೆಂಟ್ಸ್, ರಿಯಲ್ ಎಸ್ಟೇಟ್‌ನ ಬ್ರೋಕರ್ಸ್, ಸಣ್ಣ ಹೋಟೆಲ್ ಹಾಗೂ ರೆಸ್ಟೋರೆಂಟ್‌ನ ಮಾಲೀಕರು ಹಾಗೂ ಅಂತಹ ಇತರೆ ಸಣ್ಣ ವ್ಯಾಪಾರಗಳಲ್ಲಿ ತೊಡಗಿಸಿಕೊಂಡ ವ್ಯಾಪಾರಿಗಳು/ಲಘು ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3000/-ಗಳ ಪಿಂಚಣಿ ಸೌಲಭ್ಯ ಒದಗಿಸಲಾಗುತ್ತದೆ.

		ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ : ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ 19 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. ಮಂಡಳಿಯ ಸೌಲಭ್ಯಗಳು ನೋಂದಾಯಿತ ಕಾರ್ಮಿಕರಿಗೆ ತಲುಪಲು ಈ ಕೆಳಕಂಡ ಕ್ರಮವನ್ನು ಅನುಸರಿಸಲಾಗುತ್ತಿದೆ. • ಮಂಡಳಿಯಿಂದ ವಿತರಿಸಲಾದ ಎಲ್ಲಾ ಸೌಲಭ್ಯಗಳನ್ನು ಸಕಾಲ ಸೇವೆಯಡಿ ತಂದು ಕಾರ್ಮಿಕರಿಗೆ ನಿಗಧಿತ ಅವಧಿಯೊಳಗೆ ಸೇವೆಗಳು ದೊರಕುವಂತೆ ಕ್ರಮಕೈಗೊಳ್ಳಲಾಗಿದೆ. • ಮಂಡಳಿಯಿಂದ ದೊರಕುತ್ತಿರುವ ಸೌಲಭ್ಯದ ಕುರಿತು ವ್ಯಾಪಕ ಪ್ರಚಾರ ಮಾಡಲು ಐ.ಇ.ಸಿ ಚಟುವಟಿಕೆಗಳನ್ನು ರೂಪಿಸಲಾಗಿದ್ದು, ಈಗಾಗಲೇ ಕೆ.ಎಸ್.ಆರ್.ಟಿ.ಸಿ ಬಸ್ ಬ್ರ್ಯಾಂಡಿಂಗ್ ಹಾಗೂ ಕೆ.ಎಸ್.ಆರ್.ಟಿ.ಸಿ ಬಸ್ ಸ್ಟ್ಯಾಂಡ್‌ಗಳಲ್ಲಿ ಆಡಿಯೋ ಅನೌನ್ಸ್‌ಮೆಂಟ್ ಮಾಡಲಾಗುತ್ತಿದೆ. ಹಾಗೂ ಈ ಕುರಿತು ವಿವಿಧ ಪತ್ರಿಕೆಗಳಲ್ಲೂ ಸಹ ಜಾಹೀರಾತು ಪ್ರಕಟಣೆಗೊಳಿಸಲಾಗಿರುತ್ತದೆ. • ರಾಜ್ಯಾದಾದ್ಯಂತ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಕಛೇರಿಗಳಲ್ಲಿ ಮಂಡಳಿಯ ಅಧೀನದಲ್ಲಿರುವ 209 ಹೋರ್ಡಿಂಗ್ಸ್ ಪ್ಯಾನಲ್‌ಗಳಲ್ಲಿ ಕಾರ್ಮಿಕರನ್ನು ನೋಂದಾಯಿಸುವ ಮತ್ತು ಮಂಡಳಿಯ ಸೌಲಭ್ಯದ ಕುರಿತಾದ ಮಾಹಿತಿಯನ್ನು ಹೊಂದಿರುವ ಹೋರ್ಡಿಂಗ್ಸ್‌ಗಳನ್ನು ಮುದ್ರಿಸಿ ಅಳವಡಿಸಲು ಕ್ರಮವಹಿಸಲಾಗಿದೆ. • ಬೆಂಗಳೂರು ಪ್ರಾದೇಶಿಕ-01, ಕಲಬುರಗಿ ಮತ್ತು ಬೆಳಗಾವಿ ಪ್ರಾದೇಶಿಕಕ್ಕೆ ಸಂಬಂಧಿಸಿದ ಅಧಿಕಾರಿಗಳ ಕಾರ್ಯವ್ಯಾಪ್ತಿಯಲ್ಲಿ Digital Wall Painting ಮೂಲಕ ಪ್ರಚಾರ ಮಾಡಲು ಹಾಗೂ ಪ್ರತಿ ತಾಲ್ಲೂಕುಗಳಿಗೆ 500 ಪೋಸ್ಟರ್ಸ್‌ಗಳು ಮತ್ತು 8 ಬ್ಯಾನರ್‌ಗಳನ್ನು ಹಿರಿಯ / ಕಾರ್ಮಿಕ ನಿರೀಕ್ಷಕರುಗಳ ಕಛೇರಿಗಳಿಗೆ ಮುದ್ರಿಸಿ

		ಸರಬರಾಜು ಮಾಡಲು ದಿನಾಂಕ: 20-10-2020 ರಂದು MC&A ಈ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಈ ಚಟುವಟಿಕೆಯು ಪ್ರಗತಿಯಲ್ಲಿರುತ್ತದೆ. 3) <u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-</u> ಸದರಿ ಮಂಡಳಿಗೆ ವಂತಿಗೆ ಪಾವತಿ ಮಾಡುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಈ ಕೆಳಕಂಡ ಯೋಜನೆಗಳು ಜಾರಿಯಲ್ಲಿರುತ್ತವೆ. 1. ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ 2. ವೈದ್ಯಕೀಯ ನೆರವು. 3. ಅಪಘಾತ ಧನ ಸಹಾಯ. 4. ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ. 5. ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರಕ್ಕೆ ಧನ ಸಹಾಯ. 6. ವಾರ್ಷಿಕ ಕ್ರೀಡಾಕೂಟ ಹಮ್ಮಿಕೊಳ್ಳುವ ಕಾರ್ಮಿಕ ಸಂಘಟನೆಗೆ ಧನ ಸಹಾಯ.
ಆ)	ಕಟ್ಟಡ ಕಾರ್ಮಿಕರ ನಿಧಿ ಮತ್ತಿತರ ಕಾರ್ಮಿಕರ ನಿಧಿಯಲ್ಲಿರುವ ಮೊತ್ತವನ್ನು ಸಕಾಲಿಕವಾಗಿ ಬಳಸಲು ಇರುವ ತೊಂದರೆಗಳೇನು:	ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲು ಕಟ್ಟಡ ಕಾರ್ಮಿಕರ ನಿಧಿಯಲ್ಲಿರುವ ಮೊತ್ತವನ್ನು ಸಕಾಲಿಕವಾಗಿ, ಹಾಗೂ ಅವಶ್ಯಕತೆಗನುಗುಣವಾಗಿ, ನಿಯಮಾನುಸಾರವಾಗಿ ಬಳಸಲಾಗುತ್ತಿದೆ.
ಇ)	ಕಟ್ಟಡ ಕಾರ್ಮಿಕರುಗಳಿಗೆ ಆಯಾ ಸ್ಥಳಗಳಲ್ಲಿಯೇ ಸೌಲಭ್ಯಗಳನ್ನು ನೀಡುವುದಕ್ಕೆ ಸರ್ಕಾರವು ಕೈಗೊಂಡ ಕ್ರಮಗಳೇನು: (ವಿವರ ನೀಡುವುದು)	ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರುಗಳಿಗೆ ಆಯಾ ಸ್ಥಳದಲ್ಲಿಯೇ ಸೌಲಭ್ಯಗಳನ್ನು ವಿತರಿಸುವ ದೃಷ್ಠಿಯಿಂದ ಸೇವಾ ಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಕಟ್ಟಡ ಕಾರ್ಮಿಕರು ಯಾವುದೇ ಸೌಲಭ್ಯಗಳನ್ನು ಪಡೆಯಲು ಹತ್ತಿರದಲ್ಲಿರುವ Common Service Centre ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ.

ಕಾಇ 410 ಎಲ್‌ಇಟಿ 2020

(*ಅರಬೈಲ್ ಶಿವರಾಂ ಹೆಬ್ಬಾರ್*)
ಕಾರ್ಮಿಕ ಮತ್ತು ಸಕ್ಕರೆ ಸಚಿವರು

ಅನುಬಂಧ-01

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. ಪಿಂಚಣಿ ಸೌಲಭ್ಯ: ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.2,000/-
2. ಕುಟುಂಬ ಪಿಂಚಣಿ ಸೌಲಭ್ಯ: ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. ದುರ್ಬಲತೆ ಪಿಂಚಣಿ: ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000/- ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000/- ದವರೆಗೆ ಅನುಗ್ರಹ ರಾಶಿ ಸಹಾಯಧನ.
4. ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ.
5. ಟ್ರೈನಿಂಗ್-ಕಮ್-ಟೂಲ್‌ಕಿಟ್ ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ
6. ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯ: ನೋಂದಾಯಿತ ಫಲಾನುಭವಿಯ ಅವಲಂಭಿತರಿಗೆ
7. ವಸತಿ ಸೌಲಭ್ಯ (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್): ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆ ರೂ. 30,000/- ಮತ್ತು ಗಂಡು ಮಗುವಿನ ಜನನಕ್ಕೆ ರೂ.20,000/-
9. ಶಿಶು ಪಾಲನಾ ಸೌಲಭ್ಯ:
10. ಅಂತ್ಯಕ್ರಿಯೆ ವೆಚ್ಚ : ರೂ.4,000/- ಹಾಗೂ ಅನುಗ್ರಹ ರಾಶಿ ರೂ.50,000/-ಸಹಾಯಧನ
11. ಶೈಕ್ಷಣಿಕ ಸಹಾಯಧನ (ಕಲಿಕೆ ಭಾಗ್ಯ): ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:

ಕ್ರಸಂ	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯ ಧನ	
		ಗಂಡು	ಹೆಣ್ಣು
I.	ನರ್ಸರಿ	3,000	4,000
II.	1 ರಿಂದ 4ನೇ ತರಗತಿ	3,000	4,000
III.	5 ರಿಂದ 8ನೇ ತರಗತಿ	5,000	6,000
IV.	9 ಹಾಗೂ 10ನೇ ತರಗತಿ	10,000	11,000
V.	ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ	10,000	14,000
VI.	ಐಟಿಐ	12,000	15,000
VII.	ಪದವಿ ಪ್ರತಿ ವರ್ಷಕ್ಕೆ	15,000	20,000
VIII.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000	20,000
	ಮತ್ತು ಪ್ರತಿ ವರ್ಷಕ್ಕೆ	20,000	25,000
IX.	ಇಂಜಿನಿಯರಿಂಗ್ ಕೋರ್ಸ್ ಬಿಇ/ ಬಿ.ಟೆಕ್ ಸೇರ್ಪಡೆಗೆ	25,000	25,000
	ಮತ್ತು ಪ್ರತಿ ವರ್ಷಕ್ಕೆ	25,000	30,000
X.	ವೈದ್ಯಕೀಯ ಕೋರ್ಸ್‌ಗೆ ಸೇರ್ಪಡೆಗೆ	30,000	30,000
	ಮತ್ತು ಪ್ರತಿ ವರ್ಷಕ್ಕೆ	40,000	50,000
XI.	ಡಿಪ್ಲೋಮಾ	15,000	20,000
XII.	ಎಂ.ಟೆಕ್ / ಎಂ.ಇ	30,000	35,000
XIII.	ಎಂ.ಡಿ (ವೈದ್ಯಕೀಯ)	45,000	55,000

XIV.	ಪಿಹೆಚ್‌ಡಿ (ಪ್ರತಿ ವರ್ಷಕ್ಕೆ) ಗರಿಷ್ಠ 03 ವರ್ಷ	25,000	30,000

12. **ವೈದ್ಯಕೀಯ ಸಹಾಯಧನ (ಕಾರ್ಮಿಕ ಆರೋಗ್ಯ ಭಾಗ್ಯ)**: ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ **ರೂ.300/-** ರಿಂದ **ರೂ.10,000/-**ವರೆಗೆ
13. **ಅಪಘಾತ ಪರಿಹಾರ**: ಮರಣ ಹೊಂದಿದ್ದಲ್ಲಿ **ರೂ.5,00,000/-**, ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ **ರೂ.2,00,000/-** ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ **ರೂ.1,00,000/-**
14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ)**: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದ ತೊಂದರೆಗೆ ಸಂಬಂಧಿತ ಚಿಕಿತ್ಸೆ, ಮೂತ್ರ ಪಿಂಡದಲ್ಲಿನ ಕಲ್ಲು ತೆಗೆಯುವ ಚಿಕಿತ್ಸೆ, ಮೆದುಳಿನ ರಕ್ತಸ್ರಾವದ ಚಿಕಿತ್ಸೆ, ಅಲ್ಸರ್ ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್ ಚಿಕಿತ್ಸೆ, ಇತರೆ ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ **ರೂ.2,00,000/-**ವರೆಗೆ
15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್)**: ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ **ರೂ.50,000/-**
16. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ)**: ಅನಿಲ ಸಂಪರ್ಕದೊಂದಿಗೆ ಎರಡು ಬರ್ನರ್ ಸ್ಟೌವ್
17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ**: ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ
18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ**: ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿ ತೊಡಗಿರುವ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ (ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ)
19. **ತಾಯಿ ಮಗು ಸಹಾಯ ಹಸ್ತ**: ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ **ರೂ.6,000/-** ಗಳ ಸಹಾಯಧನ.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	796
2.	ಸದಸ್ಯರ ಹೆಸರು	:	ಶ್ರೀ ನಾಗೇಂದ್ರ ಎಲ್. (ಚಾಮರಾಜ)
3.	ಉತ್ತರಿಸಬೇಕಾದ ದಿನಾಂಕ	:	10.12.2020
4.	ಉತ್ತರಿಸಬೇಕಾದ ಸಚಿವರು	:	ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಮೈಸೂರು ನಗರದಲ್ಲಿರುವ ಕೃಷ್ಣರಾಜ ಆಸ್ಪತ್ರೆಯಲ್ಲಿ ಒಟ್ಟು ಎಷ್ಟು ವೈದ್ಯರು, ನರ್ಸ್‌ಗಳು ಮತ್ತು ತಾಂತ್ರಿಕ ತಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ;(ವಿವರ ಒದಗಿಸುವುದು)	ಕೃಷ್ಣರಾಜ ಆಸ್ಪತ್ರೆಯಲ್ಲಿ ಮಂಜೂರಾಗಿರುವ ಬೋಧಕ ವರ್ಗದವರಲ್ಲಿ (ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಸೀನಿಯರ್ ರೆಸಿಡೆಂಟ್ ಗಳು ಕ್ಲಿನಿಕಲ್ ವಿಭಾಗಗಳಿಗೆ ಸೇರಿದ ಒಟ್ಟು 147 ವೈದ್ಯರು, 23 ಹಿರಿಯ ಪ್ರಯೋಗಶಾಲಾ ತಂತ್ರಜ್ಞರು, 21 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ ಕೃಷ್ಣರಾಜ ಆಸ್ಪತ್ರೆಗೆ ಪ್ರತ್ಯೇಕವಾಗಿ ಹುದ್ದೆಗಳು ಮಂಜೂರಾಗಿರುತ್ತದೆ (ಅನುಬಂಧ-1 ಲಗತ್ತಿಸಿದೆ).
ಆ)	ರೋಗಿಗಳಿಗೆ ಅನುಗುಣವಾಗಿ ಆಸ್ಪತ್ರೆಯಲ್ಲಿ ಸಿಬ್ಬಂದಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)	ಶುಶ್ರೂಷಕರ ಕೊರತೆ ಇದ್ದು, ಉಳಿದಂತೆ ಯಾವುದೇ ಸಿಬ್ಬಂದಿಗಳ ಕೊರತೆ ಇರುವುದಿಲ್ಲ. ಶುಶ್ರೂಷಕರ ಕೊರತೆ ಸರಿದೂಗಿಸಲು 77 ಶುಶ್ರೂಷಕರುಗಳನ್ನು ಸ್ಟೈಫಂಡ್ರಿ ಆಧಾರದ ಮೇಲೆ ಪಡೆಯಲಾಗುತ್ತಿದೆ.
ಇ)	ಸದರಿ ಆಸ್ಪತ್ರೆಯಲ್ಲಿ ಒಟ್ಟು ಎಷ್ಟು ಡಯಾಲಿಸೀಸ್ ಯಂತ್ರಗಳಿವೆ; ಒಂದು ದಿನಕ್ಕೆ ಕನಿಷ್ಠ ಎಷ್ಟು ರೋಗಿಗಳು ಡಯಾಲಿಸಿಸ್ ಗೆ ಒಳಪಡುತ್ತಿದ್ದಾರೆ. ಇದಕ್ಕೆ ನಿಗದಿಪಡಿಸಲಾಗಿರುವ ಶುಲ್ಕ ಎಷ್ಟು;	ಸದರಿ ಆಸ್ಪತ್ರೆಯಲ್ಲಿ ಒಟ್ಟು 10 ಡಯಾಲಿಸಿಸ್ ಯಂತ್ರಗಳು ಲಭ್ಯವಿದ್ದು, ಪ್ರತಿ ದಿನಕ್ಕೆ ಸರಾಸರಿ 20-24 ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ.
ಈ)	ಆಸ್ಪತ್ರೆಯಲ್ಲಿ ಔಷಧಿಗಳ, ಹಾಸಿಗೆಗಳ, ICU ಗಳ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳ ಕೊರತೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಸಂಖ್ಯೆ: ಎಂಇಡಿ 481 ಎಂಎಸ್ಎಫ್ 2020

(ಡಾ: ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು.

ಕೃಷ್ಣರಾಜೇಂದ್ರ ಆಸ್ಪತ್ರೆ, ಮೈಸೂರು

ದಿನಾಂಕ: 10.12.2020 ರಲ್ಲಿದ್ದಂತೆ ಮಂಜೂರಾಗಿರುವ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಸಿಬ್ಬಂದಿಗಳ ವಿವರ ಲೆಕ್ಕ ಶೀರ್ಷಿಕೆ: 2210–05–105–1–44 (ಯೋಜನೇತರ)

ಕ್ರಸಂ	ಮಂಜೂರಾದ ಹುದ್ದೆಗಳ ವಿವರ	ಒಟ್ಟು ಮಂಜೂರಾದ ಹುದ್ದೆಗಳು	ಆರೋಗ್ಯ ಮತ್ತು ಕು.ಕ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯನಿರತರು	ಸ್ವಾಯತ್ತ ಸಂಸ್ಥೆಯಿಂದ ನೇಮಕಾತಿ ಹೊಂದಿ ಕಾರ್ಯನಿರತರು	ಒಟ್ಟು ಕಾರ್ಯನಿರತ ಹುದ್ದೆಗಳು	ಖಾಲಿ ಹುದ್ದೆಗಳು
	ಗ್ರೂಪ್ 'ಎ'					
1	ಸ್ಥಾನೀಯ ವೈದ್ಯಾಧಿಕಾರಿಗಳು	1	1	0	1	0
2	ಸಿವಿಲ್ ಸರ್ಜನ್	2	2	0	2	0
3	ಸಹಾಯಕ ಶಸ್ತ್ರ ಚಿಕಿತ್ಸಕರು	20	0	18	18	2
4	ದಂತ ಶಸ್ತ್ರ ಚಿಕಿತ್ಸಕರು	1	0	1	1	0
5	ಸಹಾಯಕ ಪ್ರಾಧ್ಯಾಪಕರು	1	0	0	0	1
6	ಆಪ್ಥಮಾಲಜಿಸ್ಟ್	1	0	0	0	1
7	ಸಹಾಯಕ ಶಸ್ತ್ರ ಚಿಕಿತ್ಸಕರು(ನೇತ್ರಾ)	1	0	0	0	1
8	ಸಹಾಯಕ ಶಸ್ತ್ರ ಚಿಕಿತ್ಸಕರು ಸಂಚಾರಿ ಘಟಕ	1	1	0	1	0
9	ಚೀಫ್ ಫಾರ್ಮಸಿಸ್ಟ್	1	0	0	0	1
	ಒಟ್ಟು	29	4	19	23	6

	ಗ್ರೂಪ್'ಬಿ'					
1	ಸಹಾಯಕ ಶಸ್ತ್ರ ಚಿಕಿತ್ಸಕರು(ದರ್ಜೆ-3)	2	0	0	0	2
2	ಪದವೀದರ ಫಾರ್ಮಸಿಸ್ಟ್	2	2	0	2	0
3	ಶುಶ್ರೂಷಕ ಅಧೀಕ್ಷಕರು(ದರ್ಜೆ-1)	3	1	0	1	2
4	ಸಹಾಯಕ ಆಡಳಿತಾಧಿಕಾರಿಗಳು	1	1	0	1	0
5	ಪ್ರೀನ್ಸಿಪಾಲ್(ಎಸ್.ಒ.ಎನ್)	1	0	0	0	1
